Sebra Chendappa Sastri

Harapanahalli

21-3-1979.

ಭವ್ಯ ಪರಂಪರೆ

ಸಂಪಾದಕ ಮಂಡಳಿ

ಜಿ. ಬ್ರಹ್ಮಪ್ಪ, ಎಂ.ಎ. (ಪ್ರಧಾನ ಸಂಪಾದಕರು)
ಎ. ಬಿ. ರತ್ನಾಕರ, ಎಂ.ಎ.
ಎ. ಬಿ. ಪಂಕಜ
ಎ. ಬಿ. ಇಂದ್ರಾಣಿ

ಅತ್ತಿಮಬ್ಬೆ ಪ್ರಕಾಶನ

BHAVYA PARAMPARE : Life Sketches in Kannada, Edited by Sri G. Brahmappa, Printed at Prithvi Udyama Kendra, Saraswathipuram, Mysore-9, Pp. xii+190.

ವಿಳಾಸ :

ಜಿ. ಬ್ರಹ್ಮಪ್ಪ, ಎಂ.ಎ.
ರೀಡರ್, ಶ್ರೀ ಮಹದೇಶ್ವರ ಕಾಲೇಜ್
ಕೊಳ್ಳೇಗಾಲ, ಮೈಸೂರು ಜಿಲ್ಲೆ

ಮುದ್ರಕರು :

ಪೃಥ್ವೀ ಉದ್ಯಮಕೇಂದ್ರ, ಸರಸ್ವತೀಪುರಂ, ಮೈಸೂರು-9

ಅರಿಕೆ

ಸಾಂಸ್ಕೃತಿಕ ಹಿನ್ನೆಲೆಗೆ ಐತಿಹಾಸಿಕ ಹಿನ್ನೆಲೆ ಬುನಾದಿಯಾಗಿದೆ. ಕಾಲ ಕಾಲಕ್ಕೂ ಲೇಖಕರು ಅಂದಂದಿನ ಸಮಾಜದ ಇತಿಹಾಸವನ್ನು ಬರೆದಿಡಬೇಕು; ಸಮಾಜ ಇದನ್ನು ಬರೆಸಿಡಬೇಕು. ಇದೇ ಮುಂದಿನ ಪೀಳಿಗೆಗೆ ಅನುಭವದ ಹಾಗೂ ಅನುಭಾವದ ಆಸ್ತಿಯಾಗುವುದು. ಪರಂಪರೆಗೆ ಇತಿಹಾಸವೇ ಪೀಠ, ಸಂಸ್ಕೃತಿಯೇ ಕಿರೀಟ. ಮೊದಲನೆಯ ಭಾಗ ಈಗ ಅಚ್ಚಾಗಿದೆ. ಜನತೆಯ ಸಹಕಾರಕ್ಕೆ ಇದೇ ಸಾಕ್ಷಿ. ಎರಡನೆಯ ಭಾಗ ಸಿದ್ಧವಾಗುತ್ತಿದೆ. ಜನತೆ ಸಹಕರಿಸಿ ತಂತಮ್ಮ ಇತಿಹಾಸ ವನ್ನು ಬರೆಯಲು ಈ ಲೇಖಕನಿಗೆ ಸಹಕಾರ ಕೊಡಬೇಕೆಂದು ಪ್ರಾರ್ಥಿಸುವೆನು. ಕೊನೆಯ ಪುಟದಲ್ಲಿರುವ ಒಪ್ಪೋಲೆಯನ್ನು ನೋಡಿ ಕೆಲವು ದೋಷಗಳನ್ನು ತಿದ್ದಿಕೊಳ್ಳಬೇಕಾಗಿ ವಿನಂತಿ.

ಜಿ. ಬ್ರಹ್ಮಪ್ಪ

ಕೃತಜ್ಞತೆ


'ಭವ್ಯಪರಂಪರೆ'ಯನ್ನು ಬರೆಯಲು ಸಹಕರಿಸಿದ ಎಲ್ಲ ಭವ್ಯಚೇತನಗಳಿಗೂ ನಾನು ಕೃತಜ್ಞನಾಗಿರುವೆನು. ಈ ಗ್ರಂಥರಚನೆಗೆ ನೆರವಾದ ಸಂಪಾದಕ ಮಂಡಳಿಗೆ ಋಣಿಯಾಗಿರುವೆನು. ಈ ಕೃತಿಯ ಅರ್ಪಣೆಗೆ ಒಪ್ಪಿಗೆಯಿತ್ತ ಅಭಿನವ ಚಾಮುಂಡ ರಾಯರಾದ ಶ್ರೀ ಶ್ರೀ ವೀರೇಂದ್ರ ಹೆಗ್ಗಡೆಯವರನ್ನು ಎಷ್ಟು ನೆನೆದರೂ ಸಾಲದು. ಅಚ್ಚಿನ ಪ್ರತಿಯನ್ನು ಅತ್ಯಂತ ಶ್ರದ್ಧೆಯಿಂದ ತಿದ್ದಿದ ಶ್ರೀ ಆರ್. ಕೆ. ರೋಹಿಡೇಕರ್ ಅವರನ್ನು ನಾನು ಮರೆಯಲಾರೆ. ಅಂದವಾಗಿ ಅಚ್ಚುಮಾಡಿಕೊಟ್ಟ ಪೃಥ್ವೀ ಮುದ್ರಣಾಲಯದವರನ್ನು ನಾನು ಸ್ಮರಿಸುತ್ತೇನೆ.

ಜಿ. ಬ್ರಹ್ಮಪ್ಪ


ವಿಷಯಸೂಚಿ



ಧರ್ಮಸ್ಥಳದ ಧರ್ಮಾಧಿಕಾರಿಗಳೂ ಆಧುನಿಕ ಚಾವುಂಡರಾಯರೂ ಆದ
ಶ್ರೀ ಶ್ರೀ ವೀರೇಂದ್ರ ಹೆಗ್ಗಡೆಯವರಿಗೆ "ಭವ್ಯ ಪರಂಪರೆ"
ಯನ್ನು ಅರ್ಪಿಸಿ ಕೃತಾರ್ಥನಾಗಿರುವೆನು.



ಸಂಘವಿ ಯಾತ್ರಾಸಂಘ (ಪುಟ ೮೧ ನೋಡಿ)



ಭಗವಾನ್ ಬಾಹುಬಲಿ



ಣಮೋ ಅರಹಂತಾಣಂ | ಣಮೋ ಸಿದ್ಧಾಣಂ |
ಣಮೋ ಆಇರಿಯಾಣಂ | ಣಮೋ ಉವಜ್ಝಾಯಾಣಂ |
ಣಮೋ ಲೋಏ ಸವ್ವಸಾಹೂಣಂ |

ನಮ್ಮ ಗತವೈಭವ

ಆರ್ಯರು ಭರತಖಂಡಕ್ಕೆ ಬರುವ ಮುನ್ನವೇ ಶ್ರಮಣಧರ್ಮವು ನವಚೈತನ್ಯದಿಂದ ಕೂಡಿತ್ತು ಎಂಬುದಕ್ಕೆ ಹರಪ್ಪ ಮತ್ತು ಮೊಹೆಂಜದಾರೋ ಸಂಸ್ಕೃತಿಯಲ್ಲಿ ಪುರಾವೆಗಳು ದೊರೆತಿವೆ. ಅಂದಿನ ಬತ್ತಲೆ ಜಿನಮೂರ್ತಿಗಳು ಪ್ರಾಗೈತಿಹಾಸಿಕದ ಅಂಧಕಾರದಿಂದ ಇಣಿಕಿ ನೋಡುತ್ತ ಜೈನಸಂಸ್ಕೃತಿಯ ಗತವೈಭವದ ಮೇಲೆ ಬೆಳಕು ಬೀರುತ್ತಿವೆ. ಹಿಂದುಗಳ ಪವಿತ್ರ ಗ್ರಂಥಗಳಲ್ಲಿ ಜೈನ ಪುರಾತನ ಇತಿಹಾಸದ ಸುವರ್ಣ ರೇಖೆಗಳು ಅಲ್ಲಲ್ಲೇ ಮಿನುಗುತ್ತಿವೆ. ಶ್ರೀಮದ್ಭಾಗವತ ಪಂಚಮಸ್ಕಂಧ ಅಧ್ಯಾಯ 2–6ರಲ್ಲಿ ವೃಷಭದೇವರ ಪರಿಣಾಮಕಾರಿ ವ್ಯಕ್ತಿಚಿತ್ರ ದೊರೆಯುವುದು. ಈ ದಿಗಂಬರ ಮಹಾಮುನಿಯನ್ನು ಭಾಗವತವೂ ಸೋಜಿಗದಿಂದ ಬಣ್ಣಿಸಿದೆ. ಯಜುರ್ವೇದದಲ್ಲಿ ಋಷಭದೇವ, ಅಜಿತನಾಥ ಮತ್ತು ಅರಿಷ್ಟನೇಮಿ ಈ ಮೂರು ಮಂದಿ ತೀರ್ಥಂಕರರ ಉಲ್ಲೇಖವಿದೆ.

ಅಸಿ ಮಸಿ ಕೃಷಿ ಇವುಗಳ ಮಹತ್ವವನ್ನೂ, ಆವಶ್ಯಕತೆಯನ್ನೂ ಲೋಕಕ್ಕೆ ಮೊದಲು ಬೋಧಿಸಿದ ಮಹಾತ್ಮನೇ ಋಷಭದೇವ. ಬೆವರು ಸುರಿಸಿ ಬದುಕಬೇಕೆಂದು ಪ್ರಥಮ ತೀರ್ಥಂಕರ ಜನತೆಗೆ ಸಾರಿದನು. ಕಾಯಕದ ಕರ್ತಾರನೆಂದರೆ ಋಷಭದೇವನೇ. ಅಹಿಂಸಾಧರ್ಮಕ್ಕೆ ಅಸ್ತಿವಾರ ಹಾಕಿದವನೂ ಈತನೆ. ಅನಂತರ 23 ಜನ ತೀರ್ಥಂಕರರು ಕಾಲಕಾಲಕ್ಕೆ ಬಂದು ಮಾನವಸಂಸ್ಕೃತಿಗೆ ಒಪ್ಪಹಾಕಿದರು; ಆದಿದೇವನು ಹಾಕಿಕೊಟ್ಟ ಅಹಿಂಸೆಯ ಅಸ್ತಿವಾರದ ಮೇಲೆ ವಿಶ್ವಧರ್ಮದ ಸೌಧವನ್ನು ನಿರ್ಮಿಸಿದರು.

ಮಹಾವೀರ ತೀರ್ಥಂಕರರನಂತರ ಗೌತಮಗಣಧರರು, ಆಮೇಲೆ ಸುಧರ್ಮಸ್ವಾಮಿಗಳೂ, ಆ ಬಳಿಕ ಜಂಬೂಸ್ವಾಮಿಗಳೂ ಜಿನೇಂದ್ರರಾದರು. ಇಲ್ಲಿಗೆ ಜಿನೇಂದ್ರ ಪರಂಪರೆ ಮುಗಿಯಿತು. ಅನಂತರ ವಿಷ್ಣು, ನಂದಿಮಿತ್ರ, ಅಪರಾಜಿತ, ಗೋವರ್ಧನ ಮತ್ತು ಭದ್ರಬಾಹುಗಳು ಕ್ರಮವಾಗಿ ಬಂದ ಪಂಚ ಶ್ರುತಕೇವಲಿಗಳು. ಕ್ರಿ.ಪೂ. 365ರಲ್ಲಿ ಭದ್ರಬಾಹುಗಳು ಶ್ರವಣಬೆಳಗುಳದಲ್ಲಿ ಪರಂಧಾಮವನ್ನೈದಿದರು. ಇಲ್ಲಿಗೆ ಶ್ರುತಕೇವಲಿಗಳ ಪರಂಪರೆ ಮುಗಿದಂತಾಯಿತು. ಬರಬರುತ್ತ ಜ್ಞಾನರಾಶಿಯನ್ನು ನೆನಪಿನಲ್ಲಿಟ್ಟುಕೊಂಡು ಜೀರ್ಣಿಸಿಕೊಳ್ಳುವ ಶಕ್ತಿ ಕಡಿಮೆಯಾಗುತ್ತಾ ಬಂದಿತು. ಜ್ಞಾನಾಗ್ನಿಮಾಂದ್ಯ ತೀವ್ರತರವಾಗಿ ಸಾಧಕರನ್ನು ಆವರಿಸಿತು. ಮಹಾವೀರರನಂತರ 62 ವರ್ಷ ಕಾಲ ಜಿನಧರ್ಮವನ್ನು ಗೌತಮಾದಿ ಮೂವರು ಕೇವಲಿಗಳು ಪ್ರಸಾರ ಮಾಡಿದರು. ಅನಂತರ ಒಂದು ಶತಮಾನ ಕಾಲ ಪಂಚ ಶ್ರುತಕೇವಲಿಗಳು ಅಹಿಂಸಾಧರ್ಮವನ್ನು ರಕ್ಷಿಸಿದರು. ಆಮೇಲೆ 183

ವರ್ಷ ಕಾಲ ಹನ್ನೊಂದು ಜನ ದಶಪೂರ್ವಿಗಳು ಬಂದು ಆಂಶಿಕವಾಗಿ ಜೈನಾಗಮಗಳನ್ನು ಸಂರಕ್ಷಿಸಿದರು. ಆ ಬಳಿಕ ಐದು ಮಂದಿ ಏಕಾದಶಾಂಗಧಾರಿಗಳು ತಮ್ಮ ಕೈಲಾದಷ್ಟು ಅಹಿಂಸಾ ಸಿದ್ಧಾಂತಗಳನ್ನು ರಕ್ತಗತ ಮಾಡಿಕೊಂಡು 220 ವರ್ಷ ಕಾಲ ಧರ್ಮವನ್ನು ಉಳಿಸಿದರು. ಅನಂತರ ನಾಲ್ವರು ಆಚಾರಾಂಗಧರರು ಬಂದು 118 ವರ್ಷಗಳವರೆಗೆ ತಮಗೆ ಎಟಕಿದಷ್ಟು ಆಗಮವನ್ನು ಸಂರಕ್ಷಿಸಿದರು. ಇಲ್ಲಿಗೆ ಮಹಾವೀರರು ನಿರ್ವಾಣವಾಗಿ 683 ವರ್ಷಗಳಾದವು.

ಜಿನವಾಣಿಯ ಸಾರವು ಗುರುವಿನಿಂದ ಶಿಷ್ಯನಿಗೆ ಪರಂಪರಾಗತವಾಗಿ ಹರಿದು ಬಂದಿತು. ಶ್ರುತಕೇವಲಿಗಳಾದಮೇಲೆ ಮುಂದೆ ಬಂದ ಮುನಿಪರಂಪರೆಯಲ್ಲಿ ತಲೆಯಿಂದ ತಲೆಗೆ ಗ್ರಹಣಶಕ್ತಿ, ಸ್ಮರಣಶಕ್ತಿ ಇಳಿಮುಖವಾಗುತ್ತಹೋಯಿತು. ಆಳಿದುಳಿದ ಆಗಮವನ್ನಾದರೂ ಸಂರಕ್ಷಿಸಲು ಸಂಕ್ಷಿಪ್ತವಾಗಿ ಬರೆದಿಡುವ ಆವಶ್ಯಕತೆ ಬಿದ್ದಿತು. ಕ್ರಿ.ಶ.ದ ಪ್ರಾರಂಭದಲ್ಲಿ ಈ ಆಲೋಚನೆ ಬಂದು ಧರಸೇನರು ಭೂತಬಲಿ ಪುಷ್ಪದಂತರನ್ನು ಈ ಕಾರ್ಯಕ್ಕಾಗಿ ಪ್ರೇರೇಪಿಸಿದರು. ಆ ಶಿಷ್ಯರಿಗೆ ತಮ್ಮ ಅನುಭವವನ್ನೂ, ಅನುಭಾವವನೂ, ಪಾಂಡಿತ್ಯವನ್ನೂ ಧಾರೆಯೆರೆದರು. ಭೂತಬಲಿ ಪುಷ್ಪದಂತರು ಸೂತ್ರರೂಪವಾಗಿ ಷಟ್‌ಖಂಡಾಗಮವನ್ನು ರಚಿಸಿದರು. ಇನ್ನೊಂದು ಕಡೆ ಇದೇ ಸಮಯದಲ್ಲಿ ಗುಣಧರ ಮುನಿಗಳು ಕಷಾಯಪಾಹುಡವನ್ನು ಸೂತ್ರರೂಪವಾಗಿ ರಚಿಸಿದರು. ಇವರ ಸಮಕಾಲೀನರಾದ ಕುಂದಕುಂದರು ಜೈನ ದರ್ಶನಕ್ಕೆ ಸರ್ವಾಂಗಸುಂದರವಾದ ಆಕಾರವನ್ನಿತ್ತರು. ಪಂಚಾಸ್ತಿಕಾಯ, ಪ್ರವಚನಸಾರ ಮತ್ತು ಸಮಯಸಾರಗಳನ್ನಲ್ಲದೆ ಎಂಟು ಪಾಹುಡಗಳನ್ನೂ ರಚಿಸಿದರು.

ಕುಂದಕುಂದರ ಶಿಷ್ಯರಾದ ಉಮಾಸ್ವಾತಿಗಳು ಇಡೀ ಜೈನಧರ್ಮವನ್ನು ತತ್ತ್ವಾರ್ಥಸೂತ್ರದ ರೂಪದಲ್ಲಿ ಸಂಕ್ಷಿಪ್ತವಾಗಿ ಸಂಗ್ರಹಿಸಿದರು. ಹಿಂದಿನ ಆಚಾರ್ಯರ್ನಗಳೆಲ್ಲರೂ ಪ್ರಾಕೃತದಲ್ಲಿ ಗ್ರಂಥರಚನೆ ಮಾಡಿದ್ದರು. ಉಮಾಸ್ವಾತಿಗಳು ಮಾತ್ರ ಪ್ರಪ್ರಥಮವಾಗಿ ಜೈನಧರ್ಮವನ್ನು ಸಂಸ್ಕೃತ ಸೂತ್ರದಲ್ಲಿ ಗ್ರಂಥಸ್ಥಗೊಳಿಸಿದರು. ಅಖಂಡವಾದ ಜೈನಧರ್ಮವನ್ನು ತತ್ತ್ವಾರ್ಥಸೂತ್ರದಲ್ಲಿ ನಾವು ಕಾಣಬಹುದು.

ಮುಂದೆ ಬಂದ ಆಚಾರ್ಯರು ಸಂಕ್ಷಿಪ್ತವಾದ ಜೈನಾಗಮಗಳ (ಸೂತ್ರಗ್ರಂಥಗಳ) ವಿಸ್ತರಣೀಕರಣಕ್ಕೆ ತೊಡಗಿದರು. ಇವರಲ್ಲಿ ಸಮಂತಭದ್ರರೂ (ಕ್ರಿ.ಶ. 4ನೆಯ ಶತಮಾನ), ಪೂಜ್ಯಪಾದರೂ ಉಮಾಸ್ವಾತಿಗಳ ತತ್ತ್ವಾರ್ಥಸೂತ್ರಕ್ಕೆ ಸಂಸ್ಕೃತದಲ್ಲಿ ವ್ಯಾಖ್ಯಾನಗಳನ್ನು ರಚಿಸಿದರು. ಕ್ರಿ.ಶ. 9ನೆಯ ಶತಮಾನದಲ್ಲಿ ವೀರಸೇನರೂ ಅವರ ಶಿಷ್ಯರಾದ ಜಿನಸೇನರೂ ಸೇರಿಕೊಂಡು ಷಟ್‌ಖಂಡಾಗಮಕ್ಕೂ, ಕಷಾಯಪ್ರಾಭೃತಕ್ಕೂ ವಿಸ್ತಾರವಾದ ಟೀಕೆಯನ್ನು ರಚಿಸಿದರು. ಇವರ ಟೀಕಾಗ್ರಂಥಗಳನ್ನು ಧವಳ ಮತ್ತು ಜಯಧವಳ ಎಂದು ಕರೆಯುವರು.

ಜೈನ ತೀರ್ಥಂಕರರೆಲ್ಲರೂ ಉತ್ತರ ಭಾರತದವರಾದರೆ ಜಿನವಾಣಿಯನ್ನು

ಗ್ರಂಥಸ್ಥಗೊಳಿಸಿ ಕಾಲಕಾಲಕ್ಕೆ ಟೀಕೆಟಿಪ್ಪಣಿಗಳನ್ನು ರಚಿಸಿದ ಆಚಾರ್ಯರೆಲ್ಲರೂ ದಕ್ಷಿಣ ಭಾರತದವರು. ಇವರಲ್ಲಿ ಬಹುಮಂದಿ ಕನ್ನಡಿಗರು. 9–10ನೆಯ ಶತಮಾನ ದಿಂದ ಕನ್ನಡ ಕಾವ್ಯದ ಹೊಸ ಸುಗ್ಗಿ ಪ್ರಾರಂಭವಾಯಿತು. ಶಲಾಕಾಪುರುಷರ ಚರಿತೆಯನ್ನು ಬರೆದ ಜಿನಸೇನರೂ ಅವರ ಶಿಷ್ಯ ಗುಣಭದ್ರರೂ ಅಚ್ಚಕನ್ನಡಿಗರು. ಇವರು ಸಂಸ್ಕೃತದಲ್ಲಿ ಮಹಾಪುರಾಣವನ್ನು ರಚಿಸಿದರು. ಮುಂದೆ ಬಂದ ಕನ್ನಡ ಜೈನಕವಿಗಳಿಗೆ ಈ ಮಹಾಪುರಾಣವು ಮಾರ್ಗದರ್ಶನವಾಯಿತು. ಪ್ರಾಕೃತ ಗಾಹೆ ಗಳಲ್ಲಿ ಸಂಕ್ಷಿಪ್ತವಾಗಿದ್ದ ಕಥಾಸಾಹಿತ್ಯವು ಕಾಲಕ್ರಮೇಣ ವಿಸ್ತಾರವಾಗುತ್ತ ಹೋಯಿತು. ಪ್ರಾಕೃತ ಗಾಹೆಗಳನ್ನು ವಿಸ್ತರಿಸಿ ಸೊಗಸಾದ ಕಥೆಗಳನ್ನು ನೇದಿರು ವುದನ್ನು ನಾವು ಕನ್ನಡದ 'ವಡ್ಡಾರಾಧನೆ'ಯಲ್ಲಿ ಕಾಣಬಹುದು.

ಕನ್ನಡಭಾಷಾಮೃತವನ್ನು ಕರೆದು ಕಾಸಿ ಕೆನೆಗಟ್ಟಿಸಿದವರು ಜೈನಕವಿಗಳು. 10ನೆಯ ಶತಮಾನದ ಕೊನೆಯ ತನಕ ಕರ್ಣಾಟಕವನ್ನು ಜೈನ ರಾಜಮನೆತನಗಳು ಆಳುತ್ತಿದ್ದವು. ಜೈನವೈಭವ ಉತ್ತರದಿಂದ ದಕ್ಷಿಣಕ್ಕೆ ಹರಿದು ಬಂದಿತು. ಐದಾರು ಶತಮಾನ ತಾನೇತಾನಾಗಿ ಅಹಿಂಸಾವೈಭವ ಕರ್ಣಾಟಕದ ಉದ್ದಗಲದಲ್ಲೂ ಪಸರಿ ಸಿತು. ರಾಷ್ಟ್ರಕೂಟರು, ಗಂಗರು ಜೈನಧರ್ಮಕ್ಕೆ ಆಶ್ರಯದಾತರಾದರು. ಚಾಲುಕ್ಯರು ಜೈನ ಶ್ರೀಮಂತರಿಗೂ ಕವಿಗಳಿಗೂ ಉತ್ತೇಜನವನ್ನಿತ್ತರು. 10ನೆಯ ಶತಮಾನ ದಲ್ಲಿ ಜೈನವೈಭವ ಮುಗಿಲುಮುಟ್ಟಿತು. ಗೋಮಟ ಮೂರ್ತಿಯ ರೂಪದಲ್ಲಿ ಅದು ಕೆನೆಗಟ್ಟಿತು.

ಜೈನಧರ್ಮದಲ್ಲಿ ಕಂದಾಚಾರ ತಲೆಹಾಕಿದಮೇಲೆ, ಉಚ್ಚ–ನೀಚ ಕಲ್ಪನೆಗೆ ಜೈನಸಮಾಜ ಎಡೆಕೊಟ್ಟಮೇಲೆ ಇದರ ಉಜ್ವಲತೆ ಮಂಕಾಯಿತು. ಹನ್ನೆರಡನೆಯ ಶತಮಾನದಲ್ಲಿ ಒಂದು ಕಡೆ ಬಸವಣ್ಣನವರೂ ಇನ್ನೊಂದು ಕಡೆ ರಾಮಾನುಜಾ ಚಾರ್ಯರೂ ಧಾರ್ಮಿಕ ಕ್ರಾಂತಿಯೆಸಗಿದರು. ಯುಗಧರ್ಮವನ್ನು ಜೈನಮುನಿಗಳೂ ಅರ್ಥಮಾಡಿಕೊಳ್ಳಲಿಲ್ಲ, ಅತ್ತ ಶ್ರಾವಕರೂ ಅರ್ಥಮಾಡಿಕೊಳ್ಳಲಿಲ್ಲ. ಹೀಗಾಗಿ ಧರ್ಮವು ಖಿಲವಾಗುತ್ತ ಸಾಗಿತು. ಇದನ್ನು ಎಲ್ಲರೂ ನೋಡಿಕೊಂಡು ತೆಪ್ಪಗಿದ್ದರೇ ಹೊರತು ಕಾಲಕ್ಕೆ ತಕ್ಕಂತೆ ಹೊಂದಿಕೊಳ್ಳುವ ಮನಸ್ಸುಮಾಡಲಿಲ್ಲ. ಉಜ್ವಲ ವಾಗಿದ್ದ ಧರ್ಮ ಮಂಕಾಯಿತು. ಜೀವಕೋಟಿಯ ಧರ್ಮ ಮಾನವ ಸಹಾನುಭೂತಿ ಯನ್ನು ಕಳೆದುಕೊಂಡಿತು.

ಈಗಲೂ ಕಾಲ ಮಿಂಚಿಲ್ಲ. ನಾವು ಗತವೈಭವವನ್ನು ಜಪಿಸುತ್ತ ಎಚ್ಚರಗೊಳ್ಳ ಬೇಕು. ಮಹಾವೀರನ ವಾಣಿಯ ತಿರುಳನ್ನು ಮೈಗೂಡಿಸಿಕೊಂಡು ಮತ್ತೊಮ್ಮೆ ನಮ್ಮ ಒಬ್ಬೊಬ್ಬರ ಅಂತರಂಗವೂ ಜೀವಕೋಟಿಯನ್ನು ಸ್ವಾಗತಿಸುವ ಸಮ ವಸರಣವಾಗಬೇಕು. ಅಹಿಂಸಾ ಸಾಹಿತ್ಯ ಹಿಮಾಲಯದಷ್ಟು ಹಿರಿದಾಗಿದೆ. ಆದರೆ ಅದನ್ನು ಸಂರಕ್ಷಿಸುವ ಅಭಿಮಾನ ನಮ್ಮಲ್ಲಿ ಜಾಗೃತವಾಗಿಲ್ಲ. ಜೈನಶಿಲ್ಪ ಅಸದೃಶ

ವಾದುದು. ಇದನ್ನಾದರೂ ಉಳಿಸಿಕೊಳ್ಳುವ ಯೋಜನೆಯನ್ನು ನಾವು ರೂಪಿಸಿಲ್ಲ. ನಮ್ಮಲ್ಲಿ ಸಂಘಟನೆಯಾಗಬೇಕು. ರಚನಾತ್ಮಕವಾಗಿ ನಾವು ಚಿಂತಿಸಬೇಕು. ಮೊದಲು ನಮ್ಮ ಯುವಕರಲ್ಲಿ ಧರ್ಮಜಾಗೃತಿಯನ್ನುಂಟುಮಾಡಬೇಕು. ನಮ್ಮ ಸಂಪತ್ತನ್ನು ಧರ್ಮಕ್ಕಾಗಿ, ದೇಗುಲಗಳಿಗಾಗಿ, ಆಗಮಗಳಿಗಾಗಿ, ಸಾಹಿತ್ಯಕ್ಕಾಗಿ, ಕೊನೆಗೆ ಆರ್ಥಿಕವಾಗಿ ಹಿಂದುಳಿದವರಿಗಾಗಿ ಮೀಸಲಾಗಿಟ್ಟರೆ ಈಗಲೂ ಗತವೈಭವ ವನ್ನು ಪುನರಾವರ್ತನೆಗೊಳಿಸಬಹುದು. ನಮ್ಮ ಶ್ರೀಮಂತವರ್ಗ ಕಟ್ಟುನಿಟ್ಟಾಗಿ ಪರಿಗ್ರಹಪರಿಮಾಣವ್ರತವನ್ನು ಪಾಲಿಸಬೇಕು. ಸಮಾಜದ ಸರ್ವತೋಮುಖ ಏಳಿಗೆ ಗಾಗಿ ನಾವು ಯೋಜನಾಬದ್ಧರಾಗಿ ಕಂಕಣತೊಟ್ಟರೆ ಯಾವುದೂ ಅಸಾಧ್ಯವಾಗದು.

ಪರಮಪರಂಜ್ಯೋತಿ ಕೋಟಿಚಂದ್ರಾದಿತ್ಯ |
ಕಿರಣ ಸುಜ್ಞಾನಪ್ರಕಾಶಾ ||
ಸುರರ ಮಕುಟಮಣಿರಂಜಿತ ಚರಣಾಬ್ಜ |
ಶರಣಾಗು ಪ್ರಥಮ ಜಿನೇಶಾ ||

ಮಹಾವೀರ ತೀರ್ಥಂಕರರು

ಮಹಾವೀರರು 2500 ವರ್ಷಗಳ ಹಿಂದಿನವರಾದರೂ ಇವರು ಜೈನತೀರ್ಥಂಕರರಲ್ಲಿ ಕೊನೆಯವರು. ಆದಿತೀರ್ಥಂಕರರ ಅಹಿಂಸಾಧರ್ಮವನ್ನು ಕಾಲಕಾಲಕ್ಕೆ ಬಂದ ತೀರ್ಥಂಕರರು ಪುನರುತ್ಥಾನಗೊಳಿಸಿದರು. ಮಹಾವೀರರ ಜನನವನ್ನು ಭರತ ಖಂಡದ ಸಂಸ್ಕೃತಿ ಪರಂಪರೆಯಲ್ಲಿ ಸುವರ್ಣಾಕ್ಷರದಲ್ಲಿ ಬರೆದಿಡಬೇಕು. ಜನತೆ ಹಿಂಸಾಪ್ರವೃತ್ತಿಯಲ್ಲಿ ಮುಳುಗಿದ್ದಾಗ, ಯಜ್ಞಯಾಗಾದಿಗಳ ನೆಪದಲ್ಲಿ ಪ್ರಾಣಿಗಳ ಹತ್ಯಾಕಾಂಡಕ್ಕೆ ಧಾರ್ಮಿಕ ಹಿನ್ನೆಲೆಯನ್ನು ನಿರ್ಮಿಸಿದ್ದಾಗ, ಯಜ್ಞಪಶುಗಳ ಕಗ್ಗೊಲೆಯಿಂದ ನೆತ್ತರಕೋಡಿ ಹರಿಯುತ್ತಿದ್ದಾಗ ಮಹಾವೀರ ತೀರ್ಥಂಕರರ ಜನನವಾಯಿತು. ಇವರ ಜನನದಿಂದ ಅಹಿಂಸೆಯ ಅಂಕುರಾರ್ಪಣವಾದಂತಾಯಿತು.

ಬಿಹಾರ ಪ್ರಾಂತದಲ್ಲಿ ವೈಶಾಲಿಯು ಗಣತಂತ್ರವ್ಯವಸ್ಥೆಯ ಕೇಂದ್ರವಾಗಿದ್ದಿತು. ಚೇಟಕನು ಗಣತಂತ್ರ ಕೇಂದ್ರವಾದ ವೈಶಾಲಿಯ ರಾಜನಾಗಿದ್ದನು. ಪ್ರಜಾಪ್ರಭುತ್ವಕ್ಕೆ ಪೀಠಿಕೆಯಂತಿದೆ ಈ ಗಣತಂತ್ರ ವ್ಯವಸ್ಥೆ. ಗಣಪತಿಯಾದ ಚೇಟಕನಿಗೆ ಎಂಟು ಮಂದಿ ಹೆಣ್ಣುಮಕ್ಕಳು. ಪರಮಜಿನಭಕ್ತನಾದ ಚೇಟಕನು ಉತ್ತರ ಭಾರತದ ಪ್ರಮುಖ ರಾಜರನ್ನು ತನ್ನ ಅಳಿಯಂದಿರನ್ನಾಗಿ ಮಾಡಿಕೊಂಡನು. ಈತನ ಹೆಣ್ಣುಮಕ್ಕಳು ಜೈನವಿಶ್ವದ ಅಷ್ಟದಿಕ್ಕನ್ನೆಯರಾಗಿ ಜೈನಧರ್ಮದ ಪ್ರಭಾವನೆಗೆ ನೆರವಾದರು. ಇವರಲ್ಲಿ ಜ್ಯೇಷ್ಠಳಾದ ಪ್ರಿಯಕಾರಿಣಿಯನ್ನು ವೈಶಾಲಿ ಗಣತಂತ್ರದ ಕ್ಷತ್ರಿಯ ಕುಂಡಲಪುರದ ಅರಸನಾದ ಸಿದ್ಧಾರ್ಥನಿಗೆ ಕೊಟ್ಟಿದ್ದಿತು. ಕ್ರಿ.ಪೂ. 600ರಲ್ಲಿ ಈ ದಂಪತಿಗಳು ಲೋಕಕಲ್ಯಾಣಮೂರ್ತಿಯಾದ ಮಹಾವೀರನನ್ನು ಪಡೆದರು. ಚೈತ್ರ ಶುದ್ಧ ತ್ರಯೋದಶಿಯಂದು ಮಹಾವೀರ ಜನಿಸಿದನು. ಆಷಾಢ ಶುದ್ಧ ಷಷ್ಠಿಯಂದು ಮಹಾವೀರನ ಚೇತನವು ಸ್ವರ್ಗದಿಂದ ಹೊರಟು ಪ್ರಿಯಕಾರಿಣಿಯ ಗರ್ಭದಲ್ಲಿ ನೆಲೆಸಿ ಒಂಬತ್ತು ತಿಂಗಳು ಎಂಟು ದಿವಸಗಳು ತಾಯಿಯ ಗರ್ಭದಲ್ಲಿದ್ದು ಅನಂತರ ಜನನವಾಯಿತು. ಆಗ ಉತ್ತರಫಾಲ್ಗುನಿ ನಕ್ಷತ್ರವು ರಾರಾಜಿಸುತ್ತಿತ್ತು.

	ರವಿ ಬುಧ	ಶುಕ್ರ	
	ಮಹಾವೀರರ ರಾಶಿಚಕ್ರ*		ಗುರು ರಾಹು
ಲಗ್ನ ಕುಜ ಕೇತು	‖ಶ್ರೀ‖		
		ಶನಿ	ಚಂದ್ರ

ದೇವತೆಗಳು ಈ ಶಿಶುವಿಗೆ ಗರ್ಭಾವತರಣ ಮತ್ತು ಜನ್ಮಾಭಿಷೇಕಗಳನ್ನು ವೈಭವವಾಗಿ ಆಚರಿಸಿದರೆಂದು ಜೈನಕವಿಗಳು ಬಣ್ಣಿಸಿರುವರು. ಮಹಾವೀರನು ಬಾಲ್ಯದಿಂದಲೂ ಧೈರ್ಯಸ್ಥೈರ್ಯಗಳ ಸಾಕಾರಮೂರ್ತಿಯಾಗಿದ್ದನು. ಒಮ್ಮೆ ಕಾಲ ಸರ್ಪವನ್ನು ಈ ಮಗು ಕೈಯಲ್ಲಿ ಹಿಡಿದು ಹಗ್ಗದಂತೆ ಅದನ್ನು ಆಟವಾಡಿಸಿ ಎಲ್ಲರನ್ನೂ ಚಕಿತಗೊಳಿಸಿತ್ತು. ಮೊದಲಿನಿಂದಲೂ ಚಿಂತನಶೀಲನಾದ ಮಹಾವೀರ ಲೋಕದ ಏರುಪೇರುಗಳನ್ನೂ, ಕಷ್ಟಕಾರ್ಪಣ್ಯಗಳನ್ನೂ, ಮೂಢನಂಬಿಕೆಗಳನ್ನೂ ಕಂಡು ನಿವಾರಣೋಪಾಯಕ್ಕಾಗಿ ಹಗಲು-ರಾತ್ರಿ ಚಿಂತಿಸಿದನು. ಯಾವುದಕ್ಕೂ ಕಾಲ ಬರಬೇಕಲ್ಲ. ಇಪ್ಪತ್ತೆಂಟು ವರ್ಷ, ಏಳು ತಿಂಗಳು, ಹನ್ನೆರಡು ದಿವಸಗಳ ತನಕ ಮನೆಯಲ್ಲಿದ್ದನು. ಅನಂತರ ಆರು ದಿನ ಉಪವಾಸವಿದ್ದು ಮಾರ್ಗಶೀರ್ಷ ಬಹುಳ ದಶಮಿಯ ದಿನ ಜಿನದೀಕ್ಷೆ ಕೈಗೊಂಡನು. ದೇವತೆಗಳು ದೀಕ್ಷಾಕಲ್ಯಾಣವನ್ನು ಉತ್ಸಾಹದಿಂದ ಆಚರಿಸಿದರು.

ಮಹಾವೀರರು ಲೌಕಿಕ ಸುಖಕ್ಕೆ ತಿಲಾಂಜಲಿ ಕೊಟ್ಟು ಪರಿವ್ರಾಜಕರಾಗಲು ಹೊರಟುದನ್ನು ಕೇಳಿ ಊರಿಗೆ ಊರೇ ಇವರ ದರ್ಶನಕ್ಕೆ ಕಾತರಗೊಂಡು ನುಗ್ಗಿತು. ಚಂಡಾಲನಾದ ಹರಿಕೇಶಿಯೂ ದಾರಿಯಲ್ಲಿದ್ದವರನ್ನು ತಳ್ಳಿಕೊಂಡು ಮಹಾವೀರರ ಪಾದದೆಡೆಗೆ ರಭಸವಾಗಿ ನುಗ್ಗಿದನು. ಏನೋ ಅಪಶಕುನವಾಯಿತೆಂದು ಎಲ್ಲರೂ

* 1956 ಆಗಸ್ಟ್, ದಿ ಅಸ್ಟ್ರಲಾಜಿಕಲ್ ಮ್ಯಾಗಜೈನ್—ಶ್ರೀ ಮಾಣಿಕಚಂದ್ ಜೈನ್

ಅವನನ್ನು ದೂರ ತಳ್ಳಲು ಪ್ರಯತ್ನಿಸಿದರು. ಜಗದ್ಗುರುವಾಗಲಿರುವ ಮಹಾವೀರರು ಕೇಶಿಯ ಮೇಲೆ ಕೃಪಾದೃಷ್ಟಿಯನ್ನು ಬೀರಿ ಅವನನ್ನು ಬಾಚಿ ಅಪ್ಪಿಕೊಂಡರು. ಭಕ್ತಿಗೆ ಜಾತಿಯಿದೆಯೆ ? ವಿಶ್ವಕಲ್ಯಾಣಮೂರ್ತಿಗೆ ಇವನು ಬ್ರಾಹ್ಮಣ, ಇವನು ಮಾದಿಗ ಎಂಬ ಭೇದವಿದೆಯೇ ? ಮಹಾವೀರರ ಮೊದಲ ಶಿಷ್ಯನೆಂದರೆ ಚಂಡಾಲ ಕೇಶಿಯೇ !

ಮಹಾಮುನಿ ಮಹಾವೀರರು ಹನ್ನೆರಡು ವರ್ಷ, ಐದು ತಿಂಗಳು, ಹದಿನೈದು ದಿವಸಗಳವರೆಗೆ ಕಠಿಣವಾದ ತಪಸ್ಸನ್ನು ಮಾಡಿದರು. ಇಷ್ಟುಕಾಲವೂ ಮಹಾ ಮೌನಿಗಳಾಗಿ, ಭೇದವಿಜ್ಞಾನಿಗಳಾಗಿ, ಆಧ್ಯಾತ್ಮಿಕ ಚಿಂತನೆಯಲ್ಲಿ ತನ್ಮಯರಾದರು. ನಾನಾಕಡೆ ಸಂಚರಿಸಿದರು. ಆಹಾರ್ಯದೊರೆತಾಗ ಸ್ವೀಕರಿಸಿದರು. ದೊರೆಯದಾಗ ಹರ್ಷಚಿತ್ತರಾಗಿ ತಪವೆಸಗಿದರು. ಅಜ್ಞಾನಿಗಳಿಂದ ಆಗಾಗ ಇವರಿಗೆ ಉಪಸರ್ಗ ಗಳಾದವು. ಎಲ್ಲವನ್ನು ಸಮಚಿತ್ತರಾಗಿ ಸಹಿಸಿದರು. ಒಮ್ಮೆ ಇವರ ಮೇಲೆ ಏರಿ ಬಂದ ಕಾಲಸರ್ಪವು ಇವರ ಕೃಪಾದೃಷ್ಟಿಯು ತಾಕಿದಾಕ್ಷಣ ಸಾತ್ವಿಕಶಿರೋಮಣಿ ಯಾಯಿತು ! ಬಂಧನದಲ್ಲಿದ್ದ ಚಂದನೆಯ ವಾತ್ಸಲ್ಯಪೂರ್ಣವಾದ ಕರೆಗೆ ಓಗೊಟ್ಟು ಮಹಾಮುನಿ ಮಹಾವೀರರು ಆಕೆಯ ಕೈಯಿಂದ ಆಹಾರವನ್ನು ಸ್ವೀಕರಿಸಿದರು. ಆ ಗಳಿಗೆಯಿಂದ ಆಕೆಯ ಬಂಧನವೂ ಪರಿಹಾರವಾಯಿತು. ಆಕೆ ಆರ್ಯಿಕೆಯಾದಳು. ಮಹಾವೀರರ ಧರ್ಮಪ್ರಭಾವನೆಗೆ ನೆರವಾದಳು; ಅನುಮೋದನ ಪುಣ್ಯವನ್ನು ಗಳಿಸಿದಳು.

ಆತ್ಮಜ್ಞಾನಿಗಳಾದ ಮಹಾವೀರರು ಒಂದು ದಿನ ಜೃಂಬಿಕ ಗ್ರಾಮದ ಬಳಿ ಋಜುಕೂಲಾ ನದಿಯ ದಡದಲ್ಲಿ ಹಂಸಕಲೋಪಾಸನೆಯಲ್ಲಿ ತನ್ಮಯರಾಗಿ ವೈಶಾಖ ಶುದ್ಧ ದಶಮಿಯ ದಿನ ಅಪರಾಹ್ನದಲ್ಲಿ ಘಾತಿಕರ್ಮಗಳನ್ನು ನಿರ್ಮೂಲಮಾಡಿ ಅನಂತ ಸಿರಿಲೋಲರಾದರು. ಆಗ ದೇವತೆಗಳು ತೀರ್ಥಂಕರ ಪ್ರಭುವನ್ನು ಆಕಾಶದಲ್ಲಿ ನಿರಾಧಾರವಾದ ಸಮವಸರಣದಲ್ಲಿ ರತ್ನತ್ರಯ ಪೀಠದ ಮೇಲೆ ಸಹಸ್ರದಳದ ಪೊಂದಾವರೆಯನ್ನು ಅರಳಿಸಿ ಅದರ ಮೇಲೆ ವಿರಾಜಮಾನಗೊಳಿಸಿದರು.

ಕೇವಲಜ್ಞಾನ ಪಡೆದಮೇಲೆ .ತೀರ್ಥಂಕರ ಮಹಾವೀರರು ತಮ್ಮ ದಿವ್ಯಧ್ವನಿಗೆ ವ್ಯಾಖ್ಯಾನಕಾರರು ದೊರೆಯದೇ ಹೋದುದರಿಂದ ಅರವತ್ತಾರು ದಿವಸ ಮೌನದಿಂದ ವಿಹರಿಸಬೇಕಾಯಿತು.* ಮಹಾವೀರರು ರಾಜಗೃಹಕ್ಕೆ ಆಗಮಿಸಿ ವಿಪುಲಾಚಲದಲ್ಲಿ ವಿರಾಜಮಾನರಾದರು. ಆಷಾಢ ಶುದ್ಧ ಪೂರ್ಣಿಮೆಯಂದು ದೇವೇಂದ್ರನ ಪ್ರೇರಣೆ ಯಂತೆ ವೇದವೇದಾಂಗಪಾರಂಗತನಾಗಿದ್ದ ಇಂದ್ರಭೂತಿಯು (ಗೌತಮಗಣಧರ) ಸಮವಸರಣಕ್ಕೆ ಬಂದು, ತೆರವಾಗಿದ್ದ ಗಣಧರ ಪೀಠವನ್ನು ಸ್ವೀಕರಿಸಿದನು.

* ವಿದ್ಯುತ್ ಸಪ್ರಮಾಣವಾಗಿ ಹರಿಯಲು ಟ್ರಾನ್ಸ್‌ಮಿಟರ್ ಹೇಗೊ ಹಾಗೆ ಗಣಧರರು ದಿವ್ಯಧ್ವನಿಯ ಪುನಃಪ್ರಸಾರಕರು.

ಮಹಾವೀರ ಪ್ರಭುವಿಗೆ ದಿವ್ಯಧ್ವನಿಯ ಪುಲಕವಾಯಿತು. ಜಿಜ್ಞಾಸುಗಳಾದ ಶ್ರೇಣಿಕ ಚಕ್ರವರ್ತಿ ಮತ್ತು ಚೇಳಿನಿ ಚಕ್ರೇಶ್ವರೀ ದಂಪತಿಗಳು ಸಮವಸರಣಕ್ಕೆ ಬಂದು ತಮ್ಮ ಧಾರ್ಮಿಕ ಸಂದೇಹಗಳನ್ನೆಲ್ಲ ಮಹಾವೀರ ಪ್ರಭುವಿನ ಮುಂದೆ ಒಂದಾದ ಮೇಲೆ ಒಂದರಂತೆ ಮಂಡಿಸಿದರು. ತೀರ್ಥಂಕರರು ದಿವ್ಯಧ್ವನಿಯ ಮಹಾಪೂರವನ್ನು ಹರಿಸಿದರು. ನೀರಗಂಟಿಯಂತೆ ಗೌತಮ ಗಣಧರರು ಈ ಮಹಾಪೂರವನ್ನು ಲೋಕ ಕಲ್ಯಾಣಾರ್ಥವಾಗಿ ಸಂದರ್ಭೋಚಿತವಾಗಿ ವ್ಯವಸ್ಥೆಗೊಳಿಸಿ ಅಹಿಂಸಾ ಧರ್ಮದ ಬೆಳಸಿಗೆ ನೆರವಾದರು.

ಮಹಾವೀರನ ಕಾಣಿಕೆ

ಸಂಸ್ಕೃತವು ಗೀರ್ವಾಣಭಾಷೆ. ಇದು ಸರ್ವಶ್ರೇಷ್ಠವಾದುದು. ಗಹನವಾದ ಧಾರ್ಮಿಕ ರಹಸ್ಯವು ಗೀರ್ವಾಣಭಾಷೆಯಲ್ಲೇ ಇರಬೇಕು. ಇದನ್ನು ಉಚ್ಚವರ್ಗದವರು ಮಾತ್ರ ತಿಳಿಯಲು ಅರ್ಹರು ಎಂಬ ಭಾಷಾಮದಕ್ಕೆ ಸಿಕ್ಕಿ ಧರ್ಮವು ಕೆಲವರ ಸೊತ್ತಾಗಿ ಶ್ರೀಸಾಮಾನ್ಯರು ಅಜ್ಞಾನಾಂಧಕಾರದಲ್ಲಿ ಅಂದು ತೊಳಲಾಡುತ್ತಿದ್ದರು. ಮಹಾವೀರರು "ಜಿನವಾಣಿ ಸರ್ವಭಾಷಾಮಯಿ" ಎಂದು ಘೋಷಿಸಿ 18 ಮಹಾ ಭಾಷೆಗಳನ್ನೂ, 720 ಕ್ಷುಲ್ಲಕ ಭಾಷೆಗಳನ್ನೂ ಜಿನವಾಣಿ ಹರಿಯಲು ಕಾಲುವೆಗಳನ್ನಾಗಿ ಪರಿವರ್ತಿಸಿದರು. ಇದರಿಂದ ಶ್ರೀಸಾಮಾನ್ಯನ ಬಳಿಗೂ ಜ್ಞಾನವಾಹಿನಿ ಹರಿದು ಬಂದಿತು. ಜನರ ಭಾಷೆಯಾದ ಅರ್ಧಮಾಗಧಿಯಲ್ಲಿ ಮಹಾವೀರರು ಮಾತನಾಡಿದರೂ ಉಳಿದೆಲ್ಲ ಭಾಷೆಗಳಿಗೂ ಪರಮಾತ್ಮಪ್ರಕಾಶ ಹರಿಯುವಂಥ ಔದಾರ್ಯವನ್ನು ತೀರ್ಥಂಕರರು ತೋರಿಸಿ ಭಾಷಾಮದದ ಸೊಂಟವನ್ನು ಮುರಿದರು. ಜ್ಞಾನನಿಧಿಯ ಸೆರೆಯನ್ನು ತಪ್ಪಿಸಿದರು. ಅಂದಿನಿಂದ ಶ್ರೀಸಾಮಾನ್ಯರ ಉದ್ಧಾರಕ್ಕೆ ನಾಂದಿಯಾಯಿತು!

ಜಾತಿಮದವನ್ನೂ ಮಹಾವೀರರು ವಿರೋಧಿಸಿದರು. ಧರ್ಮಾನುರಾಗ ಇದ್ದವರನ್ನೆಲ್ಲ ಅವರು ಯಾವ ಜಾತಿಗೇ ಸೇರಿರಲಿ, ಯಾವ ಪ್ರಾಂತಕ್ಕೇ ಸೇರಿರಲಿ, ಅವರನ್ನು ಭವ್ಯರೆಂದು ಪರಿಗಣಿಸಿ ಸ್ವಾಗತಿಸಿದರು. ಪ್ರಾಣಿವರ್ಗಕ್ಕೂ ತಮ್ಮ ಧರ್ಮಸಭೆಯಲ್ಲಿ ಕೂರಲು ಎಡೆಮಾಡಿಕೊಟ್ಟರು. ಮಹಾವೀರರ ಧರ್ಮವು ಜೀವಕೋಟಿಯ ಧರ್ಮವಾಗಿದೆ. ಆದರಿಂದ ಇದು ವಿಶ್ವಧರ್ಮವಾಗಿದೆ.

ಯಜ್ಞಯಾಗಾದಿಗಳಲ್ಲಿ ಪ್ರಾಣಿಗಳನ್ನು ಅಜ್ಞಾನಿಗಳು ಕಗ್ಗೊಲೆ ನಡೆಸುತ್ತಿದ್ದರು. ಅಹಿಂಸಾಮೂರ್ತಿಯಾದ ಮಹಾವೀರರು ಇದನ್ನು ಪ್ರಬಲವಾಗಿ ವಿರೋಧಿಸಿ ಜನತೆಯ ಒಳಗಣ್ಣನ್ನು ಅರಳಿಸಿದರು. ಜನತೆಯ ಅಂತಃಕರಣಕ್ಕೆ ಅಹಿಂಸೆಯ ರಸಲೇಪನ ಮಾಡಿದರು.

ಮಹಾವೀರರ ವಿಶ್ವಧರ್ಮದ ಉಸಿರೇ ಅಹಿಂಸೆ. ವ್ಯಕ್ತಿಯು ಉದ್ಧಾರವಾಗ

ಬೇಕಾದರೆ ಅವನು ಅಹಿಂಸಾಪೀಠದ ಮೇಲೆ ವಿರಾಜಮಾನನಾದಾಗಲೇ. ಅಹಿಂಸೆಯು ಚೇತನಕ್ಕೆ ಪೀಠವಾಗಬೇಕು; ಕೈವಲ್ಯವು ಕಿರೀಟವಾಗಬೇಕು.

ಪರಿಗ್ರಹವು ಜನಜೀವನದ ಮೇಲೆ ದುಷ್ಪರಿಣಾಮ ಬೀರುವುದು. ಸಂಗ್ರಹ ಬುದ್ಧಿ ಬಂದಿತೆಂದರೆ ಬೇಕಾದುದಕ್ಕಿಂತ ಮಿಗಿಲಾಗಿ ಮಾನವ ಸಂಗ್ರಹಿಸುವನು. ಅಕ್ಕಪಕ್ಕದವರ ಹಿತವನ್ನೂ ಮರೆತು ಸಂಗ್ರಹಿಸುವನು. ಪರಿಗ್ರಹವು ಅಶಾಂತಿಗೂ, ಅಹಂಕಾರಕ್ಕೂ ಕಾರಣವಾಗುವುದು. ಆದರಿಂದ ಶ್ರಾವಕರಿಗೆ ಪರಿಗ್ರಹಪರಿಮಾಣ ವ್ರತವನ್ನೂ, ಮುನಿಗಳಿಗೆ ಪರಿಗ್ರಹ ವ್ರತವನ್ನೂ ಮಹಾವೀರರು ಬೋಧಿಸಿದರು. ರಾಗಾದಿ ಪರಿಗ್ರಹವನ್ನೂ ತೊರೆದು ವೀತರಾಗಿಗಳಾಗಬೇಕೆಂದು ಇವರು ಬೋಧಿಸಿದರು. ವಿಶ್ವಧರ್ಮವಾದ ಜೈನಧರ್ಮವು ವೀತರಾಗಧರ್ಮವಾಗಿದೆ. ಧಾರ್ಮಿಕ ಸಮತಾವಾದವೆಂದರೆ ಮಹಾವೀರರು ಬೋಧಿಸಿದ ಧರ್ಮವೇ ಆಗಿದೆ.

ಎದುರಾಳಿಗಳ ಅಭಿಪ್ರಾಯಕ್ಕೂ ಗೌರವಕೊಡುವುದನ್ನು ನಾವು ಕಲಿಯಬೇಕು. ಒಂದು ವಸ್ತುವಿಗೆ ಅನೇಕ ಮುಖಗಳಿವೆ ಎಂಬುದನ್ನು ಮಹಾವೀರರು ತಿಳಿಸಿ ಅನೇಕಾಂತಕ್ಕೆ ಅಡಿಪಾಯವನ್ನು ಹಾಕಿದರು. ಸಪ್ತಭಂಗಿಯ ಸಂದೇಶವನ್ನು ಸಾರಿದರು. ಸ್ಯಾದ್ವಾದದ ವಿಚಾರಧಾರೆಯಲ್ಲಿ ಮಹಾವೀರರು ಅಹಿಂಸೆಯ ಮಳೆಗರೆದರು. ಅಪರಿಗ್ರಹದ ರಹಸ್ಯವನ್ನು ಬಿತ್ತಿದರು. ಮಹಾವೀರರು ಅಹಿಂಸೆ, ಅಪರಿಗ್ರಹ, ಅನೇಕಾಂತ— ಈ ಮೂರು ಕಣ್ಣುಗಳನ್ನೂ ಪಡೆದು ಮುಕ್ಕಣ್ಣರಾಗಿರುವರು.

ಮಹಾವೀರರು ಮೂವತ್ತು ವರ್ಷ ದಿವ್ಯಧ್ವನಿಯ ಮಳೆಗರೆಯುತ್ತ, ಭವ್ಯಚೇತನಗಳಲ್ಲಿ ಧರ್ಮಾನುರಾಗವನ್ನು ಉದ್ದೀಪನಗೊಳಿಸುತ್ತ, ಭರತಖಂಡದ ನಾನಾ ಭಾಗಗಳಲ್ಲಿ ವಿಹರಿಸಿದರು. ಸರ್ವಜ್ಞರ ಉಪದೇಶವನ್ನು ಕೇಳಲು ಪ್ರಾಣಿವರ್ಗವೂ ಸಮವಸರಣದಲ್ಲಿ ಜಾತಿವೈರವನ್ನು ಮರೆತು ಮಂಡಿಸುತ್ತಿತ್ತು. ಭಗವಾನರು ವಿಹಾರ ಮಾಡಿಕೊಂಡು ಕೊನೆಗೆ ಬಿಹಾರ ಪ್ರಾಂತದ ಪಾವಾ ನಗರಿಗೆ ಬಂದರು. ಕಾರ್ತಿಕ ಬಹುಳ ಚತುರ್ದಶಿ ರಾತ್ರಿ ಮುಗಿಯುತ್ತಬಂದು, ಅಮಾವಾಸ್ಯೆಯ ಸೂರ್ಯೋದಯ ಆಗುವುದಕ್ಕೆ ತುಸು ಮುಂಚಿತವಾಗಿ ಕ್ರಿ.ಪೂ. 527ರಲ್ಲಿ ನಿರ್ವಾಣಹೊಂದಿದರು ಆಗ ಸ್ವಾತಿ ನಕ್ಷತ್ರವು ಮಿನುಗುತ್ತಿತ್ತು. ದೇವತೆಗಳಲ್ಲಿ ನಿರ್ವಾಣಕಲ್ಯಾಣವನ್ನು ಆಚರಿಸಿದರು. 1974ರ ದೀಪಾವಳಿಯ ಹೊತ್ತಿಗೆ ಮಹಾವೀರರು ಮುಕ್ತರಾಗಿ 2500 ವರ್ಷಗಳು ತುಂಬಿಹೋಗುವುವು.

ನಮ್ಮ ಮುನಿವೃಂದ



ಶ್ರೀ ವಿದ್ಯಾನಂದಜೀ

ಇಪ್ಪತ್ತನೆಯ ಶತಮಾನದಲ್ಲೂ ನಮ್ಮ ಮುನಿಪರಂಪರೆ ಲುಪ್ತವಾಗದೆ ತೇಜೋವಂತ ತಪಸ್ವಿಗಳು ಕಾಣಿಸಿಕೊಳ್ಳುತ್ತಿರುವುದು ನಮ್ಮ ಸಮಾಜದ ಪುಣ್ಯವಾಗಿದೆ. ಈ ಶತಮಾನದ ಪ್ರಾರಂಭದಲ್ಲಿದ್ದ ಪರಮಪೂಜ್ಯ ಚಂದ್ರಕೀರ್ತಿಗಳು ಸ್ಥಾವರಕಲ್ಪರಾಗಿ ಕೋಲಾರ ಜಿಲ್ಲೆಯ ಗುಡಿಬಂಡೆ ಜಿನಾಲಯದಲ್ಲಿ ಉಗ್ರೋಗ್ರ ತಪವೆಸಗಿದರು. ಕೀರ್ತಿಕಾಮಿಗಳಾದೆ ತಮ್ಮ ಪಾಡಿಗೆ ತಾವು ಪಂಚಾಚಾರಗಳನ್ನು ಆಚರಿಸಿ ಸಾಧುಪರಮೇಷ್ಠಿಗಳೆನಿಸಿದರು. ಅಷ್ಟೋಪವಾಸಿಗಳಾದ ಈ ಮಹನೀಯರ ಜೀವನವು ಸದಾ ಅಹಿಂಸೆಯ ಉಸಿರಾಡುತ್ತ ವಿಶ್ವಾನುಕಂಪದ ಹಣೆಯಾಗಿ ರಾರಾಜಿಸಿತು. 191 ರಲ್ಲಿ ಇವರು ಪರಂಧಾಮರಾದರು. ಇವರ ಪರೋಕ್ಷ ಶಿಷ್ಯರಾದ ಪರಮಪೂಜ್ಯ ಅನಂತಕೀರ್ತಿಗಳು ದಿಗಂಬರರಾಗಿ ಎಲೆಮರೆಕಾಯಾಗಿ ಸಾಧನೆಯೆಸಗಿದರು. ಉತ್ತರ ಕರ್ನಾಟಕದಲ್ಲಿ ಜೈನಮುನಿಪರಂಪರೆ ಪ್ರಖರವಾಗಿ ಕಾಣಿಸಿಕೊಂಡಿತು. ಪರಮಪೂಜ್ಯರಾದ ಶಾಂತಿಸಾಗರರು, ಪಾಯಸಾಗರರು, ಜಯಕೀರ್ತಿಗಳು ನಾಡಿನಾದ್ಯಂತ ಸಂಚರಿಸಿ ಧರ್ಮಜಾಗೃತಿಯನ್ನು ತಂದರು. 1955ರಲ್ಲಿ ಶಾಂತಿಸಾಗರರು ಯಮಸಲ್ಲೇಖನವನ್ನು ಸ್ವೀಕರಿಸಿ ಕುಂಥಲಗಿರಿಯಲ್ಲಿ ಸ್ವರ್ಗಸ್ಥರಾಗಿ ಮುನಿಪರಂಪರೆಗೆ ತಿಲಕಪ್ರಾಯರಾದರು. ಸಿದ್ಧಾಂತಚಕ್ರವರ್ತಿಗಳಾದ ಮಹಾವೀರಕೀರ್ತಿಗಳು, ಬೊಂಬಾಯಿನಲ್ಲಿ ರತ್ನತ್ರಯ ಮೂರ್ತಿಗಳನ್ನು ಸ್ಥಾಪಿಸಿದ ನೇಮಿಸಾಗರರೂ ಧರ್ಮಪ್ರಭಾವನೆ ಮಾಡುತ್ತ ಇತ್ತೀಚೆಗೆ ಸ್ವರ್ಗಸ್ಥರಾದರು.

ದಿಗಂಬರಯತಿಗಳಲ್ಲಿ ಬಹುಮಂದಿ ಕನ್ನಡಿಗರು. ಇದು ನಾವು ಹಿಗ್ಗಬೇಕಾದ ವಿಷಯು. ಪೂಜ್ಯರಾದ ದೇಶಭೂಷಣರು ದಕ್ಷಿಣದಿಂದ ಉತ್ತರಕ್ಕೆ ಹೋಗಿ ಕೀರ್ತಿಶಾಲಿಗಳಾಗಿರುವರು. ಇವರು ತಮ್ಮ ಹುಟ್ಟೂರಾದ ಚಿಕ್ಕೋಡಿ ತಾಲೋಕು ಕೋಥಳಿಯಲ್ಲಿ ಭವ್ಯವಾದ ಜಿನಮಂದಿರವನ್ನೂ, ಉಪಯುಕ್ತವಾದ ವಿದ್ಯಾಪೀಠವನ್ನೂ ಸ್ಥಾಪಿಸಿರುವರು. ಇವರ ಶಿಷ್ಯೋತ್ತಮರಾದ ಪರಮಪೂಜ್ಯ ವಿದ್ಯಾನಂದಮುನಿಗಳು ಅಥಣಿ ತಾಲೋಕಿನ ಶೇಡಬಾಳ ಗ್ರಾಮದವರು. ಇವರು 1963ರಲ್ಲಿ ದೆಹಲಿಯಲ್ಲಿ ದೇಶಭೂಷಣರ ಸನ್ನಿಧಿಯಲ್ಲಿ ದಿಗಂಬರರಾದರು. ಸಾತ್ವಿಕ ಮಹತ್ವಾಕಾಂಕ್ಷಿಗಳಾದ ಈ ಮುನಿಗಳು ಆದಿದೇವನ ತಪೋಭೂಮಿಯನ್ನು ಹುಡುಕಿಕೊಂಡು ಹಿಮಾಚಲವನ್ನೇರಿದರು. ಒಂದು ವರ್ಷ ಮಂಜಿನ ಆಗರವಾದ ಹಿಮಾಲಯದಲ್ಲಿ ಕುಳಿತು ಇವರು ತಪವೆಸಗಿದರು. ಮಹಿಮಾಲಯವಾಗಿ ಇವರು ಹಿಮಾಲಯದಿಂದ ಕೆಳಗಿಳಿದರು. ಇದರ ಪ್ರವಚನ ಸಭೆಯೆಂದರೆ ಅಭಿನವ ಸಮವಸರಣವಿದ್ದಂತೆ. ಎಲ್ಲ ಧರ್ಮದವರೂ ಇವರ ವಾಣಿಗೆ ಮರುಳಾಗುವರು. ಬ್ರಾಹ್ಮಣನಿಂದ ಹರಿಜನರ ತನಕ ಇದರ ಶಿಷ್ಯಪ್ರಪಂಚವಿದೆ. ಭೇದವಿಜ್ಞಾನಿಗಳಾದ ಈ ಮಹರ್ಷಿಗಳಲ್ಲಿ ಸಮವಸರಣದ ವಿಶ್ವಾನುಕಂಪ ಹೆಪ್ಪುಗಟ್ಟಿದೆ. ಮಹಾವೀರವಾಣಿಯೇ ಇವರ ಬಳಿಸುಳಿದು ಪುನಃ ಪ್ರಸಾರವಾಗುತ್ತಿದೆ ಎಂದರೆ ಅತಿಶಯೋಕ್ತಿಯಾಗದು. ಇವರ ವಾಣಿ ಅಭಿನವ ದಿವ್ಯಧ್ವನಿಯಾಗಿ ಎಲ್ಲ ಜನರನ್ನೂ ತಣಿಸುತ್ತಿದೆ. ಇವರ ವಿಚಾರ ಲಹರಿ ಕ್ರಾಂತಿಕಾರಿಯಾದುದು, ಸರ್ವಜೀವಹಿತಕಾರಿಯಾದುದು. ಈ ಮಹಾಪುರುಷರು 1971ರಲ್ಲಿ ಮಧ್ಯಭಾರತದ ಇಂದೂರಿನಲ್ಲಿ ಚಾತುರ್ಮಾಸವನ್ನು ಮಾಡಿದರು. ನಾಲ್ಕು ತಿಂಗಳೂ ಇಡೀ ನಗರ ಸಮವಸರಣವಾಗಿದ್ದಿತು. 1972ರಲ್ಲಿ ರಾಜಾಸ್ಥಾನದ ಮಹಾವೀರಜಿಯಲ್ಲಿ ಇವರು ಚಾತುರ್ಮಾಸವನ್ನು ಕೈಕೊಂಡಿದ್ದರು. ಆ ಮರಳುಕಾಡಿನಲ್ಲಿ ಇವರು ಧಾರ್ಮಿಕ ಹಾಗು ಆಧ್ಯಾತ್ಮಿಕ ಓಯಸಿಸ್ ಆಗಿದ್ದರು. 1973ರಲ್ಲಿ ಇವರು ಮೀರತ್‌ನಲ್ಲಿ ಚಾತುರ್ಮಾಸವನ್ನಾಚರಿಸಿದರು. ಇವರ ದರ್ಶನಾಕಾಂಕ್ಷಿಗಳಾಗಿ ಭಾರತಖಂಡದ ಎಲ್ಲ ಪ್ರಾಂತಗಳಿಂದ ಜನತೆ ಹೋಗಿದ್ದಿತು. 1974ರ ಚಾತುರ್ಮಾಸಕ್ಕಾಗಿ ಈ ಮುನಿಪುಂಗವರು ನವದೆಹಲಿಯಲ್ಲಿ ತಂಗಿದ್ದಾರೆ. ಇದು ದೆಹಲಿಯ ಪುಣ್ಯ.

ಪರಮಪೂಜ್ಯರಾದ ಬಾಹುಬಲಿ ಆಶ್ರಮದ ಸಮಂತಭದ್ರ ಮಹಾರಾಜರೂ ಪರಮಪೂಜ್ಯ ಸಿದ್ಧಸೇನರೂ ಕನ್ನಡಿಗರಲ್ಲದಿದ್ದರೂ ಇವರು ಕನ್ನಡಿಗರಿಗೆ ಸುಪರಿಚಿತರಾಗಿರುವರು. ಮುನಿಗಳು ಭರತಖಂಡದ ಭಾಗ್ಯವೇ ಹೊರತು ಯಾವೊಂದು ಪ್ರಾಂತಕ್ಕೂ ಮೀಸಲಾದವರಲ್ಲ. ಇಂದು ಜೀವಂತರವಾಗಿರುವ ನಾವು ಭಾಗ್ಯಶಾಲಿಗಳು. ಹತ್ತಾರು ಜನ ದಿಗಂಬರ ಮುನಿಗಳು ನಮ್ಮ ನಡುವಿರುವರು. ಜಂಗಮ ಹಿಮಾಚಲಗಳಾಗಿ ಇವರು ನಮ್ಮನ್ನು ಹರಸುತ್ತಿರುವರು. ಆಸೇತುಹಿಮಾಚಲದ ತನಕ ಇವರ ಕೃಪಾದೃಷ್ಟಿ ಹರಿಯುತ್ತಿದೆ.



ಶ್ರೀ ಚಾರುಕೀರ್ತಿ ಪಂಡಿತಾಚಾರ್ಯರು

ನಮ್ಮ ಭಟ್ಟಾರಕರು :

ಜೈನಮಠಗಳು ಅಹಿಂಸಾ ಸಂಸ್ಕೃತಿಯ ಕೇಂದ್ರಗಳಾಗಿದ್ದವು. ಕ್ರಿ. ಶ. ಹತ್ತನೆಯ ಶತಮಾನದಿಂದಲೂ ಭಟ್ಟಾರಕ ಪರಂಪರೆಗೆ ಶ್ರವಣಬೆಳಗುಳದಲ್ಲಿ ದಾಖಲೆ ಸಿಗುವುದು. ಸಿದ್ಧಾಂತಚಕ್ರವರ್ತಿ ನೇಮಿಚಂದ್ರಾಚಾರ್ಯರು ಹತ್ತನೆಯ ಶತಮಾನದಲ್ಲಿ ಶ್ರವಣಬೆಳಗುಳ ಪೀಠವನ್ನೇರಿ ಜೈನಸಿದ್ಧಾಂತವನ್ನು ಗೋಮಟಸಾರದ ರೂಪದಲ್ಲಿ ಸಂಗ್ರಹಿಸಿದರು. ಹೊಯ್ಸಳ ಬಲ್ಲಾಳನ ಜೀವರಕ್ಷಣೆಮಾಡಿ ಅಂದಿನ ಶ್ರವಣಬೆಳಗುಳದ ಪಟ್ಟಾಚಾರ್ಯರು (ಕ್ರಿ ಶ. 12ನೆಯ ಶತಮಾನ) ಚಾರುಕೀರ್ತಿಗಳೆಂಬ ಬಿರುದನ್ನು ಪಡೆದರು. ಆದರೆ ಎಲ್ಲರೂ ಚಾರುಕೀರ್ತಿಗಳಾಗಿರಲಿಲ್ಲ ಎಂಬುದಕ್ಕೆ ಆಧಾರಗಳಿವೆ. ಶ್ರವಣಬೆಳಗುಳದ ಶಾಸನಗಳಲ್ಲಿ ನಯಕೀರ್ತಿ ಸಿದ್ಧಾಂತದೇವ, ಕಿರಿಯ ನಯಕೀರ್ತಿ, ಬಾಲಚಂದ್ರಮುನಿ, ಪಂಡಿತಾರ್ಯ ಈ ರೀತಿ ಭಟ್ಟಾರಕರ ಹೆಸರುಗಳು ಬರುತ್ತವೆ.

19–20ನೆಯ ಶತಮಾನದಲ್ಲಿ ಶ್ರವಣಬೆಳಗುಳದ ಪೀಠವನ್ನು ತಮಿಳುನಾಡಿನ ಭಟ್ಟಾರಕರು ಬಂದು ಏರಿದರು. 1926ರ ನಂತರ ಶ್ರೀ ಶ್ರೀ ನೇಮಿಸಾಗರರು ಆಗಮಿಸಿ ಶ್ರವಣಬೆಳಗುಳದ ಇತಿಹಾಸವನ್ನು ಉಜ್ವಲಗೊಳಿಸಿದರು. ಇವರು ದಕ್ಷಿಣ

ಕನ್ನಡ ಜಿಲ್ಲೆಯವರು. ಇವರ ಕಾಲದಲ್ಲಿ ಹತ್ತಾರು ಜನ ವಿದ್ವಾಂಸರು ಜೈನ ಸಿದ್ಧಾಂತದಲ್ಲಿ ಪಾರಂಗತರಾದರು. 1940ರ ಮಹಾಮಸ್ತಕಾಭಿಷೇಕ ಇವರ ನೇತೃತ್ವದಲ್ಲಿ ವೈಭವಯುತವಾಗಿ ನಡೆಯಿತು. ಬಂದವರು ತಂಗಲು ಜೈನಧರ್ಮ ಶಾಲೆ ನಿರ್ಮಾಣವಾಯಿತು. ಜೈನ ವೇದಪಾಠಶಾಲೆಗೆ ನವಚೈತನ್ಯ ಬಂದಿತು. ಊರಿನ ಸುತ್ತಮುತ್ತ ಇವರು ತೆಂಗಿನ ಸಸಿಗಳನ್ನು ನೆಡಿಸಿ ಎಲ್ಲೆಲ್ಲೂ ಹಸುರಿನ ಸುಗ್ಗಿಯನ್ನು ತಂದರು. ಕೆಲವರ ಅಸಹಕಾರದಿಂದ ಬೇಸತ್ತು ಶ್ರೀ ನೇಮಿಸಾಗರರು ತಾವಾಗೇ ಪೀಠವನ್ನು ಬಿಟ್ಟುಹೋದರು (1946). ಅನಂತರ ಬಂದವರು ಆಚಾರದಲ್ಲಿ ದಕ್ಷರಾದರೂ ವ್ಯವಹಾರದಲ್ಲಿ ಏನೂ ತಿಳಿದವರಾಗಿರಲಿಲ್ಲ. ಈ ಸಂದರ್ಭದಲ್ಲಿ ಶ್ರೀಮಠವು ಮಂಕಾಯಿತು. ಇವರು ಸ್ವರ್ಗಸ್ಥರಾಗುವಾಗ ದಕ್ಷರಾದ ಯುವಕರಿಗೆ (ಶ್ರೀ ರತ್ನಾಕರ) ಜಿನದೀಕ್ಷೆ ಕೊಟ್ಟು ಚಂದ್ರಕೀರ್ತಿ ಎಂದು ಹೆಸರಿಟ್ಟರು (12–2–69). ಈ ಯುವಕ ಭಟ್ಟಾರಕರು 19–4–70ರಂದು ಶ್ರವಣಬೆಳಗುಳದ ಶ್ರೀಮಠದ ಅಧಿಕಾರಿಗಳಾದರು.

ಶ್ರೀ ಶ್ರೀ ಚಾರುಕೀರ್ತಿಗಳು ನವಯುವಕರು, ವಿದ್ಯಾವಿನಯಸಂಪನ್ನರು. ಪ್ರತಿವರ್ಷವೂ ಪೂಜ್ಯರಾದ ವಿದ್ಯಾನಂದ ಮಹಾಮುನಿಗಳ ಅಭಿನವಸಮವಸರಣದಲ್ಲಿ ಇವರು ಕೆಲವು ದಿನ ತಂಗಿ ಧಾರ್ಮಿಕ ಚೈತನ್ಯವನ್ನೂ, ಆಧ್ಯಾತ್ಮಿಕ ಪುರೋಭಿವೃದ್ಧಿಯನ್ನೂ ಗಳಿಸುತ್ತಿರುವರು. ದಿವಂಗತ ನೇಮಿಸಾಗರರ ಕಾಲದಲ್ಲಿದ್ದಂತೆ ಇವರ ಕಾಲದಲ್ಲೂ ಶ್ರವಣಬೆಳಗುಳ ಉತ್ಸಾಹದ ಬೀಡಾಗದಿರದು. ಇವರು ಹುಂಚದ ಶ್ರೀ ಶ್ರೀ ದೇವೇಂದ್ರಕೀರ್ತಿಗಳ ಗರಡಿಯಲ್ಲಿ ಪರಿಣತರಾಗಿ ಬಂದಿರುವರು. ಇವರ ತೌರೂರು ವರಾಂಗ. ಇವರು ಬರುತ್ತಿದ್ದಂತೆ ಶ್ರೀಮಠಕ್ಕೆ ಸೇರಿದ್ದ ಹೊಲಗಳಲ್ಲಿ ತೆಂಗಿನ ಸಸಿಗಳನ್ನು ಹಾಕಿಸಿದರು. ಎರಡು ಧರ್ಮಶಾಲೆಗಳ ನಿರ್ಮಾಣಕಾರ್ಯವನ್ನು ಕೈಗೊಂಡರು. ಜೈನಾಗಮವನ್ನು ಓದುವ ವಿದ್ಯಾರ್ಥಿಗಳಿಗೆ ಊಟ-ವಸತಿಯನ್ನು ಏರ್ಪಡಿಸಿದರು. ಕ್ಷೇತ್ರಕ್ಕೆ ಬಂದ ಶ್ರಾವಕರಿಗೆ ಶ್ರೀಮಠದಲ್ಲಿ ಭೋಜನ ವ್ಯವಸ್ಥೆಯನ್ನು ಮಾಡಿದರು. ವಾಚಾಳಿಗಳಾದ ಇವರು ಹತ್ತಾರು ಕಡೆ ದೊಡ್ಡ ದೊಡ್ಡ ಸಭೆಗಳಲ್ಲಿ ಧಾರ್ಮಿಕ ಭಾಷಣ ಮಾಡಿ ಸರ್ವಧರ್ಮದವರ ಗಮನವನ್ನೂ ಸೆಳೆದಿರುವರು. ಇವರು ಶ್ರವಣಬೆಳಗುಳದಲ್ಲಿ ರಥೋತ್ಸವ ಕಾಲದಲ್ಲಿ ಸರ್ವಧರ್ಮ ಸಮ್ಮೇಳವನ್ನು ನಡೆಸಿ ಜೈನ ಸಂಸ್ಕೃತಿಗೆ ಮೆರಗು ಹಾಕುತ್ತಿರುವರು.

19–20ನೆಯ ಶತಮಾನದಲ್ಲಿ ಹುಂಚ ಕ್ಷೇತ್ರವು ತಮಿಳುನಾಡಿನ ಭಟ್ಟಾರಕರ ನೇತೃತ್ವವನ್ನು ಪಡೆಯಿತು. 1950 ರಿಂದ 71ರ ತನಕ ಶ್ರೀ ಶ್ರೀ ಅರಹದ್ದಾಸರು (ದಕ್ಷಿಣ ಕನ್ನಡ ಜಿಲ್ಲೆಯವರು) ಹುಂಚದ ಮಠಾಧಿಪತಿಗಳಾಗಿ ಅದರ ಸರ್ವತೋಮುಖವಾದ ಏಳಿಗೆಗೆ ಕಾರಣರಾದರು. ನ್ಯಾಯತೀರ್ಥ ಓದಿದ ಇವರು ಕ್ಷೇತ್ರದ ಹಿರಿಮೆಯನ್ನು ಹೆಚ್ಚಿಸಿದರು. ಶ್ರೀಕ್ಷೇತ್ರ ಅಡಿಯಿಂದ ಮುಡಿತನಕ ಜೀರ್ಣೋದ್ಧಾರ

ವಾಯಿತು. ಧರ್ಮಶಾಲೆಗಳ ನಿರ್ಮಾಣ ಉತ್ಸಾಹದಿಂದ ಸಾಗಿತು. ಯಾತ್ರಿಕರಿಗೆ ಧರ್ಮಾರ್ಥವಾಗಿ ಊಟದ ಏರ್ಪಾಟಾಯಿತು. ಕುಂಕಂದ ವಿದ್ಯಾಪೀಠ ಸ್ಥಾಪನೆಯಾಗಿ ಭಾವೀ ತ್ಯಾಗಿಗಳ ಸೃಷ್ಟಿಕಾರ್ಯಕ್ಕೆ ದೇವೇಂದ್ರಕೀರ್ತಿಗಳು ಭದ್ರವಾದ ಬುನಾದಿ ಹಾಕಿದರು. ಪ್ರತಿವರ್ಷವೂ ರಥೋತ್ಸವದಲ್ಲಿ ಸರ್ವಧರ್ಮ ಸಮ್ಮೇಳನ ನಡೆಸಿ ವಿದ್ವಾಂಸರಿಗೆ ಪ್ರೋತ್ಸಾಹವನ್ನು ಕೊಟ್ಟರು. ಊರೂರಿಗೂ ತಮ್ಮ ಶಿಷ್ಯ ವೃಂದದೊಡನೆ ಹೋಗಿ, ಮಠದ ಖರ್ಚಿನಲ್ಲಿ ಜಿನಕಥೆ, ನಾಟಕ, ಪ್ರವಚನ ಇವನ್ನು ನಡೆಸಿ ಅಹಿಂಸಾ ಧರ್ಮದ ಪ್ರಸಾರವನ್ನೂ ಪ್ರಚಾರವನ್ನೂ ಕೈಗೊಂಡರು. ಶಿವಮೊಗ್ಗದಲ್ಲಿ ಜೈನ ವಿದ್ಯಾರ್ಥಿನಿಲಯವನ್ನು ಪ್ರಾರಂಭಿಸಿ ಆಧುನಿಕ ಹಾಗು ಪಾರಮಾರ್ಥಿಕ ವಿದ್ಯೆಗಳಿಗೆ ಪ್ರೋತ್ಸಾಹವನ್ನು ಕೊಟ್ಟರು. ಗುರುದೇವ ಪತ್ರಿಕೆಯನ್ನು ಹೊರಡಿಸಿ ಮನೆಮನೆಗೂ ಜಿನವಾಣಿಯನ್ನು ಹರಿಸಿದರು. ಇಡೀ ಜೈನ ಸಮಾಜ ಇವರಿಗೆ ಸಹಕಾರವನ್ನು ಕೊಟ್ಟು ಧಾರ್ಮಿಕೋತ್ಸಾಹಕ್ಕೆ ಗರಿ ಮೂಡಿಸಿದರು. ಇವರನಂತರ ಪೀಠವನ್ನೇರಿದ ಯುವಕ ಭಟ್ಟಾರಕರು ದಕ್ಷಿಣ ಕನ್ನಡ ಜಿಲ್ಲೆಯ ಅರಸುಮನೆತನಕ್ಕೆ ಸೇರಿದವರು. ಜಿನದತ್ತರಾಯನ ವಂಶಸ್ಥರಾದ ಇವರು 8 ನೆಯ ಶತಮಾನದಲ್ಲಿ ಹುಂಚದಲ್ಲಿ ಜಿನದತ್ತರಾಯನು ಸ್ಥಾಪಿಸಿದ ಶ್ರೀಮಠದ ಪೀಠವನ್ನೇರಿದ್ದು ನಮ್ಮ ಭಾಗ್ಯವೇ ಸರಿ. ವಾಗ್ಮಿಗಳಾದ ಇವರ ಭಾಷಣಕ್ಕೆ ಘನ ವಿದ್ವಾಂಸರೂ ತಲೆದೂಗುವರು. ದಿವಂಗತ ಹರದ್ದಾಸರು ಹಾಕಿದ ಅಸ್ತಿವಾರದ ಮೇಲೆ ಕ್ಷೇತ್ರದ ಅಭಿವೃದ್ಧಿಯನ್ನು ಇವರು ಸಾಧಿಸುತ್ತಿರುವರು. ಈ ಯುವಕ ಭಟ್ಟಾರಕರು ನಮ್ಮ ಸಮಾಜದ ಅನರ್ಘ್ಯ ರತ್ನವಾಗಿರುವರು.

ನರಸಿಂಹರಾಜಪುರ, ಕಾರ್ಕಳ ಮತ್ತು ಮೂಡಬಿದ್ರೆ ಈ ಕ್ಷೇತ್ರಗಳಲ್ಲೂ ಶ್ರೀಮಠಗಳಿವೆ. ಹೇಳಿಕೊಳ್ಳುವಂಥ ಯಾವ ಮಹತ್ಕಾರ್ಯಗಳೂ ಈಗ ಈ ಕ್ಷೇತ್ರಗಳಲ್ಲಿ ನಡೆಯುತ್ತಿಲ್ಲ. ಇವನ್ನೂ ನಾವು ಅಭಿವೃದ್ಧಿಪಡಿಸಬೇಕು. ಧರ್ಮದ ಆಗರಗಳನ್ನಾಗಿ ಇವನ್ನು ರೂಪಿಸಬೇಕು.

ಶ್ರೀ ಧರ್ಮಸ್ಥಳ



ಶ್ರೀ ರತ್ನವರ್ಮ ಹೆಗ್ಗಡೆಯವರು

ಭರತಖಂಡದಲ್ಲಿ ಧರ್ಮಸ್ಥಳವು ಭಾವೈಕ್ಯತೆಯ ಕೇಂದ್ರವಾಗಿದೆ. ಇದು ಸರ್ವಧರ್ಮಸಮನ್ವಯ ಕ್ಷೇತ್ರವಾಗಿದೆ. ಭೀಕರ ಕ್ಷಾಮದಲ್ಲೂ ಲಕ್ಷೋಪಲಕ್ಷ ಜನಕ್ಕೆ ಇಲ್ಲಿ ಅನ್ನಸಂತರ್ಪಣೆ ತಪ್ಪದೆ ನಡೆಯುವುದು. ಜೀವನದಲ್ಲಿ ಬೇಸತ್ತ ಚೇತನಗಳಿಗೆ ಈ ಕ್ಷೇತ್ರದಲ್ಲಿ ಸಮಾಧಾನ ದೊರೆಯುವುದು. ನ್ಯಾಯ ದೊರೆಯದೆ ಕಂಗಾಲಾದ ವ್ಯಕ್ತಿಗಳಿಗೆ ಇಲ್ಲಿ ನ್ಯಾಯವೂ ದೊರೆಯುವುದು. ದೇವರ ಮುಂದೆ ವಾದಿ-ಪ್ರತಿವಾದಿಗಳು ಬದ್ಧದ್ವೇಷವನ್ನು ಮರೆತು ಸ್ನೇಹಸೌಹಾರ್ದತೆಗಳ ಸೌರಭದಲ್ಲಿ ಹಿಗ್ಗುವರು. ನಮ್ಮ ನಾಡಿನ ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ಇದು ಕ್ಷೇತ್ರರಾಜನೆನಿಸಿದೆ.

ಸುಮಾರು ನಾಲ್ಕು ಶತಮಾನಗಳಿಂದಲೂ ಧರ್ಮಸ್ಥಳ ತನ್ನ ಧಾರ್ಮಿಕ ಇತಿಹಾಸವನ್ನು ಬೆಳೆಸಿಕೊಂಡಿದೆ. ಕ್ರಿ.ಶ. 1810ರಲ್ಲಿ ಧರ್ಮಸ್ಥಳದ ಕೊಮಾರ ಹೆಗ್ಗಡೆಯವರು ಶ್ರವಣಬೆಳಗುಳಕ್ಕೆ ಬಂದು ಕ್ಷೇತ್ರದ ಆರ್ಥಿಕ ಸ್ಥಿತಿಯನ್ನು ಗಮನಿಸಿ ಅನಂತರ ಮೈಸೂರಿಗೆ ಹೋಗಿ ಮುಮ್ಮಡಿ ಕೃಷ್ಣರಾಜ ಒಡೆಯರನ್ನು ಭೆಟಿಮಾಡಿದರು. ಶ್ರವಣಬೆಳಗುಳ ಕ್ಷೇತ್ರಕ್ಕೆ ಇವರ ಕೋರಿಕೆಯಂತೆ ಕೃಷ್ಣರಾಜ ಒಡೆಯರು ಕಬ್ಬಾಳು ಗ್ರಾಮವನ್ನು ಸರ್ವಮಾನ್ಯವಾಗಿ ಬಿಟ್ಟುಕೊಟ್ಟರು. ಧರ್ಮಸ್ಥಳ ಲೋಕವಿಖ್ಯಾತವಾದುದು ಸಾರಿಗೆ ವ್ಯವಸ್ಥೆ ಉತ್ತಮಗೊಂಡಮೇಲೆ. ಇಪ್ಪತ್ತನೆಯ ಶತಮಾನದ ಪ್ರಾರಂಭದಲ್ಲಿ ಪೂಜ್ಯ ಚಂದಯ್ಯ ಹೆಗ್ಗಡೆಯವರು ಕ್ಷೇತ್ರದ ಧರ್ಮಾಧಿಕಾರಿಗಳಾಗಿದ್ದರು. ಇವರು ಗುಡಿಬಂಡೆಯ ಪರಮಪೂಜ್ಯ ಅಷ್ಟೋಪಪಾಸಿ ಚಂದ್ರಕೀರ್ತಿ ಮುನಿಗಳ ದರ್ಶನ ಮಾಡಿ ಪುನೀತರಾಗಿದ್ದರು. ಧರ್ಮಸ್ಥಳದ ಅಭಿವೃದ್ಧಿಗೆ ಇವರು ಭಪ್ರವಾದ ಬುನಾದಿ ಹಾಕಿದರು. 1918ರಲ್ಲಿ ಇವರಿಗೆ ಪೂಜ್ಯರಾದ

ರತ್ನವರ್ಮ ಹೆಗ್ಗಡೆಯವರು ಜನಿಸಿದರು. ಚಂದಯ್ಯ ಹೆಗ್ಗಡೆಯವರು ಅಕಾಲ ಮರಣಕ್ಕೆ ತುತ್ತಾದರು. ಅನಂತರ 1918–19 ರಲ್ಲಿ ಪೂಜ್ಯ ಮಂಜಯ್ಯ ಹೆಗ್ಗಡೆಯವರು ಪೀಠವನ್ನೇರಿದರು. ಚಂದಯ್ಯ ಹೆಗ್ಗಡೆಯವರ ಕಾಲದಲ್ಲಿ ರೂಪಗೊಂಡ ಯೋಜನೆಗಳಿಗೆ ಇವರು ಒಂದು ಆಕಾರವನ್ನು ಕೊಟ್ಟರು.



ಶ್ರೀ ವೀರೇಂದ್ರ ಹೆಗ್ಗಡೆಯವರು

1951ರಲ್ಲಿ ಪೂಜ್ಯ ಮಂಜಯ್ಯ ಹೆಗ್ಗಡೆಯವರು ಧರ್ಮಸ್ಥಳದಲ್ಲಿ ನಡಾವಳಿಯನ್ನು ಆಚರಿಸಿ ಲಕ್ಷೋಪಲಕ್ಷ ಜನಕ್ಕೆ ಅನ್ನಸಂತರ್ಪಣೆ ಮಾಡಿದರು. ಒಂದು ವಾರಕಾಲ ಕ್ಷೇತ್ರಕ್ಕೆಬಂದ ತಂಡೋಪತಂಡವಾದ ಯಾತ್ರಿಕರ ಹಸಿವನ್ನು ತಣಿಸಿದರು. ಪೂಜೋತ್ಸವಗಳಿಂದ ಭಕ್ತಿಯ ಮಹಾಪೂರವನ್ನು ಹರಿಸಿದರು. ಧರ್ಮಸ್ಥಳಕ್ಕೆ ಬಂದ ನಾಸ್ತಿಕರೂ ಆಸ್ತಿಕರಾಗುವಂತೆ ಧಾರ್ಮಿಕ ವಾತಾವರಣವನ್ನು ಇವರು ಸೃಷ್ಟಿಸಿದರು. ಅಹಿಂಸಾಮೂರ್ತಿಯಾದ ಚಂದ್ರನಾಥನಿಗೂ, ಸರ್ವಶಕ್ತನಾದ ಮಂಜುನಾಥನಿಗೂ ತೃಪ್ತಿಯಾಗುವಂತೆ ಅಹಿಂಸಾಯಜ್ಞವನ್ನು ಮಂಜಯ್ಯ ಹೆಗ್ಗಡೆಯವರು ಆಚರಿಸಿ ಅವಭೃತಸ್ನಾನವನ್ನು ಮಾಡಿದರು. ಇವರು ಪ್ರತಿವರ್ಷವೂ ಸರ್ವಧರ್ಮ ಸಮ್ಮೇಳನವನ್ನೂ, ಸಾಹಿತ್ಯ ಸಮ್ಮೇಳನವನ್ನೂ ನಡೆಯುವಂತೆ ಮಾಡಿ ಧರ್ಮಸ್ಥಳವನ್ನು ಸಾಂಸ್ಕೃತಿಕ ಕೇಂದ್ರವನ್ನಾಗಿ ಮಾಡಿದರು. ಮಹಿಮಾವಂತರಾದ ಇವರನ್ನು 'ಮಾತನಾಡುವ ಮಂಜುನಾಥ'ನೆಂದು ಜನತೆ ಕೊಂಡಾಡಿತು.

1955ರಲ್ಲಿ ಪೂಜ್ಯರಾದ ಮಂಜಯ್ಯ ಹೆಗ್ಗಡೆಯವರು ಪರಂಧಾಮವನ್ನೈದಿದರು. ಹಿಂದಿನ ಚಂದಯ್ಯ ಹೆಗ್ಗಡೆಯವರ ಏಕಮಾತ್ರ ಪುತ್ರರಾದ ಪೂಜ್ಯ ರತ್ನವರ್ಮ ಹೆಗ್ಗಡೆಯವರು ಪೀಠಕ್ಕೆ ಬಂದರು. ಇವರು ಬರುತ್ತಿದ್ದಂತೆ ಧರ್ಮಸ್ಥಳ

ದಲ್ಲಿ ಎಲ್ಲೆಲ್ಲಿ ಸ್ಥಳವಿದ್ದಿತೋ ಅಲ್ಲೆಲ್ಲ ಮುಗಿಲು ಮುಟ್ಟುವ ಧರ್ಮಶಾಲೆಗಳನ್ನು ಕಟ್ಟಿಸಿದರು. ದೊಡ್ಡ ದೊಡ್ಡ ನಗರಗಳಲ್ಲಿರುವಂಥ ಉನ್ನತ ಸೌಧಗಳನ್ನು ಈಗ ಧರ್ಮಸ್ಥಳದಲ್ಲಿ ಕಾಣಬಹುದು. ಹಳೆಯ ಕಾಲದ ಅರಮನೆಯನ್ನು ಕೀಳಿಸಿ ಸರ್ವಾಂಗ ಸುಂದರವಾದ ಮೂರು ಅಂತಸ್ತಿನ ಅರಮನೆಯನ್ನು ಇವರು ಕಟ್ಟಿಸಿದರು. ಧರ್ಮಸ್ಥಳಕ್ಕೆ ಬರುವ ಯಾತ್ರಿಕರಿಗೆ ಮಳೆಗಾಲದಲ್ಲಿ ತೊಂದರೆಯಾಗಬಾರದೆಂದು ಇವರ ಕಾಲದಲ್ಲಿ ನೇತ್ರಾವತಿಗೆ ಸೇತುವೆಯಾಯಿತು. ಚಂದ್ರನಾಥ ಬಸದಿಯ ಜೀರ್ಣೋದ್ಧಾರವನ್ನು ಇವರು ಮಾಡಿಸಿದರು. ಕ್ಷೇತ್ರದ ಸರ್ವತೋಮುಖವಾದ ಏಳಿಗೆಯನ್ನು ಸಾಧಿಸುವ ಪಣ ತೊಟ್ಟು ಪೂಜ್ಯ ಹೆಗ್ಗಡೆಯವರು ಮಂಜುನಾಥೇಶ್ವರ ಕಾಲೇಜನ್ನು ಸ್ಥಾಪಿಸಿದರು. ಇಲ್ಲಿ ಪದವಿ ತರಗತಿಗಳನ್ನು ಪ್ರಾರಂಭಿಸಿದರು. ಮಂಜಯ್ಯ ಹೆಗ್ಗಡೆಯವರ ಕಾಲದ ಸಾಂಸ್ಕೃತಿಕ ಕಾರ್ಯಕ್ರಮಗಳನ್ನೂ ಇವರು ಮುಂದುವರಿಸಿಕೊಂಡು ಬಂದರು. ಧರ್ಮಸಮ್ಮೇಳನದ ರಜತಮಹೋತ್ಸವವನ್ನು ವೈಭವವಾಗಿ ಇವರು ಆಚರಿಸಿದರು.

ಪೂಜ್ಯ ರತ್ನವರ್ಮ ಹೆಗ್ಗಡೆಯವರು ಹೆಗ್ಗಡೆಪರಂಪರೆಯಲ್ಲೇ ಅತಿಪುಣ್ಯವಂತರು. ಪರಮಪಾವನೆಯೂ, ವಿದ್ಯಾವಿನಯಸಂಪನ್ನೆಯೂ, ಸದ್ಗೃಹಿಣಿಯೂ ಆಗಿರುವ ಇವರ ಧರ್ಮಪತ್ನಿ ರತ್ನಮ್ಮನವರು, ರತ್ನವರ್ಮ ಹೆಗ್ಗಡೆಯವರ ಅದೃಷ್ಟ ದೇವತೆಯಾಗಿರುವರು. ಈ ಪುಣ್ಯದಂಪತಿಗಳಿಗೆ ಶ್ರೀಯುತರಾದ ವೀರೇಂದ್ರ ಹೆಗ್ಗಡೆ, ಸುರೇಂದ್ರಕುಮಾರ್, ಹರ್ಷೇಂದ್ರಕುಮಾರ್, ರಾಜೇಂದ್ರಕುಮಾರ್ ಎಂಬ ನಾಲ್ವರು ಗಂಡು ಮಕ್ಕಳೂ ಚಿ|| ಪದ್ಮಲತಾ ಎಂಬ ಒಂದು ಹೆಣ್ಣುಮಗುವೂ ಜನಿಸಿದ್ದರಿಂದ ಇವರಿಗೆ ಪಂಚೈಶ್ವರ್ಯವೂ ಲಭಿಸಿದಂತಾಯಿತು. ಸಂತಾನಸಮೃದ್ಧಿಯಲ್ಲೂ ಈ ದಂಪತಿಗಳು ಭಾಗ್ಯವಂತರಾಗಿರುವರು.

ಶ್ರೀಮತಿ ರತ್ನಮ್ಮನವರು ಸಮ್ಯಕ್ತ್ವಶಿರೋಮಣಿಗಳು. ಕಾಳಲದೇವಿಯಂತೆ ಪಾರಮಾರ್ಥಿಕ ಮಹತ್ವಾಕಾಂಕ್ಷಿಗಳು. ಸರ್ವಧರ್ಮ ಸಮನ್ವಯ ಕ್ಷೇತ್ರವಾದ ಧರ್ಮಸ್ಥಳದಲ್ಲಿ ತ್ಯಾಗಮೂರ್ತಿಯಾದ ಬಾಹುಬಲಿಯ ಬೃಹನ್ಮೂರ್ತಿಯನ್ನು ಸ್ಥಾಪಿಸಬೇಕೆಂಬ ಹೆಬ್ಬಯಕೆಯನ್ನು ತಮ್ಮ ಪತಿದೇವರಿದಿರು ತೋಡಿಕೊಂಡರು. ಹುಟ್ಟುಸಾಹಸಿಗಳಾದ ರತ್ನವರ್ಮ ಹೆಗ್ಗಡೆಯವರು ಈ ಮಹಾಕಾರ್ಯಕ್ಕೆ ಕೈಹಾಕಿದರು. ಪರಮಪೂಜ್ಯರಾದ ರತ್ನಮ್ಮನವರ ತಪಸ್ಸಿನ ಫಲವೋ ಏನೋ, ಕಾರ್ಕಳದಲ್ಲಿರುವ ಶ್ರೀ ರೆಂಜಾಳ್ ಗೋಪಾಲ ಶಣೈರವರು ಬಾಹುಬಲಿಯನ್ನು ಕಡೆಯಲು ಮುಂದೆಬಂದರು. ಕಾರ್ಕಳದ ರಾಮಸಮುದ್ರದ ತಡಿಯ ಹೆಬ್ಬಂಡೆಯು ಶಿಲ್ಪಿಯ ಉಳಿಪೆಟ್ಟಿಗೆ ಮೈ ಕೊಡಲು ಸಿದ್ಧವಾಗೇ ಇತ್ತು. ಎಲ್ಲವೂ ಹೇಳಿಮಾಡಿಸಿದಂತೆ ಗೊಮ್ಮಟಾವತಾರಕ್ಕೆ ಪೂರ್ವಸಿದ್ಧತೆಗಳಾದವು. 1967ರ ಅಕ್ಟೋಬರ್ ತಿಂಗಳಲ್ಲಿ ವಿಜಯದಶಮಿಯಂದು ಕಾರ್ಕಳದಲ್ಲಿ ಹೆಬ್ಬಂಡೆಯ ಪೂಜೆ ನೆರವೇರಿತು. ಪ್ರಥಮ

ಮಂಗಲಜಿನಪೂಜೆಯಾಯಿತು. ಶ್ರೀ ಶಣೈ ಅವರ ನೇತೃತ್ವದಲ್ಲಿ ಐವತ್ತು ಜನ ಶಿಲ್ಪಿಗಳು ಹೆಬ್ಬಂಡೆಯನ್ನು ಬಿಡಿಸಿದರು. ಒಂದು ವರ್ಷ ನಿರ್ವಿಘ್ನವಾಗಿ ಮೂರ್ತಿಯನ್ನು ಕಡೆಯುವ ಕಾರ್ಯ ಸಾಗಿತು. ಕಗ್ಗಲ್ಲು ದೈವತ್ವವನ್ನು ಪಡೆಯಲು ಆತುರವಾಗೇ ಇತ್ತು. ಶಿಲ್ಪಿಗಳ ಚಾಣಕ್ಕೆ ತುಸುವೂ ಬೇಸರಗೊಳ್ಳದೆ, ಕಲ್ಲು ಸೊಲ್ಲೆತ್ತದೆ ತಾಳ್ಮೆಯಿಂದ ಸಹಕಾರವನ್ನು ಕೊಟ್ಟಿತು. ದಿನದಿನವೂ ಬಾಹುಬಲಿಯ ದಿವ್ಯಾಕಾರವು ತುಸುತುಸುವಾಗಿ ಮೈದೋರುತ್ತಾ ಬಂದಿತು. ಒಂದು ವರ್ಷ ಕಳೆಯುವುದರೊಳಗಾಗಿ ಪೂಜ್ಯರಾದ ರತ್ನವರ್ಮ ಹೆಗ್ಗಡೆಯವರು 12–10–1968ರಂದು ಮಧ್ಯಾಹ್ನ 2–40 ಗಂಟೆಗೆ ಪರಂಧಾಮವನ್ನೈದಿದರು. ಪ್ರಶಾಂತಚಿತ್ತರಾಗಿ ಬಾಹುಬಲಿಯನ್ನು ನೆನೆಯುತ್ತ ಸಮಾಧಿಮರಣವನ್ನು ಇವರು ಪಡೆದರು.

ಪೂಜ್ಯ ರತ್ನಮ್ಮನವರಿಗೆ ಆಕಾಶವೇ ತಲೆಯ ಮೇಲೆ ಕವುಚಿಬಿದ್ದಂತಾಯಿತು. ಬಾಹುಬಲಿಯ ನಿರ್ಮಾಣ ನಿಂತುಹೋಗುವುದೋ ಏನೋ ಎಂದು ಹೆದರಿದರು. ಆಗಿನ್ನೂ ಬಿ.ಎ. ವಿದ್ಯಾರ್ಥಿಗಳಾಗಿದ್ದ ಶ್ರೀ ವೀರೇಂದ್ರ ಹೆಗ್ಗಡೆಯವರು ವಿದ್ಯಾಭ್ಯಾಸವನ್ನು ನಿಲ್ಲಿಸಿ, ತಮ್ಮ ತಂದೆಯವರ ಉತ್ತರಕ್ರಿಯೆಗಳನ್ನು ಮುಗಿಸಿದರು. ಇವರಿಗೆ ಆಗ 19 ವರ್ಷ ತುಂಬಿತ್ತು. 20ರ ಹರಯದ ಈ ಯುವಕರು 24-11-1968 ರಂದು ಧರ್ಮಸ್ಥಳದ ಪವಿತ್ರವಾದ ಪೀಠವನ್ನು ಏರಿದರು (ಇವರು ಜನಿಸಿದ್ದು 25-11-1948). ಪೀಠವನ್ನು ಏರಿದ ಕೂಡಲೇ ಇವರು ಬಾಲಸೂರ್ಯನಂತೆ ತೊಳಗಿದರು!

ಶ್ರೀ ವೀರೇಂದ್ರ ಹೆಗ್ಗಡೆಯವರಲ್ಲಿ ಮಂಜಯ್ಯ ಹೆಗ್ಗಡೆಯವರ ಆಧ್ಯಾತ್ಮಿಕತೆ ಹಾಗೂ ರತ್ನವರ್ಮ ಹೆಗ್ಗಡೆಯವರ ಏಕಾಂಗಸಾಹಸ ಮತ್ತು ಶ್ರೀಮತಿ ರತ್ನಮ್ಮನವರ ತಪಶ್ಶಕ್ತಿ ಇವು ಮೂರೂ ಮುಪ್ಪುರಿಗೊಂಡಿವೆ. ಬಾಹುಬಲಿಯ ನಿರ್ಮಾಣ ಇವರ ನೇತೃತ್ವದಲ್ಲಿ ಪರಿಪೂರ್ಣವಾಯಿತು. ಮಂಜುನಾಥೇಶ್ವರ ಕಾಲೇಜಿನ ಭವ್ಯಭವನವನ್ನು ಇವರು ಮುಂದೆ ನಿಂತು ಪೂರೈಸಿದರು. ರಾಷ್ಟ್ರಾಧ್ಯಕ್ಷರನ್ನು 11-5-1970 ರಂದು ಧರ್ಮಸ್ಥಳಕ್ಕೆ ಶ್ರೀ ವೀರೇಂದ್ರ ಹೆಗ್ಗಡೆಯವರು ಕರೆಸಿಕೊಂಡು ಬಾಹುಬಲಿಯ ಪ್ರತಿಷ್ಠೆಗೆ ಪೂರ್ವಭಾವಿಯಾಗಿ ಒಂದು ಗುಡ್ಡದಲ್ಲಿ ಶಂಕುಸ್ಥಾಪನೆ ಮಾಡಿಸಿ ಅದನ್ನು 'ಬಾಹುಬಲಿ ವಿಹಾರ'ವೆಂದು ಕರೆದರು. ಮಿಂಚಿನ ವೇಗದಲ್ಲಿ ಇವರು ಕೈಗೊಂಡ ಕಾರ್ಯಗಳು ನೆರವೇರುತ್ತಾ ಬಂದವು.

39 ಅಡಿ ಎತ್ತರದ ಬಾಹುಬಲಿ ವಿಗ್ರಹಕ್ಕೆ 7 ಅಡಿ ಪೀಠವಿದೆ. ಅನಂತರ ಪೀಠದ ಅಡಿಭಾಗದಲ್ಲಿ ಭೂಮಿಗಿಳಿಯುವ 6 ಅಡಿ ಶಿಲಾಮೂಲವಿದೆ. ಷಡ್‌ದ್ರವ್ಯಗಳ ಬುನಾದಿಯ ಮೇಲೆ, ಸಪ್ತತತ್ವಗಳ ನೆಲಗಟ್ಟಿನಲ್ಲಿ ಜೈನಧರ್ಮ ಸುಸ್ಥಿರವಾಗಿರುವುದರ ಸಂಕೇತವಾಗಿ ಈ ಬಾಹುಬಲಿಯ ನಿರ್ಮಾಣವಾಗಿದೆ. ಒಟ್ಟು (39+7+6=52 ಅಡಿ) 52 ಅಡಿ ಎತ್ತರವಾದ 14 ಅಡಿ ಅಗಲವಾದ ಈ ಬೃಹತ್ ಶಿಲೆ ಒಟ್ಟು

170 ಟನ್ ತೂಗುವುದು.* ಶಿಲೆಯಲ್ಲಿ ಕಲೆ ಸೆಲೆಯೊಡೆದಂತೆ ಶ್ರೀ ಶಣ್ಯೆರವರು ಮೂರ್ತಿಯನ್ನು ಕಡೆದಿರುವರು. ಈ ಮೂರ್ತಿ 20ನೆಯ ಶತಮಾನದ ಆಶ್ಚರ್ಯಗಳಲ್ಲೊಂದಾಗಿದೆ.

ಬಾಹುಬಲಿಯ ಬೃಹನ್ಮೂರ್ತಿಯನ್ನು ಧರ್ಮಸ್ಥಳಕ್ಕೆ ತಂದ ಕಾರ್ಯ ಪುರಾಣದಂತಿದೆ; ಪವಾಡಸದೃಶವಾಗಿದೆ. ಬೊಂಬಾಯಿಯ ಮಂಗತರಾಂ ಅಂಡ್ ಬ್ರದರ್ಸ್ ಎಂಬ ಕಂಪನಿಯವರು ಈ ಮೂರ್ತಿಯನ್ನು ಸಾಗಿಸುವ ಹೊಣೆಗಾರಿಕೆಯನ್ನು ವಹಿಸಿಕೊಂಡರು. ಪರಮಾತ್ಮಕಲೆಯಲ್ಲಿ 64 ಕಲೆಗಳೂ ಸಾಮರಸ್ಯಗೊಂಡಂತೆ 64 ಚಕ್ರಗಳ ಟ್ರಾಲಿಯಲ್ಲಿ ಈ ಮೂರ್ತಿಯನ್ನು ಸಾಗಿಸಿದರು. ಈ ಸಂದರ್ಭದಲ್ಲಿ ಜೈನಧರ್ಮದ ಕುಣಿತಕ್ಕೆ ಅನುಗುಣವಾಗಿ ಉಳಿದೆಲ್ಲ ಧರ್ಮಗಳೂ ತಾಳಗಳಾಗಿ ನೆರವಾದುದು ಶ್ರೀಮಾನ್ ಹೆಗ್ಗಡೆಯವರ ಪುಣ್ಯ. ಮಾತೃಶ್ರೀ ರತ್ನಮ್ಮನವರ ತಪಸ್ಸು ಹೆಪ್ಪುಗಟ್ಟಿ ಈ ಮಹತ್ಕಾರ್ಯಕ್ಕೆ ಆಧ್ಯಾತ್ಮಿಕ ಶಕ್ತಿಯನ್ನು ದಯಪಾಲಿಸಿತು. 27–2–1973 ರಂದು ಬಾಹುಬಲಿ ಕಾರ್ಕಳದಿಂದ ಹೊರಟು 23 ದಿನ ಪ್ರಯಾಣ ಬೆಳೆಸಿ 20–3–1973ರಂದು ಬಾಹುಬಲಿ ವಿಹಾರವನ್ನು ತಲುಪಿತು. ಈ ಸಂದರ್ಭದಲ್ಲಿ ಕಾರ್ಕಳದಿಂದ ಧರ್ಮಸ್ಥಳದ ತನಕ ಇರುವ ಪ್ರಮುಖ ಗ್ರಾಮಗಳಲ್ಲೆಲ್ಲ ಮೂರ್ತಿ ತಂಗಿತ್ತು. ನಲ್ವತ್ತುಮೈಲಿ ಪ್ರದೇಶವೂ ಸಮವಸರಣವಾದಂತೆ ಸುಭಿಕ್ಷವಾಗಿದ್ದಿತು. ಅಲ್ಲಲ್ಲಿ ಹಸಿರುವಾಣಿ ಚಪ್ಪರಗಳನ್ನು ಜನತೆ ನಿರ್ಮಿಸಿತ್ತು. ದಾರಿಯುದ್ದಕ್ಕೂ ಸರ್ವಧರ್ಮದವರೂ ಅನ್ನಸಂತರ್ಪಣೆ ನಡೆಸಿದರು. ಪರಮಾತ್ಮ ಪ್ರಕಾಶ ಸೂಸಿದಾಗ ಏನಾಗಬಹುದು ಎಂಬುದಕ್ಕೆ ಈ ಬಾಹುಬಲಿಯ ವಿಹಾರವು ಒಂದು ಜೀವಂತ ಸಾಕ್ಷಿಯಾಯಿತು. ಬಾಹುಬಲಿಯ ದರ್ಶನಾಕಾಂಕ್ಷಿಯಾಗಿ ಹೊರಟ ದಾನಚಿಂತಾಮಣಿ ಅತ್ತಿಮಬ್ಬೆಯಂತೆ ಮಾತೃಶ್ರೀ ರತ್ನಮ್ಮನವರು ವ್ರತನಿಷ್ಠರಾಗಿ ಕಾಲುನಡಗೆಯಲ್ಲೇ ನಲವತ್ತು ಮೈಲಿ ನಡೆದು ಬಂದರು. ಈ ಬಾಹುಬಲಿಯ ನಿರ್ಮಾಣದಿಂದ ಲೋಕ ಪಾವನವಾಯಿತು; ಧರ್ಮಸ್ಥಳ ಲೋಕವಿಖ್ಯಾತವಾಯಿತು. ಹಳ್ಳಿಯಿಂದ ದಿಳ್ಳಿಯ ತನಕ ಕ್ಷೇತ್ರದ ವ್ಯಾಪ್ತಿ ಹಬ್ಬಿತು.

ಶ್ರೀ ವೀರೇಂದ್ರ ಹೆಗ್ಗಡೆಯವರು 27–12–72ರಂದು ಕುಮಾರಿ ಹೇಮಾವತಿಯನ್ನು ಮದುವೆಯಾದರು. ಇದರಿಂದ ಇವರಿಗೆ ದುಡಿಯಲು ನಾಲ್ಕು ಕೈಗಳಾದವು; ನೋಡಲು ನಾಲ್ಕು ಕಣ್ಣಾದವು. ಸರ್ವಧರ್ಮಗಳ ಯತಿಗಳಿಂದಲೂ ಶ್ರೀ ವೀರೇಂದ್ರ ಹೆಗ್ಗಡೆಯವರು ಮೆಚ್ಚಿಗೆಯನ್ನು ಪಡೆದು ಮಹಿಮಾನ್ವಿತರಾಗಿರುವರು. ಭಾರತ

---

*ಬಾಹುಬಲಿಯ ಅಂಗೋಪಾಂಗಗಳು

ಮುಖ 6 ಅಡಿ, ಕುತ್ತಿಗೆ 1 ಅಡಿ, ತೋಳುಗಳು 22·3 ಅಡಿ, ಬೆನ್ನು 13 ಅಡಿ, ಸೊಂಟ 19·5 ಅಡಿ, ಪಾದಗಳ ದಪ್ಪ 1·4 ಅಡಿ, ಹೆಬ್ಬೆರಳು 1 ಅಡಿ, ಕಿವಿ 3·75 ಅಡಿ, ಮೂಗು 2 ಅಡಿ, ಎದೆ 13·50 ಅಡಿ.

ರತ್ನರಾಗಲು ಅರ್ಹತೆಯನ್ನು ಪಡೆದಿರುವ ಶ್ರೀ ವೀರೆಂದ್ರ ಹೆಗ್ಗಡೆಯವರನ್ನು ಪಡೆದ ಸಮಾಜ ಧನ್ಯವಾದುದು. ಇವರು ಅಭಿನವ ಚಾಮುಂಡರಾಯರು ; ಮಾತೃಶ್ರೀ ರತ್ನಮ್ಮನವರು ಅಭಿನವ ಕಾಳಲದೇವಿಯರು.

ವ್ಯವಹಾರನಿಶ್ಚಯವರಿದು ತಮ್ಮಾತ್ಮತ |
ತ್ವವ ನೆಮ್ಮಿ ನಿಜವ ಸಾಧಿಸುವ ||
ನವಕೋಟಿ ಮುನಿಗಳು ಮೂವರಿಲ್ಲೆನಲುಂ |
ಟವರಡಿಗಳಿಗೆರಗುವೆನು ||

ಪರಬೊಮ್ಮ ತ್ರಿಭುವನಸಾರ ಚಿದಂಬರ |
ಪುರುಷ ನಿರಂಜನಸಿದ್ಧಾ ||
ದುರಿತಂಜಯ ಹಂಸನಾಥ ನಮೋ ನಮೋ |
ಗುರುವೆ ಪ್ರತ್ಯಕ್ಷವಾಗೆನಗೆ ||

ಅಭಿಮತಸಿದ್ಧಿದಾಯಕ ಯೋಗಿನಾಯಕ |
ಉಭಯಲಾವಣ್ಯವರೇಣ್ಯಾ ||
ಪ್ರಭೆದೋರುತೆನ್ನಂತರಂಗದೊಳಿರು ಬೋಧ |
ವಿಭುವೆ ಚಿದಂಬರಪುರುಷಾ ||

ಶ್ರೀನಿವಾಸ ಬಲ್ಲಾಳರು, ಮಂಗಳೂರು

ಶ್ರೀನಿವಾಸ ಬಲ್ಲಾಳರು ಆಗರ್ಭ ಶ್ರೀಮಂತರು. ಬಲ್ಲಾಳ ಮನೆತನ ಅರಸು ಮನೆತನ. ಇವರ ನಿವಾಸವಾದ ಬಲ್ಲಾಳಬಾಗ್ ಅರಮನೆಯಂತೆಯೇ ಇದೆ. ಇವರ ಮನೆಯಲ್ಲಿ ಲಕ್ಷ್ಮಿಯ ಜೊತೆಯಾಗಿ ಕಲಾಭಿಮಾನದೇವತೆಯಾದ ಸರಸ್ವತಿಯೂ ನೆಲಸಿರುವಳು. ಇವರ ಹೆಣ್ಣುಮಕ್ಕಳಲ್ಲಿ ಪ್ರತಿಯೊಬ್ಬಳೂ ನಾಟ್ಯಸರಸ್ವತಿ. ಬೇಲೂರಿನ ಶಿಲಾಬಾಲಕಿಯರಂತೆ ಬಲ್ಲಾಳರ ಪುತ್ರಿಯರು ನಾನಾ ಭಂಗಿಗಳಲ್ಲಿ ಅಭಿನಯಿಸುವರು. ದಕ್ಷಿಣ ಕನ್ನಡ ಜಿಲ್ಲೆಯ ಮಸ್ತಕಾಭಿಷೇಕಗಳಲ್ಲಿ ಶ್ರೀನಿವಾಸರ ಪುತ್ರಿಯರು ತಪ್ಪದೆ ನವಿಲನಾಟ್ಯವಾಡಿ ಧಾರ್ಮಿಕ ವಾತಾವರಣವನ್ನು ಕಲಾಯುಕ್ತಗೊಳಿಸುವರು. ಬಲ್ಲಾಳರು ಸಂಗೀತಪ್ರಿಯರು. ಶ್ರೀಮಂತರಾದ ಇವರು ತಮ್ಮ ಕಾಲವನ್ನು ಕಲಾಪೋಷಣೆಗಾಗಿ ವಿನಿಯೋಗಿಸುವರು. ಇವರ ಹಿರಿಯ ಪುತ್ರ ಶೋಭಾಕ ಚಿತ್ರಕಲೆಯಲ್ಲಿ ಪ್ರವೀಣ. ಜನಪ್ರಿಯರೂ ಸತ್ಯನಿಷ್ಠರೂ ಆದ ಬಲ್ಲಾಳರು ಆರುವರ್ಷ ಕಾಲ ಗೌರವ ಮ್ಯಾಜಿಸ್ಟ್ರೇಟ್ ಆಗಿ ನಮ್ಮ ಸಮಾಜದ ಹಿರಿಮೆಗೆ ನೆರಗುಹಾಕಿರುವರು. ಸ್ವತಂತ್ರ ಪಾರ್ಟಿಯಲ್ಲಿ ಇವರ ಪಾತ್ರ ಗಮನಾರ್ಹವಾದುದು. ದಕ್ಷಿಣ ಕನ್ನಡ ಜಿಲ್ಲೆಯ ಜೈನಸಮಾಜದಲ್ಲಿ ಇವರು ತಿಲಕಪ್ರಾಯರಾಗಿರುವರು. ಸದಭಿರುಚಿಯ ಉದಾರಹೃದಯರಾದ ಇವರು ಎಷ್ಟೋ ಜನಕ್ಕೆ ಆಶ್ರಯದಾತರಾಗಿರುವರು.

ಕಟ್ಟೇಮಾರ್ ರಘುಚಂದ್ರ ಬಲ್ಲಾಳರ ಧರ್ಮಪತ್ನಿ ಶ್ರೀಮತಿ ಪುಷ್ಪಾವತಮ್ಮ ಮಾದಾಮಿ. ಈ ದಂಪತಿಗಳ ಏಕಮಾತ್ರ ಪುತ್ರರು (1918) ಶ್ರೀನಿವಾಸ ಬಲ್ಲಾಳರು. ಬಾಲ್ಯದಲ್ಲೇ ಇವರು ತಾಯಿಯನ್ನು ಕಳೆದುಕೊಂಡು ತಬ್ಬಲಿಯಾದರು. ಅನಂತರ ರಘುಚಂದ್ರ ಬಲ್ಲಾಳರು ಕಟ್ಟೇಮಾರನ್ನು ತೊರೆದು ಮಂಗಳೂರಿಗೆ ಬಂದು ನೆಲಸಿದರು. ತಂದೆಯ ತೋಳೇ ತನಗೆ ತೊಟ್ಟಿಲಾಗಿ ಶ್ರೀನಿವಾಸ ಬಲ್ಲಾಳರು ಬೆಳೆದರು. ಇವರು ಮಂಗಳೂರಿನಲ್ಲಿ ಇಂಟರ್‌ಮೀಡಿಯೆಟ್ ಓದಿ ಅಷ್ಟಕ್ಕೇ ಸಾಕುಮಾಡಿದರು.

1942ರಲ್ಲಿ ಈ ಶ್ರೀಮಂತ ಪುತ್ರರಿಗೆ ಅನ್ನಪೂರ್ಣೆಯ ಸಾಕ್ಷಾತ್ಕಾರವಾಯಿತು. ಧರ್ಮಸ್ಥಳದ ಧರ್ಮಾಧಿಕಾರಿಗಳೂ, ಕರ್ಣಾಟಕ ಕಲಾಪೋಷಕರೂ, ಚಿತ್ರಕಲಾವಿಶಾರದರೂ, ವಿಶ್ವಧರ್ಮ ಪ್ರಚಾರಕರೂ, ಮಹಾಪುರುಷರೂ ಆದ ಮಂಜಯ್ಯ ಹೆಗ್ಗಡೆಯವರ ಏಕಮಾತ್ರ ಪುತ್ರಿಯಾದ ವಿಮಲಮ್ಮನವರೊಡನೆ ಬಲ್ಲಾಳರ ವಿವಾಹವಾಯಿತು! ಈ ಕನ್ಯಾಕೌಸ್ತುಭರತ್ನದ ಸಂಸರ್ಗದಿಂದ ಬಲ್ಲಾಳರ ಶ್ರೀಮಂತಿಕೆಗೆ ಮಹಿಮಾವಂತಿಕೆಯೂ ಬಂದಂತಾಯಿತು. ಕಲ್ಪವೃಕ್ಷಕ್ಕೆ ಕಲ್ಪಲತೆ ಆಡರಿದಂತಾಯಿತು; ಕಾಮಧೇನು ಚೂಡಾಮಣಿಯನ್ನು ಧರಿಸಿದಂತಾಯಿತು. ಈ ಅಪೂರ್ವ ದಂಪತಿಗಳಿಗೆ ಅಷ್ಟೈಶ್ವರ್ಯಗಳೂ ಲಭಿಸಿದಂತೆ ಶೋಭಾಕರ್,

ಸುರೇಶ್, ಸಂಪತ್, ಭರತ್, ನಯನ, ಮಂಜುಳ, ಸುರೇಖ ಮತ್ತು ವೃಂದ ಎಂಬು ದಾಗಿ ಎಂಟು ಜನ ಮಕ್ಕಳಾದರು. ಒಂಟೊಂಟಿಯಾಗಿ ಜನಿಸಿದ ಈ ದಂಪತಿಗಳು ಸಂತಾನಸಂಪತ್ತನ್ನು ವಿಪುಲವಾಗಿ ಪಡೆದು ಸಂತೃಪ್ತರಾಗಿರುವರು.

ಮಂಗಳೂರಿನ ಜಿನಾಲಯ ಮತ್ತು ಧರ್ಮಛತ್ರಗಳ ವ್ಯವಸ್ಥೆಯನ್ನು ಬಲ್ಲಾಳರು ಸ್ವಂತ ಖರ್ಚಿನಿಂದ ಸರ್ವಾಂಗಸುಂದರವಾಗಿ ನೆರವೇರಿಸುತ್ತಿರುವರು. ಕಾರ್ಕಳ ಮತ್ತು ವೇಣೂರಿನ ಮಸ್ತಕಾಭಿಷೇಕಗಳಲ್ಲಿ ಒಂದೊಂದು ದಿನದ ಇಡೀ ಖರ್ಚನ್ನು ಇವರು ವಹಿಸಿಕೊಂಡು ತಮ್ಮ ಔದಾರ್ಯಕ್ಕೆ ಧರ್ಮಾನುರಾಗದ ಒಪ್ಪಹಾಕುವರು. ದೇಹಿ ಎಂದವರಿಗೆ ನಾಸ್ತಿ ಎನ್ನುವುದಿಲ್ಲ. ಇವರ ಮನೆ ಒಂದು ಧರ್ಮಛತ್ರವಿದ್ದಂತೆ.

ಶ್ರೀಮತಿ ವಿಮಲಮ್ಮನವರಿಗೆ ತಮ್ಮದೇ ಆದ ವ್ಯಕ್ತಿತ್ವವಿದೆ. ಇವರ ಮಾತೆಯಾದ ಶ್ರೀಮತಮ್ಮನವರು ಮೂಡುಬಿದರೆಯ ಪಟ್ಟಣದ ಸೆಟ್ಟಿ ಮನೆತನದವರು. ಇವರ ತಂದೆಯವರಂತೂ ಮಾತಾಡುವ ಮಂಜುನಾಥನೆಂದು ಕೀರ್ತಿವಂತರಾದ ಮಂಜಯ್ಯ ಹೆಗ್ಗಡೆಯವರು. ಧರ್ಮಸ್ಥಳದ ಕೀರ್ತಿಯೇ ಮೂರ್ತಿವೆತ್ತಂತೆ ಕನ್ಯಾಕೌಸ್ತುಭರತ್ನವಾದ ವಿಮಲಮ್ಮನವರು 1927ರಲ್ಲಿ ಜನಿಸಿದರು. ಬಹುಬೇಗ ಇವರೂ ತಾಯಿಯನ್ನು ಕಳೆದುಕೊಂಡು ತಬ್ಬಲಿಗಳಾದರು. ಮಂಜಯ್ಯ ಹೆಗ್ಗಡೆಯವರ ವಾತ್ಸಲ್ಯದ ಮಡಿಲಿನಲ್ಲಿ ಬೆಳೆದ ಕನ್ಯಾರತ್ನ ಹೈಸ್ಕೂಲು ತನಕ ವಿದ್ಯಾಭ್ಯಾಸವನ್ನು ಮಾಡಿ 1942ರಲ್ಲಿ ಶ್ರೀನಿವಾಸ ಬಲ್ಲಾಳರನ್ನು ವರಿಸಿದರು. ತಮ್ಮ ಪತಿದೇವರ ಶ್ರೀಮಂತಿಕೆಗೆ ಇವರು ಸಂಸ್ಕೃತಿಯ ಒಪ್ಪಹಾಕಿದರು. ಸದ್ಗೃಹಿಣಿಯಾಗಿ, ಶ್ರಾವಕತಿಲಕೆಯಾಗಿ, ಅಷ್ಟಮಹಾಪ್ರಾತಿಹಾರ್ಯಗಳಂತೆ ಎಂಟು ಜನ ಮಕ್ಕಳಿಗೆ ಜನ್ಮದಾತೆಯಾಗಿ, ಬಲ್ಲಾಳರ ಭಾಗ್ಯದೇವತೆಯಾಗಿ ಕಂಗೊಳಿಸುತ್ತಿರುವರು.

ವಿಮಲಮ್ಮನವರು ಪುಸ್ತಕಪ್ರಿಯರು. ಸಾಹಿತಿಗಳಿಗೆ ಸದಾ ಇವರ ಮನೆ ನೆರಳಾಗಿದೆ. ಮಿರ್ಜಿ ಅಣ್ಣಾರಾಯರ 'ಮಹಾಪುರುಷ' ಗ್ರಂಥವನ್ನು ಇವರು ಪ್ರಕಾಶಪಡಿಸಿ ತಮ್ಮ ತಂದೆಯವರಿಗೆ ಸ್ಮಾರಕ ಮಾಡಿರುವರು. ಮೂಡುಬಿದರೆಯ ರಥೋತ್ಸವವನ್ನು ಇವರೇ ಮಾಡಿಸುವರು. ಕಾರ್ಕಳ ಮತ್ತು ವೇಣೂರಿನ ಮಸ್ತಕಾಭಿಷೇಕಗಳಲ್ಲಿ ಒಂದೊಂದು ದಿನದ ಧರ್ಮಕಾರ್ಯಗಳನ್ನು ಇವರು ನೆರವೇರಿಸುವರು. ಸಚ್ಚರಿತೆಯೂ, ಸದಾಚಾರಸಂಪನ್ನೆಯೂ, ಔದಾರ್ಯದ ಸುರತರುವೂ, ಆಹಾರಾಭಯಭೈಷಜಶಾಸ್ತ್ರದಾನವಿನೋದೆಯೂ ಆದ ವಿಮಲಮ್ಮನವರನ್ನು ಕೈಹಿಡಿದು ಬಲ್ಲಾಳರು ಭವ್ಯಾತ್ಮರಾದರು, ಭಾಗ್ಯವಂತರಾದರು.

ಎಂ. ಕೆ. ದೇವರಾಜರು, ಮಂಗಳೂರು

ಸ್ವರ್ಗಗಳ ತುಟ್ಟತುದಿಯೇ ಸರ್ವಾರ್ಥಸಿದ್ಧಿ. ಮಂಗಳೂರು ನಗರಕ್ಕೆ ಕಲಶ ವಿಟ್ಟಂತಿದೆ ರಾಜಗೃಹ. ಒಂದು ಗುಡ್ಡದ ತುದಿಯಲ್ಲಿ ಈ ಭವನವನ್ನು ಕಟ್ಟಿ ಶ್ರೀ ದೇವರಾಜರು ಇದಕ್ಕೆ ರಾಜಗೃಹವೆಂದು ನಾಮಕರಣ ಮಾಡಿರುವರು. ದೇವ ರಾಜರು ವಾಸಮಾಡುವಂಥ ಗೃಹವು ರಾಜಗೃಹವಾಗದೆ ಮತ್ತಿನ್ನೇನು ? ದೇವರಾಜರ ಹೆಸರು ಅನ್ವರ್ಥವಾದುದು. ಇವರ ಬಳಿ ಸಹಾಯ ಬೇಡಲು ಹೋದವರಾರೂ ಬರಿಗೈಯಲ್ಲಿ ಹಿಂದಿರುಗಿಲ್ಲ. ದಿನವೂ ರಾಜಗೃಹದಲ್ಲಿ ಅನ್ನಸಂತರ್ಪಣೆ ತಪ್ಪದು. ಅತಿಥಿಗಳೂ ಅಭ್ಯಾಗತರೂ ಬಂದು ದೇವರಾಜರ ಔದಾರ್ಯದ ಸವಿಯನ್ನುಂಡು ಹೋಗುವರು.

ಶ್ರೀ ದೇವರಾಜರು ದಕ್ಷಿಣ ಕನ್ನಡ ಜಿಲ್ಲೆಯ ಜೈನಸಮಾಜದ ಕಣ್ಮಣಿ ಆಗಿರುವರು. ಇವರಿಲ್ಲದ ಸಂಘಸಂಸ್ಥೆಗಳಾಗಲಿ, ಸಮಾರಂಭ-ಸಮ್ಮೇಳನಗಳಾಗಲಿ ಇಲ್ಲಿನ ಜೈನಸಮಾಜದಲ್ಲಿ ಇಲ್ಲವೆಂದರೂ ತಪ್ಪಾಗದು. ಮೂಡುಬಿದರೆ ಮಹಾ ವೀರ ವಿದ್ಯಾವರ್ಧಕ ಸಂಘದ ಅಧ್ಯಕ್ಷರು, 1962–72ರ ನಡುವೆ ಮೂಡುಬಿದರೆ ಮಠದ ರಿಸೀವರ್, ಜಿಲ್ಲೆಯ ಜೈನಧರ್ಮ ಜೀರ್ಣೋದ್ಧಾರಕ ಸಂಘಗಳ ಜೀವ ನಾಡಿ, 1951ರಲ್ಲಿ ನಡೆದ ಕಾರ್ಕಳ ಮಸ್ತಕಾಭಿಷೇಕ ಸಮಿತಿ ಕೋಶಾಧ್ಯಕ್ಷರು, 1962ರ ಮಸ್ತಕಾಭಿಷೇಕ ಸಮಿತಿ ಅಧ್ಯಕ್ಷರು, 1956ರ ವೇಣೂರಿನ ಮಸ್ತಕಾಭಿ ಷೇಕ ಸಮಿತಿ ಉಪಾಧ್ಯಕ್ಷರು, ಸ್ವತಂತ್ರ ಪಾರ್ಟಿಯ ಜಿಲ್ಲಾ ಸಮಿತಿ ಅಧ್ಯಕ್ಷರು, ಭೂಮಾಲೀಕರ ಸಂಘದ ಜಿಲ್ಲಾ ಸಮಿತಿ ಅಧ್ಯಕ್ಷರು—ಈ ರೀತಿ ಎಂ. ಕೆ. ದೇವ ರಾಜರು ಹಲವಾರು ಸಂಘಗಳಲ್ಲಿ ಪ್ರಮುಖ ಪಾತ್ರವಹಿಸಿರುವರು. ಇವರನ್ನು ದಕ್ಷಿಣ ಕನ್ನಡ ಜಿಲ್ಲೆಯ ಜೈನಸಮಾಜದ ಹೃದಯವೆನ್ನಬಹುದು. ಧರ್ಮಾನು ರಾಗಿಗಳಾದ ಇವರು ತಮ್ಮ ಆಯುಷ್ಯದ ಬಹುಭಾಗವನ್ನು ಧಾರ್ಮಿಕ ಚಟುವಟಿಕೆ ಯಲ್ಲಿ ಕಳೆದಿರುವರು. ಇವರೆಸಗಿದ ಧರ್ಮಧ್ಯಾನವೆಂದರೆ ಇದೇ.

ಗುಮ್ಮಣ್ಣಸೆಟ್ಟಿ ನಾವಾರು ಮತ್ತು ದೇಜಮ್ಮ ವಿಜಾಹ ಕನಕಬೆಟ್ಟು ಈ ದಂಪತಿಗಳಿಗೆ 1899ರಲ್ಲಿ ಪುಣ್ಯಪುರುಷರಾದ ದೇವರಾಜರು ಜನಿಸಿದರು. ಅನಂತ ರಾಜಯ್ಯ, ನಾಭಿರಾಜಯ್ಯ, ಶ್ರೀಮತಿಯವರಾದ ರತಿದೇವಿ ಮತ್ತು ಲಕ್ಷ್ಮಮ್ಮ ಇವರು ಗಳು ದೇವರಾಜರ ಒಡಹುಟ್ಟಿದವರು. ಇವರ ಮಾತಾಪಿತರು ಧರ್ಮಾತ್ಮರು. ಗುಮ್ಮಣ್ಣಸೆಟ್ಟರು 1869ರಲ್ಲಿ ಜನಿಸಿದರು. ಇವರ ತಂದೆ ಅಣ್ಣಸೆಟ್ಟಿ ಪುಡಾಲ್ ಮೋರ್ಕಳ. ಇವರ ತಾಯಿ ಸಿದ್ಧಮ್ಮ ನಾವಾರು. ಗುಮ್ಮಣ್ಣಸೆಟ್ಟರಿಗೆ ಒಬ್ಬ

ಅಣ್ಣಂದಿರು, ನಾಲ್ಕು ಮಂದಿ ಅಕ್ಕಂದಿರೂ ಇದ್ದರು. ಇವರು ಪ್ರಾಥಮಿಕ ವಿದ್ಯಾಭ್ಯಾಸ ಪಡೆದು ಜಮೀನ್ದಾರಿ ಉಸ್ತುವಾರಿ ನೋಡಿಕೊಳ್ಳುತ್ತಿದ್ದರು.

ಗುಮ್ಮಣ್ಣಸೆಟ್ಟರು ಧರ್ಮಾಭಿಮಾನಿಗಳು. ಸಮ್ಯಕ್ತ್ವಶಿರೋಮಣಿಗಳು. ಮಂಜೇಶ್ವರದ ಚತುರ್ಮುಖ ಬಸದಿಯನ್ನು ಇವರು ಜೀರ್ಣೋದ್ಧಾರ ಮಾಡಿಸಿ ಪಂಚಕಲ್ಯಾಣ ಮಾಡಿಸಿದರು. ತಮ್ಮ ಅಕ್ಕ ಶೇಷಮ್ಮನವರೊಡನೆ ಸೇರಿ ನಾವೂರಿನ ಜಿನಾಲಯವನ್ನು ಜೀರ್ಣೋದ್ಧಾರ ಮಾಡಿಸಿ ಪಂಚಕಲ್ಯಾಣವನ್ನು ನೆರವೇರಿಸಿದರು.

ಗುಮ್ಮಣ್ಣಸೆಟ್ಟರ ಧರ್ಮಪತ್ನಿಯವರಾದ ದೇಜಮ್ಮನವರು ಮನೆಯಲ್ಲಿದ್ದುಕೊಂಡೇ ಆರ್ಯಿಕೆಯಂತೆ ವ್ರತನಿಷ್ಠರಾಗಿ ಶುಭಪರಿಣಾಮದಿಂದ ಬಾಳಿದರು. ಕನಕಬೆಟ್ಟು ಇವರ ಕುಟುಂಬದ ಮನೆ. ಇವರ ಸೋದರರಾದ ಕುಮಾರಯ್ಯ ಶಾಸ್ತ್ರಿಗಳು ಸಂಸ್ಕೃತದಲ್ಲೂ ಜೈನಾಗಮದಲ್ಲೂ ದಿಗ್ದಂತಿಗಳಾಗಿದ್ದರು, ಉಪನ್ಯಾಸ ಇತ್ಯಾದಿಗಳಲ್ಲಿ ಶ್ರೇಷ್ಠವಾಗ್ಮಿ.

ದೇಜಮ್ಮನವರಿಗೆ ಉಪವಾಸವೆಂದರೆ ನೀರು ಕುಡಿದಂತೆ. ಅಷ್ಟಾಹ್ನಿಕಗಳಲ್ಲಿ ಇವರು ಎಂಟು ದಿವಸ ಉಪವಾಸಮಾಡಿ ಅಷ್ಟಕರ್ಮಗಳನ್ನು ನಷ್ಟಗೊಳಿಸಲು ಪ್ರಯತ್ನಿಸುತ್ತಿದ್ದರು. ಜಿನಭಕ್ತಿಯೇ ಸಾಕಾರಗೊಂಡಂತೆ ಇವರು ಬಾಳಿದರು. ಕೆರವಾಸಿ ಬಸದಿಯ ಜೀರ್ಣೋದ್ಧಾರ ಮಾಡಿಸಿ ಇದರ ಮತ್ತು ಬಾಳತಿಲ ಬಸದಿಯ ಪಂಚಕಲ್ಯಾಣ ಮಾಡಿಸಿದರು ಕಾರ್ಕಳ ಮತ್ತು ವೇಣೂರಿನಲ್ಲಿ ಮಸ್ತಕಾಭಿಷೇಕಗಳಾದಾಗ ಇಡೀ ಒಂದು ದಿನದ ಧರ್ಮಕಾರ್ಯವನ್ನು ಇವರು ನೆರವೇರಿಸುತ್ತಿದ್ದರು. ಈ ಭದ್ರಚೇತನ ಹಾಗು ಭವ್ಯಚೇತನ ತಮ್ಮ 93ನೆಯ ವಯಸ್ಸಿನಲ್ಲಿ ಮಾರ್ಚ 1972ರಲ್ಲಿ ಸ್ವರ್ಗಸ್ಥರಾದರು. ಇವರ ಪತಿ ಗುಮ್ಮಣ್ಣಸೆಟ್ಟರು 1968ರಲ್ಲೇ ತನ್ನ 97½ ವರ್ಷ ವಯಸ್ಸಿನಲ್ಲಿ ಪರಂಧಾಮರಾಗಿದ್ದರು.

ಈ ಆದರ್ಶ ದಂಪತಿಗಳ ಪುತ್ರರತ್ನವಾದ ದೇವರಾಜರು ಮಂಗಳೂರಿನಲ್ಲಿ ಪ್ರಾಥಮಿಕ ವಿದ್ಯಾಭ್ಯಾಸವನ್ನು ಮಾಡಿ, ಮೈಸೂರಿನಲ್ಲಿ ಮೆಟ್ರಿಕ್ ಮಾಡಿಕೊಂಡು ಅನಂತರ ಮದರಾಸಿಗೆ ಹೋಗಿ ಬಿ.ಎ. (ಆನರ್ಸ್) ಮತ್ತು ಬಿ.ಎಲ್. ಪದವಿಗಳನ್ನು ಗಳಿಸಿದರು. 1937ರಲ್ಲಿ ಮದರಾಸಿನ ಪ್ರಾಣಿದಯಾ ಸಂಘದ ಕಾರ್ಯದರ್ಶಿಗಳಾದರು. ಅಂದಿನ ಕಾಲದಲ್ಲಿ ಮದರಾಸ್ ಪ್ರಾಂತದಲ್ಲಿ ಅನೇಕ ದೇವಾಲಯಗಳಲ್ಲಿ ಪ್ರಾಣಿಗಳನ್ನು ಬಲಿಕೊಡುವ ಪದ್ಧತಿಯಿದ್ದಿತು. ಮೂಕಜಂತುಗಳನ್ನು ಚಿತ್ರಹಿಂಸೆ ಮಾಡಿ ದೇವತೆಗಳ ಮುಂದೆ ತಲೆಹೊಯ್ಯುತ್ತಿದ್ದರು; ಕರುಳಮಾಲೆಯನ್ನು ಕೊರಳಿಗೆ ಹಾಕಿಕೊಂಡು ಕುಣಿಯುತ್ತಿದ್ದರು. ಇವನ್ನು ತಪ್ಪಿಸುವಂತೆ ಇವರು ಗಾಂಧೀಜಿಯ ಮರೆಹೊಕ್ಕು ಕೊನೆಗೆ ಅಂದಿನ ಮುಖ್ಯಮಂತ್ರಿಗಳಾಗಿದ್ದ ಚಕ್ರವರ್ತಿ ರಾಜಗೋಪಾಲಾಚಾರಿಯವರಿಗೆ ಗಾಂಧೀಜಿಯವರಿಂದ ಎಂ. ಕೆ. ದೇವರಾಜರು

ಸಿಫಾರ್ಸುಪತ್ರವನ್ನು ತಂದರು. 1938ರಲ್ಲಿ ಇವರ ಒತ್ತಾಯಕ್ಕೆ ಮಣಿದ ರಾಜಗೋಪಾಲಾಚಾರಿಯವರು ಪ್ರಾಣಿದಯಾ ಸಂಘದ ಅಧ್ಯಕ್ಷತೆ ವಹಿಸಿದ್ದಲ್ಲದೆ ದೇಗುಲಗಳಲ್ಲಿ ಪ್ರಾಣಿವಧೆಯನ್ನು ನಿರೋಧಿಸುವ ಕಾನೂನನ್ನೂ ರಚಿಸಿದರು. ಮೂಕಜೀವಿಗಳ ಬಗ್ಗೆ ಎಂ. ಕೆ. ದೇವರಾಜರು ತೋರಿದ ಅನುಕಂಪ ಚಿರಸ್ಮರಣೀಯವಾದುದು. ಈ ಗೆಲುವು ಜೈನಧರ್ಮದ ಗೆಲುವಾಗಿದೆ.

ಪಾಂಡ್ಯದೊರೆ—ಮಂಗಯಕ್ಕ ರಾಣಿ: ಈ ಗ್ರಾಮಫೋನ್ ತಟ್ಟೆಯಲ್ಲಿ ಮಹಾವೀರಸ್ವಾಮಿಯನ್ನು ಅವಹೇಳನ ಮಾಡುವ ಪ್ರಸಂಗವಿತ್ತು. ಜೈನದೊರೆಯಾದ ಪಾಂಡ್ಯರಾಜನನ್ನು ಶೈವನನ್ನಾಗಿ ಮಾಡಿ ಜೈನರ ಕಗ್ಗೊಲೆಗೆ ಪ್ರಚೋದಿಸುವ ವಿಷಯವನ್ನು ಈ ತಟ್ಟೆಯಲ್ಲಿ ತಂದಿದ್ದರು. ದೇವರಾಜರು ಮದರಾಸ್ ಸರ್ಕಾರದ ಮುಖ್ಯ ಕಾರ್ಯದರ್ಶಿಗಳನ್ನು ಕಂಡು ಈ ರೆಕಾರ್ಡುಗಳನ್ನು ಜಪ್ತಿ ಮಾಡಿಸಿದ್ದಲ್ಲದೆ ಈ ಕಥೆಯನ್ನು ಆಧರಿಸಿ ಚಿತ್ರ ತೆಗೆಯುವುದನ್ನೂ ಇವರು ತಪ್ಪಿಸಿದರು. ದೂರದ ಸ್ಥಳದಲ್ಲಿ ಏಕಾಂಗವೀರರಾಗಿ ದೇವರಾಜರು ವೀರಾವೇಶದಿಂದ ಹೋರಾಡಿ ಜೈನಧರ್ಮದ ದಿಗ್ವಿಜಯವೆಸಗಿ ಜಯದುಂದುಭಿಯನ್ನೂ ಮೊಳಗಿರುವರು.

ದೇವರಾಜರು ಸದ್ಗೃಹಸ್ಥರು. ಕಮಲಾವತಿ ಅಜಿಲನೊಗರು ಇವರನ್ನು ಮದುವೆಯಾದರು. ಈ ದಂಪತಿಗಳಿಗೆ ಕರುಣೆಯೇ ಕವಲೊಡೆದಂತೆ ಮಕರಂದಾಜಿ ಮತ್ತು ಇಂದಿರಾದೇವಿ ಎಂಬ ಇಬ್ಬರು ಪುತ್ರಿಯರು. ಶ್ರೀಮತಿ ಮಕರಂದಾಜಿಯವರು ವೈದ್ಯರಾಗಿ ರೋಗಿಗಳ ಶುಶ್ರೂಷೆ ಮಾಡುತ್ತಿರುವರು. ಇಂದಿರಾದೇವಿಯರು ಬಲ್ಲಾಳ ಮೋಟಾರ್ ಸರ್ವೀಸ್ ಮಾಲೀಕರಾದ ಶ್ರೀ ಜಯರಾಜ ಬಲ್ಲಾಳರ ಪತ್ನಿಯಾಗಿ ಶ್ರಾವಿಕಾಶಿರೋಮಣಿಯಾಗಿರುವರು.

ದೇವರಾಜರು ದಾನಧರ್ಮಗಳಲ್ಲೂ ನಿಜವಾದ ದೇವರಾಜರಾಗಿರುವರು. ಇವರನ್ನು ರಾಜಗೃಹದ ಕಲ್ಪತರುವೆಂದು ಕರೆದರೆ ತಪ್ಪಾಗದು. ಮೂಡಬಿದ್ರೆ ಮಹಾವೀರ ಕಾಲೇಜಿಗೆ ಆರು ಸಹಸ್ರ ರೂಪಾಯಿ, ಷಟ್ ಖಂಡಾಗಮದ ಪ್ರಕಾಶನಕ್ಕೆ ಐದು ಸಹಸ್ರ ರೂ. ಸಹಾಯ ಮಾಡಿರುವರು. ದಿನವೂ ಇವರಿಂದ ಆಗುತ್ತಿರುವ ದಾನಧರ್ಮಗಳನ್ನು ಲೆಕ್ಕವಿಟ್ಟರೆ ಲಕ್ಷಾಂತರ ರೂಪಾಯಿ ಆಗದಿರದು. 'ತಿರುಕುರುಳ್ ಪ್ರಸ್ತಾವನೆ' ಯನ್ನು 1955ರಲ್ಲಿ ಇವರು ಪ್ರಕಟಿಸಿದರು. 'ಜೈನ ಮಹಾಪುರುಷರು' ಎಂಬ ಗಂಥದ ಪ್ರಕಟಣೆಗೆ 1950ರಲ್ಲಿ ಧನಸಹಾಯ ಮಾಡಿರುವರು. ಜಿನಾಲಯಗಳ ಜೀರ್ಣೋದ್ಧಾರಗಳಿಗೆ, ಪಂಚಕಲ್ಯಾಣಗಳಿಗೆ, ಮಸ್ತಕಾಭಿಷೇಕಗಳಿಗೆ ಇವರು ಎಂದೂ ಸಹಾಯವನ್ನು ಇಲ್ಲವೆಂದಿಲ್ಲ. ಸಾಹಿತಿಗಳಿಗಂತೂ ದೇವರಾಜರು ಜೀವಂತ ಚಿಂತಾಮಣಿಗಳಾಗಿರುವರು.

ಪಾಂಡ್ಯರಾಜ ಬಲ್ಲಾಳರು

ಪಾಡ್ಯರಾಜ ಬಲ್ಲಾಳರು ಬದುಕಿರುವ ತನಕ ರಾಜರಾಗೇ ಬದುಕಿದರು. ಕ್ಷಾತ್ರ ವೀರ್ಯ, ಕ್ಷಾತ್ರತೇಜಸ್ಸು, ಔದಾರ್ಯಗಳು ಮುಪ್ಪುರಿಗೊಂಡಂತೆ ಪಾಂಡ್ಯರಾಜರ ವ್ಯಕ್ತಿತ್ವ ರೂಪಗೊಂಡಿತ್ತು. ಬೆಲ್ಲಕ್ಕೆ ಇರುವೆ ಮುತ್ತಿದಂತೆ ಇವರ ಸುತ್ತ ಹಲವಾರು ಜನ ಸದಾ ಸೇರಿರುತ್ತಿದ್ದರು. ಕಾರ್ಯದಕ್ಷತೆ, ಕಾರ್ಯವಿಚಕ್ಷಣತೆಗಳಿಂದ ಬಲ್ಲಾಳರು ಸಂಪತ್ತಿನ ಜೀವನದಿಗಳಂತಿರುವ ಉದ್ಯಮಗಳನ್ನು ಸ್ಥಾಪಿಸಿ ಬೆಳೆಸಿ ಭಾಗ್ಯವಂತ ರಾದರು. ಆಗರ್ಭಶ್ರೀಮಂತರಾದ ಇವರು ಎಂದೂ ನಿರುದ್ಯೋಗಿಯಾಗಿರಲಿಲ್ಲ. ನೂರಾರು ಜನಕ್ಕೆ ಅನ್ನದಾತರಾದ ಇವರು ಕೈಯೊಡ್ಡಿದವರಿಗೆಲ್ಲ ಧಾರಾಳವಾಗಿ ನೀಡಲು ಸಮೃದ್ಧವಾಗಿ ಗಳಿಸಿದರು. ಪುಷ್ಪಕವಿಮಾನಗಳಂತೆ ಸಕಲಸೌಕರ್ಯಗಳಿಂದ ಕೂಡಿದ ಮೋಟಾರುಗಾಡಿಗಳನ್ನು ತಂದು ಮಂಗಳೂರಿನಿಂದ ಬೊಂಬಾಯಿ ತನಕ ಓಡಿಸಿ ಬಲ್ಲಾಳ್ ಮೋಟಾರ್ ಸರ್ವೀಸ್ ಎಂಬ ಸಾರಿಗೆ ಸಂಸ್ಥೆಯ ಮುಖೇನ ಇವರು ಜನತೆಗೆ ಉಪಕಾರ ಮಾಡಿರುವರು. ಬಲ್ಲಾಳ್ ಮೋಟಾರ್ ಫ್ಯುವೆಲ್ಸ್ ಎಂಡ್ ಸರ್ವೀಸ್ ಸ್ಟೇಷನ್ ಎಂಬುದು ದಕ್ಷಿಣ ಕನ್ನಡ ಜಿಲ್ಲೆಯಲ್ಲೇ ಹೆಸರಾಂತ ಸಂಸ್ಥೆಯಾಗಿದೆ. ಬಲ್ಲಾಳ್ ಎಂಡ್ ಪಡಿವಾಳ್ ಟೈಲ್ಸ್ ಕಾರ್ಖಾನೆಯೂ ಬಲ್ಲಾಳರ ದೂರದೃಷ್ಟಿಗೂ ಉದ್ಯಮಶೀಲತೆಗೂ ಜೀವಂತ ಸಾಕ್ಷಿಯಾಗಿದೆ. ರೋಗಿಗಳ ಶುಶ್ರೂಷೆಗಾಗಿ ಬಲ್ಲಾಳರು ವಿಜಯಾ ಕ್ಲಿನಿಕನ್ನು ಮಂಗಳೂರು ನಗರದಲ್ಲಿ ಪ್ರಾರಂಭಿಸಿ ತಮ್ಮ ಮಕ್ಕಳನ್ನೂ ನಂಟರಿಷ್ಟರನ್ನೂ ವೈದ್ಯರನ್ನಾಗಿ ನೇಮಿಸಿ ಇವರು ಪ್ರಶಂಸಾರ್ಹರಾಗಿರುವರು. ಬಲ್ಲಾಳರು ಇದ್ದ ಕಡೆ ಸುವರ್ಣವೃಷ್ಟಿಯಾಗುವುದು. ಇವರು ಇದ್ದ ಕಡೆ ದಾನದ ಹೊಳೆ ಹರಿಯುವುದು. ಇವರಂತೆ ಗಳಿಸಿದವರೂ ವಿರಳ, ದಾನ ಕೊಟ್ಟವರೂ ವಿರಳ.

ಮಿಜಾರು ಎಡಪದವುಗುತ್ತಿನ ಚಂದ್ರಯ್ಯ ಹೆಗ್ಗಡೆಯವರು ಬಲ್ಲಾಳರ ತಂದೆ. ಬರಾಡಿಬೀಡಿನ ಸರಸಮ್ಮನವರು ಇವರ ತಾಯಿ. 16–4–1899ರಲ್ಲಿ ಪಾಂಡ್ಯ ರಾಜ ಬಲ್ಲಾಳರು ಜನಿಸಿದರು. ಇವರ ಜೊತೆಯಲ್ಲೇ ರಾಜಠೀವಿಯೂ ಜನಿಸಿತು! ಕಾರ್ಕಳ, ಮೈಸೂರು ಮತ್ತು ಮದರಾಸ್ ನಗರಗಳಲ್ಲಿ ಓದಿ ಇವರು ವಿದ್ಯಾವಂತ ರಾದರು. 1923ರಲ್ಲಿ ಕೆಲ್ಲಗುತ್ತು ಮನೆತನದ ಶ್ರೀ ಶಾಂತಿರಾಜ ಪಡಿವಾಳರ ಸೊಸೆ ಯಾದ ಗುಣವತಿ ಅಮ್ಮನವರು ಬಲ್ಲಾಳರ ಭಾರ್ಯೆಯಾಗಿ ಬಂದರು. ಭಾಗ್ಯವೂ ಗುಣವೂ ಸಮರಸವಾದಂತಾಯಿತು! ಶ್ರೀಯುತರಾದ ಜಯರಾಜ ಬಲ್ಲಾಳ್, ರತ್ನರಾಜ, ಮಾಣಿಕ್ಯರಾಜ, ಜಯವರ್ಮರಾಜ, ರಾಜವರ್ಮ ಎಂಬ ಪುಂಸ್ತ್ವೈಶ್ವರ್ಯ ಗಳನ್ನೂ, ಶ್ರೀಮತಿಯರಾದ ವಿಜಯಲಕ್ಷ್ಮಿ, ಹೇಮಲತಾ, ಜಯಶ್ರೀ, ಶ್ರೀ

ರಂಜನೀ, ವಸುಂಧರಾ, ವೈಜಯಂತಿಮಾಲಾ ಮತ್ತು ಯಶೋಧರಾ ಎಂಬ ಸಪ್ತ ಸ್ವರಗಳನ್ನೂ ಪಡೆದಂತೆ, ಬಲ್ಲಾಳ್ ದಂಪತಿಗಳಿಗೆ ಒಟ್ಟು ಹನ್ನೆರಡು ಜನ ಮಕ್ಕಳಾದರು. ಗಂಡುಮಕ್ಕಳಲ್ಲಿ ಪ್ರತಿಯೊಬ್ಬರೂ ವಿದ್ಯಾವಂತರಾಗಿರುವರು, ವಿನಯ ಸಂಪನ್ನರಾಗಿರುವರು, ಬೆವರು ಸುರಿಸಿ ಬದುಕುವ ಭವ್ಯಾತ್ಮರಾಗಿರುವರು. ಇವರ ಪುತ್ರಿಯರಲ್ಲಿ ಒಬ್ಬೊಬ್ಬರೂ ಕನ್ಯಾಕೌಸ್ತುಭರತ್ನವಾಗಿ ಕಂಗೊಳಿಸುವರು. ಸಂತಾನ ಸಮೃದ್ಧಿಯಲ್ಲೂ ಬಲ್ಲಾಳರು ಭಾಗ್ಯವಂತರೇ ಸರಿ.

ಬಲ್ಲಾಳರು ದೈವಭಕ್ತರು, ರಸಿಕರಂಗರು, ದಾನವೀರರು, ದಯೊಾರ್ದ್ರ ಹೃದಯರು. ಕಾರ್ಕಳದ ಗುರುಬಸದಿಯ ಮತ್ತು ಕಾಂತಾವರದ ಶ್ರೀಕಾಂತೇಶ್ವರದ ದೇವಾಲಯದ ಮೊಕ್ತೇಸರಾಗಿ ಬಲ್ಲಾಳರು ಸೇವೆಯೆಸಗಿರುವರು. ವಿ.ಜಾರು ಎಡಪದವು ಶ್ರೀಪಾರ್ಶ್ವನಾಥ ಬಸದಿ, ಬೆಳ್ತಂಗಡಿ ಶ್ರೀಸೋಮನಾಥೇಶ್ವರ ದೇವಾಲಯ ಮುಂತಾದುವುಗಳ ಜೀರ್ಣೋದ್ಧಾರಕಾರ್ಯವನ್ನೂ ಬಲ್ಲಾಳರು ಶ್ರದ್ಧಾಭಕ್ತಿಯಿಂದ ನೆರವೇರಿಸಿದರು. ದಕ್ಷಿಣ ಕನ್ನಡ ಜಿಲ್ಲೆಯ ಧಾರ್ಮಿಕ ಸಂಘಗಳಲ್ಲೂ ಶೈಕ್ಷಣಿಕ ಸಂಘಗಳಲ್ಲೂ ಬಲ್ಲಾಳರು ಸಕ್ರಿಯ ಪಾತ್ರವನ್ನು ವಹಿಸಿದರು. ಕಾರ್ಕಳ ಮತ್ತು ವೇಣೂರಿನ ಮಹಾಮಸ್ತಕಾಭಿಷೇಕ ಸಮಿತಿಗಳು, ಕಾರ್ಕಳದ ಜೈನಬಸದಿಗಳ ಜೀರ್ಣೋದ್ಧಾರ ಸಂಘ, ಕಾರ್ಕಳ ಬ್ರಹ್ಮಚರ್ಯಾಶ್ರಮ ಇವುಗಳಲ್ಲಿ ಬಲ್ಲಾಳರು ಪ್ರಮುಖ ಪಾತ್ರವಹಿಸಿ ತ್ರಿಕರಣಪೂರ್ವಕ ಶ್ರಮಿಸಿರುವರು.

ಮೂಡುಬಿದರೆಯ ಜೈನ ಹೈಸ್ಕೂಲು, ಮಹಾವೀರ ಕಾಲೇಜು, ಬರಾಡಿಯ ಪ್ರಾಥಮಿಕ ಶಾಲೆ, ಶಿರ್ತಾಡಿಯ ಹೈಸ್ಕೂಲ್, ಮಿಜಾರಿನ ವಿವೇಕಾನಂದ ಹೈಸ್ಕೂಲು —ಈ ವಿದ್ಯಾಸಂಸ್ಥೆಗಳಿಗೆ ಬಲ್ಲಾಳರು ಹೇರಳವಾಗಿ ಧನಸಹಾಯ ಮಾಡಿದ್ದಲ್ಲದೆ ಇವುಗಳ ಅಭಿವೃದ್ಧಿಗಾಗಿ ರೂಪಗೊಂಡ ಸಂಘಸಂಸ್ಥೆಗಳಲ್ಲೂ ಆಜೀವಸದಸ್ಯರಾಗಿ ದುಡಿದಿದ್ದಾರೆ.

ಬಲ್ಲಾಳರು ಒಬ್ಬ ವ್ಯಕ್ತಿಯಲ್ಲ, ಒಂದು ಶಕ್ತಿ! ದಕ್ಷಿಣ ಕನ್ನಡ ಜಿಲ್ಲೆಯ ಜೀವನಾಡಿಯಾಗಿದ್ದ ಪಾಂಡ್ಯರಾಜ ಬಲ್ಲಾಳರು 28–7–1968ರಂದು ಪರಂಧಾಮವನ್ನೈದಿದರು. ಜಿಲ್ಲೆಯ ಜೀವನಾಡಿಯೇ ನಿಂತುಹೋದಂತಾಯಿತು. ನೂರಾರು ಜನ ಬಂಧುಗಳೂ, ಸಹಸ್ರಾರು ಜನ ಮಿತ್ರರೂ ಕಂಬನಿ ಮಿಡಿದರು. ಮೃತರ ಆತ್ಮಕ್ಕೆ ಶಾಂತಿ ಕೋರಲು ಜಿಲ್ಲೆಯ ನೂರಾರು ಜಿನಾಲಯಗಳಲ್ಲಿ ಅಭಿಷೇಕಗಳಾಯಿತು. ಹಲವಾರು ದೇಗುಲಗಳಲ್ಲಿ ಪೂಜೆಗಳಾಯಿತು. ಪಾಂಡ್ಯರಾಜ ಬಲ್ಲಾಳರು ರಾಜರಂತೆ ಹುಟ್ಟಿದರು, ರಾಜರಂತೆ ಬಾಳಿದರು, ರಾಜರಂತೆ ಸ್ವರ್ಗವಾಸಿಗಳಾದರು.


ಗುಣಪಾಲ ಸೆಟ್ಟರು, ಪಣಿಪಿಲು ಅರಮನೆ

ಪಣಿಪಿಲು ದೇಜಮ್ಮನವರಿಗೆ ಮಕ್ಕಳಿರಲಿಲ್ಲ. ತನ್ನ ಸೋದರಿಯರ ಮಕ್ಕಳಿಗೆ ಅರಮನೆಯ ಆಸ್ತಿಯನ್ನು ಇವರು ಧಾರೆಯೆರೆದರು. ಈ ರೀತಿ ಗುಣಪಾಲಸೆಟ್ಟರು ಪಣಿಪಿಲು ಅರಮನೆಯ ಹಕ್ಕುದಾರರಲ್ಲಿ ಒಬ್ಬರಾದರು. ಭೇದವಿಜ್ಞಾನಿಗಳಾದ ಇವರು ಶ್ರೀಮಂತರಾದರೂ ಅದಕ್ಕೆ ಅಂಟದೆ ಸದಾ ನಿರ್ವಿಕಾರಚಿತ್ತರಾಗಿರುತ್ತಾರೆ. ಬೆಳಗಿನ ಜಾವ ಎದ್ದು ಪಂಚಸ್ತೋತ್ರ, ಋಷಿಮಂಡಲ, ಸರಸ್ವತಿ ಅಷ್ಟಕ ಮತ್ತು ಶಾಂತಿ ಅಷ್ಟಕಗಳನ್ನು ಭಕ್ತಿಯಿಂದ ಹಾಡಿಕೊಳ್ಳುವರು. ಇದೇ ರೀತಿ ನಿತ್ಯವೂ ಮೂರು ಹೊತ್ತು ಈ ಧಾರ್ಮಿಕ ಸ್ತೋತ್ರಗಳನ್ನು ಹಾಡುತ್ತ ಮೈಮರೆಯುವರು. ದಿನಕ್ಕೆ ಒಪ್ಪತ್ತೇ ಊಟ. ರಾತ್ರಿ ಹಲಗೆಯ ಮೇಲೆ ಮಲಗುವರು. ಅಪ್ಪಿತಪ್ಪಿಯೂ ಇವರ ಬಾಯಲ್ಲಿ ಅಪಶಬ್ದ ಬರುವುದಿಲ್ಲ, ಇವರ ನಾಲಗೆ ಜಿನನಾಮದಲ್ಲಿ ಮೀಯುವುದು. ಇವರ ಕಿವಿ ಜಿನಸ್ತುತಿಯಲ್ಲಿ ಮುಳುಗುವುದು. ಇವರ ಮನಸ್ಸು ಸಮವಸರಣವಾಗಿ ಓಡಾಡುವುದು. ದಿನವು ಐದಾದರೂ ಬಸದಿಗಳಿಗೆ ಭಕ್ತಿಯಿಂದ ಹೋಗಿ ಜಿನಮಹಿಮೆಯಲ್ಲಿ ತನ್ಮಯರಾಗುವರು. ಸಂಗೀತ, ಜ್ಯೋತಿಷ್ಯ, ಆಯುರ್ವೇದ, ರತ್ನಪರೀಕ್ಷೆ, ಅಶ್ವಪರೀಕ್ಷೆ ಇವುಗಳಲ್ಲಿ ಗುಣಪಾಲಸೆಟ್ಟರು ನಿಪುಣರು. ನಿರ್ಗವಿಗಳಾದ ಇವರು ಬೂದಿ ಮುಚ್ಚಿದ ಕೆಂಡದಂತೆ ಗುಪ್ತರಾಗಿರುವರು. ಏನೂ ತಿಳಿಯದವರಂತೆ ಲೋಕದ ಕಣ್ಣಿಗೆ ಕಾಣಿಸಿಕೊಳ್ಳುವರು. ಇವರು ಗಣ್ಯರಲ್ಲಿ ಗಣ್ಯರಾದರೂ ಪ್ರಚಾರಪ್ರಿಯರಲ್ಲ, ಪ್ರದರ್ಶನ ಇವರಿಗೆ ಬೇಡ. ಅರಮನೆಯಲ್ಲೇ ಇವರಿದ್ದುಕೊಂಡು ವೀತರಾಗರಸಿಕರಾಗಿ, ವಿರಕ್ತವಿಶಾರದರಾಗಿ, ಗುಪ್ತಭಕ್ತರಾಗಿ, ಸಾಕಾರಗೊಂಡ ಸಮ್ಯಕ್ತ್ವವಾಗಿ ಜೈನಸಮಾಜದ ಜಂಗಮಕಲ್ಪತರುವಾಗಿರುವರು.

ಬೆಡಕೇರಿ ಚಂದಪ್ಪಸೆಟ್ಟರಿಗೂ ಇವರ ಧರ್ಮಪತ್ನಿ ಪೆರಾಡಿಬೀಡಿನ ಪದ್ಮಾವತಮ್ಮನವರಿಗೂ 20–5–1911ರಲ್ಲಿ ಗುಣಪಾಲಸೆಟ್ಟರು ಜನಿಸಿದರು. ಗುಮ್ಮಣ್ಣ ಬಲ್ಲಾಳರು ಇವರ ಸೋದರರು. ಸೂರಾಳು ಅರಮನೆಯ ಚಲುವಯ್ಯ ಬಲ್ಲಾಳರ ಪುತ್ರಿ ವಿಜಯಾದೇವಿಯರು ಗುಣಪಾಲಸೆಟ್ಟರನ್ನು 1932ರಲ್ಲಿ ವಿವಾಹವಾದರು. ಈ ದಂಪತಿಗಳಿಗೆ ಸುಮತಿದೇವಿ, ಮುನಿರಾಜ, ಯಶೋದಾದೇವಿ, ಪಾರ್ಶ್ವನಾಥ, ಸುದರ್ಶನ ಮತ್ತು ಸುಜಯಾದೇವಿ ಈ ರೀತಿ ಷಡಾವಶ್ಯಕಗಳಂತೆ ಆರು ಜನ ಮಕ್ಕಳಾದರು.

ಗುಣಪಾಲಸೆಟ್ಟರು ಆಹಾರಾಭಯಭೈಷಜಶಾಸ್ತ್ರ ದಾನವಿನೋದರಾಗಿರುವರು. ಜೀವದಯಾಷ್ಟಮಿ ದಿವಸ ಪ್ರತಿವರ್ಷವೂ ಮೂಡುಬಿದ್ರೆಯಲ್ಲಿ ಇವರು ಅನ್ನಸಂತರ್ಪಣೆ ಮಾಡಿಸಿ ಶಾಸ್ತ್ರದಾನ ಮಾಡುವರು. 1946ರಿಂದಲೂ ಪಣಿಪಿಲು ಕನ್ಯಾ

ಪಾಠಶಾಲೆಯನ್ನು ಇವರು ನಡೆಸಿಕೊಂಡು ಬಂದಿರುವರು. ಕಾರ್ಕಳದ ಕನ್ಯಾಪಾಠ ಶಾಲೆಗೆ ಪ್ರತಿವರ್ಷ ಇವರು 25 ಮುಡಿ ಅಕ್ಕಿಯನ್ನು ದಾನವಾಗಿ ಕೊಡುತ್ತಿರುವರು. ದರೆಗುಡ್ಡದ ಬಳಿ ನಟಲದ ಸೋಮನಾಥೇಶ್ವರ ದೇವಾಲಯದ ವಿಶಿಷ್ಟ ಸೇವೆಗಳನ್ನು ಅರಮನೆಯ ವತಿಯಿಂದ ಸೆಟ್ಟರೇ ನಡೆಸಿಕೊಂಡು ಬಂದಿರುವರು. ನೆಲ್ಲಿಕಾರು ಜಿನಾಲಯದ ಮೊಕ್ತೇಸರಾಗಿರುವರು. 1928ರಲ್ಲಿ ವೇಣೂರಿನ ಬಾಹುಬಲಿಸ್ವಾಮಿಗೆ ಮಸ್ತಕಾಭಿಷೇಕವಾದಾಗ ಗುಣಪಾಲಸೆಟ್ಟರು ಒಂದು ದಿನದ ಸೇವೆಯನ್ನು ನೆರವೇರಿಸಿದರು. ಮೂಡುಬಿದರೆ ಗುರುಬಸದಿಯ ರತ್ನಬಿಂಬಗಳೂ, ಸಿದ್ಧಾಂತಗ್ರಂಥಗಳೂ ಈ ಸೆಟ್ಟರ ಆಡಳಿತದಲ್ಲೇ ಇವೆ.



ಗುಣಪಾಲ ಸೆಟ್ಟರು

ಜಿನಬಿಂಬದ ಮೇಲೆ ಇವರಿಗೆ ಎಷ್ಟು ಶ್ರದ್ಧೆಯೋ ಜೈನಗ್ರಂಥರಾಶಿಯ ಮೇಲೂ ಇವರಿಗೆ ಅಷ್ಟೇ ಶ್ರದ್ಧೆಯಿದೆ. ಇಷ್ಟೋಪದೇಶ, ಜೀವದಯಾಷ್ಟಮಿ ಕಥೆ, ಪುರುಷಾರ್ಥಸಿದ್ಧಿ ಉಪಾಯ ಮುಂತಾದ ಗ್ರಂಥಗಳನ್ನು ಸಾವಿರಗಟ್ಟಳೆ ಇವರು ಅಚ್ಚುಹಾಕಿಸಿ ಓದುಗರಿಗೆ ಹಂಚಿರುವರು, ಪ್ರತಿವರ್ಷವೂ ಒಂದು ಗ್ರಂಥವನ್ನು ಶಾಸ್ತ್ರದಾನಕ್ಕಾಗಿ ಇವರು ಪ್ರಕಾಶಿಸುವರು. ಎಲ್ಲ ಶ್ರೀಮಂತರೂ ಇವರನ್ನು ಅನುಸರಿಸಿದರೆ ಜಿನವಾಣಿಯ ಮರುಪ್ರಸಾರವಾಗದಿರದು.

ಇವರು ಪುಣ್ಯವಂತರು. ಅನುರೂಪಳಾದ ಹಾಗೂ ಅನುಕೂಲೆಯಾದ ಪತ್ನಿಯನ್ನು ಪಡೆದಿರುವರು. ಇವರು ಯೋಗ್ಯರಾದ ಮಕ್ಕಳನ್ನು ಹೆತ್ತಿರುವರು. ಸಂಸಾರ ಸಾರೋದಯರಾಗಿ ಸದಾ ಸಮವಸರಣದ ಪರಿಣಾಮುವನ್ನು ಳಿಸಿಕೊಂಡು ಗುಣಪಾಲ

ಸೆಟ್ಟರು ಎಲ್ಲಿದ್ದರೂ ಸರ್ವಾರ್ಥಸಿದ್ಧಿಯಲ್ಲಿದ್ದಂತೆ ಶುಭಚಿತ್ತರಾಗಿ ವಿರಾಜಿಸುತ್ತಿರುವರು. ಇವರು ಜೈನಧರ್ಮ ಸಂಕೇತವಾಗಿ, ಅಹಿಂಸೆಯ ಉಸಿರಾಡುತ್ತ ಸ್ಯಾದ್ವಾದಸಂಪತ್ತಿನಲ್ಲಿ ಓಲಾಡುತ್ತಿರುವರು.

ಪರಮಾರ್ಥ ಗುರುವೆ ಪರಂಜ್ಯೋತಿರೂಪನೆ |
ಗರಳಹರನೆ ಭವಹರನೆ ||
ಸರಸದೊಳೆನಗೆ ಸನ್ಮತಿದೋರು ಭವ್ಯಾಬ್ಜ |
ತರಣಿ ನಿರಂಜನಸಿದ್ಧಾ ||

ಜ್ಞಾನವಾವುದು ಸುಖವಾವುದು ಪ್ರಭೆಯಾವು |
ದಾನಾವನೆಂಬ ವಿಕಲ್ಪಾ ||
ಏನುವಿಲ್ಲೆನಲೆನ್ನ ನೆನಹಿನೊಳಿರು ದಿವ್ಯ |
ಭಾನು ಚಿದಂಬರಪುರುಷಾ ||

ಸಂಜೀವನಸಿದ್ಧ ಸಹಜಾತ್ಮಸಿದ್ಧ ನೋ |
ಹಂಜಯಸಿದ್ಧ ಪ್ರಸಿದ್ಧಾ ||
ಮಂಜುಳಮತಿದೋರು ಜಯಜಯ ಗುರುವೆ |
ನಿರಂಜನಸಿದ್ಧ ವಿಶುದ್ಧಾ ||

ಎಂ. ಡಿ. ಅಧಿಕಾರಿಗಳು, ವರಂಗ (ಕಾರ್ಕಳ ತಾಲೂಕ್)


ಶುದ್ಧ ಖಾದೀಧಾರಿ, ಪಾದರಸದಂತೆ ಚುರುಕು, ವಾಚಾಳಿ, ಸ್ನೇಹಪರ, ಸಹೃದಯಿ—ಎಂ. ಡಿ. ಅಧಿಕಾರಿಗಳನ್ನು ಒಮ್ಮೆ ಕಂಡವರು ಮತ್ತೆ ಮರೆಯಲಾರರು. 1915ರಲ್ಲಿ ಜನಿಸಿದ ಇವರು ಇಂದು ದಕ್ಷಿಣಕನ್ನಡ ಜಿಲ್ಲೆಯ ಮನೆಮಾತಾಗಿರುವರು. ವಿಚಾರವಂತರೂ, ಚಿಂತನಪರರೂ, ಸಾಹಿತ್ಯಪ್ರೇಮಿಗಳೂ ಆದ ಇವರು ಸದಾ ಹಸನ್ಮುಖಿಗಳಾಗಿರುವರು. ಒಮ್ಮೊಮ್ಮೆ ಕೋಪಿಸಿಕೊಂಡರೆ ಅದು ಇಳಿಯುವ ತನಕ ಕಷ್ಟ. ಆದರೆ ಯಾರಿಗೂ ಕೆಡಕುಮಾಡುವುದಿಲ್ಲ. ಇಂಟರ್‌ಮಿಡಿಯೆಟ್ ಓದಿ, ಶುದ್ಧ ಗಾಂಧೀವಾದಿಗಳಾಗಿ ಇವರು ರಾಷ್ಟ್ರೀಯ ಸ್ವಾತಂತ್ರ್ಯಹೋರಾಟದಲ್ಲಿ ಸೆರೆಮನೆಯನ್ನು ಕಂಡರು. 1940ರಿಂದ 43ರ ತನಕ ಸೆರೆವಾಸದ ವಿಶ್ರಾಂತಿ ಪಡೆದರು. 1936ರಲ್ಲಿ ಇವರ ಕೈಹಿಡಿದ ಪುತ್ತೂರು ಪುಡ್ಕೋರುಗುತ್ತು ಕಮಲಾವತಿಯವರು ಸೇರಿಗೆ ಸವ್ವಾ ಸೇರಾಗಿ ಇವರೊಡನೆ ರಾಜಕೀಯಕ್ಕೆ ನುಗ್ಗಿ ತಾವೂ ಎಂಟು ತಿಂಗಳಕಾಲ ಸೆರೆಮನೆ ಯಲ್ಲಿದ್ದರು. ಇವರನ್ನು ಆಧುನಿಕ 'ಅಬ್ಬಕ್ಕ' ಎಂದರೆ ತಪ್ಪಾಗದು. 1939–43ರಲ್ಲಿ ಎಂ. ಡಿ. ಅಧಿಕಾರಿಗಳು ಮಂಗಳೂರು ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷರಾಗಿದ್ದರು. ಸ್ವಾತಂತ್ರ್ಯ ಬಂದನಂತರ ಕಾಂಗ್ರೆಸ್ ಸದಸ್ಯರಲ್ಲಿ ಅನೇಕ ಮಂದಿ ತ್ಯಾಗಜೀವನ ವನ್ನು ತೊರೆದರು, ಸ್ವಾರ್ಥಿಗಳಾದರು, ಭೋಗಿಗಳಾದರು. ವಿಚಾರವಂತರಾದ ಎಂ. ಡಿ. ಅಧಿಕಾರಿಗಳಿಗೆ ಕಾಂಗ್ರೆಸ್ ರಾಜಕೀಯ ಓಕರಿಕೆಯನ್ನುಂಟುಮಾಡಿತು. 1952 ರಲ್ಲಿ ಇವರು ಕಾಂಗ್ರೆಸ್ಸಿನಿಂದ ಹೊರಬಂದರು. 1942ರಲ್ಲಿ ಕ್ವಿಟ್ ಇಂಡಿಯಾ ಸಮೂಹದಲ್ಲಿದ್ದಾಗ ಬಲವಾದ ಲಾಠಿ ಏಟು ಬಿದ್ದು ಬದುಕುವುದೇ ಕಷ್ಟವಾದಾಗಲೂ ಇವರು ತಪ್ಪೊಪ್ಪಿಗೆಯನ್ನು ಬರೆದುಕೊಟ್ಟು ಜೈಲಿನಿಂದ ವಾಪಸ್ಸಾಗುವಂತೆ ಅನೇಕರು ಸಲಹೆ ಕೊಟ್ಟಿದ್ದರು. ಆಗ ಇವರು ಕ್ಷಮಾಯಾಚನೆ ಮಾಡದವರು. ಸ್ವಾತಂತ್ರ್ಯ ಬಂದಮೇಲೆ ನಾಡಿನ ಅರಾಜಕತೆಯನ್ನು ಕಂಡು ದೇವರ ಬಳಿ ಕ್ಷಮಾಯಾಚನೆ ಬೇಡಿರಬೇಕು!

1968ರಲ್ಲಿ ಇವರು ಜನಸಂಘಕ್ಕೆ ಸೇರಿ ಚುನಾವಣೆಗೆ ನಿಂತು ಸೋತು ಹೋದರು. ಆದರೆ ಇವರು ಜೀವನದಲ್ಲಿ ಎಂದೂ ಸೋತವರಲ್ಲ. ದಕ್ಷಿಣ ಕನ್ನಡ ಜಿಲ್ಲೆಯ ನಾನಾ ಸಂಸ್ಥೆಗಳಲ್ಲಿ ಇವರು ಸಕ್ರಿಯ ಪಾತ್ರವಹಿಸಿರುವರು. ಜಿಲ್ಲೆಯ ಏಳಿಗೆಗಾಗಿ ದುಡಿಯುತ್ತಿರುವರು.

ಎಂ. ಡಿ. ಅಧಿಕಾರಿಗಳ ತಂದೆ ಎಂ. ಡಿ. ಭೋಜಪ್ಪ ಹೆಗ್ಗಡೆಯವರು ; ತಾಯಿ ಮುದ್ರಾಡಿಬೀಡಿನ ಶಿವದೇವಿಯಮ್ಮನವರು. ಈ ದಂಪತಿಗಳ ಚೊಚ್ಚಲ ಕೂಸೇ ಎಂ. ಡಿ. ಅಧಿಕಾರಿಗಳು. ಇವರಿಗೆ ಅನಂತಸಿರಿಯಂತೆ ನಾಲ್ವರು ಸೋದರಿಯರು.

1936ರಲ್ಲಿ ಅಧಿಕಾರಿಗಳ ಮದುವೆಯಾಯಿತು. ಇವರ ಮನೆಯನ್ನೂ ಮನವನ್ನೂ ಶ್ರೀಮತಿ ಕಮಲಾವತಿಯವರು ತುಂಬಿ ಇವರ ಕಣ್ಮಣಿಯಾದರು. ಈ ದಂಪತಿಗಳಿಗೆ ದೇವಕುಮಾರ್, ಪದ್ಮಿನಿ, ಸುಮತಿಕುಮಾರಿ, ಸುಮಲೇಖ, ರಾಜಕುಮಾರ್, ವೃಷಭದೇವ ಮತ್ತು ಜಯಲಕ್ಷ್ಮಿ, ಈ ರೀತಿ ಸಪ್ತಸ್ವರಗಳಂತೆ ಏಳು ಜನ ಮಕ್ಕಳಾದರು.

ಎಂ. ಡಿ. ಅಧಿಕಾರಿಗಳು ಜೈನಾಗಮ ಮತ್ತು ಸಾಹಿತ್ಯದಲ್ಲಿ ಪಾರಂಗತರಲ್ಲದಿದ್ದರೂ ಪಾರಾಯಣಪ್ರಿಯರು. ಚಿಂತನಮಂಥನ ಮಾಡಿ ಗ್ರಂಥಗಳನ್ನು ಓದಿ ಸಾರವನ್ನು ಸವಿಯುವರು. ತತ್ವಾರ್ಥಸೂತ್ರ, ಸಾಗಾರಧರ್ಮಾಮೃತ, ರತ್ನಾಕರನ ಶತಕಸಾಹಿತ್ಯ, ಭರತೇಶವೈಭವ ಮತ್ತು ದಾನಚಿಂತಾಮಣಿ ಈ ಕೃತಿಗಳು ಇವರಿಗೆ ಪಂಚಪ್ರಾಣವಾಗಿವೆ. ಸಾಹಿತಿಗಳನ್ನು ಕಂಡಾಗ ಗಣಧರರನ್ನು ಕಂಡಂತೆ ಗೌರವಿಸುವರು. ಕೇವಲ ಬಾಯಿಮಾತಿನ ಉಪಚಾರದಲ್ಲೇ ಮುಗಿಸದೆ ಸಾಹಿತಿಗಳಿಗೆ ಕೈತೊರೆದು ಸಹಾಯಮಾಡುವರು.



ಎಂ. ಡಿ. ಅಧಿಕಾರಿಗಳು, ವರಂಗ

ಸಹಾಯ ಕೇಳಿದವರಿಗೆ ಇಲ್ಲವೆಂದು ಇವರಿಗೆ ಅಭ್ಯಾಸವಿಲ್ಲ. ಸಂಘಸಂಸ್ಥೆಗಳಿಗೆ, ಸಮಾರಂಭಗಳಿಗೆ ಸದಾ ಇವರು ಚಂದಾ ಕೊಡುತ್ತಿರುವರು. ಕುಂದಕುಂದ ವಿದ್ಯಾಪೀಠ, ಹುಂಚ ಇಲ್ಲಿಗೆ ಅಧಿಕಾರಿಗಳು 1001 ರೂ. ಶಿವಮೊಗ್ಗ ವರ್ಧಮಾನ ವಿದ್ಯಾರ್ಥಿ ನಿಲಯಕ್ಕೆ 501 ರೂ. ಸಹಾಯ ಮಾಡಿರುವರು. ಸೋನೆಮಳೆಯಂತೆ ಸಣ್ಣ ಪ್ರಮಾಣದಲ್ಲಿ ಪ್ರತಿನಿತ್ಯ ಇವರು ದಾನಧರ್ಮ ಮಾಡುತ್ತಿರುವರು.

ಹುಂಚದ ದಿವಂಗತ ದೇವೇಂದ್ರಕೀರ್ತಿಗಳಿಗೆ ಬಲಗೈಯಾಗಿ ಶ್ರೀಮಠಕ್ಕೆ ಇವರು ದುಡಿದಿರುವರು. ವರಾಂಗ ಮಠದ ಮೇಲ್ವಿಚಾರಕರಾಗಿ ಹನ್ನೆರಡು ವರ್ಷಗಳಿಂದಲೂ ಶ್ರಮದಾನ ಮಾಡಿರುವರು. ಈಗಿನ ಶ್ರವಣಬೆಳಗುಳದ ಪರಮಪೂಜ್ಯರಾದ ಚಾರುಕೀರ್ತಿ ಪಂಡಿತಾಚಾರ್ಯರನ್ನು ತ್ಯಾಗಿಗಳಾಗುವಂತೆ ಪ್ರೇರೇಪಿಸಿದ್ದಲ್ಲದೆ ಶ್ರೀಮಠದ ಪವಿತ್ರ ಗದ್ದಿಗೆಯನ್ನು ಏರುವಂತೆ ಮಾಡಿದರು. ಹುಂಚ ಕ್ಷೇತ್ರದ ಈಗಿನ ಪೀಠಾಧಿಕಾರಿಗಳಾದ ಸ್ವಸ್ತಿಶ್ರೀ ದೇವೇಂದ್ರಕೀರ್ತಿ ಸ್ವಾಮೀಜಿಯವರು 1973ರ ಆಗಸ್ಟ್ ತಿಂಗಳಲ್ಲಿ ಶ್ರೀ ಎಂ. ಡಿ. ಅಧಿಕಾರಿಗಳ ಷಷ್ಟ್ಯಬ್ಧಿ ಸಮಾರಂಭ ಜರುಗಿಸಿ ಪುರಸ್ಕಾರವಿತ್ತು ಗೌರವಿಸಿ, ಇವರ ಸೇವಾಮನೋಧರ್ಮವನ್ನು ಮೆಚ್ಚಿ ಆಶೀರ್ವದಿಸಿದರು.

ಎಂ. ಡಿ. ಅಧಿಕಾರಿಗಳು ಹುಟ್ಟಿದ್ದೇ ಅಧಿಕಾರ ಮಾಡುವುದಕ್ಕೆ. ಒಂದಲ್ಲ ಒಂದು ಅಧಿಕಾರ ಇವರ ತಲೆಗೆ ಅನಿವಾರ್ಯವಾಗಿ ಗಂಟುಬೀಳುವುದು. ಜೈನ ಸಮಾಜದ ಸಮಸ್ಯೆಗಳನ್ನು ಅಧಿಕಾರಯುಕ್ತವಾಗಿ ಇವರು ವಿವರಿಸುವರು; ಅಧಿಕಾರಯುಕ್ತವಾಗಿ ಪರಿಹರಿಸಲು ಹೋರಾಡುವರು.

ಸುಖದುಃಖವೆಂಬ ವಿಕಲ್ಪವಳಿದು ದಿವ್ಯ |
ಸುಖವೆ ರೂಪಾದ ಮಹಾತ್ಮ ||
ಸುಖದೋರುತೆನ್ನಂತರಂಗದೊಳಿರ್ದು ಸುಖ |
ಮುಖನೆ ಚಿದಂಬರಪುರುಷಾ ||

ಪಾವನಮೂರ್ತಿ ಪಾವನಕೀರ್ತಿ ಲೋಕೈಕ |
ಪಾವನಾಕಾರ ಗಂಭೀರಾ ||
ಪಾವನಮತಿದೋರು ಪಾಲಿಸೆನ್ನನು ನನ್ನ |
ದೇವ ನಿರಂಜನಸಿದ್ಧಾ ||

ಮುಡಿಬೆಟ್ಟು ನಾಗರಾಜಶಾಸ್ತ್ರಿ, ಮೂಡಬಿದ್ರೆ

ಮೂಡಬಿದ್ರೆಗೆ ಭರತಖಂಡದ ನಾನಾ ಭಾಗಗಳಿಂದ ಯಾತ್ರಿಕರು ಬರುವರು. ಬಂದವರಿಗೆಲ್ಲ ತಂಗಲು ಸ್ಥಳ ಮಾಡಿಕೊಡುವವರು ಶ್ರೀ ನಾಗರಾಜ ಶಾಸ್ತ್ರಿಗಳು. ಇವರ ಸ್ವಾಗತವೇ ಸಾಕು, ಹೊರಗಿನಿಂದ ಬಂದವರಿಗೆ ಮನೆಯಲ್ಲಿದ್ದಂತೆ ಭಾಸವಾಗುವುದು. ಕೋಣೆ ಕೊಡುವುದು, ಪಾತ್ರೆಪರಾಸ ಕೊಡುವುದು, ಮಾರ್ಗದರ್ಶನ ಮಾಡುವುದು—ಪ್ರತಿಯೊಂದರಲ್ಲೂ ನಾಗರಾಜಶಾಸ್ತ್ರಿಗಳು ದಯಾದಾಕ್ಷಿಣ್ಯದಿಂದ ನಡೆದುಕೊಂಡು ಸ್ನೇಹಸೌಹಾರ್ದತೆಯನ್ನು ತೋರಿ, ಕ್ಷೇತ್ರದ ಮಹಿಮೆಗೆ ಮೆರುಗು ಹಾಕುವರು. ಕ್ಷೇತ್ರ ಎಷ್ಟೇ ದೊಡ್ಡದಿರಲಿ, ಎಷ್ಟೇ ಮಹಿಮಾಪೂರ್ಣವಾಗಿರಲಿ, ಇಲ್ಲಿರುವ ಮೇಲ್ವಿಚಾರಕರು ಸಿಡುಕಿನವರಾದರೆ ಕ್ಷೇತ್ರದ ಮಹಿಮೆಗೆ ಮಸಿ ಬಳಿದಂತಾಗುವುದು. ಮೂಡುಬಿದರೆಗೆ ಬಂದವರು ತಾವು ಬಯಸಿದ್ದಕ್ಕಿಂತ ಎರಡು ಮೂರು ದಿನ ಹೆಚ್ಚಾಗಿ ಇಲ್ಲಿ ತಂಗುವುದು ಶ್ರೀ ನಾಗರಾಜಶಾಸ್ತ್ರಿಗಳ ಸದ್ವರ್ತನೆಯಿಂದಲೇ!

ಮೂಡುಬಿದರೆಯ ಗುರುಬಸದಿಯಲ್ಲಿರುವ ರತ್ನಬಿಂಬಗಳ ರತ್ನಪ್ರಭೆಯ ಜೊತೆಗೆ ನಾಗರಾಜಶಾಸ್ತ್ರಿಗಳ ಜೋಡುವಣೆ ಹಾಗು ವಿವರಣೆ ಇವೆರಡೂ ಸೇರಿ ಯಾತ್ರಿಕರ ಭಕ್ತಿ ಉದ್ದೀಪನವಾಗುವುದು. ಮತ್ತೆ ಮತ್ತೆ ರತ್ನಬಿಂಬಗಳ ದರ್ಶನ ಮಾಡಲು ಯಾತ್ರಿಕರು ಹಾತೊರೆಯುವರು. ಧವಳ, ಜಯಧವಳ ಮತ್ತು ಮಹಾಧವಳ ಈ ಕೃತಿರತ್ನತ್ರಯಗಳನ್ನೂ ಶ್ರೀ ನಾಗರಾಜ ಶಾಸ್ತ್ರಿಗಳು ಯಾತ್ರಿಕರಿಗೆ ತೋರಿಸುತ್ತ ವಿವರಣೆ ಕೊಡುವಾಗ ನಾವು ಸಮವಸರಣದಲ್ಲಿದ್ದಂತೆ, ಜಿನವಾಣಿಯ ತರಂಗದಲ್ಲಿ ನಾವು ತೇಲಿದಂತೆ ಭಾಸವಾಗಿ ಪುಲಕಗೊಳ್ಳುವೆವು. ಈ ರೀತಿ ನಾಗರಾಜ ಶಾಸ್ತ್ರಿಗಳು ಆಸೇತುಹಿಮಾಚಲದ ತನಕ ಚಿರಪರಿಚಿತರಾಗಿದ್ದಾರೆ. ಧವಳಗ್ರಂಥಗಳು ಪ್ರಕಟವಾಗುತ್ತಿದ್ದಾಗ ಇವರು ಮುದ್ರಣ ಪ್ರತಿಯನ್ನು ತಿದ್ದುವ ಕಾರ್ಯವನ್ನು ಮಾಡಿದರು. ಧರ್ಮಶಾಲೆ, ರತ್ನಬಿಂಬಗಳು, ಧವಳದ ಮೂಲಪ್ರತಿಗಳು ಈ ಮೂರು ನಾಗರಾಜಶಾಸ್ತ್ರಿಗಳ ಮೇಲ್ವಿಚಾರಣೆಯಲ್ಲಿರುವುದರಿಂದ ಶಾಸ್ತ್ರಿಗಳೂ ಕೀರ್ತಿವಂತರಾದರು, ಯಾತ್ರಿಕರಿಗೂ ಹಿತವಾಯಿತು.

ಮುಡಿಬೆಟ್ಟು ಚಂದ್ರಪ್ಪಸೆಟ್ಟರ ಮಡದಿ ಪಣಿಪಿಲ್ ಮರುದೇವಿ ಅಮ್ಮ. ಈ ದಂಪತಿಗಳಿಗೆ 1907ರಲ್ಲಿ ಶ್ರೀ ನಾಗರಾಜಶಾಸ್ತ್ರಿಗಳು ಜನಿಸಿದರು. ಮೂಡುಬಿದ್ರೆಯಲ್ಲಿ ಇವರು ಪ್ರಾಥಮಿಕ ವಿದ್ಯಾಭ್ಯಾಸವನ್ನು ಮುಗಿಸಿದರು. ಮೊರಾನಕ್ಕೆ ಹೋಗಿ ಸಂಸ್ಕೃತವನ್ನು ಕಲಿತರು. ಇಂದೂರಿನಲ್ಲಿ ಜೈನಸಿದ್ಧಾಂತವನ್ನು ಓದಿ 1930ರಲ್ಲಿ ನ್ಯಾಯತೀರ್ಥ ಮಾಡಿಕೊಂಡರು. 1931ರಿಂದಲೂ ಮೂಡುಬಿದ್ರೆಯ ಧರ್ಮಶಾಲೆಯ ಮೇಲ್ವಿಚಾರಕರಾಗಿ ಯಾತ್ರಿಕರ ಸೇವೆಯಲ್ಲಿ ನಿರತರಾಗಿರುವರು.

ಶಾಸ್ತ್ರಿಗಳು ಆ ಜನ್ಮಬ್ರಹ್ಮಚಾರಿಗಳು. ಇವರ ಸಂಸಾರವೆಂದರೆ, ಧರ್ಮಶಾಲೆ, ರತ್ನಬಿಂಬಗಳು, ಧವಳಗ್ರಂಥಗಳು. ಇವರ ಆಯುಷ್ಯದ ಬಹುಭಾಗ ಯಾತ್ರಿಕರ ಸೇವೆಯಲ್ಲೇ ಕಳೆದಿದೆ. ವೇಳೆ ದೊರೆತಾಗಲೆಲ್ಲ ರತ್ನಬಿಂಬಗಳನ್ನು ಕಣ್ತುಂಬ ನೋಡಿ ಮನಸಾರೆ ವಿವರಣೆ ನೀಡಿರುವರು. ಧವಳಗ್ರಂಥಗಳ ಪ್ರದರ್ಶನ ಮಾಡುವುದರಲ್ಲೇ ಇವರು ಹಿಗ್ಗಿರುವರು. ಇವರ ಬಾಳೆಲ್ಲ ಧರ್ಮಧ್ಯಾನವಾಗಿದೆ. ಜಿನಬಿಂಬ ದರ್ಶನ, ಜಿನವಾಣಿ ಸ್ಪರ್ಶನ ಇವುಗಳಿಂದ ಶಾಸ್ತ್ರಿಗಳ ಭವ ಭವ್ಯತಮವಾಗಿದೆ. ಇವರು ಮುಂದೆ ವಿದೇಹ ಕ್ಷೇತ್ರದಲ್ಲಿ ಜನಿಸುವುದರಲ್ಲಿ ಸಂದೇಹವಿಲ್ಲ. ಶ್ರೀಮಂದರನ ಸಮವಸರಣದಲ್ಲಿ ಇವರು ಜಿನವಾಣಿಯನ್ನು ಆಲಿಸುತ್ತ ಪುಲಕಗೊಂಡು ಮುಂದಿನ ಭವವನ್ನು ಕಳೆಯುವುದರಲ್ಲಿ ಅನುಮಾನವಿಲ್ಲ.

ಬರೆಯಬಾರದ ತಿದ್ದಬಾರದ ಕಡೆದರೆ |
ದೊರೆಯಬಾರದ ರೂಪಿನಭವಾ ||
ಬರೆದು ಬಚ್ಚಣಿಸಿದಂತೆನ್ನೆದೆಯೊಳಗಿರು |
ಗುರುವೆ ಚಿದಂಬರಪುರುಷಾ ||

ಕಡೆಯಿಲ್ಲದಮೃತಸಂಪದವ ನಿನ್ನೊಳಗಿಟ್ಟು |
ಬಡವನಂತಿಳೆಗೆ ಕಾಣಿಸುವ ||
ಬೆಡಗಿನ ಸಿದ್ಧ ಸನ್ಮತಿದೋರು ಭವ್ಯಾತ್ಮ |
ರೊಡೆಯ ನಿರಂಜನಸಿದ್ಧಾ ||

ಶರಣಾಗತವಜ್ರಪಂಜರ ಸಹಜಾ |
ಭರಣಾ ಸುಖೋಜ್ವಲಕಿರಣಾ ||
ಶರಣಾಗು ನನ್ನಂತರಂಗದೊಳಿರು ಭವ |
ಹರಣ ಚಿದಂಬರಪುರುಷಾ ||

ಎ. ಸುಬ್ಬಯ್ಯ ಶಾಸ್ತ್ರಿಗಳು, ಬೆಂಗಳೂರು

ಸ್ಯಾದ್ವಾದ ವಿದ್ಯಾವಾರಿಧಿ, ವಿದ್ಯಾವಾಚಸ್ಪತಿ ಎಂಬ ಬಿರುದಾಂತ ಶ್ರೀ ಸುಬ್ಬಯ್ಯ ಶಾಸ್ತ್ರಿಗಳು 1967ರಲ್ಲಿ ಷಟ್ ಖಂಡಾಗಮ-ಜೀವಟ್ಠಾಣ ಸತ್‌ಪ್ರರೂಪಣೆ ಎಂಬ ಆಗಮಗ್ರಂಥವನ್ನು ಕನ್ನಡದಲ್ಲಿ ಅನುವಾದಿಸಿ ಪ್ರಕಟಿಸಿದರು. ಜಿನವಾಣಿಯ ಮಹಿಮೆಯನ್ನು ಮನೆಮನೆಗೂ ಈ ಗ್ರಂಥದ ಮುಖೇನ ಬಿತ್ತಿದರು. 1969ರಲ್ಲಿ ರಾಷ್ಟ್ರಾಧ್ಯಕ್ಷರು ದೆಹಲಿಗೆ ರಾಜಭವನಕ್ಕೆ ಇವರನ್ನು ಕರೆಸಿಕೊಂಡು ಸನ್ಮಾನ ಮಾಡಿದ್ದಲ್ಲದೆ ಬದುಕಿರುವತನಕ ಇವರಿಗೆ ಪ್ರತಿವರ್ಷವೂ 3000/-ರೂ. ಗೌರವಧನ ಕೊಡುವ ಏರ್ಪಾಡಾಯಿತು. ಈ ಸನ್ಮಾನ ಜೈನ ಸಮಾಜಕ್ಕೆ, ಜೈನ ಸಾರಸ್ವತ ಪ್ರಪಂಚಕ್ಕೆ ಸಂದಾಯವಾದಂತಾಯಿತು. ಶಾಸ್ತ್ರಿಗಳ ಕೀರ್ತಿ ಇಂದು ಮನೆಮಾತಾಗಿದೆ. 1929-46



ಎ. ಸುಬ್ಬಯ್ಯ ಶಾಸ್ತ್ರಿಗಳು

ಈ ನಡುವೆ ಇವರು ಶ್ರವಣಬೆಳಗುಳದ ಸ್ಯಾದ್ವಾದ ಸಂಸ್ಕೃತ ಮಹಾಪಾಠಶಾಲೆಗೆ ಪ್ರಿನ್ಸಿಪಾಲರಾಗಿ ನೂರಾರು ಜನಕ್ಕೆ ವಿದ್ಯಾದಾನ ಮಾಡಿದರು. ದಿವಂಗತ ನೇಮಿ ಸಾಗರರ ಶಿಷ್ಯರಲ್ಲಿ ಒಬ್ಬರಾದ ಸುಬ್ಬಯ್ಯ ಶಾಸ್ತ್ರಿಗಳು ತನ್ನಂಥ ಹತ್ತಾರು ಜನ ವಿದ್ವಾಂಸರನ್ನು ಸೃಷ್ಟಿಸಿ ಜೈನಸಮಾಜಕ್ಕೆ ವಿದ್ವತ್ತಿನ ಕಿರೀಟವೇರಿಸಿದರು. 1954–69 ಈ ಕಾಲದಲ್ಲಿ ಶಾಸ್ತ್ರಿಗಳು ಬೆಂಗಳೂರಿನ ಸಂಸ್ಕೃತ ಮಹಾಪಾಠಶಾಲೆಯಲ್ಲಿ ಜೈನ ಸಿದ್ಧಾಂತದ ಪ್ರೊಫೆಸರ್ ಆಗಿ ದುಡಿದಿರುವರು. ಇಲ್ಲಿ ಸಿದ್ಧಾಂತವನ್ನು ಪ್ರಾರಂಭಿಸಿದ ವರೂ ಇವರೆ; ಅದಕ್ಕೆ ವಿದ್ಯಾರ್ಥಿಗಳನ್ನು ಹೊಂಚಿದವರೂ ಇವರೆ. ಅನ್ನ, ಬಟ್ಟೆ, ಪುಸ್ತಕ ಇವನ್ನು ಕೊಟ್ಟು ಅನೇಕ ವಿದ್ಯಾರ್ಥಿಗಳಿಗೆ ಜಿನಧರ್ಮದ ರಹಸ್ಯವನ್ನು ಬೋಧಿಸಿದ್ದು ಸಾಮಾನ್ಯದ ಮಾತೆ? 1940ರ ಮಸ್ತಕಾಭಿಷೇಕದಲ್ಲಿ ಶಾಸ್ತ್ರಿಗಳು ವಹಿಸಿದ ಪಾತ್ರ ಚಿರಸ್ಮರಣೀಯವಾದುದು. ಶ್ರವಣಬೆಳಗುಳದ ಛತ್ರಕ್ಕಾಗಿ ಇವರು ಹತ್ತು ಸಹಸ್ರ ರೂಪಾಯಿಗಳನ್ನು ಸಂಗ್ರಹಿಸಿ ಕೊಟ್ಟರು. 1941ರಲ್ಲಿ ಮೈಸೂರಿನ ಶ್ರೀಮನ್ ಮಹಾರಾಜರು ಶ್ರೀ ಸುಬ್ಬಯ್ಯಶಾಸ್ತ್ರಿಗಳನ್ನು ಆಸ್ಥಾನ್ ಮಹಾವಿದ್ವಾನ್ ಎಂದು ಕರೆದು ಜೈನಸಮಾಜದ ಘನತೆಯನ್ನು ಹೆಚ್ಚಿಸಿದರು. ಭರತಖಂಡದ ನಾನಾ ಸಂಸ್ಕೃತ ಪರೀಕ್ಷೆಗಳಿಗೆ ಶಾಸ್ತ್ರಿಗಳು ಪರೀಕ್ಷಕರಾಗಿರುವರು. ಈ ದೃಷ್ಟಿಯಿಂದ ನೋಡಿ ದಾಗ ಶಾಸ್ತ್ರಿಗಳಿಗೆ ರಾಷ್ಟ್ರೀಯ ಪ್ರಾಮುಖ್ಯತೆಯಿದೆ ಎನ್ನಬಹುದು. ಕರ್ಣಾಟಕದ ಜೈನಶಾಸ್ತ್ರಿಗಳ ಪರಂಪರೆಯಲ್ಲಿ ಭಾರತ ಸರ್ಕಾರದ ವತಿಯಿಂದ ರಾಷ್ಟ್ರೀಯ ಮಟ್ಟದ ಮನ್ನಣೆ ಪಡೆದವರಲ್ಲಿ ಇವರೇ ಮೊದಲಿಗರು.

ಕೆರವಾಸೆ ಮೂಡರು ಅರಮನೆ ದೇವರಾಜರು ಶಾಸ್ತ್ರಿಗಳ ತಂದೆಯವರು. ಸುಮ್ಮ ಅಪ್ಪೈಗುತ್ತ ಇವರ ಮಗಳು ತಂಗಮ್ಮ ಸುವರ್ಣ ಇವರು ಶಾಸ್ತ್ರಿಗಳ ತಾಯಿ. ಈ ದಂಪತಿಗಳಿಗೆ 1894 ಮೇ 27ನೇ ದಿನ ಶ್ರೀ ಸುಬ್ಬಯ್ಯಶಾಸ್ತ್ರಿಗಳು ಜನಿಸಿದರು. ಕಾರಣಪುರುಷರಾದ ಇವರು ಮಿಜಾರು ಕನಕಬೆಟ್ಟದಲ್ಲಿ ಪ್ರಾಥಮಿಕ, ಮಾಧ್ಯಮಿಕ ವಿದ್ಯಾಭ್ಯಾಸವನ್ನು ಮಾಡಿದರು. ಅನಂತರ ವಾರಣಾಸಿಗೆ ಹೋಗಿ ನ್ಯಾಯತೀರ್ಥ, ಕಾವ್ಯತೀರ್ಥ, ವ್ಯಾಕರಣವಿಶಾರದ, ಜೈನಸಿದ್ಧಾಂತಶಾಸ್ತ್ರಿ, ನ್ಯಾಯಶಾಸ್ತ್ರಿ, ಸಾಹಿತ್ಯ ಶಾಸ್ತ್ರಿ– ಈ ಉನ್ನತ ಪರೀಕ್ಷೆಗಳಲ್ಲೆಲ್ಲ ಸುಬ್ಬಯ್ಯ ಶಾಸ್ತ್ರಿಗಳು ಉತ್ತೀರ್ಣರಾಗಿ ಷಡಂಗಸಂಪೂರ್ಣರಾದರು. ಇವರು ಪಡೆದಿರುವ ಪದವಿಗಳ ಸಂಖ್ಯೆಯೇ ಸಾಕು, ಇವರ ವಿದ್ವತ್ತನ್ನು ಅಳೆಯಲು.

ಶಾಸ್ತ್ರಿಗಳು ಪಡೆದ ಪದವಿಗಳು ಅನೇಕ. ಇವರ ಕಾರ್ಯಕ್ಷೇತ್ರವೂ ವಿಸ್ತಾರ ವಾದುದೇ. ಇಂದೂರಿನಲ್ಲಿ ಜೈನ ಸಿದ್ಧಾಂತದ ಆಚಾರ್ಯರಾಗಿ ಜನಕ್ಕೆ ಪಾಠ ಹೇಳಿ ದರು. ಕೊಲ್ಲಾಪುರದಲ್ಲಿ ಆಚಾರ್ಯ ಪದವಿ ವಹಿಸಿಕೊಂಡು ಹಲವಾರು ಜನಕ್ಕೆ ಜೈನಾಗಮನವನ್ನು ಕಲಿಸಿದರು. ಅನಂತರ ಜೈನ ಸಂಸ್ಕೃತಿಯ ಕೇಂದ್ರವಾದ ಶ್ರವಣ ಬೆಳಗುಳಕ್ಕೆ ಮಹಾಮಹೋಪಾಧ್ಯಾಯರಾಗಿ ಆಗಮಿಸಿದರು. ಶಾಸ್ತ್ರಿಗಳು ಆಚಾರ್ಯ

ರಾಗುವುದಕ್ಕಾಗಿ ಜನಿಸಿದರು. ಅಂದಿನಿಂದ ಇಂದಿನತನಕ ಆಚಾರ್ಯರಾಗೇ ಇರುವರು.

ಶ್ರೀ ಸುಬ್ಬಯ್ಯ ಶಾಸ್ತ್ರಿಗಳು 1927ರಲ್ಲಿ ದಾನವೀರ ಗುಮ್ಮಣ್ಣ ಸೆಟ್ಟರ ಹಾಗೂ ಕನಕಬೆಟ್ಟು ದೇಜಮ್ಮನವರ ಪುತ್ರಿಯಾದ ಲಕ್ಷ್ಮಮ್ಮನನ್ನು ಮದುವೆಯಾದರು. ಸರಸ್ವತೀಪುತ್ರರಾದ ಇವರಿಗೆ ಲಕ್ಷ್ಮೀಕಟಾಕ್ಷ ದೊರೆತಂತಾಯಿತು. ಈ ದಂಪತಿಗಳಿಗೆ ಸಪ್ತಸ್ವರಗಳಂತೆ ಶ್ರೀಯುತರಾದ ಪ್ರಭಾಚಂದ್ರ, ರವೀಂದ್ರನಾಥ್, ಜಯಕುಮಾರ್, ವಿಜಯಕುಮಾರ್ ಜೈನ್, ಅನಂತರಾಜು ಮತ್ತು ಶ್ರೀಮತಿಯರಾದ ಅನಂತಮತಿ, ತ್ರಿಶಲ ಈ ರೀತಿ ಏಳು ಜನ ಮಕ್ಕಳಾದರು. ಬಹುಮಟ್ಟಿಗೆ ಇವರ ಮಕ್ಕಳೆಲ್ಲರು ವಿದ್ಯಾವಂತರೇ. ಶಾಸ್ತ್ರಿಗಳು ಬಹಳ ಪುಣ್ಯವಂತರು. ಇವರ ಮಕ್ಕಳು ಸ್ವಾವಲಂಬಿಗಳು, ವಿನಯಸಂಪನ್ನರು, ಜೊತೆಗೆ ವಿದ್ಯಾವಂತರು.

ಶಾಸ್ತ್ರಿಗಳು ನಿಷ್ಠಾವಂತರು, ಸಂಯಮಿಗಳು, ವ್ರತಶೀಲಪಾಲಕರು. ಅನೇಕ ನೋಂಪಿಗಳನ್ನು ಕ್ರಮಬದ್ಧವಾಗಿ ಆಚರಿಸಿರುವರು. ಇವರು ದೇವರ ಪೂಜೆಗೆ ಕುಳಿತರೆಂದರೆ ಲೋಕವನ್ನೇ ಮರೆಯುವರು, ಸಮವಸರಣವನ್ನು ಅಂತರಂಗಕ್ಕೆ ಆವಾಹನೆ ಮಾಡುವರು.

ಶಾಸ್ತ್ರಿಗಳು ಸುಪ್ರಸಿದ್ಧ ಲೇಖಕರು, ಉಭಯಭಾಷಾವಿಶಾರದರು. ಲೌಕಿಕ ಹಾಗೂ ಆಗಮಿಕ ಗ್ರಂಥಗಳನ್ನು ರಚಿಸಿ ಭಾಷಾಸೇವೆ ಮಾಡಿರುವರು. ಲೋಕಮಾನ್ಯ ಬಾಲ ಗಂಗಾಧರ ತಿಲಕ್, ಸಿ. ಎಫ್. ಆಂಡ್ರೂಸ್, ಭದ್ರಬಾಹುಚರಿತೆ, ನೀತಿವಾಕ್ಯಾಮೃತ, ಗೋಮಟಸಾರ ಕನ್ನಡ ಅನುವಾದ, ಷಟ್‌ಖಂಡಾಗಮ ಜೀವಟ್ಠಾಣ ಕನ್ನಡ ಅನುವಾದ ಈ ಮಹಾಕೃತಿಗಳಲ್ಲದೆ ಸಂಸ್ಕೃತದಲ್ಲಿ ಸ್ವತಂತ್ರಭಾರತದಿಗ್ದರ್ಶನ, ಗೋಮಟಸ್ತುತಿ ಎಂಬ ಕೃತಿಗಳನ್ನೂ ರಚಿಸಿರುವರು.

ಶಾಸ್ತ್ರಿಗಳು ದೃಢಕಾಯರು. ಅಂಗಸಾಧನೆ ಮಾಡಿ ದೇಹದ ಆರೋಗ್ಯವನ್ನು ಕಾಪಾಡಿಕೊಂಡಿರುವರು. ಈ ಮುಪ್ಪಿನಲ್ಲೂ ಹತ್ತಾರು ಮೈಲಿ ನಡೆಯಬಲ್ಲರು. ವಯಸ್ಸಾಗಿದ್ದರೂ ಇವರ ಉತ್ಸಾಹ ಎಂದಿನಂತೆ ಇದೆ; ಇವರ ಚಟುವಟಿಕೆ ಎಂದಿನಂತೆ ಸಾಗಿದೆ. ಇವರು ಊಟಮಾಡುವುದರಲ್ಲೂ ಗಟ್ಟಿಗರು, ಕೆಲಸ ಮಾಡುವುದರಲ್ಲೂ ಗಟ್ಟಿಗರು. ಪುಷ್ಟಿಕರವಾದ ಆಹಾರವನ್ನು ಸೇವಿಸುವರು. ನಿಷ್ಠೆಯಿಂದ ಹತ್ತಾರು ಘಂಟೆ ಶಿಷ್ಯಮಂಡಳಿಗೆ ತರಪೇತು ಕೊಡುವರು. ಐದಾರು ಘಂಟೆ ಬರೆಯುವರು. ಆಸೇತುಹಿಮಾಚಲದ ತನಕ ಇವರ ಶಿಷ್ಯರು ಹರಡಿಕೊಂಡಿರುವರು.

ಸಿದ್ಧಪ್ಪ ಹೆಗ್ಗಡೆ ರಂಜಾಳ, ಕಾರ್ಕಳ

1962ರಲ್ಲಿ ಕಾರ್ಕಳದಲ್ಲಿ ನಡೆದ ನವಗ್ರಹಯಜ್ಞ ಮತ್ತು ಬಾಹುಬಲಿ ಮಸ್ತಕಾಭಿಷೇಕ ಮಹೋತ್ಸವಗಳ ಶ್ವಾಸಕೋಶದಂತೆ ಸದಾ ಕಾರ್ಯೋನ್ಮುಖವಾದ ಭವ್ಯ ಚೇತನ ಈ ಸಿದ್ಧಪ್ಪ ಹೆಗ್ಗಡೆ. ಈ ಮಹೋತ್ಸವ ಮುಗಿದಮೇಲೆ ಕಾರ್ಕಳದ ಕನ್ಯಾಪಾಠಶಾಲೆಯ ಕಾರ್ಯದರ್ಶಿಗಳಾಗಿ ಜೈನಕನ್ಯೆಯರಿಗೆ ಭವ್ಯಸಂಸ್ಕಾರವನ್ನು ನೀಡುವ ಮಹತ್ಕಾರ್ಯದಲ್ಲಿ ನಿರತರಾದರು. ಕಾರ್ಕಳದ ಜೈನಧರ್ಮ ಜೀರ್ಣೋದ್ಧಾರ ಸಮಿತಿಯ ಕೋಶಾಧ್ಯಕ್ಷರಾಗಿ, ಒಟ್ಟಿನಲ್ಲಿ ಜೈನ ಸಮಾಜದ ಏಳಿಗೆಗಾಗಿ, ಸಂಸ್ಕೃತಿಯ ಉಳಿವಿಗಾಗಿ, ಸಂಪ್ರದಾಯದ ಸಂರಕ್ಷಣೆಗಾಗಿ ಈ ಹಿರಿಯ ಚೇತನ ಹಗಲು ರಾತ್ರಿ ಮಿಡಿಯುತ್ತಿದೆ.

ಕಾರ್ಕಳದ ಗೊಮ್ಮಟ ಶಿಲೆಯ ಬಣ್ಣವೇ ಇವರ ಮೈಬಣ್ಣ; ಆ ಶಿಲೆಯಂತೆ ಇವರ ಸತ್‌ಸಂಕಲ್ಪವೂ ಸದೃಢವಾದುದು. ಕಾರ್ಮೋಡದ ಮಿಂಚಿನಂತೆ ಇವರ ನಗುಮುಖ ಸದಾ ತೊಳಗುವುದು. ಇವರ ಆಕಾರ ಗಿಡ್ಡವಾದರೂ ಇವರ ಧರ್ಮ ಕಾರ್ಯಗಳು ಚಿಕ್ಕವಲ್ಲ.



ಸಿದ್ಧಪ್ಪ ಹೆಗ್ಗಡೆ

ಶ್ರವಣಬಸದಿ ಜೀರ್ಣೋದ್ಧಾರ ಮತ್ತು ಪಂಚಕಲ್ಯಾಣದಲ್ಲಿ ಸಿದ್ಧಪ್ಪ ಹೆಗ್ಗಡೆಯವರು ಪ್ರಮುಖಪಾತ್ರವನ್ನು ವಹಿಸಿದರು. ಸಿರಾಳು ಬಸದಿಯ ಜೀರ್ಣೋದ್ಧಾರ

ಮತ್ತು ಪಂಚಕಲ್ಯಾಣಗಳಲ್ಲಿ ಇವರು ನೇತಾರರಾಗಿದ್ದರು. ಈಗಲೂ ಈ ಬಸದಿಯ ಧರ್ಮದರ್ಶಿಗಳಾಗಿ ಸೇವೆಸಲ್ಲಿಸುತ್ತಿರುವರು. ದೇವತಾಕಾರ್ಯ ಮತ್ತು ಸಾಮಾಜಿಕ ಕಾರ್ಯ ಇವೆರಡೂ ಇವರಿಗೆ ಅನ್ನನಾಳ ಮತ್ತು ಶ್ವಾಸನಾಳಗಳಿದ್ದಂತೆ. ಸಹಜವಾಗಿ ಈ ಸೇವಾಮನೋಧರ್ಮ ಇವರಲ್ಲಿ ರೂಪಗೊಂಡಿದೆ.

ಇವರು 1903ರಲ್ಲಿ ಜನಿಸಿದರು. ಇವರ ತಂದೆ ಅಪ್ಪು ಹೆಗ್ಗಡೆ ಮುಡಾರು ಅಪ್ಪಯ್ಯ ಗುತ್ತು. ಪೇರಳದ ಬೆಟ್ಟು ಕುಸುಮಾಜಿ ರೆಂಜಾಳ ಇವರು ಸಿದ್ಧಪ್ಪ ಹೆಗ್ಗಡೆಯವರ ತಾಯಿ. ಈ ದಂಪತಿಗಳಿಗೆ ಏಳು ಜನ ಗಂಡುಮಕ್ಕಳೂ ಇಬ್ಬರು ಹೆಣ್ಣುಮಕ್ಕಳೂ ಜನಿಸಿದರು. ಸಿದ್ಧಪ್ಪ ಹೆಗ್ಗಡೆಯವರು ಮುಡಾರಿನಲ್ಲಿ ಪ್ರಾಥಮಿಕ ಶಾಲೆ ಓದಿ ಅನಂತರ ಮೈಸೂರು ಜೈನವಿದ್ಯಾರ್ಥಿನಿಲಯದಲ್ಲಿ ಆಶ್ರಯ ಪಡೆದು ಹೈಸ್ಕೂಲ್ ವಿದ್ಯಾಭ್ಯಾಸವನ್ನು ಮಾಡಿದರು.

1930ರಲ್ಲಿ ಇವರು ಮಾರ್ನಾಡುಗುತ್ತಿನ ಕಾಂತು ಹೆಗ್ಗಡೆಯವರ ಪುತ್ರಿ ಸಿರಾಳು ದೊಡ್ಡಮನೆ ಲಕ್ಷ್ಮೀಮತಿಯನ್ನು ಮದುವೆಯಾದರು. ಸಿದ್ಧಪ್ಪ ಹೆಗ್ಗಡೆಯವರು ಸ್ವಂತ ಸಾಗುವಳಿ ಮಾಡಿಸುತ್ತಿರುವರು. ಸಾ-ಮಿಲ್ಲನ್ನು ಸ್ಥಾಪಿಸಿ ಮರದ ವ್ಯಾಪಾರವನ್ನೂ ಮಾಡುತ್ತಿರುವರು.

ನೋಡಿ ನೋಡದ ನುಡಿದಾಡಿ ನುಡಿಯದೆಡೆ|
ಯಾಡಿ ನಡೆಯದ ಮಹಾತ್ಮಾ ||
ಕೂಡೆಕೊಡೆನಗೆ ಚಿತ್ಕಳೆಯ ಬೆಳಗನುಂಟು |
ಮಾಡು ನಿರಂಜನಸಿದ್ಧಾ ||

ಘೋರಸಂಸಾರ ಕಾಂತಾರ ದಾವಾನಲ|
ಚಾರುಕೈವಲ್ಯ ಮಾಂಗಲ್ಯಾ ||
ಕೋರೈಸುತೆನ್ನಂತರಂಗದೊಳಿರು ಧೈರ್ಯ |
ಮೇರು ಚಿದಂಬರಪುರುಷಾ ||

ನಿಡುಪಳ್ಳಿ ಅನಂತರಾಜ ಅರಿಗರು, ಪುತ್ತೂರು

ಕಾರ್ಕಳದ ಭೈರವ ಅರಸರು 15-16ನೆಯ ಶತಮಾನದಲ್ಲಿ 41 ಅಡಿ ಎತ್ತರವಾದ ಬಾಹುಬಲಿ ಮೂರ್ತಿಯನ್ನು ಮಾಡಿಸಿ ಕಾರ್ಕಳದ ಬೆಟ್ಟದ ಮೇಲೆ ಸ್ಥಾಪಿಸಿದರು. ಈ ಮಹಾಮೂರ್ತಿಗೆ ತಪ್ಪದೆ ಹನ್ನೆರಡು ವರ್ಷಕೊಮ್ಮೆ ಮಹಾಮಸ್ತಕಾಭಿಷೇಕ ನಡೆಯಲು ನಿಡುಪಳ್ಳಿ ಅನಂತರಾಜ ಅರಿಗರು 1950ರಲ್ಲಿ 350 ಮುಡಿ ಭೂಮಿಯನ್ನು ದತ್ತಿಬಿಟ್ಟರು. ಇದರ ಉತ್ಪತ್ತಿಯನ್ನು ಶೇಖರಿಸಿ ಮಹಾಮಸ್ತಕಾಭಿಷೇಕ ನಡೆಸಲು ವ್ಯವಸ್ಥೆಮಾಡಿ ಅರಿಗರು ಜೈನಸಮಾಜದ ಕೃತಜ್ಞತೆಗೆ ಪಾತ್ರರಾಗಿರುವರು. ಭೈರವರಸರಿಂದ ಜೈನಧರ್ಮದ ಪ್ರಭಾವನೆಗೆ ಅಸ್ತಿವಾರ ಬಿದ್ದರೆ ಇತ್ತ ಅರಿಗರಿಂದ ಅಸ್ತಿವಾರದ ಮೇಲೆ ಮಹಾಸೌಧ ನಿರ್ಮಾಣವಾದಂತಾಯಿತು!

ಬಂಟವಾಳ ತಾಲ್ಲೂಕಿನ ಕಜಿಕ್ಕಾರ್ ತಿರುಮಲ ಪಡಿವಾಳರು ಈ ಅರಿಗರ ತಂದೆ. ನಿಡುಪಳ್ಳಿ ಶೇಷಪ್ಪ ರೈರವರ ಪುತ್ರಿ ಚಲುವಮ್ಮನವರು ಇವರ ತಾಯಿ. ಈ ದಂಪತಿಗಳಿಗೆ ಶಾಂತಿರಾಜ ಅರಿಗ, ನೇಮಿರಾಜ ಅರಿಗ, ಪದ್ಮಾವತಿ ಮತ್ತು ಅನಂತರಾಜ ಅರಿಗ ಈ ರೀತಿ ನಾಲ್ಕು ಜನ ಮಕ್ಕಳಾದರು. ಕಿರಿಯವರಾದ ಅನಂತರಾಜ ಅರಿಗರು 1906ರಲ್ಲಿ ಜನಿಸಿದರು. ಮಾಧ್ಯಮಿಕ ಶಾಲೆಯ ತನಕ ಇವರ ಅಭ್ಯಾಸ ಸಾಗಿತು.

ಬಂಟವಾಳ ತಾಲ್ಲೂಕು ಉಳಿ ನಾಯಿಲದ ಅನಂತರಾಜ ಅತಿಕಾರಿಯವರ ಮಗಳು ಚಂದ್ರಾವತಿ ಅಮ್ಮನೊಡನೆ 1929ರಲ್ಲಿ ಅನಂತರಾಜ ಅರಿಗರ ಮದುವೆಯಾಯಿತು. ಈ ದಂಪತಿಗಳ ಪ್ರೇಮಾಂಬುಧಿಯಲ್ಲಿ ಸುಶೀಲಾವತಿ, ರವಿರಾಜ, ತುಂಗಾವತಿ, ರತ್ನಕುಮಾರ, ಪ್ರಭಾವತಿ, ಧನಪಾಲ, ಚಿತ್ರಕುಮಾರ, ಪ್ರೇಮಾವತಿ, ಸುಂದರಿ, ಗುಣಪಾಲ ಮತ್ತು ಚಾರಿತ್ರ ಎಂಬುದಾಗಿ ಏಕಾದಶನಿಲಯಗಳಂತೆ ಹನ್ನೊಂದು ಮಂದಿ ಮಕ್ಕಳಾದರು. ಇವರ ವಂಶಲತೆ ಸುಶೀಲದಿಂದ ಪ್ರಾರಂಭವಾಗಿ ಚಾರಿತ್ರದ ತನಕ ಹಬ್ಬಿತು!

1957ರಲ್ಲಿ ಅರಿಗರು ಕಾರ್ಕಳದ ಮಹಾಮಸ್ತಕಾಭಿಷೇಕವನ್ನು ಮಾಡಿಸಿ ಪುಣ್ಯಭಾಗಿಗಳಾದರು. ಇವರ ತಾಯಿ ಚಲುವಮ್ಮನವರು ಈ ಮಸ್ತಕಾಭಿಷೇಕವನ್ನು ಕಣ್ಣುತುಂಬ ನೋಡಿ ಸ್ವಲ್ಪಕಾಲದಲ್ಲೇ ಸ್ವರ್ಗಸ್ಥರಾದರು. ಸಹಸ್ರಾರು ಜನ ಜಿನಭಕ್ತರು ಈ ಸಂದರ್ಭದಲ್ಲಿ ಪಾಲ್ಗೊಂಡು ಬಾಹುಬಲಿಯ ಸನಿಹದಲ್ಲಿ ಪುಣ್ಯವನ್ನು ಬಾಚಿ ಬಾಚಿ ಭಾಗ್ಯವಂತರಾದರು. 1969ರಲ್ಲಿ ಮಹಾಮಸ್ತಕಾಭಿಷೇಕದ ದತ್ತಿ ಬಗ್ಗೆ ಇವರ ಮನೆತನದವರಿಂದಲೇ ಕೋರ್ಟಿನಲ್ಲಿ ಜಗಳ ಪ್ರಾರಂಭವಾಯಿತು. ಅರಿಗರ ಸತ್ ಸಂಕಲ್ಪದಂತೆ ಗೋಮಟೇಶನ ಅನುಗ್ರಹದಂತೆ ಆ ದತ್ತಿಯು ಪೂರ್ಣವಾಗಿ ಕಾರ್ಕಳದ

ಗೋಮಟೇಶ್ವರನದೆಂದೇ ಕೋರ್ಟಿನಲ್ಲಿ ತೀರ್ಮಾನವಾಯಿತು. ಈ ತೀರ್ಪನ್ನು ಕೇಳಿ ಒಂದು ಮಸ್ತಕಾಭಿಷೇಕ ಮಾಡಿಸಿದಷ್ಟೇ ಅರಿಗರಿಗೆ ಆನಂದವಾಯಿತು! ಭಕ್ತಿಯೇ ಅರಿಗರ ಬಂಡವಾಳ! ಸಮ್ಯಕ್ತ್ವವೇ ಇವರ ಸಂಪದ! 1972ರ ಹೊತ್ತಿಗೆ ಮಸ್ತಕಾಭಿಷೇಕನಿಧಿ ನಲವತ್ತು ಸಾವಿರ ರೂಗಳ ತನಕ ಬೆಳೆದಿದೆ. ಮೂಲ ಆಸ್ತಿಯನ್ನು ಬೆಲೆಕಟ್ಟಿದರೆ ಐದಾರು ಲಕ್ಷ ರೂಗಳಾಗಬಹುದು.

ಅರಿಗರು ಗೊಮ್ಮಟದತ್ತಿಯ ಭೂಮಿಯಲ್ಲೇ ಒಂದು ಜಿನಾಲಯವನ್ನು ಕಟ್ಟಿಸಿರುವರು. 1950ರಲ್ಲಿ ಇವರು ಪಂಚಕಲ್ಯಾಣ ಮಾಡಿಸಿ ಪಂಚಮಗತಿಗೆ (ಮೋಕ್ಷಪ್ರಾಪ್ತಿಗೆ) ಸಂಚುಕಾರ ಕೊಟ್ಟು ಪಾವನರಾಗಿರುವರು. ಕಾರ್ಕಳ, ಸಿಂಹನಗದ್ದೆ ಪಟ್ಟಾಚಾರ್ಯರುಗಳೂ, ಗುರುಗಳ ಗುರುಗಳಾದ ನೇಮಿಸಾಗರರೂ ಈ ಪಂಚಕಲ್ಯಾಣಕ್ಕೆ ಆಗಮಿಸಿ ಅರಿಗರನ್ನು ಆಶೀರ್ವದಿಸಿರುವರು.

ಭವ್ಯರ ಮೆಚ್ಚೆ ನಿರ್ಭವ್ಯರಿಗೆದೆಗಿಚ್ಚೆ |
ಅವ್ಯಯಸಿದ್ಧಿಯ ಮೊದಲೆ ||
ಸುವ್ಯಕ್ತ ಮತಿದೋರು ಸುಖದೋರು ಸನ್ಮುನಿ |
ಸೇವ್ಯ ನಿರಂಜನಸಿದ್ಧಾ ||

ನುಡಿಜಾಣ ನಡೆಜಾಣ ನೆರೆಜಾಣ ಮರೆಜಾಣ |
ಕಡುಜಾಣ ಜಗಕೆ ಸುಜಾಣ ||
ಎಡೆಬಿಡದೆನ್ನಂತರಂಗದೊಳಿರು ಜಾಣ |
ರೊಡೆಯ ಚಿದಂಬರಪುರುಷಾ ||

ಮೆಯ್ಯೆಲ್ಲ ಕಣ್ಣು ಮೆಯ್ಯೆಲ್ಲ ಮನಸು ನಿನ್ನ |
ಮೆಯ್ಯೆಲ್ಲ ಬಲು ಸುಖಶಕ್ತಿ ||
ಮೈಯೆಲ್ಲ ಪ್ರಭೆಯಾದ ಮಹಿಮ ನನ್ನೆದೆಯೊಳಿ |
ರಯ್ಯ ಚಿದಂಬರಪುರುಷಾ ||

ಉದ್ಯೋಗಪತಿ ಬ್ರಹ್ಮಪ್ಪ ತವನಪ್ಪನವರ ವಂಶದ ಹಿರಿಮೆ

ದೊಡ್ಡಮಲ್ಲಪ್ಪ ಮತ್ತು ಚಿಕ್ಕಮಲ್ಲಪ್ಪ ಎಂಬ ಸೋದರರು ಈ ವಂಶದ ಹಿರಿಯರು, ಉತ್ತರ ಭಾರತದಲ್ಲಿ ಷಹಲಬಿದರಿಯಲ್ಲಿದ್ದರು. ಇವರದು ಕಾಶ್ಯಪ ಗೋತ್ರ, ಋಷಭಪ್ರವರ, ಆದಿಸೂತ್ರ. ಸಮ್ಯಕ್ತ್ವಶಿರೋಮಣಿಗಳಾದ ಇವರು ಪರಮಜಿನ ಭಕ್ತರಾಗಿ ಧರ್ಮಾನುರಾಗಿಗಳಾಗಿ ಬಾಳುತ್ತಿದ್ದರು. ಮತಾಂಧನಾದ ಔರಂಗಜೇಬನ ಕಾಲದಲ್ಲಿ (ಕ್ರಿ.ಶ. 1658–1707) ಎಲ್ಲಿ ನೋಡಿದರೂ ಮುಸಲ್ಮಾನರ ಹಾವಳಿ ಹೆಚ್ಚಿತು. ಬಲವಂತವಾಗಿ ಜನರನ್ನು ಮುಸಲ್ಮಾನಮತಕ್ಕೆ ಸೇರಿಸಿಕೊಳ್ಳುತ್ತಿದ್ದರು. ಧರ್ಮ ಮತ್ತು ದೇವರು ಎಲ್ಲಕ್ಕಿಂತ ದೊಡ್ಡವು ಎಂದು ನಂಬಿದ್ದ ಸಮ್ಯಕ್ತ್ವಶಿರೋಮಣಿಗಳು ಉತ್ತರ ಭಾರತವನ್ನು ತೊರೆಯಬೇಕಾಯಿತು. ಅಹಿಂಸಾವ್ರತಧಾರಿಗಳಾದ, ಜಿನಭಕ್ತರಾದ ಈ ಹಿರಿಯರು ರಾಕ್ಷಸ ಸಂವತ್ಸರ, ಕಾರ್ತಿಕ ಶುದ್ಧ ಪಂಚಮಿಯಂದು ಷಹಲಬಿದರಿಯನ್ನು ಸಂಸಾರಸಮೇತ ತೊರೆದರು. ರಾತ್ರೋರಾತ್ರಿ ಪಲಾಯನವೆಸಗಿದರು. ಹಗಲೆಲ್ಲ ಕಾಡುಗಳಲ್ಲಿ ತಲೆಮರೆಸಿಕೊಂಡು ರಾತ್ರಿಕಾಲದಲ್ಲೀ ಪ್ರಯಾಣ ಮಾಡುತ್ತ ಕೊನೆಗೆ ಬೆಳಗಾಂ ಜಿಲ್ಲೆಯ ಕುಡಚಿಗೆ ಬಂದು ನೆಲೆಸಿದರು. ಧರ್ಮವನ್ನು ಉಳಿಸಿಕೊಳ್ಳುವುದಕ್ಕಾಗಿ ಈ ಮಹನೀಯರು ಜನ್ಮಸ್ಥಳವನ್ನು ತೊರೆದು ಬರಬೇಕಾಯಿತು! ಕೆಲವು ಕಾಲ ಇವರು ಕುಡಚಿಯ ಕುಲಕರ್ಣಿಗಳಾದರು. ಅನಂತರ ಹಾವೇರಿ ತಾಲ್ಲೂಕು ಧುಂಡಸಿ ಸೋಮಾಪುರದಲ್ಲಿ ನಾಡಗೌಡರಾದರು. ಕೊನೆಗೆ ಬ್ಯಾಡಗಿ ತಾಲ್ಲೂಕು ಚಿಕ್ಕಬಾಸನೂರಿಗೆ ಬಂದು ವ್ಯವಸಾಯಗಾರರಾದರು.

ಹತ್ತೊಂಬತ್ತನೆ ಶತಮಾನದ ಉತ್ತರಾರ್ಧದಲ್ಲಿ ದೊಡ್ಡಮಲ್ಲಪ್ಪನವರಿಗೆ ಜನಿಸಿದ ಸುಬ್ಬಣ್ಣ ಮತ್ತು ಬ್ರಹ್ಮಪ್ಪ ತವನಪ್ಪನವರು ರಾಮಲಕ್ಷ್ಮಣರಂತೆ ಬೆಳೆದರು. ಇವರಲ್ಲಿ ಬ್ರಹ್ಮಪ್ಪನವರು ವಿದ್ಯಾವಂತರೂ ವಿಚಾರವಂತರೂ ಆಗಿದ್ದರು. ಇವರು ಕೆಲವು ಕಾಲ ಶಾಲಾ ಉಪಾಧ್ಯಾಯರಾಗಿದ್ದರು. ಆಗ ತಿಂಗಳಿಗೆ ಎರಡು ರೂಪಾಯಿ ಸಂಬಳ. ಅನಂತರ ಹುಬ್ಬಳ್ಳಿಯ ಒಬ್ಬ ವ್ಯಾಪಾರಿ ಇವರ ಚಾಣಾಕ್ಷತೆಗೆ ಮೆಚ್ಚಿ ಇವರನ್ನು ಕಾರಕೂನರಾಗಿ ತೆಗೆದುಕೊಂಡನು. ಇಲ್ಲಿ ವ್ಯಾಪಾರದ ಅನುಭವವನ್ನು ಪಡೆದ ಬ್ರಹ್ಮಪ್ಪನವರಿಗೆ ಸ್ವತಂತ್ರ ಧಂದೆಯನ್ನು ಮಾಡುವ ಹಂಬಲವಾಯಿತು. ಅಲ್ಪಸ್ವಲ್ಪ ಹಣವನ್ನು ಕೂಡಿಹಾಕಿದರು.

ಮಹತ್ವಾಕಾಂಕ್ಷಿಗಳಾದ ಬ್ರಹ್ಮಪ್ಪನವರು ಹರಿಹರದಲ್ಲಿ ಮಂಡಿ ತೆಗೆದರು. ಇಲ್ಲಿಂದ ಇವರ ಪ್ರಗತಿ ಪ್ರಾರಂಭವಾಯಿತು. ಮುಂದೆ ದಾವಣಗೆರೆ ದೊಡ್ಡ ನಗರವಾಗಿ ಬೆಳೆಯುವುದನ್ನು ಚಾಣಾಕ್ಷರಾದ ಇವರು ಗ್ರಹಿಸಿದರು. ಸುಬ್ಬಣ್ಣನವರ ಮಕ್ಕಳಾದ ದೇವೇಂದ್ರಪ್ಪನವರೊಡನೆ ಇವರು 1885ರಲ್ಲಿ ದಾವಣಗೆರೆಗೆ ಬಂದು

ನೆಲಸಿದರು. ಇವರಿಗೆ ಕನ್ನಡ–ಮರಾಠಿ ಎರಡೂ ಗೊತ್ತು. ಇವರು ಅರಳೆಯನ್ನು ಕೈ ರಾಟೆಯಲ್ಲಿ ಶುದ್ಧಗೊಳಿಸಿ ಎತ್ತಿನ ಬಂಡಿಯಲ್ಲಿ ಮದ್ರಾಸಿಗೆ ಸಾಗಿಸುತ್ತಿದ್ದರು. ರಾಗಿಯನ್ನು ಹೇರಿಕೊಂಡು ಗೋವಾ ಕಡೆ ಹೋಗಿ ಮಾರಾಟ ಮಾಡುತ್ತಿದ್ದರು. ಆ ಕಡೆಯಿಂದ ಉಪ್ಪನ್ನು ತರುತ್ತಿದ್ದರು.




ಟಿ. ಬ್ರಹ್ಮಪ್ಪ

ಬ್ರಹ್ಮಪ್ಪನವರದು ನಿರ್ದಾಕ್ಷಿಣ್ಯ ಪ್ರವೃತ್ತಿ. ಇವರು ಮಾತನಾಡಿದರೆ ಕಡ್ಡಿ ಎರಡು ತುಂಡು. ಇವರನ್ನು ಕಂಡರೆ ಜನ ಭಯಭಕ್ತಿಯಿಂದ ನಡೆದುಕೊಳ್ಳುತ್ತಿದ್ದರು. ಷರಾಯಿ ಹಾಕಿ, ಲಾಂಗ್‌ಕೋಟು ತೊಟ್ಟು, ಪೇಟ ಧರಿಸಿ ಸದಾ ಠೀಕುಠಾಕಾಗಿರುತ್ತಿದ್ದರು. ದೇವೇಂದ್ರಪ್ಪನವರು ಸಾಮಾಜಿಕ ಸೇವಾಧುರಂಧರರು. ಸಾರ್ವಜನಿಕ ರಂಗದಲ್ಲಿ ಇವರು ಪ್ರಭಾವಶಾಲಿಗಳಾಗಿದ್ದರು. ಎಷ್ಟೋ ವರ್ಷ ಇವರು ಗೌರವ ಮ್ಯಾಜಿಸ್ಟ್ರೇಟ್ ಆಗಿದ್ದರು. 1928-29 ರಲ್ಲಿ ದಾವಣಗೆರೆಯನ್ನು ನಡುಗಿಸಿದ ಹಿಂದು ಮುಸ್ಲಿಮ್ ಗಲಾಟೆಯಲ್ಲಿ ದೇವೇಂದ್ರಪ್ಪನವರು ಶಾಂತಿ ಸಮಿತಿಯನ್ನು ರಚಿಸಿ ಮತೀಯ ಕಲಹದ ಜ್ವಾಲಾಮುಖಿಯನ್ನು ತಹಬಂದಿಗೆ ತರದೇ ಹೋಗಿದ್ದರೆ ಊರಿಗೆ ಊರೇ ನಾಶವಾಗುತ್ತಿತ್ತು. ಇಂಗ್ಲೀಷನ್ನು ಬಲ್ಲ ಇವರು ಸರ್ಕಾರಿ ವಲಯದಲ್ಲೂ ಪ್ರಭಾವಶಾಲಿಗಳಾಗಿದ್ದರು.

ಬ್ರಹ್ಮಪ್ಪನವರು ಸಾಹಿತ್ಯಪ್ರಿಯರು. ಮಹಲಿಂಗರಂಗ ಕವಿಯ ಅನುಭವಾಮೃತ ಇವರಿಗೆ ಪಂಚಪ್ರಾಣ. ತಾವೇ ಈ ಗ್ರಂಥವನ್ನು ಓಲೆಗ್ರಂಥದಿಂದ ಮರುಪ್ರತಿ ಮಾಡಿದರು. 1920ರಲ್ಲಿ ಹೊಸಕೆರೆ ಚಿದಂಬರಶಾಸ್ತ್ರಿಗಳಿಂದ ಪರಿಶೋಧಿಸಿ ಅನುಭ

ನಾಮೃತವನ್ನು ಬ್ರಹ್ಮಪ್ಪನವರು ಪ್ರಕಟಿಸಿದರು ಹಾಗೂ ಧರ್ಮಾರ್ಥವಾಗಿ ಗ್ರಂಥವನ್ನು ಹಂಚಿದರು.

1905ರಲ್ಲಿ ಬ್ರಹ್ಮಪ್ಪನವರೂ ದೇವೇಂದ್ರಪ್ಪನವರೂ ಕಲೆತು ಕೈಗಾರಿಕೆಯ ವಿಸ್ತರಣೆಗೆ ಪಣತೊಟ್ಟು ಜಿನ್ನಿಂಗ್ ಫ್ಯಾಕ್ಟರಿ ಹಾಕಿ ಊರಿನ ಬಡಬಗ್ಗರಿಗೆ ಕೆಲಸ ಒದಗಿಸಿದರು (1957). ಬೊಂಬಾಯಿ, ಅಹ್ಮದಾಬಾದ್, ಮದರಾಸ್, ಬೆಂಗಳೂರು



ಟಿ. ದೇವೇಂದ್ರಪ್ಪ

ಈ ಸ್ಥಳಗಳ ಮಿಲ್‌ಬಟ್ಟೆ ಏಜೆನ್ಸಿ ಪಡೆದು ವ್ಯಾಪಾರವನ್ನು ವಿಸ್ತರಿಸಿದರು. 1918ರಲ್ಲಿ ಇವರಿಬ್ಬರೂ ಪರ್ಯಾಲೋಚನೆಮಾಡಿ ದಾವಣಗೆರೆಯಲ್ಲಿ ಎಣ್ಣೆಮಿಲ್ಲು ಹಾಕಿದರು. ಹಳೇ ಮೈಸೂರು ಪ್ರಾಂತದಲ್ಲಿ ಎಣ್ಣೆಮಿಲ್ಲು ಹಾಕಿದವರಲ್ಲಿ ಇವರೇ ಮೊದಲಿಗರು. ಎಣ್ಣೆಯನ್ನು ಭಾರತದ ಮೂಲೆಮೂಲೆಗೂ ಕಳಿಸುವುದರ ಜೊತೆಗೆ ವಿದೇಶಕ್ಕೂ ರವಾನಿಸಿದರು. 1922ರಲ್ಲಿ ಬ್ರಹ್ಮಪ್ಪನವರು ಮೈಸೂರಿನ ವರ್ಧಮಾನಯ್ಯನವರ ಸ್ನೇಹ ಬೆಳೆಸಿ ಅವರ ಪ್ರಭಾವವನ್ನು ಉಪಯೋಗಿಸಿಕೊಂಡು ಮೈಸೂರಿನಲ್ಲೂ ಒಂದು ಎಕ್ಸ್‌ಪಿಲರ್ ಸ್ಥಾಪಿಸಿದರು. ಹಬ್ಬುವ ಬಳ್ಳಿ ಒಂದು ಕಡೆ ನಿಂತೀತೆ? 1928ರಲ್ಲಿ ಇವರು ಹಿಂದೂಪುರದಲ್ಲೂ ಒಂದು ಎಕ್ಸ್‌ಪಿಲರ್ ಹಾಕಿದರು. 1928ರ ತನಕ ಇವರು ಮುಟ್ಟಿದ್ದೆಲ್ಲ ಬಂಗಾರವಾಯಿತು! ಬ್ರಹ್ಮಪ್ಪನವರೂ ದೇವೇಂದ್ರಪ್ಪನವರೂ ಒಬ್ಬರಿಗೊಬ್ಬರು ಸಹಕಾರ ಕೊಟ್ಟು ಉದ್ಯಮವನ್ನು ಬೆಳೆಸಿದರು. ಜೊತೆಯಾಗಿ ಇವರ ಐಶ್ವರ್ಯವೂ ಬೆಳೆಯಿತು. ಇವರಿಬ್ಬರಲ್ಲೂ ಧರ್ಮಾಭಿಮಾನವೂ ಹೆಚ್ಚಿತು. ಜೊತೆಗೆ ಮೈಸೂರಿನ ವರ್ಧಮಾನಯ್ಯನವರ ಮಾರ್ಗದರ್ಶನ ಬೇರೆ

ದೊರೆಯಿತು. ದಾವಣಗೆರೆಯಲ್ಲಿ ಒಂದು ಜಿನಾಲಯವನ್ನು ಕಟ್ಟಿಸಿ ಪಂಚಕಲ್ಯಾಣ ಮಾಡಿಸುವ ಆಸೆಯಾಯಿತು. ಜೈನರೂ ಆಧುನಿಕ ವಿದ್ಯಾಭ್ಯಾಸವನ್ನು ಮಾಡಬೇಕೆಂದು ಇವರು ಆಶಿಸಿದರು. ಇದಕ್ಕಾಗಿ ದಾವಣಗೆರೆಯಲ್ಲಿ ಒಂದು ಜೈನ ವಿದ್ಯಾರ್ಥಿನಿಲಯವನ್ನು ಪ್ರಾರಂಭಿಸುವ ಆಲೋಚನೆಯನ್ನೂ ಮಾಡಿದರು. ಈ ಶುಭ ಪರಿಣಾಮದಲ್ಲಿರುವಾಗಲೇ 1932ರಲ್ಲಿ ದೇವೇಂದ್ರಪ್ಪನವರು ಸ್ವರ್ಗಸ್ಥರಾದರು. ಇದಕ್ಕೂ ಮೊದಲೇ ಬ್ರಹ್ಮಪ್ಪನವರಿಗೆ ಪಾರ್ಶ್ವವಾಯು ಹೊಡೆದಿದ್ದಿತು. ದೇವೇಂದ್ರಪ್ಪನವರ ಸಾವನ್ನು ಇವರ ಕಿವಿಗೆ ಹಾಕದೆ ಕೊನೆತನಕ ಮರೆಮಾಚಿದರು. 1933ರಲ್ಲಿ ಬ್ರಹ್ಮಪ್ಪನವರೂ ಕಾಲವಾದರು. ಬ್ರಹ್ಮಪ್ಪನವರು 1860ರಲ್ಲೂ ದೇವೇಂದ್ರಪ್ಪನವರು 1880ರಲ್ಲೂ ಜನಿಸಿದ ಭದ್ರಚೇತನಗಳು.

ಶ್ರೀಯುತರಾದ ಶಾಂತಣ್ಣ, ಜಯಕೀರ್ತಿ, ಶ್ರೀಪಾಲರಾವ್, ತವನಪ್ಪ, ಜಿನದತ್ತ, ಮಾಣಿಕ್ಯ, ಲೋಕಪಾಲ್ ಮತ್ತು ಶ್ರೀಮತಿ ಇವರು ಬ್ರಹ್ಮಪ್ಪನವರ ಸಂತಾನ ಸಂಪತ್ತು. ಶ್ರೀಯುತರಾದ ಚಂದ್ರಣ್ಣ, ಅನಂತರಾಜ್, ವಸುಪಾಲ್, ಸುಬ್ಬಣ್ಣ ಮತ್ತು ನಾಭಿರಾಜ್ ಈ ಐದು ಜನಗಳೂ ದೇವೇಂದ್ರಪ್ಪನವರ ಪುತ್ರ ರತ್ನಗಳು. ಶ್ರೀಮತಿಯರಾದ ಲಕ್ಷ್ಮೀಬಾಯಿ, ಪದ್ಮಾವತಿ, ರತ್ನಾಬಾಯಿ ಇವರು ಪುತ್ರಿಯರು.

1931–33ರ ನಡುವೆ ಬ್ರಹ್ಮಪ್ಪ ತವನಪ್ಪನವರ ಕುಟುಂಬ ಆರ್ಥಿಕ ಮುಗ್ಗಟ್ಟಿಗೆ ಸಿಕ್ಕಿತು. ವ್ಯಾಪಾರ ಇಳಿಮುಖವಾಯಿತು. ಎಲ್ಲ ವಹಿವಾಟಿನಲ್ಲೂ ನಷ್ಟವನ್ನು ಅನುಭವಿಸಬೇಕಾಯಿತು. ಇಂಥ ಸಂದರ್ಭದಲ್ಲಿ ಬ್ರಹ್ಮಪ್ಪನವರ ಹಿರಿಯ ಮಕ್ಕಳಾದ ಶಾಂತಣ್ಣನವರೂ ದೇವೇಂದ್ರಪ್ಪನವರ ಜ್ಯೇಷ್ಠಪುತ್ರರಾದ ಚಂದ್ರಣ್ಣನವರೂ ಎದೆಗುಂದದೆ ಧೈರ್ಯವಾಗಿ ಮುನ್ನಡೆದು ಮುಳುಗಿಹೋಗುತ್ತಿದ್ದ ವಹಿವಾಟನ್ನು ಪುನಃ ಸಂಘಟಿಸಿ ಭದ್ರವಾದ ಬುನಾದಿಯನ್ನು ಹಾಕಿದರು. 1945ರಲ್ಲಿ ಒಟ್ಟುವಹಿವಾಟನ್ನು ಅವರು ಸೀಮಿತಗೊಳಿಸಿ (Limited) ಬಿ.ಟಿ. ವಂಶದ ಹಿರಿಮೆಗೆ ಕಲಶವಿಟ್ಟರು. ಇವರಿಬ್ಬರ ವಿಷಯ ಪ್ರತ್ಯೇಕವಾಗೇ ಬರೆಯುವದಿದೆ.

ಬಿ ಟಿ. ಕಂಪನಿ ಜಗದ್ವಿಖ್ಯಾತವಾದುದು. 1922ರಲ್ಲೇ ಕಡಲೆಯೆಣ್ಣೆ, ಔಡ್ಲಯೆಣ್ಣೆ ಇವನ್ನು ಇಂಗ್ಲೆಂಡಿಗೂ ಜರ್ಮನಿಗೂ ಕಳಿಸಿದ ಸಾಹಸಿಗಳು ಬ್ರಹ್ಮಪ್ಪ ತವನಪ್ಪನವರು. ಅವರು ಹಾಕಿದ ಸಸಿ ಈಗ ಹೆಮ್ಮರವಾಗಿದೆ. ಈಗಲೂ ಬಿ.ಟಿ. ಕಂಪನಿ ಪರದೇಶದ ವಹಿವಾಟನ್ನು ಉಳಿಸಿಕೊಂಡು ಬಂದಿರುವುದರ ಜೊತೆಗೆ ಇಲ್ಲಿನ ವಹಿವಾಟನ್ನು ದಿನೇ ದಿನೇ ಹೆಚ್ಚಿಸುತ್ತಿರುವುದು. ಕರ್ಣಾಟಕದ ಕೈಗಾರಿಕಾರಂಗದಲ್ಲಿ ಬ್ರಹ್ಮಪ್ಪ ತವನಪ್ಪನವರ ಮತ್ತು ದೇವೇಂದ್ರಪ್ಪನವರ ಹೆಸರುಗಳು ಚಿರಸ್ಥಾಯಿಯಾಗಿವೆ.

ಮನೆಯ ಹಿರಿಯರಿಬ್ಬರೂ ಕಾಲವಾದನಂತರ ಇವರ ಮಕ್ಕಳು ಅನ್ಯೋನ್ಯ ಪ್ರೇಮದಿಂದ ಬಾಳುತ್ತ ಬಿ.ಟಿ. ಕಂಪನಿಯ ಹಿರಿಮೆಯನ್ನುಹೆಚ್ಚಿಸುವ ಕಡೆ ಸಂಘಟನೆ

ಯಿಂದ ದುಡಿದರು. 1948ರಲ್ಲಿ ವನಸ್ಪತಿ ಮಾಡುವ ಏರ್ಪಾಟಾಯಿತು. 1952ರಲ್ಲಿ ಸಾಬೂನು ಫ್ಯಾಕ್ಟರಿ ಪ್ರಾರಂಭವಾಯಿತು. 1957ರಲ್ಲಿ ಕಾಟನ್ ಪ್ರೆಸ್ ಫ್ಯಾಕ್ಟರಿ, 1958ರಲ್ಲಿ ಹಿಂಡಿಯಿಂದ ಮತ್ತೆ ಎಣ್ಣೆ ತೆಗೆಯುವ ಏರ್ಪಾಟಾಯಿತು. ಇದಕ್ಕಾಗಿ ಅತ್ಯಾಧುನಿಕ ಯಂತ್ರಗಳನ್ನು ಸ್ಥಾಪಿಸಿದರು. 1960ರಲ್ಲಿ ಹತ್ತಿಬೀಜದಿಂದ ಅಡಿಗೆ ಎಣ್ಣೆ ತೆಗೆದು ಹೊಸ ಸಾಹಸವನ್ನು ತೋರಿದರು. 1962ರಲ್ಲಿ ದನಗಳಿಗಾಗಿ ಪೌಷ್ಟಿಕಾಹಾರವನ್ನು ಯಂತ್ರದಲ್ಲಿ ಸಿದ್ಧಪಡಿಸಿ ಮೂಕಜಂತುಗಳಿಗೆ ಮಹದುಪಕಾರ ಮಾಡಿದರು.


ಧರ್ಮಕಾರ್ಯಗಳು: ಬಿ.ಟಿ. ಕಂಪನಿಯ ಪಾಲುದಾರರು ತಮ್ಮ ಹಿರಿಯರಾದ ಬ್ರಹ್ಮಪ್ಪ ದೇವೇಂದ್ರಪ್ಪ ತವನಪ್ಪನವರ ಆಶೋತ್ತರವನ್ನು ನೆರವೇರಿಸಲು ದಾವಣಗೆರೆಯಲ್ಲಿ 1950–52ರಲ್ಲಿ ಒಂದು ಜಿನಾಲಯವನ್ನು ನಿರ್ಮಿಸಿ ಪಾರ್ಶ್ವನಾಥ ಮತ್ತು ಚಂದ್ರನಾಥ ಬಿಂಬಗಳನ್ನು ಸ್ಥಾಪಿಸಿ ವೈಭವಯುತವಾಗಿ ಪಂಚಕಲ್ಯಾಣ ಮಾಡಿಸಿದರು. ಇದೇ ಸಂದರ್ಭದಲ್ಲಿ ದಾವಣಗೆರೆ ಇಂಜಿನಿಯರಿಂಗ್ ಕಾಲೇಜಿಗೆ 1½ ಲಕ್ಷ ರೂ. ದಾನವಾಗಿ ಕೊಟ್ಟು ತಮ್ಮ ವಿದ್ಯಾಪ್ರೇಮವನ್ನು ಬಿ.ಟಿ. ಕಂಪನಿಯ ಪಾಲುದಾರರು ವ್ಯಕ್ತಪಡಿಸಿರುವರು. ಜೈನವಿದ್ಯಾರ್ಥಿಗಳಿಗಾಗಿ ಒಂದು ವಿದ್ಯಾರ್ಥಿನಿಲಯವನ್ನು ವ್ಯವಸ್ಥೆಗೊಳಿಸಿ ಜೈನಸಮಾಜಕ್ಕೆ ಮಹದುಪಕಾರ ಮಾಡಿರುವರು.

1–4–1965ರಿಂದ ಬ್ರಹ್ಮಪ್ಪ ತವನಪ್ಪನವರ ಪ್ರೈವೇಟ್ ಲಿಮಿಟೆಡ್ ವ್ಯವಸ್ಥೆಗೆ ಶ್ರೀಯುತರಾದ ಟಿ. ನಾಭಿರಾಜಯ್ಯನವರು ಮ್ಯಾನೇಜಿಂಗ್ ಡೈರೆಕ್ಟರ್ ಆಗಿರುವರು. ಟಿ. ಅನಂತರಾಜಯ್ಯ, ಟಿ. ಸುಬ್ಬರಾವ್ ಮತ್ತು ಬಿ. ಟಿ. ತವನಪ್ಪ ಇವರುಗಳು ಡೈರೆಕ್ಟರ್‌ಗಳಾಗಿರುವರು. ಆಧುನಿಕ ಯಂತ್ರಗಳನ್ನು ಸ್ಥಾಪಿಸಿ ತಮ್ಮ ಉತ್ಪನ್ನವನ್ನು ದಿನೇದಿನೇ ಹೆಚ್ಚಿಸುತ್ತಿರುವರು.

ಕಾಲನ ಗಂಡ ಕರ್ಮದ ಮಿಂಡ ದುರ್ಮೋಹ |
ಜಾಲಾಂಧಕಾರ ಮಾರ್ತಾಂಡಾ ||
ಲೀಲಾಂಗ ಮತಿದೋರು ನಿಜದೋರು ಸುಜ್ಞಾನ |
ಲೋಲ ನಿರಂಜನಸಿದ್ಧಾ ||

ಎಸ್. ಎಚ್. ಕಾಬಣ್ಣನವರು, ದಾವಣಗೆರೆ

ಹುಂಚದ ದಿವಂಗತ ದೇವೇಂದ್ರಕೀರ್ತಿಗಳ ಬಲಗೈ ಆಗಿದ್ದರು ಕಾಬಣ್ಣನವರು. ದೇವೇಂದ್ರಕೀರ್ತಿಗಳು ಪಟ್ಟಕ್ಕೆ ಬರುವ ಮುನ್ನ ಅರ್ಹದ್ದಾಸರಾಗಿದ್ದರು. ಇವರ ವಿದ್ಯಾಭ್ಯಾಸಕ್ಕೆ ಕಾಬಣ್ಣನವರು 1942-43ರಲ್ಲಿ ಹೇರಳವಾಗಿ ಧನಸಹಾಯ ಮಾಡಿದರು. ಅರ್ಹದ್ದಾಸರು ಪಟ್ಟಕ್ಕೆ ಬರಲು ಇವರು ಹಗಲುರಾತ್ರಿ ಹೋರಾಟ ನಡೆಸಿ ಅವರಿಗೆ ಜಯ ಗಳಿಸಿಕೊಟ್ಟರು. 1954ರಲ್ಲಿ ಹುಂಚದ ಪದ್ಮಾವತೀದೇವಿಯು



ಎಸ್. ಎಚ್. ಕಾಬಣ್ಣನವರು

ಹಿಂದೂ ದೇವತೆಯೆಂದು ಕೆಲವು ತಂಟೆಕೋರರು ಗುಲ್ಲೆಬ್ಬಿಸಿದಾಗ ಕಾಬಣ್ಣನವರು ಸಿಡಿದೆದ್ದು ಪ್ರತಿಭಟಿಸಿ ಜೈನಸಮಾಜದ ಹಕ್ಕನ್ನು ಉಳಿಸಿದ್ದಲ್ಲದೆ ಸಮಾಜದ ಗೌರವವನ್ನೂ ಉಳಿಸಿದರು. ಇವರು ಸಮ್ಯಗ್‌ದೃಷ್ಟಿಗಳು, ದೈವಭಕ್ತರು, ಧರ್ಮಾನುರಾಗಿಗಳು. ಜೊತೆಗೆ ಸಮಾಜಸೇವಕರು. ವ್ಯವಹಾರದಲ್ಲೂ ವ್ಯಾಪಾರದಲ್ಲೂ ಇವರು ಸತ್ಯನಿಷ್ಠರು! 1973-74ರಲ್ಲಿ ಸೀಮೆಯೆಣ್ಣೆ ಅಭಾವವುಂಟಾದಾಗ ಇವರು ಮನಸ್ಸು ಮಾಡಿದ್ದರೆ ಕುಬೇರರಾಗಬಹುದಿತ್ತು. ಸಮಯ ಸಾಧಕರಾಗದೆ ನ್ಯಾಯವಾದ ಬೆಲೆಗೆ ಸೀಮೆಯೆಣ್ಣೆಯನ್ನು ಪೂರಿ ಇವರು ಜನಪ್ರಿಯರಾದರು. ಧರ್ಮವನ್ನು ರಕ್ಷಿಸಿದರು. ಧರ್ಮ ಇವರನ್ನು ರಕ್ಷಿಸುತ್ತಿದೆ.

1948-54ರಲ್ಲಿ ಕಾಬಣ್ಣನವರು ದಾವಣಗೆರೆ ನಗರಸಭೆಯ ಸದಸ್ಯರಾಗಿದ್ದರು. ಕೆಲವು ಕಾಲ ಉಪಾಧ್ಯಕ್ಷರಾಗಿದ್ದರು. 1946–55ರ ನಡುವೆ ದಾವಣಗೆರೆ ವಾಣಿಜ್ಯ ಸಂಘಕ್ಕೆ ಇವರು ಕಾರ್ಯದರ್ಶಿಗಳಾಗಿದ್ದರು. 1956–58ರಲ್ಲಿ ಕಾಬಣ್ಣನವರು ಪ್ರಾಂತ ರೈಲ್ವೆ ಮಂಡಲಿಗೆ ಸಲಹೆಗಾರರಾಗಿ ನಮ್ಮ ಸಮಾಜದ ಹಿರಿಮೆಯನ್ನು ಹೆಚ್ಚಿಸಿರುವರು. 1959ರಲ್ಲಿ ದಕ್ಷಿಣಭಾರತದ ರೈಲ್ವೆಗೆ ವಾಣಿಜ್ಯಸಂಘದ ಚುನಾಯಿತ ಸದಸ್ಯರಾಗಿ ಕೀರ್ತಿವಂತರಾದರು. ಕರ್ನಾಟಕ ಪ್ರಾಂತದಲ್ಲಿ ಇಂಡಿಯನ್ ಆಯಿಲ್ ಕಾರ್ಪೊರೇಷನ್ ಏಜನ್ಸಿ ಪಡೆದವರಲ್ಲಿ ಕಾಬಣ್ಣನವರು ಮೊಟ್ಟಮೊದಲಿಗರು (1963). ಪ್ರಾಮಾಣಿಕತೆಯೇ ಇವರ ಬಾಳಿಗೆ ಪೀಠವಾಗಿದೆ; ಜನಸೇವೆಯೇ ಇವರಿಗೆ ಭೂಷಣವಾದ ಕಿರೀಟವಾಗಿದೆ. ಜೈನಸಮಾಜವು ಇಂಥ ನಂದಾದೀವಿಗೆಗಳ ಪ್ರಕಾಶದಲ್ಲಿ ಉಜ್ವಲವಾಗಿದೆ. ತಿಲಕಪ್ರಾಯರಾದ ಕಾಬಣ್ಣನವರನ್ನು ಪಡೆದು ನಾವು ಹೆಮ್ಮೆಪಡುವಂತಾಗಿದೆ.

ಶಾಮನೂರು ಹೊಂಬಣ್ಣ ಇಜಾರಿ ಇವರು ಪ್ರಖ್ಯಾತರಾದ ಪಾತ್ರೆವ್ಯಾಪಾರಿಗಳು. ಇವರ ಧರ್ಮಪತ್ನಿ ಇಲಕಲ್ ರಾಜಮ್ಮನವರು. ಈ ದಂಪತಿಗಳಿಗೆ 4-12-1904ರಲ್ಲಿ ಕಾಬಣ್ಣನವರು ಜನಿಸಿದರು. ಇವರಿಗೆ ಅಷ್ಟಮಂಗಳದ್ರವ್ಯಗಳಂತೆ ಕಾಳಸೆಟ್ಟಪ್ಪ, ಕಾಳಮ್ಮ, ಜಿನ್ನಪ್ಪ, ಧರ್ಮಣ್ಣ, ವಸುಪಾಲಪ್ಪ, ಕುಬೇರಪ್ಪ, ನೇಮಣ್ಣ ಮತ್ತು ಜಯಣ್ಣ ಎಂಬುದಾಗಿ ಎಂಟು ಜನ ಸೋದರಸೋದರಿಯರಿರುವರು. ಕಾಬಣ್ಣನವರು 1926ರಲ್ಲಿ ಮೆಟ್ರಿಕ್ ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ಮನೆತನಕ್ಕೆ ಕೀರ್ತಿ ತಂದರು. ಅಂದಿಗೆ ಅದೇ ದೊಡ್ಡ ವಿದ್ಯಾಭ್ಯಾಸವಾಗಿದ್ದಿತು.

1923ರಲ್ಲಿ ಕಾಬಣ್ಣನವರು ಹೊಸದುರ್ಗದ ದಗಸಿ ಜ್ಞಾನಚಂದ್ರಪ್ಪನವರ ಪುತ್ರಿ ಅಮ್ಮಾಜಮ್ಮನವರನ್ನು ಮದುವೆಯಾದರು. ಸಂಪನ್ನರಿಗೆ ಶೀಲವಂತೆ ದೊರೆತಂತಾಯಿತು. ಈ ದಂಪತಿಗಳು 28 ವರ್ಷ ಅನಂತ ನೋಂಪಿ ಮಾಡಿ ಉದ್ಯಾಪನೆ ಮಾಡಿದರು (1969) ಈ ಧರ್ಮಾನುರಾಗಿಗಳಿಗೆ ಅಷ್ಟಮಹಾಪ್ರಾತಿಹಾರ್ಯಗಳಂತೆ ರಾಜಮ್ಮ, ಪ್ರೇಮಕುಮಾರಿ, ಲಲಿತ, ನಾಗರಾಜು, ಅನಂತರಾಜು, ಶಾಂತರಾಜು, ವಿಜಯಕುಮಾರ್ ಮತ್ತು ಪ್ರಸನ್ನಕುಮಾರ್ ಎಂಬುದಾಗಿ ಎಂಟು ಜನ ಮಕ್ಕಳಾದರು. ಇವರ ಮನೆ ನಂದಗೋಕುಲವಾಯಿತು. ಎಲ್ಲಿ ನೋಡಿದರೂ ಚಂದವಾಯಿತು. ಈ ದಂಪತಿಗಳು ದಕ್ಷಿಣ ಭಾರತ ಯಾತ್ರೆಯನ್ನು ಮೂರು ಬಾರಿ ಮಾಡಿದರು. ಅಮ್ಮಾಜಮ್ಮನವರು ಉತ್ತರಭಾರತದ ಸಿದ್ಧಕ್ಷೇತ್ರಗಳ ದರ್ಶನಮಾಡಿ ತಮ್ಮ ಸಮ್ಯಕ್ತ್ವಕ್ಕೆ ಒಪ್ಪಹಾಕಿಕೊಂಡರು. 31–12–70ರಂದು ಅಮ್ಮಾಜಮ್ಮನವರು ಸ್ವರ್ಗಸ್ಥರಾಗಲು ಕಾಬಣ್ಣನವರ ಉತ್ಸಾಹವೇ ಹಿಂಗಿಹೋದಂತಾಯಿತು. ಸ್ಫೂರ್ತಿಯ ಸೆಲೆ ಬತ್ತಿದಂತಾಯಿತು. ಆಗಾಗ ಪತ್ನಿಯನ್ನು ನೆನೆದು ಕಾಬಣ್ಣನವರು ಕಂಬನಿ ಮಿಡಿಯುವರು.

ಕಾಬಣ್ಣ ದಂಪತಿಗಳು ಧನ್ಯಾತ್ಮರು ಮತ್ತು ಧಾರಾಳಿಗಳು. ಹೊಸದುರ್ಗ ಜಿನಾಲಯಕ್ಕೆ ನಾನಾಬಗೆಯಾಗಿ ಸಹಾಯ ಮಾಡಿರುವರು. ಜೊತೆಗೆ ಕಾಬಣ್ಣನವರು ಆ ಚೈತ್ಯಾಲಯ ಸಮಿತಿಗೆ ಉಪಾಧ್ಯಕ್ಷರಾಗಿರುವರು. ದಾವಣಗೆರೆ ಮಹಾವೀರ ಸಂಘಕ್ಕೆ ಕೋಶಾಧ್ಯಕ್ಷರಾಗಿ ಸೇವೆಮಾಡಿರುವರು. ಹುಂಚ ಕ್ಷೇತ್ರದ ಭೋಜನ ಶಾಲೆಯ ನಿರ್ಮಾಣಕ್ಕೆ 1001/– ರೂ. ಸಹಾಯ ಮಾಡಿರುವರು. ಚಳ್ಳಕೆರೆ ಜಿನಾಲಯಕ್ಕೆ ಮನಸಾರೆ ದಾನ ಕೊಟ್ಟಿರುವರು. 1952ರಲ್ಲಿ ದಾವಣಗೆರೆಯಲ್ಲಿ ಜಿನಾಲಯ ನಿರ್ಮಾಣವಾದಾಗ, ಪಂಚಕಲ್ಯಾಣವಾದಾಗ ಧಾರ್ಮಿಕೋತ್ಸಾಹದಿಂದ ಶ್ರಮದಾನ ಮಾಡಿರುವರು. ಜಾನಕಲ್ಲು ಜಿನಾಲಯಕ್ಕೆ ಇವರು ದತ್ತಿಬಿಟ್ಟ ಭೂಮಿಯಲ್ಲಿ ಈ ದಿನ ತೆಂಗಿನ ಮರಗಳು ಮೇಲೆದ್ದು ಅದು ನಂದನವನವಾಗಿದೆ. ಕಾಬಣ್ಣನವರ ಸೊಸೆಯರು ಈಗ ಇವರ ಮನೆಯ ಜ್ಯೋತಿಗಳಾಗಿ ಬೆಳಗುತ್ತಿರುವರು. ಇವರ ಬಾಳ್ವೆ ಆದರ್ಶವೂ ಅನುಕರಣೀಯವೂ ಆಗಿದೆ.

ದುರ್ವಾರ ಸಂಸಾರ ದುಃಖನಿವಾರಣ |
ಸರ್ವಕಲಾಧರೆ ಶಾಂತಾ ||
ನಿರ್ವಾಣಮತಿದೋರು ನಿಜದೋರು ಲೋಕೈಕಾ |
ಪೂರ್ವ ನಿರಂಜನಸಿದ್ಧಾ ||

ಹಗಲಿರುಳಿನ ಸೂರ್ಯ ಹಾರಿ ಹಾರದ ಹಂಸ |
ಹಗೆಗೆಳೆಯುಳಿದ ಹಮ್ಮೀರ ||
ಅಗಲದೆ ನನ್ನಂತರಂಗದೊಳಿರು ಬಲು |
ವಿಗಡ ಚಿದಂಬರಪುರುಷಾ ||

ಬೇತೂರು ಹೊಂಬಣ್ಣನವರು, ದಾವಣಗೆರೆ

ಬೇತೂರು ರಾಜಪ್ಪನವರು ನುಡಿತ ಪಾತ್ರೆ ವ್ಯಾಪಾರಿಗಳು. ಹೊಳಲ್ಕೆರೆ ತಾ|| ಮಲಸಿಂಗನಹಳ್ಳಿ ಲಕ್ಷ್ಮವ್ವ ಇವರ ಪ್ರಿಯತಮೆ. ಈ ದಂಪತಿಗಳಿಗೆ 1882ರಲ್ಲಿ ಹೊಂಬಣ್ಣನವರು ಜನಿಸಿದರು. ಇವರು ಕನ್ನಡ ಓದುವುದನ್ನೂ ಬರೆಯುವುದನ್ನೂ ಕಲಿತು ಅಂದಿಗೆ ವಿದ್ಯಾವಂತರೆನಿಸಿಕೊಂಡರು. ಅನಂತರ ಪಾತ್ರೆವ್ಯಾಪಾರದಲ್ಲಿ ಅನುಭವಪಡೆದರು. ಬೇತೂರು ಸಣ್ಣ ಹಳ್ಳಿ. ಹೊಂಬಣ್ಣನವರು ವ್ಯಾಪಾರವನ್ನೂ ವಿಸ್ತರಿಸಲು ದಾವಣಗೆರೆಗೆ ಬಂದರು. ಇವರ ದೂರದೃಷ್ಟಿಗೆ ಇದಕ್ಕಿಂತ ಬೇರೆ ಸಾಕ್ಷಿ ಬೇಕೆ? ದಾವಣಗೆರೆ ನಗರದಲ್ಲಿ ಇವರ ವ್ಯಾಪಾರ ಕುದುರಿತು. ಜನಪ್ರಿಯರಾದರು. ಊರಿನಲ್ಲಿ ಗಣ್ಯರೆನಿಸಿದರು. ಸ್ವಕಾರ್ಯ, ಸ್ವಾಮಿಕಾರ್ಯ ಎರಡನ್ನೂ ಸಾಧಿಸಿದರು.

ಹೊಂಬಣ್ಣನವರು ಮಲಸಿಂಗನಹಳ್ಳಿ ಬೊಮ್ಮಕ್ಕನವರನ್ನು ಮದುವೆಯಾದರು. ಇವರು ಚಾಣಾಕ್ಷರು. ಬೊಮ್ಮಕ್ಕ ಚತುರಮತಿ. ಸದ್ಗೃಹಿಣಿ ಇರುವ ತಾಣವೇ ಸ್ವರ್ಗ! ಹೊಂಬಣ್ಣನವರು ಬೊಮ್ಮಕ್ಕನಿಗೆ ಪಂಚಪ್ರಾಣವಾದರು. ಈ ಅನುಕೂಲ ದಾಂಪತ್ಯದಲ್ಲಿ ಅನಂತಚತುಷ್ಟಯ ಅವತರಿಸಿದಂತೆ ಶ್ರೀಯುತರಾದ ಬೊಮ್ಮಣ್ಣ, ಶಾಂತಣ್ಣ, ಕುಬೇರಪ್ಪ ಮತ್ತು ಶ್ರೀಮತಿ ಜಯಮ್ಮ ಈ ರೀತಿ ನಾಲ್ಕು ಜನ ಮಕ್ಕಳಾದರು. ಹೊಂಬಣ್ಣ ದಂಪತಿಗಳ ಬಾಳ್ವೆಯಲ್ಲಿ ರಂಗೇರಿದಂತಾಯಿತು. ಸಂಪತ್ತಿನಲ್ಲಿ ಸೌರಭ ಬೆರೆತಂತಾಯಿತು.

ಹೊಂಬಣ್ಣನವರು ಶ್ರೀಮಂತರಾದಂತೆ ಧರ್ಮಾತ್ಮರೂ ಆದರು. ಹಣ ಸೇರಿದಂತೆ ಇವರಲ್ಲಿ ಸದ್ಗುಣಗಳು ಉಕ್ಕಿದವು. ಇವರ ಧಾರಾಳತನವನ್ನು ಇವರ ಧರ್ಮಪತ್ನಿ ಪ್ರಚೋದಿಸಿದರು. ಪದ್ಮಾವತೀದೇವಿಯ ಜಾಗ್ರತಕ್ಷೇತ್ರವಾದ ಹುಂಚದಲ್ಲಿ ಹೊಂಬಣ್ಣನವರ ಸೇವೆ ಪ್ರತಿವರ್ಷವೂ ನಡೆಯುವುದು. ಶಿವಮೊಗ್ಗದ ಜೈನವಿದ್ಯಾರ್ಥಿನಿಲಯದಲ್ಲಿ ಊಟದ ವ್ಯವಸ್ಥೆಗೆ ಇವರು ಉದಾರವಾಗಿ ಸಹಾಯಮಾಡಿದರು. ಬಾಹುಬಲಿ ಆಶ್ರಮ (ಕೊಲ್ಹಾಪುರ ಜಿಲ್ಲೆ) ಈ ಕ್ಷೇತ್ರಕ್ಕೆ 1001/– ರೂ. ಕೊಟ್ಟಿರುವರು. ದಾವಣಗೆರೆ, ಹೊಸದುರ್ಗ, ಚಳ್ಳಕೆರೆ ಜಿನಾಲಯಗಳಿಗೆ ಇವರ ಮಕ್ಕಳು ತಮ್ಮ ತಂದೆಯ ಹೆಸರಿನಲ್ಲಿ ಸಂದರ್ಭೋಚಿತವಾಗಿ ಸಹಾಯಮಾಡಿರುವರು. ಹೊಳಲ್ಕೆರೆ ತಾಲ್ಲೂಕು ಮಲಸಿಂಗನಹಳ್ಳಿ ಜಿನಾಲಯಕ್ಕೆ ಹೊಂಬಣ್ಣನವರು ತನುಮನಧನಗಳು ಮೂರನ್ನೂ ಅರ್ಪಿಸಿ ಕೃತಾರ್ಥರಾಗಿರುವರು. ಹುಂಚದ ಹೈಸ್ಕೂಲಿಗೆ 1001/– ರೂ. ದಾನಮಾಡಿರುವರು. 'ಹೊಂಬಣ್ಣ ರಾಜಪ್ಪ ಬೇತೂರು' ಈ ಪಾತ್ರೆವ್ಯಾಪಾರದ ಸಂಸ್ಥೆಯನ್ನು ಈಗ ಇವರ ಎರಡನೆಯ ಮಕ್ಕಳಾದ ಶಾಂತಣ್ಣನವರು ನೋಡಿ

ಕೊಳ್ಳುತ್ತಿರುವರು. ತಮ್ಮ ತಂದೆಯ ಇತಿಹಾಸ ಬೆಳಕಿಗೆ ಬರಲು ಈ ಶಾಂತಣ್ಣನವರೇ ಸಹಾಯಮಾಡಿದ್ದೂ ಕೂಡ.

ಹೊಂಬಣ್ಣನವರ ಮಡದಿ ಬೊಮ್ಮಕ್ಕನವರು ಸದಾಚಾರಸಂಪನ್ನರು. ಇವರು ಅನೇಕ ನೋಂಪಿಗಳನ್ನು ಶ್ರದ್ಧೆಯಿಂದ ಆಚರಿಸಿದರು. ಅಷ್ಟಮಿ ಚತುರ್ದಶಿ ಉಪವಾಸ ಮಾಡಿ ಕರ್ಮದ ಹೊರೆಯನ್ನು ತಗ್ಗಿಸಿಕೊಂಡರು. ಸಮ್ಮೇದಗಿರಿ, ಊರ್ಜಯಂತಗಿರಿ, ಚಂಪಾನಗರ, ಪಾವಾಪುರಿ ಈ ಸಿದ್ಧಕ್ಷೇತ್ರಗಳ ದರ್ಶನ ಮಾಡಿ ಇವರು ಪುನೀತರಾದರು. ಇಂಥ ಧರ್ಮಪತ್ನಿಯನ್ನು ಪಡೆದ ಹೊಂಬಣ್ಣನವರು ಉದ್ಧಾರವಾದರು !

ಸಾರಾಸಾರವಿಚಾರಪರಾಯಣ |
ಕಾರಣಿಕಾತ್ಮ ಮಹಾತ್ಮಾ ||
ಸಾರಮತಿಯ ತೋರು ಸದ್ಗುಣಶೃಂಗಾರ ||
ಹಾರ ನಿರಂಜನಸಿದ್ಧಾ ||

ಬಯಸದೆ ನಿನ್ನ ನೋಡಿದರೆ ಮೂಲೋಕ ವಿ |
ಸ್ಮಯ ಭೋಗಗಳ ತಂದು ಕೊಡುವ ||
ನಿಯಮದುದಾರಶೀಲನೆ ನನ್ನೊಳಿರು ಸುಖ |
ಮಯನೆ ಚಿದಂಬರಪುರುಷಾ ||

ಭೋಗಸಾಗರ ಗುಣಸಾಗರ ಸುಜ್ಞಾನ |
ಸಾಗರ ಕಾಂತಿಸಾಗರನೆ ||
ಯೋಗಸಾಗರನೆ ಸನ್ಮತಿಯ ಕಾಣಿಸು ವೀತ |
ರಾಗ ನಿರಂಜನಸಿದ್ಧಾ ||

ಬೊಮ್ಮಪ್ಪ ಹೊಂಬಣ್ಣ, ಬೇತೂರು

ಬೊಮ್ಮಪ್ಪನವರು ದಾವಣಗೆರೆಯಲ್ಲಿ ಪಾತ್ರೆ ವ್ಯಾಪಾರದಲ್ಲಿ ನುರಿತ ಕೈ ಆಗಿದ್ದಾರೆ. ಚಿತ್ರದುರ್ಗ ಜಿಲ್ಲೆಯಲ್ಲೇ ಇವರಂಥ ಇನ್ನೊಬ್ಬ ವ್ಯಾಪಾರಿಯಿರಲಿಲ್ಲ. ಸುತ್ತಮುತ್ತಣ ರೈತರಿಗೆ ಇವರ ಅಂಗಡಿಯ ಪಾತ್ರೆಯ ಬಗ್ಗೆ ಮತ್ತು ಅದರ ಬೆಲೆಯ ಬಗ್ಗೆ ಖಾತ್ರಿಯಿದ್ದಿತು. ತೂಕದಲ್ಲಿ ಮೋಸವಿರಲಿಲ್ಲ, ಬೆಲೆಯಲ್ಲಿ ದುರಾಶೆಯಿರಲಿಲ್ಲ. ಇವರು ಜನತೆಯನ್ನು ದೋಚದೆ ನಿಧಾನವಾಗಿ ಶ್ರೀಮಂತರಾದರು. ರಾಜಕೀಯದಲ್ಲಿ ಇವರಿಗೆ ಅಭಿರುಚಿಯಿದ್ದರೂ ಹಿನ್ನೆಲೆಯಲ್ಲಿದ್ದು ಕೆಲಸ ಮಾಡುತ್ತಿದ್ದರು. ಎಂದೂ ಮುಂಚೂಣಿಯಲ್ಲಿ ಇವರು ಕಾಣಿಸಿಕೊಳ್ಳಲಿಲ್ಲ.

ಬೊಮ್ಮಪ್ಪನವರು ಧರ್ಮಾನುರಾಗಿಗಳು. ಹುಂಚ ಕ್ಷೇತ್ರದಲ್ಲಿ ಒಂದು ಕೋಣೆ ಕಟ್ಟಿಸಿದರು. ಬಾಹುಬಲಿ ಆಶ್ರಮಕ್ಕೆ 1001/- ರೂ., ಹುಬ್ಬಳ್ಳಿ ಜೈನವಿದ್ಯಾರ್ಥಿ ನಿಲಯಕ್ಕೆ 1001/- ರೂ, ಸಹಾಯ ಮಾಡಿರುವರು. ದಾವಣಗೆರೆ, ಹೊಸದುರ್ಗ ಜಿನಾಲಯಗಳ ಪಂಚಕಲ್ಯಾಣಗಳಿಗೂ, ದಿನನಿತ್ಯದ ಪೂಜೆಗಳಿಗೂ ಧಾರಾಳವಾಗಿ ಸಹಾಯಮಾಡಿರುವರು. ಅನ್ಯಸಮಾಜದ ಧಾರ್ಮಿಕ ಕಾರ್ಯಗಳಿಗೂ ಇವರು ಕೈ ತೊರೆದು ಹಣವನ್ನು ಕೊಟ್ಟಿರುವರು. ಜೈನಧರ್ಮವು ಇವರ ಅಂತರಂಗದಲ್ಲಿ ಮಾನವ ಧರ್ಮವಾಗಿ ರಾರಾಜಿಸಿತು!



ಬೊಮ್ಮಪ್ಪ ಹೊಂಬಣ್ಣ

ಶ್ರೀಮಂತರಾದ ಬೊಮ್ಮಪ್ಪನವರು ತನ್ನ ಬಂಧುವರ್ಗದಲ್ಲಿ ಕಡುಬಡವರಾದವರನ್ನು ಕಂಡಾಗ ಅವರಿಗಾಗಿ ಮರುಗಿರುವರು. ಕೆಲವರನ್ನು ಮನೆಯಲ್ಲಿಟ್ಟುಕೊಂಡು ವಿದ್ಯಾಭ್ಯಾಸಕ್ಕೆ ಪ್ರೋತ್ಸಾಹಕೊಟ್ಟರು. ಕೆಲವರನ್ನು ತಮ್ಮ ಅಂಗಡಿಯಲ್ಲಿಟ್ಟುಕೊಂಡು ವ್ಯಾಪಾರ ರಹಸ್ಯ ತಿಳಿಸಿದರು ಕೆಲವರಿಗೆ ಕೈಯಿಂದ ಹಣ ಹಾಕಿ ಮದುವೆ ಮಾಡಿದರು. ನೆಲಕ್ಕೆ ಬಿದ್ದ ಎಷ್ಟೋ ಮನೆತನಗಳು ಇವರ ಕೃಪಾದೃಷ್ಟಿಗೆ ಬಿದ್ದು ಮತ್ತೆ ಚಿಗಿತುಕೊಂಡವು; ಮೇಲೆದ್ದು ಮರ್ಯಾದೆಯಿಂದ ಬಾಳುವಂತಾದವು. ಇಷ್ಟಾದರು ಬೊಮ್ಮಪ್ಪನವರು ಕೀರ್ತಿಕಾಮಿಯಾಗದೆ ಎಲೆಮರೆಕಾಯಂತೆ ಬಾಳಿದರು. ಇವರು ಗುಪ್ತಭಕ್ತರು, ಗುಪ್ತದಾನಿಗಳು. ಎಲ್ಲೂ ಆಡಂಬರವಿಲ್ಲ, ಅಟ್ಟಹಾಸವಿರಲಿಲ್ಲ. ಇಂಥ ಶ್ರಾವಕರೇ ಜೈನಧರ್ಮದ ತಾಯಿಬೇರುಗಳು. ಧರ್ಮ ಬಹುಕಾಲ ಉಳಿಯುವುದು ಇಂಥವರಿಂದಲೇ ! ಭವ್ಯಾತ್ಮ ಎನ್ನುವುದೂ ಇಂಥವರನ್ನೇ.

ಬೊಮ್ಮಪ್ಪನವರು ಕಲಾಭಿಮಾನಿಗಳು. ನಾಟಕಕಾರರಿಗೆ, ಸಂಗೀತಗಾರ್ರರಿಗೆ, ಸಾಹಿತಿಗಳಿಗೆ ಇವರ ಮನೆ ಸದಾ ತೆರೆದಿತ್ತು. ಇವರ ಮನಸ್ಸು ಕಲೆಗಾರರ ಗೋಳನ್ನು ಕೇಳಿ ಕರಗುತ್ತಿತ್ತು. ಬಲಗೈ ಕೊಟ್ಟುದನ್ನು ಎಡಗೈ ಕಾಣದಂತೆ, ಎಡಗೈ ಕೊಟ್ಟುದನ್ನು ಬಲಗೈ ಕಾಣದಂತೆ ಇವರು ಸಹಾಯ ಮಾಡುತ್ತಿದ್ದರು.

ಬೇತೂರು ಹೊಂಬಣ್ಣನವರಿಗೂ ಮಲಸಿಂಗಹಳ್ಳಿ ಬೊಮ್ಮಕ್ಕನವರಿಗೂ ಬೊಮ್ಮಪ್ಪನವರು ಜ್ಯೇಷ್ಠ ಪುತ್ರರು. ಇವರು 30-3-23ರಲ್ಲಿ ಜನಿಸಿದರು. ಲೋಯರ್ ಸೆಕೆಂಡರಿ ಉತ್ತೀರ್ಣರಾಗಿ ಪರಂಪರಾಗತವಾಗಿ ಬಂದ ಪಾತ್ರೆವ್ಯಾಪಾರಕ್ಕೆ ಇವರು ಕೈ ಹಾಕಿ ಅದರಲ್ಲಿ ಪ್ರಖ್ಯಾತರಾದರು. 1944ರಲ್ಲಿ ಇವರು ಬೇತೂರಿನ ಶ್ರೀಕಾಂತಮ್ಮನವರನ್ನು ವರಿಸಿದರು. ಶ್ರೀಕಾಂತಮ್ಮನವರು ಸ್ವಭಾವತಃ ಧಾರಾಳಿಗಳು. ಈ ದಾಂಪತ್ಯದಿಂದ ಔದಾರ್ಯ ಕವಲೊಡೆದಂತಾಯಿತು. ಈ ದಂಪತಿಗಳಿಗೆ ಸಪ್ತಭಂಗಿಗಳಂತೆ ಶ್ರೀಯುತರಾದ ಸುರೇಂದ್ರಕುಮಾರ್ ಜೈನ್, ಶ್ರೀಮತಿಯರಾದ ವಸಂತಕುಮಾರಿ ಜೈನ್, ರಾಜಕುಮಾರ್ ಜೈನ್, ಪ್ರಕಾಶ್ ಜೈನ್, ಜಯಮ್ಮ ಜೈನ್, ಪ್ರಭಾಮಣಿ ಜೈನ್ ಮತ್ತು ಶಂಭುಕುಮಾರ್ ಜೈನ್ ಈ ರೀತಿ ಏಳು ಜನ ಮಕ್ಕಳಿದ್ದರು. ಬೊಮ್ಮಪ್ಪನವರು ಪಾರ್ಶ್ವವಾಯುವಿನಿಂದ ಎಂಟು ವರ್ಷ ನರಳಿ 1-4-74ರಂದು ಸ್ವರ್ಗಸ್ಥರಾದರು. ಔದಾರ್ಯದ ಕಲ್ಪವೃಕ್ಷ ನೆಲಕ್ಕುರುಳಿದಂತಾಯಿತು.

ಶ್ರೀಮತಿ ಶ್ರೀಕಾಂತಮ್ಮನವರು ಹೂವಿನ ನೋಂಪಿ ಆಚರಿಸಿರುವರು. ಅಷ್ಟಮಿ-ಚತುರ್ದಶಿ ವ್ರತ ಮಾಡಿರುವರು. ಪ್ರತಿವರ್ಷವೂ ನವಗ್ರಹಶಾಂತಿ ಮಾಡಿಸುತ್ತಿರುವರು.

ಬಿ. ಎಚ್. ಕುಬೇರಪ್ಪ, ಎಂ.ಎಸ್‌ಸಿ., ದಾವಣಗೆರೆ

ಇವರು ಹೆಸರಿಗೆ ಮಾತ್ರ ಕುಬೇರಪ್ಪ ಅಲ್ಲ; ನಿಜವಾದ ಕುಬೇರಪ್ಪ ಆಗಿದ್ದಾರೆ. 1973ರಲ್ಲಿ ಫೈನಾನ್‌ಷಿಯಲ್ ಕಾರ್ಪೊರೇಷನ್ನನ್ನು ಇವರು ಸ್ಥಾಪಿಸಿದರು. ಇದರಲ್ಲಿ ಹಣವನ್ನು ರಾಶಿಹಾಕಿದರು. ಅನಂತರ ಆವಶ್ಯಕತೆ ಇದ್ದವರಿಗೆ ಹಂಚುತ್ತಿರುವರು. ನದಿಯ ನೀರಿಗೆ ಕಟ್ಟೆಹಾಕಿ ನೀರನ್ನು ಕೆರೆಯಲ್ಲಿ ಸಂಗ್ರಹಿಸಿ ಅನಂತರ ಗದ್ದೆಗಳಿಗೆ ಹರಿಸುವ ನೀರುಗಂಟಿಯಂತೆ ಕುಬೇರಪ್ಪನವರು ದಾವಣಗೆರೆಯಲ್ಲಿ ಕೇಳಿದವರಿಗೆಲ್ಲ ಸಾಲಕೊಟ್ಟು ಆಪದ್‌ಬಾಂಧವರಾಗಿರುವರು. ಈ ಕಲ್ಪವೃಕ್ಷವನ್ನು ಕುಬೇರಪ್ಪನವರೇ ನಟ್ಟರು. ಇವರ ಸ್ನೇಹಿತವರ್ಗ ಅಪಾರ. ಎಲ್ಲರೂ ಇವರ ಗುಣಕ್ಕೆ ಮನಸೋತು ಫೈನಾನ್‌ಷಿಯಲ್ ಕಾರ್ಪೊರೇಷನ್ ಕಲ್ಪವೃಕ್ಷಕ್ಕೆ ನೀರೆರೆಯುತ್ತಿರುವರು. ಕುಬೇರಪ್ಪನವರ ದೂರದೃಷ್ಟಿಗೂ ದಕ್ಷತೆಗೂ ಕಾರ್ಯವಿಚಕ್ಷಣತೆಗೂ ಈ ಕಾರ್ಪೊರೇಷನ್ ಜೀವಂತ ಸಾಕ್ಷಿಯಾಗಿದೆ.



ಬಿ. ಎಚ್. ಕುಬೇರಪ್ಪ, ಬಿ. ವಿನೋದ

ಬೇತೂರು ಹೊಂಬಣ್ಣನವರು ದಾವಣಗೆರೆಗೆ ಬಂದು ಪಾತ್ರೆ ವ್ಯಾಪಾರ ಪ್ರಾರಂಭಿಸಿದರು. ಇವರ ಮಡದಿ ಹೊಳಲ್ಕೆರೆ ತಾಲ್ಲೂಕು ಮಲಸಿಂಗನಹಳ್ಳಿ ಮಲ್ಲೋಳ್ ಮನೆತನದ ಬೊಮ್ಮಕ್ಕನವರು. ಈ ದಂಪತಿಗಳಿಗೆ 14-5-1933ರಲ್ಲಿ ಶ್ರೀ ಕುಬೇರಪ್ಪನವರು ಜನಿಸಿದರು. ಇವರು ಬಾಲ್ಯದಿಂದಲೂ ತುಂಬ ಚೂಟಿಯಾಗಿದ್ದರು. 1953ರಲ್ಲಿ ದಾವಣಗೆರೆಯಲ್ಲಿ ಇವರು ಎಸ್.ಎಸ್.ಎಲ್.ಸಿ.

ಉತ್ತೀರ್ಣರಾಗಿ ಮೈಸೂರಿಗೆ ಹೋದರು. 1958ರಲ್ಲಿ ಬಿ.ಎಸ್‌ಸಿ. ಪದವೀಧರರಾದರು. 1963ರಲ್ಲಿ ಬೆಂಗಳೂರು ಸೆಂಟ್ರಲ್ ಕಾಲೇಜಿನಲ್ಲಿ ಇವರು ಎಂ.ಎಸ್‌ಸಿ. ಪದವೀಧರರಾದರು. ಎರಡು ವರ್ಷ ಇವರು ಕಾಲೇಜ್ ಅಧ್ಯಾಪಕರಾಗಿ ಶಿವಮೊಗ್ಗ ಮತ್ತು ಬೆಂಗಳೂರಿನಲ್ಲಿ ಕಳೆದರು. ಮುಗಿಲೆತ್ತರಕ್ಕೆ ಬೆಳೆಯಬೇಕಾದ ಈ ಚೇತನ ಗುಲಾಮಗಿರಿಯ ನೊಗವನ್ನು ತಳ್ಳಿಹಾಕಿತು. ರಾಜೀನಾಮೆ ಕೊಟ್ಟರು. ದಾಣಗೆರೆಗೆ ಬಂದು ಪಾತ್ರೆ ವ್ಯಾಪಾರಕ್ಕೆ ಕೈಹಾಕಿದರು.

ಕುಬೇರಪ್ಪನವರು ಉತ್ಸಾಹಶಾಲಿ ತರುಣರು, ಮಹತ್ವಾಕಾಂಕ್ಷಿಗಳು. 1972ರಲ್ಲಿ ಫಿಲ್ಮ್ ಡಿಸ್ಟ್ರಿಬ್ಯೂಟರ್ ಆಗಿ ದುಡಿದರು. ಸಾಮಾಜಿಕ ರಂಗವೂ ಇವರಿಗೆ ಹೊರತಾಗಿಲ್ಲ. ಜನರಲ್ ಹಾಸ್ಪಿಟಲ್‌ಗೆ ಆಗಾಗ ಹೋಗಿ ಮೇಲ್ವಿಚಾರಣೆ ನಡೆಸುವರು. ರೋಗಿಗಳ ಬಗ್ಗೆ ಇವರಿಗೆ ಅಪಾರ ಅನುಕಂಪೆಯಿದೆ. ಇವರು ಧರ್ಮಾನುರಾಗಿಗಳು. ಸರ್ವಧರ್ಮಸಮನ್ವಯದೃಷ್ಟಿಯುಳ್ಳವರು. ಲಯನ್ಸ್ ಕ್ಲಬ್ ಸದಸ್ಯರು. ಜಿನಭಕ್ತರಾದ ಇವರು ಅಜೈನ ದೇವಾಲಯಗಳಿಗೂ ಸಂದರ್ಭೋಚಿತವಾಗಿ ಸಹಾಯಮಾಡಿ ಜೈನಸಂಸ್ಕೃತಿಗೆ ಮೆರುಗುಹಾಕಿರುವರು. ದಕ್ಷಿಣ ಭಾರತದ ಎಲ್ಲ ಧರ್ಮಗಳ ಕ್ಷೇತ್ರಗಳನ್ನೂ ಇವರು ದರ್ಶನ ಮಾಡಿರುವರು. ಉತ್ತರ ಭಾರತದ ಕ್ಷೇತ್ರಗಳನ್ನು ನೋಡಬೇಕೆಂಬ ಹಂಬಲವನ್ನು ಬೆಳೆಸಿಕೊಂಡಿರುವರು. ವ್ಯಾಪಾರಕ್ಕಾಗಿ ದಕ್ಷಿಣ ಭಾರತವನ್ನೆಲ್ಲ ಸುತ್ತಾಡಿರುವರು. 1970ರಲ್ಲಿ ಮೈಸೂರು ಸೆನೆಟ್‌ಗೆ ಸ್ಪರ್ಧಿಸಿದ್ದರು.

ಕುಬೇರಪ್ಪನವರು 1963ರಲ್ಲಿ ರಾಣಿಬೆನ್ನೂರಿನ ಬಲವಂತರಾವ್ ಅಂಗಡಿ ಇವರ ಪುತ್ರಿ ವಿನೋದರವರನ್ನು ಮದುವೆಯಾದರು. ಅಕ್ಕನ ಮಗಳಾದ ಇವರ ಮೇಲೆ ಕುಬೇರಪ್ಪನವರಿಗೆ ಅಪಾರವಾದ ಪ್ರೇಮವಿದೆ. ಈ ಆದರ್ಶದಾಂಪತ್ಯ ಕುಡಿಯಿಟ್ಟಂತೆ ವೀಣಾಕುಮಾರಿ ಜನಿಸಿರುವಳು. ಇವರ ಸಂಸಾರ ಸಂಪತ್ತು ಮತ್ತು ಸಂಸ್ಕೃತಿಗಳ ಸಮ್ಮಿಲನವಾಗಿದೆ. ಇಂಥ ದಂಪತಿಗಳೇ ನಮ್ಮ ಸಮಾಜದ ಜೀವಂತ ಸಂಪದವಾಗಿರುವರು !

ಗುರುವೆ ರತ್ನಾಕರಸಿದ್ಧನ ಮನದ ಸಿಂ |
ಗರವೆ ಮತ್ತವನ ಸೌಂದರವೆ ||
ಭರತೇಶನೆದೆಯೊಳಿರ್ದಂತೆನ್ನೊಳಿರು ಪಾಪ |
ಹರನೆ ಚಿದಂಬರಪುರುಷಾ ||

ಎಂ. ಪಿ. ಬ್ರಹ್ಮಸೂರಯ್ಯ, ದಾವಣಗೆರೆ

ನೂರು ಜನ ಮಕ್ಕಳನ್ನೂ ಸೈಕಲಿನಲ್ಲಿ ಕೂರಿಸಿಕೊಂಡು ದಾವಣಗೆರೆಯಿಂದ ಗೌರಿಬಿದನೂರು ಬಳಿ ಇರುವ ಮಂಚೇನಹಳ್ಳಿ ತನಕ ಸೈಕಲ್ಲನ್ನು ತುಳಿದುಕೊಂಡು 150 ಮೈಲಿ ಪ್ರಯಾಣವನ್ನು ಮುಗಿಸಿ ಅಲ್ಲಿರುವ ಬ್ರಹ್ಮದೇವರಿಗೆ ಪೂಜೆಮಾಡಿಸುವ ಸಾಹಸ ಮತ್ತು ದಿನವೂ ಗಾಡಿಗಟ್ಟಲೆ ಬಾಳೆಹಣ್ಣು, ತೆಂಗಿನಕಾಯಿಗಳನ್ನು ಸೈಕಲಿನಲ್ಲೇ ಹೇರಿಕೊಂಡು ಬರುವ ಸಾಹಸವನ್ನು ಎಂ. ಪಿ. ಬ್ರಹ್ಮಸೂರಯ್ಯನವರು ಲೀಲಾಜಾಲವಾಗಿ ಮಾಡುತ್ತಿದ್ದರು. ಇಷ್ಟೆಲ್ಲ ಶ್ರಮ ಹೇಗೆ ಸಹಿಸುವಿರಿ ಎಂದು ಕೇಳಿದವರಿಗೆ "ಜನ್ಮಜನ್ಮಾಂತರಗಳಿಂದಲೂ ಅಷ್ಟಕರ್ಮಗಳ ಪರ್ವತಭಾರವನ್ನು ಹೊತ್ತು ಸಾಗುತ್ತಿರುವ ನನಗೆ ಇದಾವ ಮಹಾದೊಡ್ಡದು!" ಎಂದು ಬ್ರಹ್ಮಸೂರಯ್ಯನವರು ಮುಗುಳ್ನಗುತ್ತಿದ್ದರು.



ಎಂ. ಪಿ. ಬ್ರಹ್ಮಸೂರಯ್ಯ

ಮೈಸೂರು ಎಂ. ಎಲ್. ವರ್ಧಮಾನಯ್ಯನವರಿಗೆ ಆತ್ಮೀಯರಾಗಿದ್ದ ಮೋತಿಖಾನೆ ಪುಟ್ಟಣ್ಣನವರು ಇವರ ತಂದೆ. ಇಡಗೂರು ಕಡೆಯ ಮರುದೇವಮ್ಮ ಇವರ ತಾಯಿ. 1894ರಲ್ಲಿ ಬ್ರಹ್ಮಸೂರಯ್ಯನವರು ಮಂಡ್ಯದಲ್ಲಿ ಜನಿಸಿದರು. ತಮ್ಮ ಎಳಸೆಯ ವಯಸ್ಸಿನಲ್ಲಿ ತಂದೆಯನ್ನು ಕಳೆದುಕೊಂಡರು; ಹತ್ತನೆಯ ವಯಸ್ಸಿನಲ್ಲಿ ತಾಯಿಯನ್ನು

ಕಳೆದುಕೊಂಡರು. ಪಿತ್ರಾರ್ಜಿತ ಆಸ್ತಿಯನ್ನು ಈ ತಬ್ಬಲಿಯ ಕೈಗೆ ಸಿಗದಂತೆ ನಂಟರು ಇಷ್ಟರು ತಿಂದು ತೇಗಿದರು. ಇವರು ತಬ್ಬಲಿಯಾಗುವುದರ ಜೊತೆಗೆ ಅನಾಥರೂ ಆಗಬೇಕೆ? ಆಗ ಯಾರೂ ಇವರ ಸಹಾಯಕ್ಕೆ ಬರಲಿಲ್ಲ. ಮೈಸೂರಿನ ಎಂ. ಎಲ್. ಜೈನ ವಿದ್ಯಾರ್ಥಿನಿಲಯದಲ್ಲಿ ಲೋಯರ್ ಸೆಕೆಂಡರಿ ಓದಿ ಅನಂತರ ಶ್ರವಣಬೆಳಗುಳಕ್ಕೆ ಬಂದು ಮುದುಕನಹಳ್ಳಿ ಧರ್ಮಯ್ಯನವರ ಮನೆಯಲ್ಲಿ ಕೆಲವು ದಿನ ತಂಗಿ ಆಮೇಲೆ ಕನ್ನಂಬಾಡಿ ಕೆರೆ ಕಟ್ಟುವಾಗ ಅಲ್ಲಿ ಸ್ಟೋರ್‌ಕೀಪರ್ ಆಗಿ ಹೊಟ್ಟೆಹೊರೆದರು. ಇದನ್ನು ತಿಳಿದು ಎಂ. ಎಲ್. ವರ್ಧಮಾನಯ್ಯನವರು ಇವರನ್ನು ಕರೆಸಿಕೊಂಡು ಕೃಷ್ಣರಾಜೇಂದ್ರ ಮಿಲ್ಲಿನಲ್ಲಿ ಕೆಲಸ ಕೊಟ್ಟರು.

ಮೋತಿಖಾನೆ ಎಂ. ಟಿ. ಪದ್ಮನಾಭಯ್ಯನವರು ಬ್ರಹ್ಮಸೂರಯ್ಯನವರನ್ನು ಕರೆದು ಕೊಂಡುಹೋಗಿ ಇವರಿಗೆ ಇಡಗೂರಿನ ಕಮಲಮ್ಮನವರನ್ನು ತಂದು ಮದುವೆಮಾಡಿ ದರು. ಈಕೆ ಒಂದು ಹೆಣ್ಣು ಮಗುವನ್ನು ಹೆತ್ತು, ಹೆತ್ತ ಮಗುವನ್ನೂ ಕರೆದುಕೊಂಡು ಕಣ್ಮುಚ್ಚಿದರು. ಬ್ರಹ್ಮಸೂರಯ್ಯನವರು ಬೆಂಗಳೂರಲ್ಲಿ ಹೂವು ಕಟ್ಟಿ, ಮಾರಾಟಮಾಡಿ ಹೊಟ್ಟೆಹೊರೆದರು. ಕೆಲವು ದಿನ ಸುಗಂಧದ್ರವ್ಯ ಮಾರಾಟಮಾಡಿದರು. ಅನಂತರ ನಸ್ಯದ ವ್ಯಾಪಾರಮಾಡಿದರು. ಆಮೇಲೆ ಬಿನ್ನಿ ಮಿಲ್ಲಿನಲ್ಲಿ ಕೆಲಸ ದೊರೆಯಿತು. ಈ ಸಂದರ್ಭದಲ್ಲಿ ಟೈಫಾಯ್ಡ್ ಆಗಿ ಸತ್ತುಬದುಕಿದರು. ಪ್ರಿಂಟಿಂಗ್‌ನಲ್ಲಿ ಅನುಭವ ಪಡೆದು ಇವರು ತುಮಕೂರಿಗೆ ಬಂದು ಪಾರ್ಶ್ವನಾಥ ಪ್ರೆಸ್ಸನ್ನು ಸ್ಥಾಪಿಸಿದರು.

ಬ್ರಹ್ಮಸೂರಯ್ಯನವರನ್ನು ಮೂಡುಬಿದರೆ ಪಟ್ಟಾಚಾರ್ಯರು 1924ರಲ್ಲಿ ಉತ್ತರಭಾರತದ ತೀರ್ಥಕ್ಷೇತ್ರಗಳ ಯಾತ್ರೆಗೆ ಕರೆದುಕೊಂಡು ಹೋದರು. ಕೆಲವು ಕಾಲ ಇವರು ಮಠದ ಆಡಳಿತವನ್ನು ನೋಡಿಕೊಂಡು, ಸ್ವಾಮಿಗಳ ಜೊತೆ ಮತ್ತೊಮ್ಮೆ ಇವರು ಯಾತ್ರೆ ಮಾಡಿದರು. 1927ರಲ್ಲಿ ದಾವಣಗೆರೆಗೆ ಬಂದರು. ತಮ್ಮ ಬಂಧು ಗಳಿಗೆ ತಮ್ಮ ಕೈಲಿದ್ದ ಐದುನೂರು ರೂ.ಗಳನ್ನು ಕೊಟ್ಟು ಗಂಟು ಕಳೆದುಕೊಂಡರು. ರಾಮೇಶ್ವರಕ್ಕೆ ಹೋದರೂ ಶನೀಶ್ವರ ಬಿಡದು. ಮತ್ತೊಮ್ಮೆ ಇವರು ಬರಿಗೈ ಆದರು. ಅನಂತರ ಅಣಜಿಯಿಂದ ಸೈಕಲ್ ಮೇಲೆ ಹತ್ತಾರು ಬಾಳೆಗೊನೆಗಳನ್ನು ಹೇರಿ ಕೊಂಡು ಬಂದು ಮಾರಾಟ ಮಾಡುತ್ತ ಕೈತುಂಬ ಹಣ ಗಳಿಸಿದರು. ದಾವಣಗೆರೆ ದೊಡ್ಡಗಡಿಯಾರದ ಎದುರು ಪೆಟ್ಟಿಗೆ ಅಂಗಡಿ ಪ್ರಾರಂಭಿಸಿದರು. ಇಲ್ಲಿ ಇವರಿಗೆ ಲಕ್ಷ್ಮೀಕಟಾಕ್ಷ ಪ್ರಾರಂಭವಾಯಿತು.

ಬ್ರಹ್ಮಸೂರಯ್ಯನವರ ಎರಡನೆ ಹೆಂಡತಿ ತುಮಕೂರಿನ ಚಂದ್ರಪ್ಪನವರ ಮಗಳು ಸುಮಂಗಲಮ್ಮ. ಇವರು ಬ್ರಹ್ಮಸೂರಯ್ಯನವರಿಗೆ ಬಲಗೈ ಆಗಿ ಸರ್ವಕಾರ್ಯದಲ್ಲೂ ಹೆಗಲಿಗೆ ಹೆಗಲು ಕೊಟ್ಟು ದೈನ್ಯಾವಸ್ಥೆಯಲ್ಲಿದ್ದ ಪತಿದೇವನನ್ನು ಮೇಲೆತ್ತಿದರು ಎಂದು ಹೇಳಬಹುದು. ಈ ದಂಪತಿಗಳಿಗೆ ಪುಟ್ಟಣ್ಣ ಮತ್ತು ಮಹಾವೀರ ಎಂಬ ಪುತ್ರರತ್ನ ಗಳೂ, ಕಮಲಮ್ಮ, ಲಲಿತಮ್ಮ, ಇಂದ್ರಮ್ಮ, ಪುಷ್ಪಮ್ಮ ಎಂಬ ಕನ್ಯಾರತ್ನಗಳೂ ಜನಿಸಿದವು. ಇವರದು ಆದರ್ಶ ದಾಂಪತ್ಯ. 23–10–1972ರಂದು ಬ್ರಹ್ಮಸೂರಯ್ಯ ನವರು ಸ್ವರ್ಗಸ್ಥರಾಗಿ ಜೈನಸಮಾಜಕ್ಕೆ ಅಪಾರ ನಷ್ಟ ಉಂಟಾಗಿದೆ.

ಬಿ. ಎಂ. ರಾಜಕುಮಾರ್, ದಾವಣಗೆರೆ

ಹೊಳಲ್ಕೆರೆ ತಾಲ್ಲೂಕು ಮಲಸಿಂಗನಹಳ್ಳಿ ಬ್ರಹ್ಮಪ್ಪನವರ ಮಡದಿ ತೋವಿನ ಕೆರೆ ಗಂಗಮ್ಮ, ಈ ದಂಪತಿಗಳಿಗೆ ಶ್ರೀಮತಿಯರಾದ ಸುನಂದಮ್ಮ, ಸುಶೀಲಮ್ಮ, ಸರೋಜಮ್ಮ ಎಂಬ ಹೆಣ್ಣುಮಕ್ಕಳಾದಮೇಲೆ 15-5-1947ರಲ್ಲಿ ಶ್ರೀಯುತ ರಾಜಕುಮಾರ್‌ರವರು ಜನಿಸಿದರು. 1940ರಲ್ಲಿ ಬ್ರಹ್ಮಪ್ಪನವರು ದಾವಣಗೆರೆಗೆ ಬಂದು ದಿವಂಗತ ಹೊಂಬಣ್ಣನವರ ಜೊತೆಯಲ್ಲಿ ಪಾತ್ರೆವ್ಯಾಪಾರದಲ್ಲಿ ನಿರತರಾದರು. 1953ರಲ್ಲಿ ಇವರು ಹೊಳಲ್ಕೆರೆಗೆ ಬಂದು ಪಾತ್ರೆ ಅಂಗಡಿ ಪ್ರಾರಂಭಿಸಿದರು. 1952 ರಲ್ಲಿ ಗಂಗಮ್ಮನವರು ಕಾಲವಾದರು. ಮಕ್ಕಳೆಲ್ಲ ತಬ್ಬಲಿಗಳಾದವು. ಕಷ್ಟ ಒಂಟಿ ಯಾಗಿ ಬರುವುದಿಲ್ಲ. 1956ರಲ್ಲಿ ಬ್ರಹ್ಮಪ್ಪನವರೂ ವಿಧಿವಶರಾದರು. ಇವರ ಮಕ್ಕಳೆಲ್ಲ ಅನಾಥರಾದರು!



ಬಿ. ಎಂ. ರಾಜಕುಮಾರ್

ದಾವಣಗೆರೆ ಹೊಂಬಣ್ಣನವರೂ ಅವರ ಮಡದಿ ಬೊಮ್ಮಕ್ಕನವರೂ ದಯಾದ್ರ್ರಹೃದಯರು. ಬ್ರಹ್ಮಪ್ಪನವರ ಅನಾಥಶಿಶುಗಳನ್ನು ಈ ದಂಪತಿಗಳು ತಮ್ಮ ಮನೆಗೆ ಕರೆದುಕೊಂಡು ಹೋಗಿ ಸಾಕಿದರು. ಶ್ರೀಮತಿಯರಾದ ಸುನಂದಮ್ಮ ಮತ್ತು ಸುಶೀಲಮ್ಮ ಇವರ ಮದುವೆಯನ್ನು ಹೊಂಬಣ್ಣನವರೇ ನೆರವೇರಿಸಿದರು.

ಶ್ರೀಯುತ ರಾಜಕುಮಾರ್‌ರವರು ಹೊಂಬಣ್ಣನವರ ಆಶ್ರಯದಲ್ಲಿದ್ದುಕೊಂಡು ಎಸ್.ಎಸ್.ಎಲ್.ಸಿ. ತನಕ ಓದಿದರು. ತಮ್ಮ 18ನೇ ವಯಸ್ಸಿನಿಂದ 28ನೇ ವಯಸ್ಸಿನ ತನಕ ಇವರು ಹೊಂಬಣ್ಣನವರ ಪಾತ್ರೆ ಅಂಗಡಿಯಲ್ಲಿ ಮೇಲ್ವಿಚಾರಕರಾಗಿದ್ದರು. ಹೊಂಬಣ್ಣನವರೂ ಇವರ ಮಡದಿ ಬೊಮ್ಮಕ್ಕನವರೂ ಕಾಲವಾದ ಮೇಲೆ ಶ್ರೀ ರಾಜಕುಮಾರ್ ಮತ್ತೊಮ್ಮೆ ನೆಲೆಯಿಲ್ಲದಂತಾದರು!

ಶ್ರೀ ರಾಜಕುಮಾರ್‌ರವರು ತಮ್ಮ ಕಾಲಮೇಲೆ ತಾವು ನಿಲ್ಲಲು ಹಗಲುರಾತ್ರಿ ಪರಿತಪಿಸುತ್ತಿರುವರು. ಯಾರ ಹಂಗೂ ಇವರಿಗೆ ಬೇಡವಾಗಿದೆ. ಇವರು ಯಾರು ಯಾರನ್ನು ನಂಬಿದರೋ ಅವರೆಲ್ಲ ಇವರಿಗೆ ಕೈಕೊಟ್ಟರೆಂದೇ ಹೇಳಬೇಕು. ಸ್ವಂತ ಬುದ್ಧಿವಂತಿಕೆಯಿಂದ ತೋಚಿದ ವ್ಯಾಪಾರ ಮಾಡುವರು. ಬಡವಿದ್ಯಾರ್ಥಿಗಳನ್ನು ಕಂಡು ಕರಗಿಹೋಗುವರು. ಹೆಚ್ಚಾಗಿ ಗಳಿಸಬೇಕು, ಹೆಚ್ಚಾಗಿ ದಾನಧರ್ಮ ಮಾಡಬೇಕು ಎಂದು ಇವರು ಹಂಬಲಿಸುತ್ತಿರುವರು. ಮನಸ್ಸಿನಂತೆ ಮಹಾದೇವ! ಇಂದಲ್ಲ ನಾಳೆ ಒಳ್ಳೆಯ ದಿನಗಳು ಬರಬಹುದು.

ದೈವಭಕ್ತರಾದ ರಾಜಕುಮಾರ್‌ರವರು ಚಿತ್ರಕಲೆಯಲ್ಲಿ ಅಭಿರುಚಿಯನ್ನು ಬೆಳೆಸಿಕೊಂಡಿರುವರು. ತಮ್ಮ ಗಮನ ಸೆಳೆದ ಕಲಾತ್ಮಕ ವಸ್ತುಗಳನ್ನು ಎಷ್ಟೇ ಬೆಲೆಯಾಗಲಿ ಕೊಟ್ಟು ಸಂಗ್ರಹಿಸುತ್ತಿರುವರು. ಬಾಹುಬಲಿಯ ಚಿತ್ರವನ್ನು ಬರೆಯುತ್ತ ತಮ್ಮ ನೋವನ್ನೆಲ್ಲ ಮರೆಯುವರು. ಇದೂ ಒಂದು ರೀತಿಯ ಧರ್ಮಧ್ಯಾನವೇ, ದಿಟ. ಪುಣ್ಯಕ್ಷೇತ್ರಗಳನ್ನು ದರ್ಶನ ಮಾಡಲು ಅನೇಕ ಬಾರಿ ಇವರು ಕರ್ಣಾಟಕವನ್ನೆಲ್ಲ ಸುತ್ತಾಡಿರುವರು.

ಇನ್ನೂ ಬ್ರಹ್ಮಚಾರಿಯಾಗೇ ಉಳಿದಿರುವ ಶ್ರೀ ರಾಜಕುಮಾರರು ಪ್ರತಿಕೂಲ ದಾಂಪತ್ಯವನ್ನು ಕಂಡಾಗ ಮರುಗುವರು. ಗಂಡಹೆಂಡತಿಯರ ಭಿನ್ನಾಭಿಪ್ರಾಯಗಳನ್ನು ನಿವಾರಿಸಿ ಅವರ ಸಂಸಾರವನ್ನು ಬೆಸೆಯಲು ಇವರು ಸದಾ ಸಿದ್ಧ. ಇವರಂತೆ ಧ್ಯೇಯವಾದಿಗಳಾದ ಯುವಕರು ಹೆಚ್ಚಿದಷ್ಟೂ ನಮ್ಮ ಸಮಾಜದ ಹಿರಿಮೆ ಹೆಚ್ಚಾಗುವುದರಲ್ಲಿ ಸಂದೇಹವಿಲ್ಲ.

ಆಡುವ ವಿಶ್ವದಾಟವ ನಿನ್ನೊಳು ನಿಂದು |
ಬೇಡಬೇಕೆನ್ನದೆ ನಿಚ್ಚ ||
ನೋಡುವುದಾಸೀನಭಾವನೆ ಸುಮತಿಯ |
ನೀಡು ನಿರಂಜನಸಿದ್ಧಾ ||

ಕನ್ಮತ್ತಹಳ್ಳಿ ಜೀವಣ್ಣ, ದಾವಣಗೆರೆ

ಪ್ರೈಮರಿ ಶಾಲೆಯ ಅಧ್ಯಾಪಕರಾದ ಶ್ರೀ ಜೀವಣ್ಣನವರು ಬೂದಿ ಮುಚ್ಚಿದ ಕೆಂಡದಂತಿರುವರು. ಇವರಿಗೆ ಕನ್ನಡ, ಸಂಸ್ಕೃತ, ಪ್ರಾಕೃತ ಮತ್ತು ತೆಲುಗು ಭಾಷೆಗಳ ಮೇಲೆ ಪ್ರಭುತ್ವವಿದೆ. ಇವರ ತಂದೆಯವರೂ ಘನವಿದ್ವಾಂಸರಾಗಿದ್ದರು. ನೂರಾರು ಜೈನಗ್ರಂಥಗಳನ್ನು ಸಂಗ್ರಹಿಸಿದ್ದರು. ಜೀವಣ್ಣನವರು ಜೈನಸಾಹಿತ್ಯದ ಜೊತೆಗೆ ಅನ್ಯಸಾಹಿತ್ಯವನ್ನೂ ಮನೆಯಲ್ಲೇ ಅಭ್ಯಾಸಮಾಡಿದರು. 1935–37ರಲ್ಲಿ ಇವರು ಹೊಸಪೇಟೆಯಲ್ಲಿ ಟೀಚರ್ಸ್ ಟ್ರೈನಿಂಗ್ ಮಾಡಲು ತಂಗಿದ್ದಾಗ ಅಲ್ಲಿ ದೊರೆತ ಪುಸ್ತಕಗಳನ್ನೆಲ್ಲ ಓದಿದ್ದಲ್ಲದೆ ಆಗಾಗ ಬಳ್ಳಾರಿಯ ಜಿಲ್ಲಾ ಕೇಂದ್ರಪುಸ್ತಕಾಲಯಕ್ಕೂ ಭೇಟಿ ಮಾಡಿ ಅಲ್ಲಿದ್ದ ಎಲ್ಲ ಪುಸ್ತಕಗಳನ್ನೂ ಓದಿ ಮುಗಿಸಿದರು. ನಾನಾ ಭಾಷೆಗಳಲ್ಲಿ ಇವರು ಕಣ್ಣಾಡಿಸಿದ ಗ್ರಂಥಗಳನ್ನು ಲೆಕ್ಕಹಾಕಿದರೆ ಸುಮಾರು ಹತ್ತು ಸಹಸ್ರ ಪುಸ್ತಕಗಳಾಗಬಹುದು. ವಿದ್ಯಾಸಕ್ತರಾದ ಇವರು ತಮ್ಮ ಕಡಿಮೆ ಸಂಬಳದಲ್ಲೂ ಹಣವನ್ನು ಉಳಿಸಿ ಪಂಪ, ರನ್ನ, ಪೊನ್ನ, ಜನ್ನ, ನಾಗಚಂದ್ರ, ಹರಿಹರ, ರಾಘವಾಂಕ, ಕುಮಾರವ್ಯಾಸ, ಲಕ್ಷ್ಮೀಶ, ಚಾಮರಸ ಈ ಕವಿಗಳ ಕಾವ್ಯಗಳನ್ನೆಲ್ಲ ಕೊಂಡು ಸಂಗ್ರಹಿಸಿದ್ದಲ್ಲದೆ ಈಗಲೂ ಪಾರಾಯಣ ಮಾಡುತ್ತಿರುವರು.

ಶ್ರೀ ಜೀವಣ್ಣನವರು ಸಂಕೋಚಮನೋಧರ್ಮದವರು. ಇವರಿಗೆ ಪ್ರದರ್ಶನ ಬೇಕಿಲ್ಲ. ಆಡಂಬರ ಅಟ್ಟಹಾಸಗಳಿಗೆ ಇವರ ಬಳಿ ಎಡೆಯಿಲ್ಲ. ಸಾರಸ್ವತ ಸಂಪದದಲ್ಲಿ ಇವರು ಕುಬೇರರಾದರೂ ಕಡುಬಡವರಂತೆ ಲೋಕದ ಕಣ್ಣಿಗೆ ಕಾಣಿಸಿಕೊಳ್ಳುವರು. ಇವರು ಮೂರು ಶತಕಗಳನ್ನು ರಚಿಸಿದ್ದಾರೆ; ಮೂರು ಕಾದಂಬರಿಗಳನ್ನು ಬರೆದಿದ್ದಾರೆ. ಯಾವುದನ್ನೂ ಪ್ರಕಟಿಸಿಲ್ಲ. ಮನಸ್ಸು ಮಾಡಿದ್ದರೆ ಇವರು ನಮ್ಮಲ್ಲಿ ಇನ್ನೊಬ್ಬ ಮಿರ್ಜಿ ಅಣ್ಣಾರಾಯರಾಗಬಹುದಾಗಿತ್ತು! ಎಲೆಮರೆಕಾಯಾಗಿ ನಮ್ರತೆಯಿಂದಿರುವುದೇ ಇವರಿಗೆ ಹಿತವಾಗಿದೆ. ಇಂಥವರನ್ನು ಬಯಲಿಗೆಳೆಯುವುದು ಕಷ್ಟ.

ಶ್ರೀ ಜೀವಣ್ಣನವರು ತಮ್ಮ ಮಕ್ಕಳಿಗೆ ಉಚ್ಚಶಿಕ್ಷಣವನ್ನು ನೀಡಿರುವರು. ಇವರ ಹಿರಿಯ ಮಗ ಶ್ರೀ ರವೀಂದ್ರನಾಥರು ಎಂ.ಬಿ.ಬಿ.ಎಸ್. ಉತ್ತೀರ್ಣರಾಗಿ ಡಾಕ್ಟರ್ ಆಗಿರುವರು. ಇವರ ಇನ್ನೊಬ್ಬ ಮಗ ಶ್ರೀ ನೇಮಿನಾಥ್ ಬಿ.ಎಸ್ಸಿ. ಓದಿ ಟ್ಯುಟೋರಿಯಲ್ ಇಟ್ಟುಕೊಂಡು ಎಸ್.ಎಸ್.ಎಲ್.ಸಿ.ಯಿಂದ ಪ್ರಾರಂಭಿಸಿ ಡಿಗ್ರಿ ತರಗತಿಗಳ ತನಕ ವಿದ್ಯಾದಾನ ಮಾಡುತ್ತಿರುವರು.

ಶ್ರೀ ಜೀವಣ್ಣನವರ ಪೂರ್ವಜರು ರಾಯಚೂರು ಜಿಲ್ಲೆಯ ಮುದಗಲ್ ಗ್ರಾಮದ ಗೌಡರಾಗಿದ್ದರು. ಅಲ್ಲಿ ಒಮ್ಮೆ ಮುಸಲ್ಮಾನರ ಹಾವಳಿ ಅತಿಯಾಯಿತು.

ಆ ಸಂದರ್ಭದಲ್ಲಿ ಇವರ ಪೂರ್ವಜರು ಪ್ರಾಣಭಯದಿಂದ ಮುದಗಲ್ಲನ್ನು ತೊರೆದರು. ಆಸ್ತಿಪಾಸ್ತಿಗಳನ್ನು ಅಲ್ಲೇ ಬಿಟ್ಟು, ಗೌಡಪದವಿಗೂ ತಿಲಾಂಜಲಿ ಕೊಟ್ಟು ತಲೆಮರೆಸಿಕೊಂಡು ಬಂದು ಹರಪನಹಳ್ಳಿಯಲ್ಲಿ ತಂಗಿದರು. ಕೆಲಕಾಲ ಕಳೆದಮೇಲೆ ಕಮ್ಮತ್ತಹಳ್ಳಿಗೆ ಬಂದು ಸೇರಿಕೊಂಡರು. ಜಿನ್ನಪ್ಪನವರು ಇವರ ತಂದೆ. ಬೇತೂರು ಮಲ್ಲಪ್ಪನವರ ಮಗಳು ರಾಯಮ್ಮನವರು ಇವರ ತಾಯಿ. ಈ ದಂಪತಿಗಳಿಗೆ 1-7-1919ರಲ್ಲಿ ಶ್ರೀ ಜೀವಣ್ಣನವರು ಜನಿಸಿದರು.

ಶ್ರೀ ಜೀವಣ್ಣನವರು 1939ರಲ್ಲಿ ಮದರಾಸ್ ವಿಶ್ವವಿದ್ಯಾನಿಲಯದ ವಿದ್ವಾನ್ ಪರೀಕ್ಷೆಯಲ್ಲಿ ಪಾಸಾದರು. 1937ರಲ್ಲಿ ಇವರು ಹೊಳಲ್ಕೆರೆಯ ಬಸವನಕೋಟೆ ಪದ್ಮರಾಜಪ್ಪನವರ ಮಗಳು ಶ್ರೀಮತಿ ಪದ್ಮಾವತಮ್ಮನವರನ್ನು ಮದುವೆಯಾದರು. ಈ ದಂಪತಿಗಳಿಗೆ ನವಮಣಿಗಳಂತೆ ಶ್ರೀಮತಿ ಸುಲೋಚನ, ಶ್ರೀಯುತ ರವೀಂದ್ರನಾಥ್, ನೇಮಿನಾಥ್, ಶಕುಂತಳ, ವಿಜಯಕುಮಾರಿ, ಪ್ರಕಾಶ, ಪಾರ್ಶ್ವನಾಥ್, ಜೈಶೀಲ ಮತ್ತು ಲೀಲಾವತಿ ಈ ರೀತಿ ಒಂಬತ್ತು ಜನ ಮಕ್ಕಳಾದರು. ಇವರ ಮನೆಯೇ ಒಂದು ಪಾಠಶಾಲೆಯಂತೆ ಮಕ್ಕಳಿಂದ ತುಂಬಿಹೋಯಿತು!

1942ರಲ್ಲಿ ಶ್ರೀ ಜೀವಣ್ಣನವರು ಅಧ್ಯಾಪಕರಾದರು. ತಿಂಗಳಿಗೆ ಒಂಬತ್ತು ರೂಪಾಯಿ ಸಂಬಳ. ಹೊಸಪೇಟೆ ತಾಲ್ಲೂಕಿನ ನಾರಾಯಣದೇವರಕೆರೆಯಲ್ಲಿ ಇವರ ಅಧ್ಯಾಪಕವೃತ್ತಿ ಪ್ರಾರಂಭವಾಯಿತು. ಈಗ ಈ ಗ್ರಾಮ ತಂಗಭದ್ರಾ ಪ್ರಾಜೆಕ್ಟಿನಲ್ಲಿ ಮುಳುಗಡೆಯಾಗಿದೆ. ಹರಪನಹಳ್ಳಿ ತಾಲ್ಲೂಕಿನ ಕೆಲವು ಗ್ರಾಮಗಳಲ್ಲಿ ಇವರು ಉಪಾಧ್ಯಾಯರಾಗಿ ಸೇವೆ ಸಲ್ಲಿಸಿ ಈಗ ದಾವಣಗೆರೆ ನಗರದಲ್ಲಿರುವರು. ಈಗ 335 ರೂ. ಸಂಬಳ ಬರುತ್ತಿದೆ. 9 ರೂ. ಸಂಬಳವಿದ್ದಾಗ ಹಾಯಾಗಿದ್ದೆನು ಎಂದು ಜೀವಣ್ಣನವರು ಹೇಳುವರು. ಈಗ ಹಣ ಕಣ್ಣಿಗೆ ಕಂಡರೂ ಕೈಗೆ ಎಟಕುತ್ತಿಲ್ಲ ಎನ್ನುತ್ತಾರೆ.

ಶ್ರೀಮತಿ ಪದ್ಮಾವತಮ್ಮನವರು ಸದ್ಗೃಹಿಣಿಯಾಗಿ ಒಂಬತ್ತು ಜನ ಮಕ್ಕಳನ್ನು ಹೆತ್ತು ತಮ್ಮ ಗಂಡನ ಕಡಿಮೆ ಸಂಬಳದಲ್ಲಿ ಸಾಕಿ ಸಲಹಿದ್ದಾರೆ. ಎಂದೂ ಕಿರಿಕಿರಿಯಾಗದಂತೆ ಹಸನ್ಮುಖಿಗಳಾಗಿ, ಇವರು ಪುಸ್ತಕಪ್ರಿಯರಾದ ಜೀವಣ್ಣನವರ ಮನಸ್ಸಿಗೂ ನೋವಾಗದಂತೆ, ಅತ್ತ ಒಂದಾದಮೇಲೊಂದರಂತೆ ತಾವು ಪಡೆದ ಮಕ್ಕಳೂ ಬಡವಾಗದಂತೆ ಸಂಸಾರವನ್ನು ತೂಗಿಸಿಕೊಂಡು ಬಂದಿರುವುದು ಒಂದು ಪವಾಡವೇ ಸರಿ. ಇಂಥ ಸದ್ಗೃಹಿಣಿಯರೇ ನಮ್ಮ ಸಂಸ್ಕೃತಿಯ ಗಣಿಗಳಾಗಿರುವರು! ಇಂಥ ಶ್ರಾವಕಿಯರೇ ನಮ್ಮ ಸಮಾಜದ ಲಕ್ಷ್ಮಿ-ಸರಸ್ವತಿಯರೂ ಆಗಿದ್ದಾರೆ.

ಜಿ. ಶಾಂತಪ್ಪ ಬರ್ಮಪ್ಪ, ಹರಿಹರ

ಹರಿಹರ ವ್ಯಾಪಾರಕೇಂದ್ರ. ಹತ್ತಾರು ಕಡೆಯಿಂದ ಸಂಚಾರವ್ಯವಸ್ಥೆಯಿದೆ. ಇಲ್ಲಿ ಜೈನರ ಮನೆಗಳು ಕಡಿಮೆ. ಶಾಂತಪ್ಪನವರು ಉದಾರಚಿತ್ತರಾದ ಶ್ರಾವಕ ತಿಲಕರು. ಈ ದಾರಿಯಲ್ಲಿ ಬರುವ ಸಾಧುಸಂತರನ್ನು ಶಾಂತಪ್ಪನವರು ಭಕ್ತಿಯಿಂದ ತಡೆದು ಆಹಾರದಾನವಿತ್ತು ಮುಂದಿನ ಮಜಲಿಗೆ ಅವರನ್ನು ತಲುಪಿಸುವ ಪರಿಪಾಟಿ ಇಟ್ಟುಕೊಂಡಿರುವರು. ದಾಕ್ಷಿಣ್ಯಪರರಾದ ಇವರು ಕೇಳಿದವರಿಗೆ ಇಲ್ಲವೆನ್ನಲಾರರು. ದಿನವೂ ಒಬ್ಬರಲ್ಲ ಒಬ್ಬರು ಸಹಾಯಾರ್ಥವಾಗಿ ಇವರ ಬಳಿ ಬಂದೇ ಬರುವರು. ಬಂದವರಿಗೆಲ್ಲ ಇವರ ಮನೆಯಲ್ಲಿ ರಾಜೋಪಚಾರ ಅನಂತರ ಹಣಕಾಸಿನ ಸಹಾಯ. ರಪಮಪೂಜ್ಯರಾದ ಶಾಂತಿಸಾಗರರು, ಪಾಯಸಾಗರರು, ಮಹಾವೀರಕೀರ್ತಿಗಳು, ಜಯಕೀರ್ತಿಗಳು, ದೇಶಭೂಷಣರು, ಕುಲಭೂಷಣರು, ಚಾರುಕೀರ್ತಿಗಳು, ಲಲಿತ ಕೀರ್ತಿಗಳು— ಹೀಗೆ ಎಷ್ಟೋ ಜನ ತ್ಯಾಗಿಗಳ ಪಾದಧೂಳಿಯಿಂದ ಶಾಂತಪ್ಪನವರ ಮನೆ ಪುನೀತವಾಗಿದೆ. ಇವರ ಮಡದಿ ಶ್ರೀಮತಿ ಶಾಂತಿಮತಿಯವರು ತಮ್ಮ ಪತಿಯ ಕುಣಿತಕ್ಕೆ ತಾಳಹಾಕುವ ಸಾಧ್ವೀಮಣಿ. ಗಂಡ ಎಷ್ಟು ಜನರನ್ನು ಊಟಕ್ಕೆ ಕರೆದು ತಂದರೂ ಇವರು ಬೇಸರಪಡದೆ ಉತ್ಸಾಹದಿಂದಲೇ ಬಡಿಸುವರು. ಇವರ ಹಸ್ತದಲ್ಲಿ ಅಕ್ಷಯಬುದ್ಧಿ ಇರಬಹುದು. ಇವರು ಜನಿಸಿದ್ದು ಶ್ರೀಮಂತ ಮನೆತನ; ಕೈಹಿಡಿದಿದ್ದು ಕಡುಬಡವನನ್ನು. ಆದರೆ ಇವರು ಬರುತ್ತಿದ್ದಂತೆ ಶಾಂತಪ್ಪನವರ ಸಂಪದವೂ ಹೆಚ್ಚಿತು. ಸತ್‌ಸಂಪ್ರದಾಯಗಳನ್ನು ಪಾಲಿಸುತ್ತ ಈ ದಂಪತಿಗಳು ಶ್ರೀಮಂತ ರಾದರು.

ಗಡಮುಡಿ ಶಾಂತಪ್ಪನವರ ತಂದೆ ಚಿಕ್ಕೋಡಿಯ ಬರ್ಮಪ್ಪನವರು. ಇವರು ಬೀಳಗಿಯ ಬರಗಾಲಿ ಪದ್ಮಾವತಮ್ಮನನ್ನು ಮದುವೆಯಾದರು. ಹೊಟ್ಟೆಪಾಡಿಗಾಗಿ ಬರ್ಮಪ್ಪನವರು ಹರಿಹರಕ್ಕೆ ಬಂದರು. ಪಾತ್ರೆ ಮತ್ತು ಬಳೆ ವ್ಯಾಪಾರ ಪ್ರಾರಂಭಿಸಿದರು. 2-8-1909ರಲ್ಲಿ ಈ ದಂಪತಿಗಳಿಗೆ ಶಾಂತಪ್ಪನವರು ಜನಿಸಿದರು. ಇದಕ್ಕೆ ಮೊದಲೇ ಇವರಿಗೆ ತಾರವ್ವ ಎಂಬ ಕನ್ಯೆ ಜನಿಸಿದ್ದಳು.

ಶಾಂತಪ್ಪನವರು ಬಾಲ್ಯದಲ್ಲಿಯೇ ತಬ್ಬಲಿಯಾದರು. ಸೋದರಮಾವ ಇವರನ್ನು ಸಾಕಿ ಸಲಹಿದರು. ದಾವಣಗೆರೆಗೆ ರೈಲಿನಲ್ಲಿ ಹೋಗಿ ಇವರು ಎಸ್.ಎಸ್.ಎಲ್.ಸಿ. ಉತ್ತೀರ್ಣರಾದರು. ಮಾಧ್ಯಮಿಕ ಶಾಲೆ ಅಧ್ಯಾಪಕವೃತ್ತಿ ಇವರಿಗೆ ದೊರೆಯಿತು. ಬಳೆ ವ್ಯಾಪಾರವನ್ನೂ ಇವರು ಕೈಬಿಡಲಿಲ್ಲ. ಗುಲಾಮಗಿರಿ ಇವರಿಗೆ ಒಗ್ಗದಾಯಿತು. ಕೆಲಸಕ್ಕೆ ರಾಜೀನಾಮೆ ಕೊಟ್ಟು ಪೇಪರ್ ಏಜನ್ಸಿ ಪಡೆದರು. ಫಿರೋಜಬಾದಿನಿಂದ

ವಾಗಿನ್‌ಗಟ್ಟಲೆ ಬಳೆ ತರಿಸಿ ವಹಿವಾಟನ್ನು ವಿಸ್ತರಿಸಿದರು. 1942–43ರಲ್ಲಿ ಇವರನ್ನು ಬಲವಂತವಾಗಿ ಆಹ್ವಾನಿಸಿ ಬ್ಯಾಂಕಿನ ಖಜಾಂಚಿಯನ್ನಾಗಿ ಮಾಡಿಕೊಂಡರು. ತಿಂಗಳಿಗೆ 60/– ರೂ. ಸಂಬಳ. ಜೊತೆಗೆ ಬಳೆ ವ್ಯಾಪಾರವೂ ಇತ್ತು. ಕಾಸಿಗೆ ಕಾಸು ಕೂಡಿತು. ಶಾಂತಪ್ಪನವರು 1947ರಲ್ಲಿ ಪಾತ್ರೆವ್ಯಾಪಾರ ಪ್ರಾರಂಭಿಸಿದರು. ನಿಷ್ಠಾವಂತರೂ ಸತ್ಯಸಂಧರೂ ಆದ ಇವರು ಜನಪ್ರಿಯರಾದರು. ಜನತೆಯ ಸಹಕಾರದ ಜೊತೆಗೆ ಇವರ ಮಿತವ್ಯಯವೂ ಸೇರಿ ಇವರು ಶ್ರೀಮಂತರಾದರು, ಗಣ್ಯರಾದರು.

1930ರಲ್ಲಿ ಹುನಗುಂದ ತಾಲ್ಲೂಕು ಗುಡೂರಿನ ಶ್ರೀಮತಿ ಶಾಂತಿಮತಿ ಒಂದಕುದರಿಯವರೊಡನೆ ಶಾಂತಪ್ಪನವರ ವಿವಾಹವಾಯಿತು. ಒಂದಕುದರಿ ಮನೆತನ ಆಗರ್ಭಶ್ರೀಮಂತರ ಮನೆತನ. ಆದರೂ ಅಲ್ಲಿಂದ ಇವರಿಗೆ ಸಹಾಯ ದೊರೆತುದು ಕಡಿಮೆಯೇ; ಇಲ್ಲವೆಂದೂ ಹೇಳಬಹುದು. ಶಾಂತಪ್ಪನವರು ಸ್ವಾಭಿಮಾನಿಗಳು. ತಮ್ಮ ಕಾಲಮೇಲೆ ತಾವು ನಿಂತರು. ಚಾಟಿಯಿಲ್ಲದೆ ಬುಗುರಿಯಾಡಿಸಿಕೊಂಡು ನಿಧಾನವಾಗಿ ಮೇಲಕ್ಕೆ ಬಂದರು, ಸ್ವಪ್ರಯತ್ನದಿಂದ ಶ್ರೀಮಂತರಾದರು, ದುಡಿದು ದೊಡ್ಡವರಾದರು, ಗಳಿಸಿ ಗಣ್ಯರೆನಿಸಿದರು. ಈ ದಂಪತಿಗಳಿಗೆ ಷಡಾವಶ್ಯಕಗಳಂತೆ ಶ್ರೀಮತಿಯರಾದ ಪದ್ಮಾವತಿ, ವನಮಾಲ, ರುಕ್ಮಿಣಿ, ಬರ್ಮಪ್ಪ, ಇಂದುಮತಿ ಮತ್ತು ತವನಪ್ಪ ಈ ರೀತಿ ಆರು ಜನ ಮಕ್ಕಳಿರುವರು.

ಶಾಂತಪ್ಪನವರು ಭೇದವಿಜ್ಞಾನಿಗಳು; ಭಾವತಾಪಸರು; ಆತ್ಮ ಒಂದನ್ನು ಬಿಟ್ಟು ಉಳಿದುದೆಲ್ಲ ಅನ್ಯ ಎಂದು ಗ್ರಹಿಸಿರುವರು. ಹುಂಚಕ್ಷೇತ್ರದಲ್ಲಿ ಹತ್ತು ಸಹಸ್ರ ರೂ. ಖರ್ಚುಮಾಡಿ ಒಂದು ಕೋಣೆ ಕಟ್ಟಿಸಿರುವರು. ಜಿನಾಲಯಗಳ ಜೀರ್ಣೋದ್ಧಾರಕ್ಕೆ, ಪಂಚಕಲ್ಯಾಣಗಳಿಗೆ ಧಾರಾಳವಾಗಿ ಸಹಾಯಮಾಡುವರು. ಹರಿಹರದ ಮಾರ್ಗವಾಗಿ ಸಾಧುಸಂತರಿಗೆ, ಶ್ರಾವಕರಿಗೆ ಮನಸಾರೆ ಸೇವೆಮಾಡಿರುವರು. ಅನ್ನದಾನಕ್ಕಿಂತ ಇನ್ನು ದಾನವಿಲ್ಲ ಎಂದು ನಂಬಿದ್ದಾರೆ. ರಾತ್ರಿ ಮುಸುರೆ ಮುಟ್ಟುವುದಿಲ್ಲ. ಈಗ ವ್ಯಾಪಾರವನ್ನೂ ಮಕ್ಕಳಿಗೆ ವಹಿಸಿ ಸದಾ ಆತ್ಮಚಿಂತನೆಯಲ್ಲಿ ಇವರು ತನ್ಮಯರಾಗಿರುವರು. ಇವರಿಗೆ ಜ್ಞಾನದಾಹ ಹೇಳತೀರದು. ಜೈನಗ್ರಂಥಗಳು ಕಣ್ಣಿಗೆ ಬಿದ್ದರೆ ಸಾಕು ಭಕ್ತಿಯಿಂದ ಕೊಂಡುಕೊಳ್ಳುವರು. ಶ್ರದ್ಧೆಯಿಂದ ಪಾರಾಯಣ ಮಾಡುವರು. ಎಲ್ಲ ಜೈನ ಮಾಸಿಕಗಳನ್ನು ತರಿಸುವರು.

ಶಾಂತಪ್ಪ ಮತ್ತು ಶ್ರೀಮತಿ ಶಾಂತಿಮತಿ ಇವರ ದಾಂಪತ್ಯ ಅನುಕೂಲ ದಾಂಪತ್ಯ. ಇಬ್ಬರೂ ಶುಭಪರಿಣಾಮದ ಭವ್ಯಾತ್ಮರು. ಶುದ್ಧ ಪರಿಣಾಮವನ್ನು ಗಳಿಸಲು ಇಬ್ಬರೂ ಒಮ್ಮನಸ್ಸಿನಿಂದ ಹಾತೊರೆಯುತ್ತಿರುವರು.

ಜಿ. ಸಿ. ಪದ್ಮರಾಜಯ್ಯ, ಚಿತ್ರದುರ್ಗ



ಜಿ. ಸಿ. ಪದ್ಮರಾಜಯ್ಯ

ಪದ್ಮರಾಜಯ್ಯನವರು ಬಾಲ್ಯದಲ್ಲಿ ಕಡುಬಡತನ ಅನುಭವಿಸಬೇಕಾಯಿತು. ತಮ್ಮ 19ನೆಯ ವಯಃಸ್ಸಿನಲ್ಲಿ ಹೊಟ್ಟೆಪಾಡಿಗಾಗಿ ಹುಟ್ಟೂರನ್ನು ತೊರೆದರು. "ಕೆಟ್ಟು ಪಟ್ಟಣ ಸೇರು" ಎನ್ನುವಂತೆ ಇವರು ಬೆಂಗಳೂರಿಗೆ ಬಂದು ಒಂದು ವರ್ಷ ಒಂದು ಮಂಡಿಯಲ್ಲಿ ಕೆಲಸಕ್ಕೆ ಇದ್ದರು. ಕೊಡುವ ಸಂಬಳ ಹೊಟ್ಟೆಗೆ ಸಾಲದಾಯಿತು. ಊರು ಬಿಟ್ಟವನಿಗೆ ಯಾವೂರಾದರೇನು ಎಂದುಕೊಂಡು ದಾವಣಗೆರೆಗೆ ಬಂದರು. ಇಲ್ಲೂ ಯಾವ ಕೆಲಸವೂ ದೊರೆಯದೆ, ಕೊನೆಗೆ ಚಿತ್ರದುರ್ಗಕ್ಕೆ ಬರಬೇಕಾಯಿತು. ಇಲ್ಲಿ ಆಗ ಎಲೆಕೇತನಹಳ್ಳಿ ಪದ್ಮರಾಜಯ್ಯನವರು ಪ್ರಾಸಿಕ್ಯೂಟಿಂಗ್ ಇನ್‌ಸ್ಪೆಕ್ಟರ್ ಆಗಿದ್ದರು. ಇವರನ್ನು ಜಿ. ಸಿ. ಪದ್ಮರಾಜಯ್ಯನವರು ಆಶ್ರಯಿಸಿದರು. ಸ್ವಜಾತಿಯವ ಎಂಬ ಅಭಿಮಾನದಿಂದ ಇವರಿಗೆ ಕಾನ್‌ಸ್ಟೇಬಲ್ ಕೆಲಸ ಕೊಟ್ಟರು. ಆಗ ತಿಂಗಳಿಗೆ 15/– ರೂ. ಸಂಬಳ. ಹಸಿದಿದ್ದ ಇವರಿಗೆ ಆ ಮೊಬಲಗೇ ದೊಡ್ಡದಾಗಿ ಕಂಡಿತು. ಆರು ವರ್ಷ ಈ ಕೆಲಸದಲ್ಲಿದ್ದರು. ಸಾತ್ವಿಕ ಸ್ವಭಾವದ ಇವರಿಗೆ ಕಾನಸ್ಟೇಬಲ್ ವೃತ್ತಿ ಹಿಡಿಸಲಿಲ್ಲ. ಆ ವೇಳೆಗೆ ಇವರು ಬುದ್ಧಿವಂತಿಕೆಯಿಂದ ಸಂಬಳದಲ್ಲಿ ಉಳಿಸಿ ಸ್ವಲ್ಪ ಹಣವನ್ನು ಕೂಡಿಹಾಕಿದ್ದರು. ಜೊತೆಗೆ ಚಿತ್ರದುರ್ಗದ ವ್ಯಾಪಾರಿಗಳ ಸ್ನೇಹವನ್ನೂ ಬೆಳೆಸಿದ್ದರು. ಕಾನಸ್ಟೇಬಲ್ ವೃತ್ತಿಗೆ ರಾಜೀನಾಮೆ ಕೊಟ್ಟರು. ಸಣ್ಣ ಪ್ರಮಾಣದಲ್ಲಿ ವ್ಯಾಪಾರ ಪ್ರಾರಂಭಿಸಿದರು. ಕಸವನ್ನೂ ರಸವಾಗಿಸುವ ಕಲೆ ಇವರಿಗೆ

ಗೊತ್ತು. ಕಾಳುಗಳ ಹೊಟ್ಟನ್ನು ಸಂಗ್ರಹಿಸಿ ಮಾರಿದರು. ಬೀಜದ ಕಾಳನ್ನು ಬಚ್ಚಿಟ್ಟು ಬಿತ್ತನೆಗೆ ಒದಗಿಸಿದರು. ವ್ಯಾಪಾರಸ್ಥನಿಗೆ ಬೇಕಾದ ಬಂಡವಾಳವೆಂದರೆ ನಂಬಿಕೆ ಉಳಿಸಿಕೊಳ್ಳುವುದೇ ಆಗಿದೆ. ಶ್ರೀ ಜಿ. ಸಿ. ಪದ್ಮರಾಜಯ್ಯನವರು ಚಿತ್ರದುರ್ಗ ದಲ್ಲಿ ಹತ್ತುಜನಕ್ಕೆ ಬೇಕಾದವರಾಗಿದ್ದುದರಿಂದ ಇವರ ವ್ಯಾಪಾರ ಕುದುರಿತು. ಎಷ್ಟು ಬೇಕಾದರೂ ಸಾಲ ದೊರೆಯುವಂತಾಯಿತು. ಸಾವಿರವಾಗುವವರೆಗೂ ನಾವು ದುಡಿಯ ಬೇಕು; ಸಾವಿರವಾದರೆ ಅನಂತರ ಹಣವೇ ತನಗೆ ತಾನೇ ಗುಣಾಕಾರವಾಗುವುದು. 1960–61ರಲ್ಲಿ ತೊಗರಿ, ಅವರೆ, ಕಡಲೆ ಮುಂತಾದ ಕಾಳನ್ನು ರಾಶಿರಾಶಿಯಾಗಿ ಕೊಂಡು ಹೊಟ್ಟು ತೆಗೆದು ಬೇಳೆ ಮಾಡುವ ಫ್ಯಾಕ್ಟರಿಯನ್ನು ಪ್ರಾರಂಭಿಸಿದರು. ಯಂತ್ರಗಳಿಲ್ಲದೆ ಗೃಹಕೈಗಾರಿಕೆಯಾಗಿ ಇದು ಶುರುವಾಯಿತು. ಪಂಜಾಬಿನಿಂದ ಹಸಿ ಕಡಲೆಯನ್ನು ವಾಗಿನ್ನುಗಟ್ಟಲೆ ತರಿಸುವಂತಾದರು. ಕೂಲಿಗಳನ್ನು ಇಟ್ಟುಕೊಂಡು ಅದನ್ನು ಒಪ್ಪಮಾಡಿಸಿದರು. ಸೂರ್ಯೋದಯ ಡಾಲ್ ವರ್ಕ್ಸ್ ಎಂಬ ಹೆಸರಿನಿಂದ ಫ್ಯಾಕ್ಟರಿ ನಡೆಸಿದರು. 25 ಜನ ಕೂಲಿಗಳು ಹೊಟ್ಟೆಹೊರೆಯುವಂತಾಯಿತು. ಹೊಟ್ಟೆಪಾಡಿಗಾಗಿ ಊರು ತೊರೆದ ಇವರು ನೂರಾರು ಜನರಿಗೆ ಹೊಟ್ಟೆ ತುಂಬಿಸು ವಂತಾದರು. ಇದಕ್ಕಿಂತ ಸವಾಡ ಬೇಕೆ? 1966ರಲ್ಲಿ ಮಹಾವೀರ ಟ್ರೇಡಿಂಗ್ ಕಂಪನಿ ಪ್ರಾರಂಭಿಸಿದರು. ತಮ್ಮ ಹೆಂಡತಿಯ ತಮ್ಮ ಶ್ರೀ ಶ್ರೇಯಾಂಸರನ್ನು ಪಾಲು ದಾರರಾಗಿ ಸೇರಿಸಿಕೊಂಡರು. ಆಗಾಗ ಇವರ ಅಣ್ಣಂದಿರ ಮಕ್ಕಳೂ ಇಲ್ಲಿಗೆ ಬಂದು ಇವರಿಗೆ ನೆರವಾದರು. ಸುಖವನ್ನು ಹಂಚಿಕೊಂಡು ಬಾಳುವುದೇ ಶ್ರೀ ಜಿ. ಸಿ. ಪದ್ಮ ರಾಜಯ್ಯನವರ ಹುಟ್ಟುಗುಣ. ಬರಿಗೈಯಲ್ಲಿ ಊರು ತೊರೆದ ಇವರು ತಮ್ಮ ಪರೋಪಕಾರಬುದ್ಧಿಯಿಂದ ಶ್ರೀಮಂತರಾದರು; ದಯಾದಾಕ್ಷಿಣ್ಯದಿಂದ ಚಿತ್ರದುರ್ಗ ನಗರದಲ್ಲಿ ಗಣ್ಯರಾದರು.

ಗೌರಿಬಿದನೂರು ತಾಲ್ಲೂಕು ಗಂಗಸಮುದ್ರದ ಚಂದ್ರಪ್ಪನವರು ತಮಿಳು ನಾಡಿನ ಚಿತಾಂಬುರದ ಬಳಿ ಇರುವ ಈರಣೂರಿನ ಅನಂತಮ್ಮನನ್ನು ಮದುವೆ ಯಾದರು. ಕರ್ಣಾಟಕದಲ್ಲಿ ಆಗ ಜೈನಸಮಾಜದಲ್ಲಿ ಬಡವರಿಗೆ ಹೆಣ್ಣೇ ದೊರೆಯು ತ್ತಿರಲಿಲ್ಲ. ತಮಿಳುನಾಡಿನಿಂದ ಹೆಣ್ಣಿನವರಿಗೆ ದುಡ್ಡು ಕೊಟ್ಟು ಕನ್ಯೆಯನ್ನು ಕರೆದು ಕೊಂಡು ಬಂದು ಗಂಡಿನವರು ತಾವೇ ಮದುವೆ ಮಾಡಿಕೊಳ್ಳಬೇಕಾಗಿತ್ತು. ಈ ಬಡ ದಂಪತಿಗಳಿಗೆ ಚಿಕ್ಕಣ್ಣಯ್ಯ, ಬ್ರಹ್ಮಸೂರಯ್ಯ, ಪದ್ಮರಾಜಯ್ಯ, ಬೊಮ್ಮತಾಯಮ್ಮ ಈ ರೀತಿ ನಾಲ್ಕು ಮಂದಿ ಮಕ್ಕಳಾದರು. ಇವರಲ್ಲಿ ಪದ್ಮರಾಜಯ್ಯನವರು 1918ರಲ್ಲಿ ಜನಿಸಿದರು. ಗಂಗಸಮುದ್ರದಲ್ಲಿ ಪ್ರಾಥಮಿಕ ವಿದ್ಯಾಭ್ಯಾಸವನ್ನು ಪೂರೈಸಿದರು. ಅಲ್ಲಿಗೆ ಶನಿಕಾಟ ಇವರಿಗೆ ಪ್ರಾರಂಭವಾಯಿತು. ಬಡತನದ ಬವಣೆಯಲ್ಲಿ ಬೆಂದು ಕೊನೆಗೆ ಊರು ತೊರೆಯಬೇಕಾಯಿತು.

1947ರಲ್ಲಿ ಶ್ರೀ ಜಿ. ಸಿ. ಪದ್ಮರಾಜಯ್ಯನವರು ಅನಂತಪುರ ಜಿಲ್ಲೆಯ ಅಮರಾ ಪುರದ ಪದ್ಮರಾಜಯ್ಯನವರ ನಾಲ್ಕನೆಯ ಪುತ್ರಿ ಶ್ರೀಮತಿ ಸುಮಿತ್ರಮ್ಮನವರನ್ನು

ಮದುವೆಯಾದರು. ಇವರು ಭಾಗ್ಯಲಕ್ಷ್ಮಿಯಂತೆ ಗಂಡನ ಮನೆಗೆ ಬಂದರು. ಇವರು ಕಾಲಿಟ್ಟ ಘಳಿಗೆಯಿಂದ ಪದ್ಮರಾಜಯ್ಯನವರ ಬಡತನ ದೂರವಾಯಿತು. ಮದುವೆಯಾದ ಎಂಟು ವರ್ಷಕ್ಕೆ 1955ರಲ್ಲಿ ಈ ದಂಪತಿಗಳಿಗೆ ಬ್ರಾಹ್ಮಿಲಾದೇವಿ ಎಂಬ ಹೆಣ್ಣುಮಗು ಜನಿಸಿತು. ಬರಿದಾಗಿದ್ದ ಮನೆ ತುಂಬಿದಂತಾಯಿತು. ಈ ದಂಪತಿಗಳ ಬಂಜೆತನ ನೀಗಿತು. ಸಂಸಾರದಲ್ಲಿದ್ದ ಬೇಸರ ತಗ್ಗಿತು.



ಶ್ರೀಮತಿ ಸುಮಿತ್ರಮ್ಮ ಪದ್ಮರಾಜಯ್ಯ

ಶ್ರೀ ಜಿ. ಸಿ. ಪದ್ಮರಾಜಯ್ಯನವರು ಎಲ್ಲಿದ್ದರೂ ಹತ್ತುಜನಕ್ಕೆ ಬೇಕಾದವರು. ಚಿತ್ರದುರ್ಗ ಮರ್ಚೆಂಟ್ ಬ್ಯಾಂಕಿಗೆ ಸದಸ್ಯರಾಗಿರುವರು. ಇವರಲ್ಲಿ ಇದರ ಷೇರುಗಳಿವೆ. ವಿದ್ಯಾಭಿಮಾನಿಗಳಾದ ಇವರು ತಮ್ಮ ಅಣ್ಣಂದಿರ ಮಕ್ಕಳನ್ನು ಸ್ವಂತ ಖರ್ಚಿನಿಂದ ಉನ್ನತ ವ್ಯಾಸಂಗಕ್ಕೆ ಕಳಿಸಿರುವರು. ತಮ್ಮ ಮುದ್ದು ಮಗಳನ್ನು ಮೊದಲನೆಯ ವರ್ಷದ ಬಿ.ಎಸ್‌ಸಿ. ತನಕ ಓದಿಸಿ, ಮಂಡ್ಯದ ಶ್ರೀ ಸನತ್‌ಕುಮಾರಯ್ಯನವರ ಮಕ್ಕಳಾದ ಶ್ರೀ ಬ್ರಹ್ಮಸೂರಯ್ಯನವರಿಗೆ ಕೊಟ್ಟು 1972ರಲ್ಲಿ ಮದುವೆ ಮಾಡಿದರು. ಕರ್ತವ್ಯವನ್ನು ಪೂರೈಸಿ ಕೃತಕೃತ್ಯರಾಗಿರುವರು.

ಪದ್ಮರಾಜಯ್ಯನವರು ಉದಾರಿಗಳು. 1970ರಲ್ಲಿ ಕುಣಿಗಲ್ ಜಿನಾಲಯಕ್ಕೆ 2000/- ರೂ., ಹುಂಚ ಕ್ಷೇತ್ರಕ್ಕೆ 1001/- ರೂ. ದಾನಕೊಟ್ಟಿದ್ದಾರೆ. ಅಲ್ಲಲ್ಲಿ ಪಂಚಕಲ್ಯಾಣಗಳಾದಾಗ ಕೈತೊರೆದು ದಾನಮಾಡುವರು. ಊರವರ ಸಂತೋಷಕ್ಕಾಗಿ ಚಿತ್ರದುರ್ಗದಲ್ಲಿ ಪ್ರತಿವರ್ಷವೂ ದೊಡ್ಡ ಗಣಪತಿ ಸಮಾರಂಭಕ್ಕೆ ಒಂದು ದಿನದ ಖರ್ಚನ್ನು ವಹಿಸಿಕೊಳ್ಳುವರು. ಇವರ ಧರ್ಮಪತ್ನಿಯವರೂ ಸಾಮಾಜಿಕ

ಚಟುವಟಿಕೆಯಲ್ಲಿ ಹಿಂದೆ ಬಿದ್ದಿಲ್ಲ. ಊರಿನ ಅನ್ಯಸಮಾಜದ ಹೆಣ್ಣುಮಕ್ಕಳೊಡನೆ ಸೌಹಾರ್ದದಿಂದ ನಡೆದು ಜೈನಸಂಸ್ಕೃತಿಗೆ ಕೀರ್ತಿ ತಂದಿರುವರು. ಶ್ರೀಮಂತರಾದ ಈ ದಂಪತಿಗಳು ಶ್ರವಣಬೆಳಗುಳ ಕ್ಷೇತ್ರಕ್ಕೆ ಸಹಾಯಮಾಡುವ ಆಲೋಚನೆ ಇಟ್ಟುಕೊಂಡಿರುವರು.

ಭಾವ ಭೇದಿಸಿ ನೋಡಿದಾಕ್ಷಣ ಬಾಹ್ಯಚಿಂ ।
ತಾವಲಂಬನ ಮರೆಯಿಸುವ ॥
ಶ್ರೀವೀತರಾಗ ನದ್ದೆದೆಯೊಳಿರಮತ್ತೃಸ್ವ ।
ಭಾವ ಚಿದಂಬರಪುರುಷಾ ॥

ಸಂಸಾರನಾಟ್ಯವ ನೋಡುತ ಬೋಧಾವ ।
ತಂಸನಾಟ್ಯದೊಳು ನರ್ತಿಸುವ ॥
ಸಂಸುಖಿ ನನಗೆ ಸನ್ಮತಿದೋರು ದುಃಖವಿ ।
ಧ್ವಂಸಿ ನಿರಂಜನಸಿದ್ಧಾ ॥

ತಳಮೇಲು ಪೊರಗೊಳಗೆನ್ನದೆ ಸರ್ವತ ।
ತಳತಳಿಸುವ ಚಿನ್ಮಯಾಂಗಾ ॥
ಬೆಳಗೇರುತೆನ್ನಂತರಂಗದೊಳಿರು ಸುಖ ।
ಸುಲಭ ಚಿದಂಬರಪುರುಷಾ ॥

ಒಳವರಿದಾತ್ಮದೃಷ್ಟಿಯೊಳು ನೋಡಿದರೆ ಮೈ ।
ಯೊಳಗೊಂದು ಪ್ರಭೆಯೆ ಮೈಯಾಗಿ ॥
ಹೊಳೆವ ಚಿನ್ಮಯನೆ ಸನ್ಮತಿದೋರು ತ್ರಿಭುವನ ।
ತಿಲಕ ನಿರಂಜನಸಿದ್ಧಾ ॥

ಟಿ. ಎನ್. ದಶರಥಪ್ಪ, ಚಳ್ಳಕೆರೆ

ದಶರಥಪ್ಪನವರು ತಮ್ಮ 12ನೆಯ ವಯಸ್ಸಿಗೇ ತಂದೆಯನ್ನು ಕಳೆದುಕೊಂಡು ಕಷ್ಟಕಾರ್ಪಣ್ಯಕ್ಕೊಳಗಾದರು. ಇಂಥದರಲ್ಲೂ ಅವರು ಛಲದಿಂದ ಅಭ್ಯಾಸಮಾಡಿ ಚಿತ್ರದುರ್ಗದಲ್ಲಿ 1939ರಲ್ಲಿ ಎಸ್.ಎಸ್.ಎಲ್.ಸಿ. ಮಾಡಿಕೊಂಡರು. ಚಳ್ಳಕೆರೆಯ ಸಂತೆಯಲ್ಲಿ ಬೀಡಿ–ಬೆಂಕಿಪಟ್ಟಣ ಚಿಲ್ಲರೆವ್ಯಾಪಾರಮಾಡಿ ಇವರು ಹೊಟ್ಟೆಹೊರೆದರು. ತಾಯಿಯನ್ನೂ ಸೋದರರನ್ನೂ ಸಲಹಿದರು. ಚಿಲ್ಲರೆ ವ್ಯಾಪಾರದಲ್ಲೇ ಅಷ್ಟೋ ಇಷ್ಟೋ ಕೂಡಿಟ್ಟರು. 1953ರಲ್ಲಿ ಒಂದು ಲಾರಿ ತೆಗೆದುಕೊಂಡರು. ಗ್ರಹಚಾರ ಬೆನ್ನಡರಿತು. ಇವರು ಆಗ ದಿವಾಳಿಯಾದರು. ಬೆಲ್ಲದ ವ್ಯಾಪಾರಕ್ಕೆ ಕೈಹಾಕಿ ಕೈಸುಟ್ಟು ಕೊಂಡರು. ಎತ್ತ ತಿರುಗಿದರೂ ನಿರಾಶೆ ಆವರಿಸಿತು. ಎರಡು ವರ್ಷ ಊಟಕ್ಕೂ ಅಗಚಾಟಲಾಯಿತು. ಇವರು ಕಂಗೆಟ್ಟರು. ಇವರ ಮಿತ್ರರಾದ ಶ್ರೀ ಜಿ. ಕೆ. ವೀರಣ್ಣನವರು ಈ ಕಷ್ಟಕಾಲದಲ್ಲಿ ಇವರಿಗೆ ಧೈರ್ಯತುಂಬಿ ಬಂಡವಾಳ ಕೊಟ್ಟರು. ಮತ್ತೆ ಇವರು ಲಾರಿ ಕೊಂಡುಕೊಂಡು ಸಾಗಾಣಿಕೆ ಪ್ರಾರಂಭಿಸಿದರು. ಕವಿದಿದ್ದ ಮಂಕು ನಿವಾರಣೆಯಾಯಿತು. ಒಂದು ಲಾರಿ ಇದ್ದುದು ವರ್ಷವರ್ಷ ಬೆಳೆದು ಎಂಟು ಲಾರಿಗಳಾದವು. ಒಂದು ಸರ್ವೀಸ್ ಬಸ್ಸನ್ನೂ ಇಟ್ಟರು. ದಶರಥಪ್ಪ ಅಂದರೆ ಹತ್ತು ರಥಗಳುಳ್ಳವರು ಎಂದು ಅರ್ಥ. ಈಗ ಇವರ ಬಳಿ ಕಾರೂ ಸೇರಿ ಹತ್ತು ರಥಗಳಿವೆ. 1966–68ರಲ್ಲಿ ಗಣಿ ಅದುರು ಸಾಗಾಣಿಕೆಯಲ್ಲಿ ಇವರಿಗೆ ಒಂದು ಲಕ್ಷ ರೂ. ನಷ್ಟವಾಯಿತು. ಅದಕ್ಕೆ ಇವರು ಲಕ್ಷ್ಯಕೊಡಲಿಲ್ಲ. ಏಟು ಬಿದ್ದರೂ ತಡೆದುಕೊಳ್ಳುವ ಚೈತನ್ಯವಿರುವಾಗ ಏಕೆ ಹೆದರಬೇಕು ?

ಇವರ ತಂದೆ ನೇಮಿಚಂದ್ರಪ್ಪನವರು ಹೊಳಲ್ಕೆರೆ ತಾಲ್ಲೂಕು ತುಪ್ಪದಹಳ್ಳಿಯಲ್ಲಿ ವ್ಯವಸಾಯಗಾರರಾಗಿದ್ದರು. ಇವರ ತಾಯಿ ಹೊಸದುರ್ಗದ ಕಡಲೆಬೇಳೆ ಪದ್ಮರಾಜಯ್ಯನವರ ಮಗಳು ಕಮಲಮ್ಮನವರು. ಶ್ರೀ ದಶರಥಪ್ಪನವರು 1919 ಜನವರಿಯಲ್ಲಿ ಜನಿಸಿದರು. ಶ್ರೀ ನಾಗರಾಜ್, ಜಯಣ್ಣ ಇವರಿಬ್ಬರೂ ಇವರ ಸೋದರರು. ಶ್ರೀಮತಿ ಪದ್ಮಮ್ಮ ಮತ್ತು ನಾಗಮ್ಮ ಇವರ ಅಕ್ಕಂದಿರು. ದಶರಥಪ್ಪನವರು 1944ರಲ್ಲಿ ಬೆಂಗಳೂರಿನ ದೊರ್ಬಲಯ್ಯನವರ ಪುತ್ರಿ ಶ್ರೀಮತಿ ಕಾಂಚನಮಾಲರವರನ್ನು ಮದುವೆಯಾದರು. ಈ ದಂಪತಿಗಳಿಗೆ ನವರತ್ನಗಳಂತೆ ನೇಮಿರಾಜ್, ಶಾಂತಿಕುಮಾರ್, ಮಹಾವೀರ, ವಿಜಯ, ಶ್ರೇಯಾಂಸಕುಮಾರ್, ಸುರೇಶ್‌ಕುಮಾರ್, ಸುಧೇಂದ್ರ, ಗೀತ, ಕಲ್ಪನ—ಈ ರೀತಿ ಒಂಬತ್ತು ಜನ ಮಕ್ಕಳಾದರು. ಪುಣ್ಯ ಉದಯವಾದಾಗ ಎಲ್ಲವೂ ವೃದ್ಧಿಯಾಗುತ್ತಹೋಗುವುದು. ಮಕ್ಕಳು ಹೆಚ್ಚಿದಂತೆ ಇವರ ಸಂಪತ್ತೂ ಹೆಚ್ಚಿತು; ಸಂಪತ್ತು ಹೆಚ್ಚಿದಂತೆ ಇವರ ಸಂಪನ್ನತೆಯೂ ಹೆಚ್ಚಿತು. ಚಳ್ಳಕರೆಯಲ್ಲಿ ದಶರಥಪ್ಪನವರು ಗಣ್ಯರಾಗಿರುವರು; ಊರಿಗೆ ಬೇಕಾದವರಾಗಿದ್ದಾರೆ.

1941ರಲ್ಲಿ ಇವರು ಅರಣ್ಯಸತ್ಯಾಗ್ರಹದಲ್ಲಿ ಪಾಲ್ಗೊಂಡಿದ್ದರು. ನಾಡಿನ ಸ್ವಾತಂತ್ರ್ಯಸಂಗ್ರಾಮದಲ್ಲಿ ಅರಣ್ಯಸತ್ಯಾಗ್ರಹವೂ ಒಂದು ಮುಖವಾಗಿದೆ. ಈ ಸತ್ಯಾಗ್ರಹದಲ್ಲಿ ದಶರಥಪ್ಪನವರು ದಸ್ತಗಿರಿಯಾಗಿದ್ದರು. ಸ್ವಾತಂತ್ರ್ಯಸಮರದಲ್ಲಿ ಪಾಲ್ಗೊಂಡು ಇವರು ನಮ್ಮ ಸಮಾಜಕ್ಕೆ ಕೀರ್ತಿ ತಂದರು. ಆದರೆ ಹಿನ್ನೆಲೆಯ ರಾಜಕೀಯ, ಆಡಂಬರ, ಅಟ್ಟಹಾಸ ಇವರಿಗೆ ಹಿಡಿಸದು. ಸ್ನೇಹಿತರ ಬಲವಂತಕ್ಕೆ ಸಿಕ್ಕಿ ಇವರು ನಗರಸಭೆಯ ಸದಸ್ಯರಾದುದೂ ಉಂಟು.

ಶ್ರೀ ದಶರಥಪ್ಪನವರು ಉದಾರಿಗಳು. ಹಣ ಹೆಚ್ಚಿದಂತೆ ಇವರ ಸದ್ಗುಣವೂ ಹೆಚ್ಚಿತು; ಧಾರಾಳತನವೂ ಹೆಚ್ಚಿತು. ಜಿನಭಕ್ತರಾದ ಇವರು ಚಳ್ಳಕೆರೆ ಜಿನಾಲಯಕ್ಕೆ 17 ಸಾವಿರ ರೂ. ಖರ್ಚುಮಾಡಿದರು. ವಿದ್ಯಾಪ್ರೇಮಿಗಳಾದ ಇವರು ಬೆಂಗಳೂರು ನ್ಯಾಷನಲ್ ಕಾಲೇಜಿಗೆ 1000/- ರೂ. ದಾನಮಾಡಿದರು. ಹುಂಚದಲ್ಲಿ ಅಡಿಗೆಶಾಲೆ ನಿರ್ಮಾಣ ಸಮಿತಿಗೆ 1000/- ರೂ. ಸಹಾಯ ಮಾಡಿದರು. ಸಣ್ಣ ಪ್ರಮಾಣದಲ್ಲಿ ದಿನವೂ ಕೇಳಿದವರಿಗೆ ಇಲ್ಲವೆನ್ನದೆ ಅಷ್ಟೋ ಇಷ್ಟೋ ದಾನಮಾಡುತ್ತಲೇ ಇದ್ದಾರೆ. ಕೊಟ್ಟಷ್ಟೂ ಇವರ ಐಶ್ವರ್ಯ ಬೆಳೆಯುತ್ತಿದೆ.

ಇವರ ತಾಯಿ ಕಮಲಮ್ಮನವರು ಶ್ರಾವಿಕೆಯರ ಶಿರೋಮಣಿಯಾಗಿರುವರು. ಪರಮಜಿನಭಕ್ತೆಯಾದ ಇವರು ಮೂರು ಬಾರಿ ಶಿಖರಜಿ ದರ್ಶನ ಮಾಡಿ ಪುನೀತರಾಗಿರುವರು. ಇವರದು ಸಮಷ್ಟಿಕುಟುಂಬ. ತಮ್ಮ ಮಕ್ಕಳೆಲ್ಲ ಅನ್ಯೋನ್ಯವಾಗಿ ಬಾಳುತ್ತಿರುವುದನ್ನು ಕಂಡು ಈ ತಾಯಿ ಹಿಗ್ಗಿಹೋಗಿರುವರು. ದಶರಥಪ್ಪನವರ ಧರ್ಮಪತ್ನಿ ಶ್ರೀಮತಿ ಕಾಂಚನಮಾಲರವರು 1973ರಲ್ಲಿ ಭರತಖಂಡದ ಎಲ್ಲ ಜೈನಕ್ಷೇತ್ರಗಳನ್ನೂ ದರ್ಶನ ಮಾಡಿ ಬಂದರು. ದಶರಥಪ್ಪನವರಿಗೆ ಉತ್ತರ ಭಾರತದ ಯಾತ್ರೆ ಮಾಡಲು ಇನ್ನೂ ಪುರಸತ್ತಾಗಿಲ್ಲ.

ಇವರ ಮನೆ ನಂದಗೋಕುಲವಾಗಿದೆ. ಮನೆತುಂಬ ಮಕ್ಕಳು. ಇವರು ಮುಟ್ಟಿದ್ದೆಲ್ಲ ಬಂಗಾರವಾಗುತ್ತಿದೆ. ಇವರ ಸೋದರರೆಲ್ಲ ವಿನಯಶೀಲರು. ಹಿಂದೆ ಕಷ್ಟನಷ್ಟ ಕಾರ್ಪಣ್ಯಗಳಿಗೆ ತೌರುಮನೆಯಾಗಿದ್ದ ಇವರ ಮನೆ ಈಗ ಸುಖಸಮೃದ್ಧಿಯ ಆಗರವಾಗಿದೆ. ಕಲ್ಪವೃಕ್ಷ, ಕಾಮಧೇನು, ಚಿಂತಾಮಣಿ ಈ ಮೂರೂ ಇವರ ಮನೆಯಲ್ಲಿ ಬಂದು ತಂಗಿದಂತಾಗಿದೆ. ಇಂಥ ಧರ್ಮಾತ್ಮರ ಮನೆತನಗಳೇ ನಮ್ಮ ಸಮಾಜದ ನಂದನವನಗಳು.

ಕಾಟಗಲ್ಲು ಚಂದ್ರಣ್ಣ, ರಾಂಪುರ*

ಆಕಾರ ಗಿಡ್ಡ, ಬಣ್ಣ ಕಪ್ಪು, ಗುಂಡುಮುಖ; ಕಪಟವರಿಯದ ಮುಗ್ಧಭಾವ —ಇಂಥ ಚಂದ್ರಣ್ಣನವರು ಯಾರ ಗಮನಕ್ಕೂ ಬೀಳದಂತೆ ಸಭೆಸಮಾರಂಭಗಳಲ್ಲಿ ಒಂದು ಮೂಲೆ ಸೇರುವರು. ಪಂಚಕಲ್ಯಾಣಗಳಲ್ಲಿ, ರಥೋತ್ಸವಗಳಲ್ಲಿ, ಜಿನಾಲಯದ ಜೀರ್ಣೋದ್ಧಾರಗಳಲ್ಲಿ, ಮಸ್ತಕಾಭಿಷೇಕಗಳಲ್ಲಿ ತಪ್ಪದೆ ಇವರನ್ನು ಕಾಣಬಹುದು. ದೇವತಾಕಾರ್ಯಗಳಿಗೆ ಹಣಕಾಸು ಬಿಚ್ಚಲು ಶ್ರೀಮಂತರೆಲ್ಲ ಹಿಂದುಮುಂದು ನೋಡುತ್ತ ನುಣುಚಿಕೊಳ್ಳಲು ಒದ್ದಾಡುವಾಗ ಯಾವುದೋ ಮೂಲೆಯಿಂದ ಈ ಗಿಡ್ಡವ್ಯಕ್ತಿ ತಕ್ಷಣ ಮೇಲೆದ್ದು "ಹಣವಿಲ್ಲದೆ ಧರ್ಮಕಾರ್ಯ ಹೇಗೆ ನಡೆದೀತು ? ನಾನು ಒಂದು ದಿನದ ಊಟದ ಖರ್ಚು ವಹಿಸಿಕೊಳ್ಳುವೆನು ಅಥವಾ ಮೂರುಸಾವಿರ ರೂಪಾಯಿ ಕೊಡುವೆನು" ಎಂದು ಚಂದ್ರಣ್ಣನವರು ಪಟಾಕಿ ಹಾರಿಸುವರು. ಸಭೆಯೆಲ್ಲ ಅವರ ಕಡೆ ತಿರುಗಿ ನೋಡುವುದು. ಅಲ್ಲಿದ್ದ ಶ್ರೀಮಂತರೆಲ್ಲ ನಾಚಿಕೆಯಿಂದ ಕುಗ್ಗಬೇಕಾಗುವುದು. ಚಂದ್ರಣ್ಣನವರು ಆಗಮಿಸಿದ ಸಮಾರಂಭಗಳಲ್ಲಿ ಇಂಥ ಘಟನೆಗಳನ್ನು ಕಂಡು ನಾನು ಎಷ್ಟೋ ಸಲ ಬೆರಗಾಗಿರುವೆನು. ನಾವು ಔದಾರ್ಯವನ್ನು ಕಾಣಬೇಕಾದರೆ ಚಂದ್ರಣ್ಣನವರನ್ನು ಒಮ್ಮೆಯಾದರೂ ನೋಡಬೇಕು.

ರಾಂಪುರದ ಬಳಿ ಸಿರೇಕೊಳ್ಳದಲ್ಲಿ ಕಾಟಗಲ್ಲು ದೊಡ್ಡಬರ್ಮಪ್ಪ ಮತ್ತು ಶಾಂತಮ್ಮ ಎಂಬ ದಂಪತಿಗಳಿದ್ದರು. ಇವರು ಕಿರಾಣಿ ವ್ಯಾಪಾರ ಮಾಡುತ್ತಿದ್ದರು. ಈ ದಂಪತಿಗಳಿಗೆ ಪಂಚಾಸ್ತಿಕಾಯಗಳಂತೆ ಐದು ಹೆಣ್ಣುಮಕ್ಕಳಾದವು. 1921ರಲ್ಲಿ ಚಂದ್ರಣ್ಣನವರು ಈ ಸಂಸಾರದಲ್ಲಿ ಜನಿಸಿದರು. ಸಿರೇಕೊಳ್ಳದಲ್ಲೇ ಇವರು ಪ್ರಾಥಮಿಕ ವಿದ್ಯಾಭ್ಯಾಸ ಮುಗಿಸಿ ಅನಂತರ ತಂದೆಯ ವ್ಯಾಪಾರದಲ್ಲಿ ನೆರವಾದರು. ತಮ್ಮ 15ನೆಯ ವಯಸ್ಸಿನಲ್ಲಿ ಇವರು ಸಿರೇಕೊಳ್ಳವನ್ನು ತೊರೆದು ಅಲ್ಲಿಗೆ ಮೂರು ಮೈಲಿ ದೂರವಿರುವ ರಾಂಪುರಕ್ಕೆ ಬಂದು ಕಿರಾಣಿ ವ್ಯಾಪಾರ ಪ್ರಾರಂಭಿಸಿದರು. 1941ರಲ್ಲಿ ಅಮರಾಪುರದ ಡಿ. ಶಾಂತರಾಜಪ್ಪನವರ ಪುತ್ರಿ ಸುವರ್ಣಮ್ಮನವರೊಡನೆ ಇವರ ವಿವಾಹವಾಯಿತು. ವ್ಯಾಪಾರದೊಡನೆ ಇವರು ಸ್ವಂತ ವ್ಯವಸಾಯವನ್ನೂ ಪ್ರಾರಂಭಿಸಿದರು. ಗಂಡ-ಹೆಂಡತಿ ಇಬ್ಬರೂ ಒಂದಾಗಿ ಬೆಳಗಿನಿಂದ ಸಂಜೆಯತನಕ ದುಡಿದರು. ಇವರಿಬ್ಬರ ಶ್ರಮವನ್ನು ಕಂಡು ಮನಸ್ಸುಕರಗಿದ ಲಕ್ಷ್ಮಿ ಬಂದು ಇವರ ಮನೆಯಲ್ಲಿ ನೆಲಸಿದಳು. ಸಂಪನ್ನರಾದ ಇವರು ಶ್ರೀಮಂತರೂ ಆದರು.

---

*ಚಿತ್ರದುರ್ಗ ಜಿಲ್ಲೆಯ ಮೊಳಕಾಲ್ಮೂರು ತಾಲ್ಲೂಕಿನ ರಾಂಪುರ

ಈ ದಂಪತಿಗಳಿಗೆ ಅಷ್ಟಮಂಗಳದ್ರವ್ಯಗಳಂತೆ ಶಾಂತಮ್ಮ, ಕೆ. ಸಿ. ಟಿ. ಸ್ವಾಮಿ, ಸರಸ್ವತಿ ಮತ್ತು ಲಕ್ಷ್ಮಿ (ಇವರು ಅವಳಿಜವಳಿಗಳು), ಪದ್ಮರಾಜ್, ನಾಗರಾಜ್, ಪಾರ್ಶ್ವನಾಥ್, ಸುನಂದಮ್ಮ—ಈ ರೀತಿ ಎಂಟು ಜನ ಮಕ್ಕಳಾದರು. 1946ರಲ್ಲಿ ಶ್ರೀ ಚಂದ್ರಣ್ಣನವರ ತಂದೆಯವರು ಸಮ್ಮೇದಗಿರಿಯಾತ್ರೆಗೆ ಹೋದಾಗ ರಾಜಗೃಹದಲ್ಲಿ ತೀರಿಕೊಂಡರು. ಚಂದ್ರಣ್ಣನವರ ಮನೆಯ ಕಲಶ ಮುರಿದಂತಾಯಿತು! ತುಂಬಿದ ಮನೆ ದುಃಖದಲ್ಲಿ ಮುಳುಗಿತು !

ಚಂದ್ರಣ್ಣ ಮತ್ತು ಸುವರ್ಣಮ್ಮ ಇಬ್ಬರೂ ದುಡಿಮೆ–ಹಿರಿಮೆಗಳೆರಡರಲ್ಲೂ ಒಬ್ಬರಿಗೊಬ್ಬರು ಪೈಪೋಟಿಯೆಸಗಿದ್ದಾರೆ. ಇವರ ದಾಂಪತ್ಯ ಧರ್ಮದ ತಳಹದಿಯ ಮೇಲೆ ನೆಲಸಿದೆ. ಹುಂಚ ಕ್ಷೇತ್ರಕ್ಕೆ ಚಂದ್ರಣ್ಣನವರು ಅಪಾರ ಸೇವೆಯೆಸಗಿರುವರು. ಅಲ್ಲಿ ಬರುವ ಯಾತ್ರಿಕರ ಸೌಕರ್ಯಕ್ಕಾಗಿ ಒಂದು ಕೋಣೆ ಕಟ್ಟಿಸಿರುವರು. ಶ್ರೀಮಠಕ್ಕೆ ವಿದ್ಯುದ್ದೀಪವನ್ನು ಹಾಕಿಸಿರುವರು. ಅಲ್ಲಿಗೆ ಬೋಗಾರ ಬಸದಿಗೆ ಪ್ರಾಕಾರವನ್ನು ಕಟ್ಟಿಸಿರುವರು. ಹೊಸದುರ್ಗ ಜಿನಾಲಯಯದ ಪಂಚಕಲ್ಯಾಣ ಸಮಾರಂಭದಲ್ಲಿ ಇವರು ಒಂದು ದಿನದ ಅನ್ನಸಂತರ್ಪಣೆ ಮಾಡಿಸಿದರು (1969). ಚಳ್ಳಕೆರೆಯ ಜಿನಾಲಯದ ಪಂಚಕಲ್ಯಾಣಕ್ಕೆ ಹೇರಳವಾಗಿ ಸಹಾಯಮಾಡಿರುವರು. ರಾಂಪುರದ ಬಸವೇಶ್ವರ ದೇವಾಲಯಕ್ಕೆ ಧನಸಹಾಯ ಮಾಡಿ ಜೈನಸಂಸ್ಕೃತಿಗೆ ಒಪ್ಪಹಾಕಿರುವರು. ಬಳ್ಳಾರಿಯ ಜಿನಾಲಯದ ಕಲಶಸ್ಥಾಪನೆಯಾದಾಗ ಇವರು ಅನ್ನಸಂತರ್ಪಣೆ ಮಾಡಿಸಿದರು. ಹಟ್ಟಿ, ಗೋಮಟಗಿರಿ, ಮಂದರಗಿರಿ, ಹುಲುಗಿ ಈ ಜಿನಾಲಯಗಳಿಗೆ ಸಂದರ್ಭೋಚಿತವಾಗಿ ನೆರವು ನೀಡಿರುವರು. ಹಸಿದು ಬಂದವರಿಗೆ ಅನ್ನ, ಸಹಾಯ ಕೇಳಿದವರಿಗೆ ಹಣ—ಇವರ ಮನೆಯಲ್ಲಿ ಎಂದೂ ತಪ್ಪದು.

ಸಿರೇಕೊಳ್ಳ ಇವರ ಜನ್ಮಸ್ಥಳ. ಇಲ್ಲಿಯ ಜಿನಾಲಯವನ್ನು ವ್ಯವಸ್ಥೆಗೊಳಿಸಲು ಇವರು ಬದ್ಧಕಂಕಣರಾಗಿರುವರು. ಈ ಜಿನಾಲಯದ ಜೀರ್ಣೋದ್ಧಾರವನ್ನು ಇವರು ಸ್ವಂತ ಖರ್ಚಿನಿಂದ ಪೂರೈಸಿದರು. ಈ ಜಿನಾಲಯದ ಸಮಿತಿಗೆ ಇವರು ಅಧ್ಯಕ್ಷರಾಗಿರುವರು.

ಜೈನ ಗ್ರಂಥಗಳನ್ನೂ ಜೈನಸಾಹಿತಿಗಳನ್ನೂ ಕಂಡರೆ ಚಂದ್ರಣ್ಣನವರೂ ಇವರ ಪತ್ನಿ ಸುವರ್ಣಮ್ಮನವರೂ ಹಿಗ್ಗಿಹೋಗುವರು. ಗ್ರಂಥವನ್ನು ಭಕ್ತಿಯಿಂದ ಕೊಂಡುಕೊಳ್ಳುವರು. ಸಾಹಿತಿಯನ್ನು ಗೌರವದಿಂದ ಕಂಡು, ಸಾಹಿತಿಯ ಕಷ್ಟನಷ್ಟವನ್ನು ವಿಚಾರಿಸಿ, ಉದಾರವಾಗಿ ಸಹಾಯಮಾಡುವರು. ಇಂಥವರು ಊರಿಗೊಬ್ಬರಿದ್ದರೂ ಸಾಕು ಜೈನಸಾಹಿತ್ಯ ಮತ್ತು ಸಾಹಿತಿ ಇಬ್ಬರೂ ಬದುಕುವರು.

ಚಂದ್ರಣ್ಣನವರು ಇಂದು ಕೀರ್ತಿವಂತರಾಗಿರುವರು; ಊರಿಗೆ ಉಪಕಾರಿಗಳಾಗಿರುವರು. ಸುವರ್ಣಮ್ಮನವರು ಹಗಲುರಾತ್ರಿ ದುಡಿದು ಪತಿಯ ಕೀರ್ತಿಗೆ ಕಳಶವಿಟ್ಟಿದ್ದಾರೆ.

ಕೆ. ಅಜ್ಜಪ್ಪ, ಬಳ್ಳಾರಿ



ಕೆ. ಅಜ್ಜಪ್ಪ

ಅಜ್ಜಪ್ಪನವರಿಗೆ ತಮ್ಮ 18ನೆಯ ವಯಸ್ಸಿಗೇ ಶ್ರವಣಬೆಳಗುಳದ ಶ್ರೀಮತಿ ಪದ್ಮಾವತಮ್ಮನವರೊಡನೆ ಮದುವೆಯಾಯಿತು. ಕೆಲವು ದಿವಸ ಕಳೆಯುವುದರಲ್ಲಿ ಇವರ ತಂದೆ ದೇವಪ್ಪನವರು ತೀರಿಕೊಂಡರು. ಮನೆ ವಹಿವಾಟೆಲ್ಲ ಇವರ ತಲೆಯ ಮೇಲೆ ಬಿದ್ದಿತು. ಕರ್ತವ್ಯನಿಷ್ಠರಾದ ಇವರು ಕಂಗೆಡಲಿಲ್ಲ. ಸಂಸಾರದ ನೊಗಕ್ಕೆ ಹೆಗಲು ಕೊಟ್ಟರು. ಪರಂಪರಾಗತವಾಗಿ ಬಂದ ಪಾತ್ರೆವ್ಯಾಪಾರವನ್ನು ವಿಸ್ತರಿಸಿದರು. ತಮ್ಮ ತಮ್ಮಂದಿರಾದ ಶ್ರೀ ಗುಮ್ಮಟಣ್ಣನವರಿಗೆ ಮಾರ್ಗದರ್ಶನ ಮಾಡಿದರು. ಮನೆಯ ಭಾರವನ್ನು ಹೊತ್ತ ಇವರು ಮನೆ, ಬಂಗ್ಲಾಗಳು, ಗದ್ದೆ, ಆಸ್ತಿಪಾಸ್ತಿ ಸ್ವಂತ ಸಂಪಾದಿಸಿದರು. ಇವರು ರಾಷ್ಟ್ರದ ಭಾರವನ್ನೂ ಹೊರಲು ಹಿಂದುಮುಂದು ನೋಡಲಿಲ್ಲ. 1942ರಲ್ಲಿ 'ಬ್ರಿಟಿಷರೇ ತೊಲಗಿ' ಎಂಬ ಘೋಷಣೆಯನ್ನು ಕೂಗಿದರು; ದಸ್ತಗಿರಿಯಾದರು. ಅನಂತರ ರಾಜಕೀಯ ಮುಂದಾಳುಗಳಾದರು. 1953ರಲ್ಲಿ ಕರ್ನಾಟಕ ಏಕೀಕರಣಕ್ಕೆ ಇವರು ಚಳುವಳಿ ನಡೆಸಿಧರು. ಕರ್ನಾಟಕ ಏಕೀಕರಣ ಕ್ರಿಯಾ ಸಮಿತಿಯ ಕಾರ್ಯದರ್ಶಿಯಾಗಿ ಕೆಲಸ ಮಾಡಿದರು. ಮದರಾಸು ಸರ್ಕಾರ ಇವರನ್ನು ಸೆರೆಮನೆಗೆ ಕಳಿಸಿತು. ಕೆಲವು ಕಾಲ ಇವರು ಡಿ.ಸಿ.ಸಿ. ಕಾರ್ಯದರ್ಶಿಗಳಾದರು, ಉಪಾಧ್ಯಕ್ಷಸ್ಥಾನವನ್ನು ಅಲಂಕರಿಸಿದರು (1952–60).

ಅಜ್ಜಪ್ಪನವರು ತುಂಬ ದೂರದೃಷ್ಟಿಯುಳ್ಳ ಚಾಣಾಕ್ಷರು. ರಾಜಕೀಯದ ನಡುವೆಯೂ ದುಡಿಮೆಯನ್ನು ಬಿಡಲಿಲ್ಲ. ರಾಷ್ಟ್ರಹಿತಕ್ಕಾಗಿ ಸ್ವಹಿತವನ್ನು ಇವರು

ಬಲಿಗೊಡಲಿಲ್ಲ. ಎರಡನ್ನೂ ಸಮತೋಲನಗೊಳಿಸಿ ಮುಂದಿನ ಪೀಳಿಗೆಗೆ ಆದರ್ಶ ಪ್ರಾಯರಾಗಿರುವರು. 1960ರಲ್ಲಿ ಬಳ್ಳಾರಿಯಲ್ಲಿ ಪಾತ್ರೆಕೈಗಾರಿಕೆಯನ್ನು ಸ್ಥಾಪಿಸಿದರು. 1964ರಲ್ಲಿ ಶ್ರವಣಬೆಳಗುಳದಲ್ಲಿ ರೋಲಿಂಗ್ ಮಿಲ್‌ನ್ನು ಇವರು ಹಾಕಿದರು. ಮಾನ್ಯ ಮುಖ್ಯಮಂತ್ರಿಗಳಾಗಿದ್ದ ಶ್ರೀ ನಿಜಲಿಂಗಪ್ಪನವರು ಇದನ್ನು ಉದ್ಘಾಟಿಸಿದರು. ಉತ್ಪನ್ನ ಹೆಚ್ಚಬೇಕು, ಆಗಲೇ ರಾಷ್ಟ್ರದ ಉದ್ಧಾರ ಎಂದು ಇವರು ಪ್ರತಿಪಾದಿಸುವರು. ಕೈಗಾರಿಕೆಯಿಂದ ದೇಶವು ಶ್ರೀಮಂತವಾಗುವುದು ಎಂದು ಇವರು ದೃಢವಾಗಿ ನಂಬಿರುವರು.

ಅಜ್ಜಪ್ಪನವರಿಗೆ ಪಂಚಾಸ್ತಿಕಾಯುಗಳಂತೆ ಐದು ಜನ ಮಕ್ಕಳಿದ್ದಾರೆ. ಇವರಲ್ಲಿ ನಾಲ್ಕು ಮಂದಿ ಹೆಣ್ಣುಮಕ್ಕಳು. ಒಬ್ಬ ಗಂಡುಮಗ ಕೆ. ನಾಗರಾಜ್, ಡಿ.ಇ.ಇ. ಪದವೀಧರ ಆಗಿ ಕರ್ತವ್ಯನಿಷ್ಠರಾಗಿದ್ದಾರೆ. ಹೆಣ್ಣುಮಕ್ಕಳೆಲ್ಲರ ಮದುವೆಯನ್ನು ಇವರು ಮಾಡಿ ಕೃತಕೃತ್ಯರಾಗಿರುವರು. ಅತಿಥಿಅಭ್ಯಾಗತರ ಸೇವೆಯಲ್ಲಿ ಶ್ರೀಮತಿ ಪದ್ಮಾವತಮ್ಮನವರು ಉತ್ಸಾಹ ತಾಳುವರು. ಶ್ರೀ ಗೋಮಟಕ್ಷೇತ್ರದಿಂದ ಬಳ್ಳಾರಿಗೆ ಬಂದ ಇವರು ಸುತ್ತಮುತ್ತ ಜಿನಭಕ್ತಿಯನ್ನು ಹರಡಿ ಶುಭವಾತಾವರಣವನ್ನು ನಿರ್ಮಿಸಿರುವರು. ಶ್ರಾವಕಧರ್ಮದಲ್ಲಿ ನುರಿತ ಇಂಥ ಮಹಿಳಾರತ್ನಗಳೇ ನಮ್ಮ ಸಂಸ್ಕೃತಿಯ ಧ್ರುವತಾರೆಗಳು.


ಅಜ್ಜಪ್ಪನವರು 1918ರಲ್ಲಿ ಜನಿಸಿದರು. 1936ರಲ್ಲಿ ಎಸ್.ಎಸ್.ಎಲ್.ಸಿ. ಉತ್ತೀರ್ಣರಾದರು. ಮುಂದೆ ಓದಲು ಹಲವಾರು ವಿಘ್ನಗಳು ಬಂದವು. ಈ ಸಂದರ್ಭದಲ್ಲೇ ಇವರ ತಂದೆಯವರೂ ಕಾಲವಾದರು. ಇವರ ತಾಯಿ ಸಿರೇಕೊಳ್ಳದ ಪುಷ್ಪಾವತಮ್ಮನವರು ಇವರಿಗೆ ಮಾರ್ಗದರ್ಶನ ಮಾಡಿದರು. ಅಜ್ಜಪ್ಪನವರು ವಿದ್ವಾಂಸರಲ್ಲದಿದ್ದರೂ ಪುಸ್ತಕಪ್ರಿಯರಾಗಿ ಸ್ವಂತವಾಗಿ ಓದಿಕೊಂಡು ಜ್ಞಾನವೃದ್ಧರಾಗಿರುವರು. ಜಿನಪೂಜೆಗೆ ಕೊಡುವ ಮಹತ್ವವನ್ನೇ ಇವರು ಜಿನಾಗಮಕ್ಕೂ ಕೊಡುವರು. 'ಜಿನರ್ಚನಸ್ತೋತ್ರ ಸಂಗ್ರಹ'ವನ್ನು ಪ್ರಕಟಿಸಿ ಇವರು ದಾನಮಾಡಿದರು. ಶುಭಪರಿಣಾಮವನ್ನು ಸದಾ ಕಾಪಾಡಿಕೊಳ್ಳುವರು. ತಮಗೆ ಕೇಡುಬಗೆದವರನ್ನು ಮನ್ನಿಸುವ ಉತ್ತಮ ಕ್ಷಮಾಶೀಲರಾಗಿರುವರು. ಕಷ್ಟಕಾರ್ಪಣ್ಯಗಳು ಬಂದಾಗಲೂ ಸಮಚಿತ್ತವನ್ನು ಉಳಿಸಿಕೊಂಡು ಪಂಚನಮಸ್ಕಾರವನ್ನು ಜಪಿಸುತ್ತ ನಿರ್ವಿಕಾರಿಗಳಾಗಲು ಸದಾ ಪ್ರಯತ್ನಿಸುವರು. ಎರಡು ಬಾರಿ ಶಿಖರ್ಜಿ ಯಾತ್ರೆಮಾಡಿ ಪುನೀತರಾಗಿರುವರು. ಎಲ್ಲಕ್ಕಿಂತ ಹೆಚ್ಚಾಗಿ, ಪರೋಪಕಾರಿಗಳಾದ ಇವರು ಎಲ್ಲಿದ್ದರೂ ಹತ್ತು ಜನಕ್ಕೆ ಬೇಕಾದವರಾಗಿ ಬಾಳುವರು. ಸಾಧುಸಂತರ ಸೇವೆಗೆ ಸದಾ ಮುಂದಾಳಾಗಿ ನಿಲ್ಲುವರು. ಸಾಹಿತ್ಯಾರಾಧನೆಯಲ್ಲಿ ಇವರು ಮೈಮರೆಯುವರು. ಸತ್‌ಸಂಪ್ರದಾಯಗಳಿಗೆ ಗೌರವ ಕೊಟ್ಟು ಇವರು ಗೌರವಾನ್ವಿತರಾಗಿರುವರು. ಹಳ್ಳಿಯಿಂದ ದಿಳ್ಳಿಯ ತನಕ ಸ್ನೇಹಿತರನ್ನು ಪಡೆದ ಅಜ್ಜಪ್ಪನವರು ಗಣ್ಯರಲ್ಲದೆ

ಇನ್ನಾರು ಗಣ್ಯರಾಗಲು ಸಾಧ್ಯ ? ಅನೇಕ ಸಮಿತಿಗಳಲ್ಲಿ ಸದಸ್ಯರಾದ ಇವರು ಸದ್ಭಾವನಾಮೂರ್ತಿಗಳಾಗಿರುವರು.

ಧಾರ್ಮಿಕ ರಂಗದಲ್ಲೂ ಶ್ರೀ ಅಜ್ಜಪ್ಪನವರು ಶ್ರಮಿಸಿರುವರು. ತ್ರಿಕರಣ ಪೂರ್ವಕವಾಗಿ ಅಹಿಂಸಾಧರ್ಮ ಪ್ರಭಾವನೆಗಾಗಿ ಇವರ ಅಂತಃಕರಣ ಸದಾ ಹಂಬಲಿಸುವುದು. 1946ರಲ್ಲಿ ಶ್ರವಣಬೆಳಗುಳದ ಶ್ರೀಮಠಕ್ಕೆ ಇವರು ವಿದ್ಯುತ್ ದೀಪವನ್ನು ಹಾಕಿಸಿ ಜ್ಯೋತಿಯನ್ನು ಬೆಳಗಿದರು. ಈ ಮೂಲಕ ಪರಮಾತ್ಮ ಪ್ರಕಾಶಕ್ಕೆ ಇವರು ಪೀಠಿಕೆ ಹಾಕಿದರು. 1953ರಲ್ಲಿ ಶ್ರವಣಬೆಳಗುಳದ ಮಹಾಮಸ್ತಕಾಭಿಷೇಕ ಸಮಿತಿಯ ಸದಸ್ಯರಾಗಿ ಇವರು ಹಗಲುರಾತ್ರಿ ದುಡಿದರು. ಬೆಟ್ಟವನ್ನು ಹತ್ತುವ ಯಾತ್ರಿಕರಿಂದ ತಲಾ ಇಂತಿಷ್ಟು ಎಂದು ಸಂಗ್ರಹಿಸಿದರೆ ಕ್ಷೇತ್ರದ ಆದಾಯ ಹೆಚ್ಚುವುದೆಂದು ಇವರು ಹಿಂದೆಯೇ ಸೂಚಿಸಿದ್ದರು. ಜೈನ ಒಳಪಂಗಡಗಳನ್ನೆಲ್ಲ ಒಂದುಗೂಡಿಸಿ ಸಮಾಜವನ್ನು ಸಂಘಟಿಸಬೇಕೆಂದು ಮೊದಲಿಂದಲೂ ಅಜ್ಜಪ್ಪನವರು ಪ್ರಯತ್ನಿಸಿರುವರು. 1967ರಲ್ಲೂ ಮಸ್ತಕಾಭಿಷೇಕ ಸಮಿತಿಯಲ್ಲಿ ಇವರು ಪ್ರಮುಖ ಪಾತ್ರವಹಿಸಿದರು. ಈಗ ಬಳ್ಳಾರಿಯ ಜಿನಾಲಯ, ಆಸ್ತಿಪಾಸ್ತಿಗಳು ಪರಭಾರೆಯಾಗದಂತೆ ಕೋರ್ಟಿನಲ್ಲಿ ವ್ಯವಹಾರ ನಡೆಸುತ್ತಿರುವರು. ಜಿನಾಲಯದ ಜೀರ್ಣೋದ್ಧಾರಕ್ಕಾಗಿ ಶ್ರಮಿಸುತ್ತಿರುವರು. ಬಳ್ಳಾರಿ ಜಿನಾಲಯಕ್ಕೆ ಶಿಖರದ ಮೇಲೆ ಕಲಶವೇರಿಸುವಾಗ ಇವರು ವಹಿಸಿದ ಪಾತ್ರ ಚಿರಸ್ಮರಣೀಯವಾದುದು. ಸತ್ಕರ್ಮಗಳನ್ನು ಸದಾ ಮಾಡುತ್ತ ಇವರು ಜೈನಸಮುದಾಯಕ್ಕೆ ಕಲಶಪ್ರಾಯರಾಗಿರುವರು.

ಕತ್ತಲೆಯನು ಕೆಡೆಮೆಟ್ಟಿ ಪ್ರಕಾಶದ |
ಮೊತ್ತದೊಳೋಲಗಗೊಟ್ಟು ||
ಎತ್ತಲು ತೊಲಗದೆನ್ನೆದೆಯೊಳಗಿರು ಮಹೋ |
ದಾತ್ತ ಚಿದಂಬರಪುರುಷಾ ||

ಸಂಕಪ್ಪ ತವನಪ್ಪ ಅಣ್ಣಿಗೇರಿ, ಹುಬ್ಬಳಿ



ಸಂಕಪ್ಪ ಅಣ್ಣಿಗೇರಿ

ಹುಬ್ಬಳ್ಳಿ ಎಂದ ತಕ್ಷಣ ನಮ್ಮ ನೆನಪಿಗೆ ಬರುವುದು ಶ್ರೀ ಎಸ್. ಟಿ. ಅಣ್ಣಿಗೆರಿಯವರ ಉಜ್ವಲ ವ್ಯಕ್ತಿತ್ವ. ಇವರು ಒಬ್ಬ ವ್ಯಕ್ತಿಯಲ್ಲ, ಒಂದು ಶಕ್ತಿಯಾಗಿರುವರು. ಸಂಘಟನಾಚತುರರಾದ ಇವರು ನಗರದ ಜೈನಸಮಾಜವನ್ನು ಸಂಘಟಿಸಿ ರಚನಾತ್ಮಕ ಯೋಜನೆಗಳನ್ನು ರೂಪಿಸಿ ಹುಬ್ಬಳ್ಳಿಯನ್ನು ಜೈನ ಜಾಗ್ರತ ಕ್ಷೇತ್ರವನ್ನಾಗಿ ಮಾಡಿರುವರು. ಇಲ್ಲಿಗೆ ಬರುವ ಸಾಹಿತಿಗಳಿಗೆ, ಶಾಸ್ತ್ರಿಗಳಿಗೆ, ಧರ್ಮಪ್ರಚಾರಕರಿಗೆ ಅಣ್ಣಿಗೇರಿಯವರು ಆಶ್ರಯ ನೀಡಿ ಮಾರ್ಗದರ್ಶನ ಮಾಡುವರು. 'ಅಸಾಧ್ಯ' ಎನ್ನುವ ಪದಕ್ಕೆ ಇವರ ಬಳಿ ಸ್ಥಳವಿಲ್ಲ. ಒಟ್ಟಿನಲ್ಲಿ ಹುಬ್ಬಳ್ಳಿಯ ಜೈನಸಮಾಜಕ್ಕೆ ಶ್ರೀ ಎಸ್.ಟಿ. ಅಣ್ಣಿಗೇರಿಯವರು ಶ್ವಾಸಕೋಶವಾಗಿರುವರು.

1965ರಲ್ಲಿ ಹುಬ್ಬಳ್ಳಿಯಲ್ಲಿ ಮಹಾವೀರ ಮಿಷನ್ನಿನವರು ಏರ್ಪಡಿಸಿದ ಅಖಿಲ ಕರ್ನಾಟಕ ಜೈನ ಸಮ್ಮೇಳನ ಯಶಸ್ವಿಯಾದುದು ಶ್ರೀ ಎಸ್. ಟಿ. ಅಣ್ಣಿಗೇರಿಯವರ ಕಾರ್ಯಪಟುತ್ವದಿಂದಲೇ. ಆಗ ಇವರ ಕಾರ್ಯದಕ್ಷತೆಗೆ ಮೆಚ್ಚಿ ಜೈನಸಮಾಜ ಇವರಿಗೆ ಸುವರ್ಣಪದಕವನ್ನು ಬಹುಮಾನವಾಗಿ ಕೊಟ್ಟುದನ್ನು ನೆನೆದರೆ ರೋಮಾಂಚನವಾಗದಿರದು. ಹುಬ್ಬಳ್ಳಿಯ ಸುತ್ತಮುತ್ತ ಇರುವ ಹಳ್ಳಿಗಳಿಗೆ ಇವರು ಧರ್ಮಪ್ರಚಾರಕರೊಡನೆ ಹೋಗಿ ಆಗಾಗ ಸಂಸ್ಕೃತಿಪ್ರಸಾರ ಮಾಡುತ್ತ ಧಮಪ್ರಭಾವನೆ ಮಾಡುತ್ತಿರುವರು. 1973ರಲ್ಲಿ ಹುಬ್ಬಳ್ಳಿಯಲ್ಲಿ ಬೇಸಿಗೆ ಶಿಬಿರವನ್ನು ಏರ್ಪಡಿಸಿ ನೂರಾರು ಜನ ಮಕ್ಕಳಲ್ಲಿ ಇವರು ಧರ್ಮಜಾಗೃತಿಯನ್ನು ತಂದಿರುವರು. 1973ರಲ್ಲಿ ಹುಬ್ಬಳ್ಳಿ

ಜೈನವಿದ್ಯಾರ್ಥಿನಿಲಯುದಲ್ಲಿ ಧರ್ಮಸ್ಥಳದ ಧರ್ಮಾಧಿಕಾರಿಗಳಾದ ಪೂಜ್ಯ ವೀರೇಂದ್ರ ಹೆಗ್ಗಡೆಯವರನ್ನು ಜೈನಸಮಾಜ ಸತ್ಕರಿಸಿ ತನ್ನ ಹಿರಿಮೆಗೆ ಕಳಶವೇರಿಸಿಕೊಂಡಿತು. ಈ ಸಮಾರಂಭದ ಪ್ರಚೋದನಾಶಕ್ತಿಯೆಂದರೆ ಶ್ರೀ ಅಣ್ಣಿಗೇರಿಯವರೇ. ಇವೆಲ್ಲಕ್ಕಿಂತ ಮಿಗಿಲಾಗಿ ಹುಬ್ಬಳ್ಳಿಯ ಜೈನವಿದ್ಯಾರ್ಥಿನಿಲಯವನ್ನು ಜೀರ್ಣೋದ್ಧಾರ ಮಾಡಿ ಇಂದು ನೂರಾರು ಜನ ಬಡವಿದ್ಯಾರ್ಥಿಗಳಿಗೆ ಜ್ಞಾನದೇಗುಲವನ್ನಾಗಿ ಮಾಡಿದ ಮಹಾ ಶಿಲ್ಪಿ ನಮ್ಮ ಅಣ್ಣಿಗೇರಿಯವರು. ದಿನೇದಿನೇ ಈ ಕಲ್ಪವೃಕ್ಷ ವೃದ್ಧಿಯಾಗಿ ಗಗನ ಚುಂಬಿಯಾಗುತ್ತ ಇವರ ಉಜ್ವಲ ಸಂಘಟನಾಶಕ್ತಿಗೂ ರಚನಾತ್ಮಕ ಕ್ರಿಯಾಶೀಲ ತೆಗೂ ಜೀವಂತಸಾಕ್ಷಿಯಾಗಿದೆ.

ಶಿಗ್ಗಾಂವಿ ತಾಲೂಕಿನ ತಡಸ ಗ್ರಾಮದ ಶ್ರೀ ತವನಪ್ಪನವರು ಇವರ ತಂದೆ. ಶ್ರೀಮತಿ ಸರಸ್ವತವ್ವ ಕಲಘಟಗಿಯವರು ಇವರ ತಾಯಿ. 29-5-1929ರಲ್ಲಿ ಮಧ್ಯಮ ವರ್ಗದಲ್ಲಿ ಜನಿಸಿದ ಅಣ್ಣಿಗೇರಿಯವರು ಪ್ರತಿಕೂಲಗಳನ್ನೆಲ್ಲ ಎದುರಿಸಿ ಬಿ.ಕಾಂ. ಉತ್ತೀರ್ಣರಾಗಿ ವರಮಾನ ಮತ್ತು ವಾಣಿಜ್ಯ ತೆರಿಗೆಗಳ ಸಲಹೆಗಾರರಾಗಿ ಹುಬ್ಬಳ್ಳಿ ಯಲ್ಲಿ ಯಶಸ್ವಿಯಾದರು; ಉದ್ಯೋಗಪತಿಗಳಿಗೆ ಊರುಗೋಲಾದರು; ಶ್ರೀಮಂತ ವರ್ಗದ ವಹಿವಾಟುಗಳಿಗೆ ಇವರು ಮಾರ್ಗದರ್ಶಕರಾದರು. ಜನಪ್ರಿಯರಾದ ಇವರು ತಮ್ಮ ಚಾಕಚಕ್ಯತೆಯನ್ನೂ ಪ್ರಭಾವವನ್ನೂ ಸಮಾಜದ ಹಿತಕ್ಕಾಗಿ ವಿನಿಯೋಗಿ ಸುತ್ತಿರುವರು. ಸಮಾಜದ ಆರ್ಥಿಕ ಬಿಕ್ಕಟ್ಟನ್ನು ಬಿಡಿಸಲು ಹನ್ನೆರಡು ಜಿಲ್ಲೆಯ ವ್ಯಾಪಕವುಳ್ಳಂಥ ವರ್ಧಮಾನ ಬ್ಯಾಂಕನ್ನು ಸ್ಥಾಪಿಸಲು ಸಂಕಲ್ಪ ತೊಟ್ಟಿರುವರು. ಅದಮ್ಯವಾದ ದೃಢಸಂಕಲ್ಪದಿಂದ ಇವರು ಕಾರ್ಯತತ್ಪರರಾದರೆಂದರೆ ಎದುರಾಳಿಗಳೆಲ್ಲ ತರಗೆಲೆಯಂತೆ ಗಾಳಿಯಲ್ಲಿ ತೂರಿಹೋಗುವರು. ಇವರನ್ನು ಜನ 'ಬುಲ್‌ಡೋಜರ್' ಎಂದೇ ಕರೆಯುವರು.

ಶ್ರೀ ಅಣ್ಣಿಗೇರಿಯವರು ವ್ಯಾಪಾರದಲ್ಲೂ ಪರಿಣತರು. ಇವರು ಕೆಲವು ಪಾಲು ದಾರಿಕೆ ಸಂಸ್ಥೆಗಳನ್ನು ಸ್ಥಾಪಿಸಿದ್ದಲ್ಲದೆ ತಾವೂ ಪಾಲುದಾರರಾಗಿ ಉದ್ಯಮವನ್ನು ಬೆಳೆಸುತ್ತಿರುವರು. ಸಾಮಾಜಿಕ ಹಾಗೂ ಧಾರ್ಮಿಕ ಚಟುವಟಿಕೆಗಳು ಇವರಿಗೆ ಉಸಿ ರಾಟವಿದ್ದಂತೆ. (1) ಗಾಂಧಿ ಶಿಕ್ಷಣಸಮಿತಿ, ತಡಸ, (2) ಜೈನ ಬೋರ್ಡಿಂಗ್ ಸಮಿತಿ, ಹುಬ್ಬಳ್ಳಿ, (4) ಕರ್ನಾಟಕ ವಾಣಿಜ್ಯೋದ್ಯಮಸಂಸ್ಥೆ, (5) ಧಾರವಾಡ ಜಿಲ್ಲಾ ಸಣ್ಣ ಕೈಗಾರಿಕೆಗಳ ಸಂಘ, (6) ಮಹಾವೀರ ಮಿಷನ್, ಬೆಂಗಳೂರು, (7) ಮಹಾವೀರ ಎಜುಕೇಷನ್ ಸೊಸೈಟಿ, ಹುಬ್ಬಳ್ಳಿ, (8) ದಕ್ಷಿಣ ಭಾರತ ಜೈನಸಭೆ, ಕೊಲ್ಹಾಪುರ, (9) ಮಹಾವೀರಸ್ವಾಮಿ ನಿರ್ವಾಣೋತ್ಸವ ಸಮಿತಿ, ಬೆಳಗಾಂ ವಿಭಾಗ—ಈ ರೀತಿ ನಾಡಿನ ಉದ್ದಗಲದಲ್ಲೂ ಇರುವ ಅನೇಕ ಸಂಘಸಂಸ್ಥೆಗಳು ಶ್ರೀ ಅಣ್ಣಿಗೇರಿಯವರಿಗೆ ಸ್ಥಾನಮಾನಗಳನ್ನು ಕೊಟ್ಟು ಮಾರ್ಗದರ್ಶನ ಪಡೆಯುತ್ತಿವೆ.

1-6-1955ರಲ್ಲಿ ಇವರು ಗೋಕಾಕಿನ ಶ್ರೀ ನೀಲಕಂಠಪ್ಪ ಮಿರ್ಜಿಯವರ ಸುಪುತ್ರಿ ಶ್ರೀಮತಿ ಲೀಲಾವತಿಯವರನ್ನು ಮದುವೆಯಾದರು. ಈ ದಂಪತಿಗಳಿಗೆ

ಪಂಚಾಸ್ತಿಕಾಯಗಳಂತೆ ಸುಜಾತ, ಪದ್ಮಜ, ಜೇಬಿ, ಕಿರಣ ಮತ್ತು ಅರುಣ ಎಂಬ ಐದು ಮಂದಿ ಮಕ್ಕಳಿರುವರು. ಈ ದಂಪತಿಗಳು 1970ರಲ್ಲಿ ಉತ್ತರ ಭಾರತ ಸಂಚಾರಮಾಡಿ ಸಿದ್ಧಕ್ಷೇತ್ರಗಳ ದರ್ಶನಮಾಡಿ ಪುನೀತರಾಗಿರುವರು.

ಶ್ರೀ ಅಣ್ಣಿಗೇರಿಯವರು ಕರಿಯ ಕಬ್ಬಿನಂತೆ ಮೇಲೆ ಒರಟಾಗಿ ಕಂಡರೂ ಇವರ ಅಂತಃಕರಣ ಮೃದುವಾದುದು. ಇಂಥವರು ಜಿಲ್ಲೆಗೊಬ್ಬರಂತೆ ಇದ್ದರೂ ಸಾಕು. ಮತ್ತೊಮ್ಮೆ ನಾವು ಗತವೈಭವವನ್ನು ಪುನರಾವರ್ತನೆಗೊಳಿಸಬಹುದು.

ಎಣಿಕೆಗೆ ಬಾರದನಂತಸುಜ್ಞಾನ ಶಿಂ |
ತಿಣಿಯೊಳೊಪ್ಪುವ ಮಹಾದೇವಾ ||
ಹಣಹೊನ್ನುಚವುಕದಟ್ಟಿದವೊಲು ನುಡಿಯ ಪ್ರೇ |
ರಣಿಸು ನಿರಂಜನಸಿದ್ಧಾ ||

ಹಸಿವು ತೃಷೆ ನಿದ್ರೆ ಮೊದಲಾದ ದುಃಖವ |
ಹಸಗೆಡಿಸುವ ಶಕ್ತಿಯುಳ್ಳ ||
ಅಸಮವೈಭವನೆ ನನ್ನೆದೆಯೊಳಗಿರು ಮೋಕ್ಷ |
ರಸಿಕಾ ಚಿದಂಬರಪುರುಷಾ ||

ಕಣ್ಮುಚ್ಚಿ ನೋಡಿದರಾತ್ಮಸುಖದ ಕಸೆ |
ಗುಣ್ಮೆಸುವಾನಂದರೂಪಾ ||
ಕಣ್ಮಲೆದುತ್ತಮ ಮತಿದೋರು ಸುಕೃತಾತ್ಮ |
ಗಾಣ್ಮಾ ನಿರಂಜನಸಿದ್ಧಾ ||

ಡಿ. ಎಸ್. ಇಜಾರಿ, ಹುಬ್ಬಳ್ಳಿ

ಗಡಿಯಾರದ ಜೊತೆಯಾಗಿ ಕಾಯಕವೆಸಗುತ್ತಿರುವ ಕ್ರಿಯಾಶೀಲ ಚೇತನ ಶ್ರೀ ಧನ್ಯಕುಮಾರ ಶಾಂತಪ್ಪ ಇಜಾರಿಯವರು. ಬೆಳಗ್ಗೆ ಕುಸುಗಲ್ಲಿನಲ್ಲಿ ರೋಗಿಗಳನ್ನು ಉಪಚರಿಸಿ, ಮಧ್ಯಾಹ್ನದ ಹೊತ್ತು ಹುಬ್ಬಳ್ಳಿಗೆ ಬಂದು ಇಲ್ಲಿಯ ರೋಗಿಗಳ ಆರೈಕೆ ಮಾಡಿ, ಆಗಾಗ ಹುಬ್ಬಳ್ಳಿ ಆಯುರ್ವೇದ ಕಾಲೇಜಿಗೆ ಹೋಗಿ ವಿದ್ಯಾರ್ಥಿಗಳಿಗೆ ಪಾಠ ಹೇಳಿ ಇವರು ಮನೆಯನ್ನು ತಲುಪಬೇಕಾದರೆ ರಾತ್ರಿ ಹತ್ತಕ್ಕೋ ಹನ್ನೊಂದಕ್ಕೋ. ಧನ್ಯಕುಮಾರರು ಸದಾ ಹಸನ್ಮುಖಿಗಳಾಗಿ ರೋಗಿಗಳೊಡನೆ ಮೃದುವಾಗಿ ಮಾತಾಡುತ್ತ ಬೇನೆಯನ್ನೇ ಮರೆಸಿಬಿಡುವರು. ಈ ನಡುವೆ ಹೇಗೋ ವೇಳೆಯನ್ನು ಪಡೆದು ಆಯುರ್ವೇದದ ಮೇಲೆ ಉದ್ಗ್ರಂಥಗಳನ್ನೂ ಇವರು ರಚಿಸಿರುವರು, ರಚಿಸುತ್ತಿರುವರು. ಒಂದಲ್ಲ ಒಂದು ಚಟುವಟಿಕೆಯೇ ಇವರ ಹಸನ್ಮುಖಕ್ಕೆ ಕಾರಣವಾಗಿದೆ. ಇವರನ್ನು ನೋಡಿದರೇ ಸಾಕು ರೋಗಿಗೆ ಅರ್ಧ ಕಾಯಿಲೆ ವಾಸಿಯಾಗುವುದು, ಇವರು ಮಾತನಾಡಿದರೆ ಉಳಿದ ಕಾಯಿಲೆಯೂ ಜಾಗ ಬಿಡುವುದು.



ಡಿ. ಎಸ್. ಇಜಾರಿ

ಗುಳೇದಗುಡ್ಡದ ಶಾಂತಪ್ಪ ಇಜಾರಿಯವರು ಇವರ ತಂದೆ. ಲಕ್ಷ್ಮೇಶ್ವರದ ಗೊಂಗಡಿ ರಾಜಮತಿಯವರು ಇವರ ತಾಯಿ. ಲಲಿತಮ್ಮ, ವಜ್ರಾವತಿ, ಶ್ರೀಕಾಂತ, ಪ್ರಸನ್ನಕುಮಾರಿ, ಇಂದ್ರಕುಮಾರ್, ಪದ್ಮರಾಜ್, ಸುರೇಶ್, ಅಶೋಕ ಈ ಎಂಟು

ಜನವೂ ಇವರ ಒಡಹುಟ್ಟಿದವರು. 6-10-1942ರಲ್ಲಿ ಜನಿಸಿದ ಧನ್ಯಕುಮಾರರು ಲಕ್ಷ್ಮೇಶ್ವರದಲ್ಲಿ ಪ್ರಾಥಮಿಕ ವಿದ್ಯಾಭ್ಯಾಸವನ್ನು ಮುಗಿಸಿದರು. ಕೊಪ್ಪಳದಲ್ಲಿ 1959ರಲ್ಲಿ ಎಸ್.ಎಸ್.ಎಲ್.ಸಿ. ಉತ್ತೀರ್ಣರಾದರು. 1963ರಲ್ಲಿ ಬೆಂಗಳೂರು ಆಯುರ್ವೇದ ಕಾಲೇಜಿನಲ್ಲಿ ಡಿ.ಎಸ್.ಎ.ಸಿ. ಪದವಿ ಪಡೆದು 1970ರಲ್ಲಿ ದೆಹಲಿಯ ಆಯುರ್ವೇದ ಆಚಾರ್ಯ ಪದವಿಯನ್ನು ಗಳಿಸಿದರು. 1965ರಿಂದಲೂ ವೈದ್ಯರಾಗಿ ರೋಗಿಗಳನ್ನು ಉಪಚರಿಸುತ್ತಿರುವರು.

1968ರಲ್ಲಿ ಲಕ್ಷ್ಮೇಶ್ವರದ ಶೀಲಪ್ರಭಾ ಗೊಂಗಡಿಯವರೊಡನೆ ಇವರ ವಿವಾಹವಾಯಿತು. ಈ ದಂಪತಿಗಳಿಗೆ ಸದ್ಯಕ್ಕೆ ವಿನುತರಾಣಿ ಎಂಬ ಏಕಮಾತ್ರ ಪುತ್ರಿಯಿರುವಳು. ಧನ್ಯಕುಮಾರರು ವೈದ್ಯರಾಗಿ, ಅಧ್ಯಾಪಕರಾಗಿ, ಲೇಖಕರಾಗಿ ದುಡಿಯುತ್ತಿರುವುದಲ್ಲದೆ ಮೈಸೂರು ಸ್ಟೇಟ್ ಡಿ.ಎಸ್.ಎ.ಸಿ. ಸಂಸ್ಥೆಗೆ ಒಮ್ಮೆ ಅಧ್ಯಕ್ಷರಾಗಿದ್ದರು. ಹುಬ್ಬಳ್ಳಿ ಜೈನ ವಿದ್ಯಾರ್ಥಿನಿಲಯದ ವ್ಯವಸ್ಥಾಪಕ ಮಂಡಳಿಯಲ್ಲೂ ಇವರಿದ್ದಾರೆ. ಹುಬ್ಬಳಿ ಜೈನ ತರುಣ ಸಂಘದ ಅಧ್ಯಕ್ಷತೆ, ಧಾರವಾಡ ಮತ್ತು ಕಾರವಾರ ಡಿ.ಎಸ್.ಎ.ಸಿ. ಅಸೋಸಿಯೇಷನ್‌ನ ಕಾರ್ಯದರ್ಶಿತ್ವ—ಈ ಸ್ಥಾನಮಾನಗಳು ಇವರನ್ನು ಹುಡುಕಿಕೊಂಡು ಬಂದು ಹೆಗಲು ಏರಿವೆ.

ಜೈನ ಆಯುರ್ವೇದ ಗ್ರಂಥಗಳನ್ನು ಆಳವಾಗಿ ಅಭ್ಯಾಸಮಾಡಿ ಇವರು ಸಂಶೋಧನೆ ನಡೆಸುತ್ತಿರುವರು. ಮುಂಡರಗಿ ಆಯುರ್ವೇದ ಸಂಶೋಧನಾಲಯದ ಸಲಹಾಸಮಿತಿಗೆ ಇವರು ಸದಸ್ಯರಾಗಿರುವರು.

ಇವರು ರಚಿಸಿರುವ 'ಆಯುರ್ವೇದ ವಿಜ್ಞಾನ' ಎಂಬ ಗ್ರಂಥವನ್ನು ಕರ್ನಾಟಕ ವಿಶ್ವವಿದ್ಯಾಲಯವು ಪ್ರಕಟಿಸಿದೆ. ಆಯುರ್ವೇದ ಶಾಸ್ತ್ರ, ಸುಲಭ ಚಿಕಿತ್ಸೆಗಳು ಇವು ಕ.ವಿ.ಪ್ರ. ಮಾಲೆಯಲ್ಲಿ ಪ್ರಕಟವಾಗಿವೆ. ಔಷಧಿ ಕೈಪಿಡಿ ಎಂಬುದು ಇವರ ಅನುವಾದಗ್ರಂಥ. ಗ್ರಾಮಗಳ ನೈರ್ಮಲ್ಯಜೀವನ, ಆರೋಗ್ಯಶಾಸ್ತ್ರ, ಸುಖಸಂಸಾರ, ಮಧುಮೇಹ—ಈ ಕೃತಿಗಳನ್ನೂ ಇವರು ರಚಿಸಿರುವರು.

ಧನ್ಯಕುಮಾರರು ತಮ್ಮ 32ನೆಯ ವಯಸ್ಸಿಗೆ ಇಷ್ಟರಮಟ್ಟಿಗೆ ಬಹುಮುಖ ಪ್ರಜ್ಞೆಯನ್ನು ಗಳಿಸಿಕೊಂಡುದು ಸೋಜಿಗದ ಸಂಗತಿಯಾಗಿದೆ. ಕಾಲಕಳೆದಂತೆ ಇವರ ಕೀರ್ತಿ ನಾಡಿನಾದ್ಯಂತ ಹರಡದಿರದು.

ಸಂಘಪತಿ ಮುಲ್ತಾನಮಲ್ಲ ವನೇಚಂದ ಬಾಫಣಾ, ಹುಬ್ಬಳ್ಳಿ

ಶ್ರೀ ಮುಲ್ತಾನಮಲ್ಲರ ಆಧ್ಯಾತ್ಮಿಕ ಗುರುಗಳು ಆಚಾರ್ಯ ಶ್ರೀ ಜಿನೇಂದ್ರಸೂರಜಿ ಮಹಾರಾಜರು. ಸ್ವಂತ ಖರ್ಚಿನಲ್ಲಿ ಯಾತ್ರಾಸಂಘವನ್ನು ಹೊರಡಿಸುವಂತೆ ಇವರಿಗೆ ಗುರುಗಳ ಪ್ರೇರಣೆಯಾಯಿತು. ಮನೆಯಲ್ಲಿ ಒಬ್ಬರೋ ಇಬ್ಬರೋ ಯಾತ್ರೆ ಮಾಡಿಕೊಂಡು ಬರಲು ಹಲವಾರು ವಿಘ್ನಗಳು ಬರುವುವು. ಹೀಗಿರುವಾಗ ನೂರಾರು ಜನರನ್ನು ಕಟ್ಟಿಕೊಂಡು ತಿಂಗಳಾನುಗಟ್ಟಲೆ ಭರತಖಂಡದ ಯಾತ್ರೆಮಾಡಿಸುವುದೆಂದರೆ ಸಾಮಾನ್ಯದ ಮಾತೆ? ಪೂರ್ವಭಾವೀ ಸಿದ್ಧತೆಗಳೆಷ್ಟಿರಬೇಕು? ಗುರುಗಳ ಅಪ್ಪಣೆ ಆದಕೂಡಲೇ ಮುಲ್ತಾನಮಲ್ಲರು ಆಧ್ಯಾತ್ಮಿಕ ಸಂಪದವನ್ನು ವೃದ್ಧಿಮಾಡಿಕೊಳ್ಳಲು ಒಂದು ವರ್ಷ ಅಖಂಡ ಬ್ರಹ್ಮಚರ್ಯ ಪಾಲಿಸಿದರು. ಇವರ ಲೌಕಿಕ ಸಂಪದಕ್ಕೆ ಕೊರತೆಯಿರಲಿಲ್ಲ. 650 ಜನ ಬಂಧುಗಳನ್ನು ಒಂದು ಕಡೆ ಸೇರಿಸಿದರು. ಸ್ಪೆಷಲ್ ರೈಲನ್ನು ಸ್ವಂತ ಖರ್ಚಿನಿಂದ ಏರ್ಪಡಿಸಿದರು. 1½ ತಿಂಗಳು 650 ಜನರನ್ನು ರೈಲಿನಲ್ಲಿ ಸುತ್ತಾಡಿಸಿ ಶಿಖರಜಿಯಾತ್ರೆ ಮಾಡಿಸಿದರು. ಊಟ ಉಪಚಾರ ರಾಜೋಚಿತವಾಗಿ ನಡೆಯಿತು. ಆದರೆ ಇವರು ಮಾತ್ರ ಯಾತ್ರೆ ಮುಗಿಯುವ ತನಕ ಊಟದಲ್ಲಿ ಉಪ್ಪನ್ನೂ ತುಪ್ಪವನ್ನೂ ತೊರೆದರು. ತಾವು ಸಂಯಮವನ್ನು ಪಾಲಿಸಿ ಮನವಚನಕಾಯಯೋಗಗಳಿಗೆ ಸಂದರ್ಭೋಚಿತವಾಗಿ ಲಗಾಮು ಹಾಕಿ ಶಿಖರಜಿ ಯಾತ್ರೆಯನ್ನು ಸುಸೂತ್ರವಾಗಿ ಮುಗಿಸಿದರು. ಕುಡಿವ ನೀರು ಅಲುಗಾಡದಂತೆ ಯಾತ್ರಿಕರನ್ನು ಸುರಕ್ಷಿತವಾಗಿ ಅವರವರ ಮನೆ ತಲುಪಿಸಿದರು.

ಮುಲ್ತಾನಮಲ್ಲರು ಮೊದಲಿಂದಲೂ ನೇಮಿಷ್ಟರು. ರಾತ್ರಿಹೊತ್ತು ನೀರನ್ನೂ ಕುಡಿಯುವುದಿಲ್ಲ. ಮುಂಜಾನೆ ಎದ್ದು ಘಂಟೆಗಟ್ಟಲೆ ಜಪಮಾಡುವರು. ಕರ್ಮದ ಭಾರವನ್ನು ದಿನವೂ ತಗ್ಗಿಸಿಕೊಂಡು ಜಿನಾಲಯಕ್ಕೆ ಹೋಗಿ ದೇವರ ದರ್ಶನ ಮಾಡಿ ಬರುವರು. ಅನಂತರ ಉಳಿದ ಕಾರ್ಯ. ಆತ್ಮಸಂದರ್ಶನಾಕಾಂಕ್ಷಿಗಳಾಗಿ ಇವರು ಪಾರಮಾರ್ಥಿಕ ಚಿಂತನೆಯಲ್ಲಿ ಮುಳುಗುವರು. ಅಷ್ಟಮಿ-ಚತುರ್ದಶಿ ಉಪವಾಸ ಮಾಡಿ ದೇಹವನ್ನು ಒಣಗಿಸುವರು. ಭಾದ್ರಪದ ಮಾಸದಲ್ಲಿ ದಶಲಕ್ಷಣ ಪರ್ವದಲ್ಲಿ ಐದು ದಿನ ಸಂಪೂರ್ಣ ಉಪವಾಸವಾಚರಿಸುವುದರ ಜೊತೆಗೆ ಅಖಂಡ ಮೌನವ್ರತಧಾರಿಗಳಾಗಿ ನಿಶ್ಚಯ ಸಮ್ಯಗ್‌ದೃಷ್ಟಿಗಳಾಗಿ ಬಾಳುವರು. 1963ರಲ್ಲಿ 8 ದಿವಸ ಸರ್ವಸಂಗ ಪರಿತ್ಯಾಗಿಗಳಾಗಿ ಜಿನಾಲಯದಲ್ಲಿ ತ್ಯಾಗಿಗಳಂತೆ ಬಾಳಿದರು. ಭಾವತಾಪಸಿಯಾದ ಇವರು ಈಗ ವ್ಯವಹಾರದಲ್ಲಿದ್ದರೂ ಮಾನಸಿಕವಾಗಿ ಸದಾ ಸಮವಸರಣ ವಿಹಾರಿಗಳಾಗಿ ಬೂದಿ ಮುಚ್ಚಿದ ಕೆಂಡದಂತೆ ಗೂಢಭಕ್ತರಾಗಿರುವರು. ಇಂಥ ಸಾಧಕ

ಚೇತನಗಳೇ ಜೈನಸಮಾಜದ ನಿಜವಾದ ಭಾಗ್ಯವಾಗಿರುವರು. ಜೈನ ಸಮಾಜ ಶ್ರೀಮಂತವಾದುದು ಇಂಥ ಭವ್ಯಾತ್ಮರಿಂದಲೇ.


ಮುಲ್ತಾನಮಲ್ಲರು ಏಕಮಾತ್ರಪುತ್ರರಾಗಿ ರಾಜಸ್ತಾನದ ಮೊಗಲ್‌ಸಾರೈ ನಗರದಲ್ಲಿ 26–1–1915ರಲ್ಲಿ ಜನಿಸಿದರು. ಇವರ ತಂದೆ ಜವಳಿ ವ್ಯಾಪಾರಿಗಳಾದ ವನೇಚಂದರು; ಇವರ ತಾಯಿ ಬಾಗಸುಬಾಯಿಯವರು. ಮುಲ್ತಾನಮಲ್ಲರು ಪ್ರಾಥಮಿಕ ಶಿಕ್ಷಣ ಮಾತ್ರ ಮುಗಿಸಿದರು. ಆನಂತರ ಜವಳಿವ್ಯಾಪಾರಕ್ಕೆ ನುಗ್ಗಿದರು. ತಿಮಿಂಗಲದ ಮರಿಗೆ ಈಜು ಕಲಿಸಬೇಕೆ? ವ್ಯಾಪಾರದಲ್ಲಿ ಗಟ್ಟಿಗರೆನಿಸಿಕೊಂಡರು. ಶಿಖರಜಿಯಾತ್ರೆ ಮುಗಿದಮೇಲೆ ಅವರು ಜವಳಿ ವ್ಯಾಪಾರವನ್ನು ತೊರೆದರು. ಈಗ ಕ್ರಾಮ್ಟನ್ ಸೇಲ್ಸ್ ಮತ್ತು ಬಲ್ಬುಗಳನ್ನು ಎಂಟು ಜಿಲ್ಲೆಗಳಲ್ಲಿ ಸಗಟು ವ್ಯಾಪಾರ ಮಾಡುವ ಹಕ್ಕನ್ನು ಪಡೆದು ಸಂಘವಿ ಏಜನ್ಸಿಯನ್ನು ಪ್ರಾರಂಭಿಸಿರುವರು. ಅಂತೂ ಜ್ಯೋತಿಯನ್ನು ಹರಡುವ ಕಾರ್ಯದಲ್ಲಿ ತೊಡಗಿದರೆನ್ನಬೇಕು. ಈ ಜನ್ಮದಲ್ಲಿ ಲೌಕಿಕ ಜ್ಯೋತಿಯನ್ನು ಜಗತ್ತಿಗೆ ಕೊಟ್ಟು ಮುಂದಿನ ಭವದಲ್ಲಿ ಆಧ್ಯಾತ್ಮಿಕ ಜ್ಯೋತಿಯನ್ನು ಹರಡಬಹುದು. ಇಂಥವರಿಂದಲ್ಲದೆ ಇನ್ನಾರಿಂದ ಜ್ಯೋತಿ ಪ್ರಸಾರವಾಗಬೇಕು?

ಮುಲ್ತಾನಮಲ್ಲರು 1942ರಲ್ಲಿ ರಾಜಸ್ತಾನದ ಶಿವಾನ ನಗರದ ಶ್ರೀಮತಿ ಪಾನಿಬಾಯಿಯವರನ್ನು ಮದುವೆಯಾದರು. ಸಪ್ತ ಪರಮಸ್ಥಾನಗಳಂತೆ ಈ ದಂಪತಿ ಗಳಿಗೆ ಪೃಥ್ವಿರಾಜ್, ಕಾಂತಿಲಾಲ್, ಕಮಲಬಾಯಿ, ವಿಮಲಬಾಯಿ, ಭಜನಿಬಾಯಿ, ಮಂಜುಳಬಾಯಿ ಮತ್ತು ಸಂಗೀತಬಾಯಿ—ಈ ರೀತಿ ಏಳು ಜನ ಮಕ್ಕಳಾದರು. ಮನೆತುಂಬ ಮಕ್ಕಳು, ತಿಜೋರಿಯ ತುಂಬ ಹಣ, ಹೃದಯದ ತುಂಬ ಸಮವಸರಣ —ಮುಲ್ತಾನಮಲ್ಲರ ಭಾಗ್ಯವೇ ಭಾಗ್ಯ!

ಇವರು ದಾನದಲ್ಲೂ ಹಿಂದೆ ಬಿದ್ದಿಲ್ಲ. 1952ರಲ್ಲಿ ತಮ್ಮ ಹುಟ್ಟೂರಿನ ಜಿನಾಲಯದಲ್ಲಿ ನೀರಿನಂತೆ ಹಣ ಖರ್ಚುಮಾಡಿ ಪಂಚಕಲ್ಯಾಣ ನೆರವೇರಿಸಿ ಪಂಚಮಗತಿಗೆ ಮುಂಗಡ ಕೊಟ್ಟರು. ಹುಬ್ಬಳ್ಳಿಯ ಜೈನ ವಿದ್ಯಾರ್ಥಿನಿಲಯಕ್ಕೆ ಹತ್ತು ಸಹಸ್ರ ರೂ.ಗಳನ್ನು ದಾನ ಮಾಡಿರುವರು. 650 ಜನರನ್ನು ಶಿಖರಜಿ ಯಾತ್ರೆಮಾಡಿಸಿದಾಗ ಲಕ್ಷಾಂತರ ರೂ.ಗಳು ಕೈಬಿಟ್ಟವು. ಶ್ರೀಮಂತರಾದ ಇವರು ಲೋಭಿಗಳಾಗದೆ ಧಾರಾಳಿಯಾಗಿ ನಿರಾಳವಾಗಿರುವರು; ನಿಶ್ಚಿಂತರಾಗಿರುವರು. ನಿರ್ವಿಕಾರಿಗಳಾಗಲು ದಿನವೂ ಅಭ್ಯಾಸ ಮಾಡುತ್ತಿರುವರು.

ಶಾಂತಿನಾಥ ದೇವೇಂದ್ರಪ್ಪ ಇಂಗಳೆ, ಹುಬ್ಬಳ್ಳಿ

ಶ್ರೀಯುತ ಶಾಂತಿನಾಥರ ಹರಯವೆಲ್ಲ ಸತ್ಯಾಗ್ರಹದಲ್ಲಿ ಕಳೆದುಹೋಯಿತು. ಗಾಂಧೀಜಿಯವರ ಕಾಲದ ನಿಸ್ವಾರ್ಥ ಸತ್ಯಾಗ್ರಹಿ ಇವರು. ಎಂಟುಹತ್ತು ಬಾರಿ ಸೆರೆವಾಸವನ್ನು ಇವರು ಅನುಭವಿಸಿರುವರು. ಬ್ರಿಟಿಷ್ ಸರ್ಕಾರಕ್ಕೆ ಇವರು ತಲೆನೋವಾಗಿ ಪರಿಣಮಿಸಿದ್ದರು. ಉಪ್ಪಿನ ಸತ್ಯಾಗ್ರಹ, ಈಚಲ ಮರಗಳ ನಾಶ ಈ ಸಂದರ್ಭಗಳಲ್ಲಿ ಇವರು ತೋರಿದ ಸಾಹಸ ರೋಮಾಂಚನಕಾರಿಯಾದುದು. ಬೆಳಗಾಂವಿ ಜಿಲ್ಲೆಯ ಹಿಂಡಲಗಿ, ನಾಸಿಕ್, ಯರವಾಡ ಈ ಸ್ಥಳಗಳ ಸೆರೆಮನೆಯಲ್ಲಿ ಇವರು ರಾಷ್ಟ್ರ ಕ್ಕೋಸ್ಕರ ನವೆದರು. 1942ರ ಕ್ವಿಟ್ ಇಂಡಿಯ ಚಳುವಳಿಯಲ್ಲಂತೂ ಇವರು



ಶಾಂತಿನಾಥ ದೇವೇಂದ್ರಪ್ಪ ಇಂಗಳೆ

ಬ್ರಿಟಿಷರ ಪಾಲಿಗೆ ಸಿಂಹಪ್ರಾಯರಾದರು. ಈ ಹೋರಾಟಗಳಲ್ಲಿ ಇವರು ತಮ್ಮ ಆಯುಸ್ಸನ್ನು ಕಳೆದುದಲ್ಲದೆ ತಮ್ಮ ಆಸ್ತಿಯನ್ನೂ ಕಳೆದುಕೊಂಡರು. 1945ರಲ್ಲಿ ಇವರಿಗೂ ಇವರ ಸಂಸಾರಕ್ಕೂ ಹೊಟ್ಟೆಬಟ್ಟೆಗೂ ಕಷ್ಟವಾಯಿತು. ಇವರ ಮಡದಿ ಶ್ರೀಮತಿ ಗಂಗಮ್ಮನವರು ಸ್ವಾಭಿಮಾನಿಗಳು. ತಮ್ಮ ಪತಿ ಸೆರೆಗೆ ಹೋದಾಗ ಕಿತ್ತೂರಿನ ಜನ ಇವರಿಗೆ ಸಹಾಯ ಮಾಡಲು ಮುಂದಾದರೂ ಗಂಗಮ್ಮ ಯಾರ ಹಂಗೂ ಬೇಡವೆಂದೂ, ನಿಸ್ವಾರ್ಥಸೇವೆಯ ಸತ್‌ಫಲವನ್ನು ಹಿಡಿಕೂಳಿಗಾಗಿ ತಾನು ಮಾರುವುದಿಲ್ಲವೆಂದೂ ಹಟತೊಟ್ಟು ಕಡುಬಡತನವನ್ನು ಸ್ವಾಗತಿಸಿ ಇವರು ಪಾರ್ಥಿವ ಫಣಾಮಣಿಯೆನಿಸಿದರು. ಸ್ವಾತಂತ್ರ್ಯ ಬಂದಮೇಲೆ ಭಾರತ ಸರ್ಕಾರ ಶ್ರೀ ಶಾಂತಿ

ನಾಥರಿಗೆ ತಿಂಗಳಿಗೆ 75/– ರೂ. ಗೌರವಧನ ಕೊಟ್ಟಿತು. ಆದರೆ ಒಂದೆರಡು ವರ್ಷ ಇದನ್ನು ಶಾಂತಿನಾಥರು ಸ್ವೀಕರಿಸಿ, ತಮ್ಮ ಮಕ್ಕಳು ದುಡಿಯುವಂತಾದಾಗ ಅದನ್ನೂ ತೊರೆದು ನಿಸ್ಸ್ವಾರ್ಥತೆಗೆ ಜೀವಂತಸಾಕ್ಷಿಯಾದರು. ಪರಿಗ್ರಹಪರಿಮಾಣ ವ್ರತಕ್ಕೆ ಅಂದಿನಿಂದ ಪೀಠಿಕೆ ಹಾಕಿಕೊಂಡರು. ಇಂಥ ಕಡುಗಲಿಗಳೂ, ತ್ಯಾಗಿಗಳೂ ನಮ್ಮಲ್ಲಿ ಎಷ್ಟು ಜನ ದೊರೆತಾರು?

ದೇವೇಂದ್ರಪ್ಪನವರು ಕಿತ್ತೂರಿನ ಶ್ರಾವಕರು. ಇವರ ಮಡದಿ ನಂದಗಡದ ಶ್ರೀಮತಮ್ಮನವರು. ಈ ದಂಪತಿಗಳಿಗೆ ಸು. 1901–2ರಲ್ಲಿ ಅಸಹಾಯಶೂರರೂ, ಏಕಾಂಗವೀರರೂ ಆದ ಶಾಂತಿನಾಥರು ಜನಿಸಿದರು. ಇವರು ಮೆಟ್ರಿಕ್ ತನಕ ಓದಿದರು. ಹರಪನಹಳ್ಳಿಯ ಐತಿಹಾಸಿಕ ಮನೆತನವಾದ ಇಜಾರಿ ಮನೆತನದ ಗಂಗಮ್ಮನವರು ಇವರ ಕೈಹಿಡಿದರು. ತಮ್ಮ ಪತಿಯ ಸಾಹಸಕ್ಕೆ ಇವರು ಸಾಣೆ ಯಿಟ್ಟರು. ಪತಿಯ ದೇಶಪ್ರೇಮಕ್ಕೆ ಇವರು ನಿಶಾನೆಯನ್ನು ಹಿಡಿದರು. ಗಂಡನ ಅಭಿಮಾನಕ್ಕೆ ಇವರು ಅಡಿಗಲ್ಲು ಹಾಕಿದರು. ರಮಣನ ಪರಾಕ್ರಮವನ್ನು ಇವರು ಪ್ರಚೋದಿಸಿದರು. ಶ್ರೀ ಶಾಂತಿನಾಥರು ಸೆರೆಗೆ ಹೋದಾಗಲೆಲ್ಲ ಈ ಕನ್ಯೆ ಕಂಬನಿ ಮಿಡಿಯದೆ ದಿಟ್ಟತನದಿಂದ ಸಂಸಾರವನ್ನು ತೂಗಿಸಿ ಸಾಹಸವಂತೆಯೆನಿಸಿದರು. ಈ ದಂಪತಿಗಳಿಗೆ ರತ್ನತ್ರಯವೇ ಲಭಿಸಿದಂತೆ ಸುರೇಂದ್ರನಾಥ್, ಅನಂತರಾಜ್ ಮತ್ತು ಪದ್ಮಾವತಿ ಎಂಬುದಾಗಿ ಮುದ್ದಾದ ಮೂರು ಮಕ್ಕಳಾದರು. ಇವರಲ್ಲಿ ಶ್ರೀ ಸುರೇಂದ್ರನಾಥರು ಹುಬ್ಬಳ್ಳಿಯಲ್ಲಿ ವ್ಯಾಪಾರ ಮಾಡುತ್ತಿರುವರು. ಕಿರಿಯ ಮಕ್ಕಳಾದ ಶ್ರೀ ಅನಂತರಾಜರು ಸೇವಾಧುರಂಧರರು. ಧಾರ್ಮಿಕ ಕಾರ್ಯಗಳಲ್ಲಿ ಟೊಂಕ ಕಟ್ಟಿ ದುಡಿಯುವರು.

ಶ್ರೀ ಶಾಂತಿನಾಥರು ಮುಪ್ಪಿನಲ್ಲೂ ವಿಶ್ರಾಂತಿ ಬಯಸದೆ ಧಾರ್ಮಿಕ ಚಟುವಟಿಕೆ ಗಳಲ್ಲಿ ಯುವಕರಿಗಿಂತ ಉತ್ಸಾಹ ತೋರುತ್ತಿರುವರು. ಹುಬ್ಬಳ್ಳಿಯಲ್ಲಿ ತಾವು ವಿದ್ಯಾರ್ಥಿಯಾಗಿದ್ದಾಗ ನೆಲಸಿದ್ದ ಜೈನ ವಿದ್ಯಾರ್ಥಿನಿಲಯದ ಜೀರ್ಣೋದ್ಧಾರಕ್ಕಾಗಿ ಇವರು ಶ್ರಮಿಸಿದರು. ತಾವೂ ಇದಕ್ಕೆ 1001/– ರೂ. ದಾನಕೊಟ್ಟರು. ಮಹಾ ವೀರನ 2500 ವರ್ಷದ ನಿರ್ವಾಣೋತ್ಸವ ಸಮಿತಿ, ಹುಬ್ಬಳ್ಳಿ, ವಿಭಾಗಕ್ಕೆ ಇವರು ಉಪಾಧ್ಯಕ್ಷರಾಗಿರುವರು.

ಶ್ರೀ ಶಾಂತಿನಾಥರು ಶ್ರೇಷ್ಠವಾಗ್ಮಿಗಳು. ಆಲಿಕಲ್ಲ ಮಳೆ ಬಿದ್ದಂತೆ ವೀರಾವೇಶ ದಿಂದ ಇವರು ಘಂಟೆಗಟ್ಟಲೆ ಮಾತಾಡಿ ಸಭಿಕರನ್ನು ರೋಮಾಂಚನಗೊಳಿಸಬಲ್ಲರು. ಈಗಲೂ ಇವರ ದನಿಯಲ್ಲಿ ಕ್ಷಾತ್ರವೀರ್ಯ ತುಂಬಿ ತುಳುಕಾಡುವುದು. ಸ್ವಾತಂತ್ರ್ಯ ಬಂದಮೇಲೆ ಅಧಿಕಾರಕ್ಕೆ ರಾಷ್ಟ್ರದಲ್ಲೆಲ್ಲ ಕಿತ್ತಾಟ ನಡೆದಾಗ ಶ್ರೀ ಶಾಂತಿನಾಥರು ಯಾವ ಅಧಿಕಾರವನ್ನೂ ಬಯಸಲಿಲ್ಲ. ಸರ್ಕಾರ ಕೊಟ್ಟಂಥ ತಾಮ್ರಪಟವನ್ನು ಇವರು

ನಿರಾಕರಿಸಿ ತಮ್ಮ ನಿಸ್ಸ್ವಾರ್ಥತೆಗೆ ಒಪ್ಪಹಾಕಿದರು. ಹೋರಾಟದಲ್ಲಿ ಅಂಗವಿಕಲ ರಾದವರ ಪರ ಇವರು ಹೋರಾಡಿ ವಿಶ್ರಾಂತಿವೇತನವನ್ನು ಕೊಡಿಸಿದರು.

ಸಿಂಹಕ್ಕೆ ಮುಪ್ಪು ಬರುವುದೇ? ಇಲ್ಲ. ಶಾಂತಿನಾಥರು ಈಗ 73 ವರ್ಷದ ತರುಣರು. ಈ ವಯಸ್ಸಿನಲ್ಲೂ ಕಿತ್ತೂರಿನಲ್ಲಿ ಇವರು ವ್ಯವಸಾಯ ಮಾಡಿಸುತ್ತಿರುವರು. ಬೆವರು ಸುರಿಸಿ ಬದುಕುವ ಹಟದಿಂದ ಇವರು ದುಡಿಯುತ್ತಿರುವರು. ಅವಿಶ್ರಾಂತವಾದ ದುಡಿಮೆಯೇ ಶ್ರೀ ಶಾಂತಿನಾಥರ ಬಾಳಿನ ರಹಸ್ಯ.


ವ್ಯಾಪಾರಶೂನ್ಯ ಮಹಾಮೌನ್ಯ ಸುಜ್ಞಾನ |
ದೀಪಲೋಕೈಕ ಪ್ರತಾಪಾ ||
ಲೇಪಿಸಿದಂತಿರು ನನ್ನೆದೆಯೊಳಗೆ |
ನಿರ್ಲೇಪಾ ಚಿದಂಬರಪುರುಷಾ ||

ಎತ್ತ ನೋಡಿದಡತ್ತ ಮೊತ್ತದ ಪ್ರಭೆಯಾಗಿ |
ಚಿತ್ತದೊಳೆಸೆವ ಮಹಾತ್ಮಾ ||
ಬಿತ್ತರಿಸೆನಗೆ ಸನ್ಮತಿಯನು ಮೋಕ್ಷದ |
ಬಿತ್ತೆ ನಿರಂಜನಸಿದ್ಧಾ ||

ತಣಿವುಗೆಟ್ಟಾಶಪಾಶದ ಚಿತ್ತವ |
ತಣಿಪುವಾನಂದಮಯಾತ್ಮಾ ||
ಕ್ಷಣಮಾತ್ರ ತೊಲಗದೆನ್ನೆದೆಯೊಳಗಿರು ಗುಣ |
ಮಣಿಯೆ ಚಿದಂಬರಪುರುಷಾ ||

ಬಾಬುರಾವ್ ಅರ್ಜುನಪ್ಪ ರೋಖಡೆ, ಹುಬ್ಬಳ್ಳಿ

ಹುಬ್ಬಳ್ಳಿಯ ಜೈನ ಬೋರ್ಡಿಂಗಿನ ನೂತನ ಕಟ್ಟಡವನ್ನು ಕಟ್ಟಿದ ರೂವಾರಿ ಈ ರೋಖಡೆಯವರು. ಹತ್ತಾರು ಕಡೆ ಭವ್ಯಭವನಗಳನ್ನು ಕಟ್ಟಿ ನಿಷ್ಠಾವಂತರಾದ ಕಂಟ್ರಾಕ್ಟರ್ ಎನಿಸಿಕೊಂಡಿರುವರು. ಎಮ್.ಎಸ್.ಆರ್.ಟಿ.ಸಿ. ಕ್ವಾರ್ಟರ್ಸ್, ಗದುಗಿನ ಕಾಲೇಜ್ ಹಾಸ್ಟೆಲ್, ಸಿರಸಿಯ ಎಮ್.ಎಸ್.ಆರ್.ಟಿ.ಸಿ. ಅಡ್ಮಿನಿಸ್ಟ್ರೇಷನ್ ಬ್ಲಾಕ್, ಹುಬ್ಬಳ್ಳಿ ಅಡ್ಮಿನಿಸ್ಟ್ರೇಷನ್ ಬ್ಲಾಕ್, ಟೈವಾಕ್ ಇಂಡಸ್ಟ್ರೀಸ್ ಕ್ವಾರ್ಟರ್ಸ್ ಧಾರವಾಡ—ಈ ಕಟ್ಟಡಗಳನ್ನು ಭದ್ರವಾದ ಬುನಾದಿಯ ಮೇಲೆ ಅತ್ಯುತ್ತಮ ಸಾಮಗ್ರಿಯನ್ನು ಬಳಸಿ ರೋಖಡೆಯವರು ನಿರ್ಮಿಸಿ ಸೈಯೆನಿಸಿ ಕೊಂಡಿರುವರು. ತಾವು ನಿರ್ಮಿಸುವ ಭವನಗಳೆಲ್ಲ ಬಹುಕಾಲ ಇರಬೇಕೆಂಬುದೇ ಇವರ ಧ್ಯೇಯ. ಕಂಟ್ರಾಕ್ಟನ್ನೂ ಒಂದು ಕಾಯಕವೆಂದು ಭಾವಿಸಿ ಶ್ರದ್ಧೆಯಿಂದ ಇವರು ದುಡಿಯುತ್ತಿದ್ದಾರೆ. ಇಂಥ ಕಂಟ್ರಾಕ್ಟರುಗಳು ಭರತಖಂಡದಲ್ಲಿ ಎಷ್ಟು ಜನ ದೊರೆತಾರು ?



ಬಾಬುರಾವ್ ಅರ್ಜುನಪ್ಪ ರೋಖಡೆ

ಸವದತ್ತಿ ತಾಲ್ಲೂಕಿನ ಸಿರಸಂಗಿಯಲ್ಲಿ ಅರ್ಜುನಪ್ಪನವರು ಪಾತ್ರೆವ್ಯಾಪಾರಿಗಳಾಗಿದ್ದರು. ಇವರ ಪ್ರಿಯತಮೆ ತುಂಬಿನಕಟ್ಟೆ ಸುಭದ್ರವ್ವ. ಈ ದಂಪತಿಗಳಿಗೆ ಇಬ್ಬರು ಗಂಡುಮಕ್ಕಳಾದರು. ಇವರಲ್ಲೊಬ್ಬರು ಬಾಬುರಾವ್ ರೋಖಡೆಯವರು. ಇವರು 1930ರಲ್ಲಿ ಜನಿಸಿದರು. ಮೆಟ್ರಿಕ್ ತನಕ ಓದಿ ಅನಂತರ ದುಡಿಮೆಗೆ ನಿಂತರು.

ಯುವಜನಾಂಗಕ್ಕೆ ಮಾದರಿಯಾದ ಇವರು ರಚನಾತ್ಮಕ ದೃಷ್ಟಿಯನ್ನು ಬೆಳೆಸಿಕೊಂಡು ರಾಷ್ಟ್ರವನ್ನು ಉಳಿಸಿ ತಾವೂ ಬೆಳೆಯುತ್ತಿರುವರು. ಸನ್ಮಾರ್ಗದಲ್ಲೇ ಸಾಹುಕಾರರಾಗಬಹುದೆಂಬುದಕ್ಕೆ ರೋಖಡೆಯವರು ಜೀವಂತಸಾಕ್ಷಿಯಾಗಿರುವರು. ಸಾಮಾಜಿಕ ಹಾಗೂ ಧಾರ್ಮಿಕ ಚಟುವಟಿಕೆಗಳಲ್ಲೂ ಇವರು ಹಿಂದೆ ಬಿದ್ದಿಲ್ಲ. ಹುಬ್ಬಳ್ಳಿ ಜೈನ ಬೋರ್ಡಿಂಗ್‌ನ ಅಧ್ಯಕ್ಷರಾಗಿರುವರು. ಮಹಾವೀರ ಎಜುಕೇಷನ್ ಸೊಸೈಟಿ ಉಪಾಧ್ಯಕ್ಷರಾಗಿರುವರು. ವರ್ಧಮಾನ ಕೋ-ಆಪರೇಟಿವ್ ಬ್ಯಾಂಕ್ ಶಂಕುಸ್ಥಾಪನೆಯಾದುದು ವಿದ್ಯಾನಗರ ಬಡಾವಣೆಯಲ್ಲಿರುವ ಇವರ ಸ್ವಗೃಹದಲ್ಲೇ. ಮೈಸೂರ್ ಸ್ಟೇಟ್ ಕಂಟ್ರಾಕ್ಟರ್ಸ್ ಅಸೋಷಿಯೇಷನ್ ಸಲಹಾ ಸಮಿತಿಗೆ ಸದಸ್ಯರಾಗಿರುವರು. ಹುಬ್ಬಳ್ಳಿಯ ಜೈನಸಮಾಜದ ಮುನ್ನಡೆಗೆ ಕಾರಣರಾದವರಲ್ಲಿ ಬಿಸಿನೆತ್ತರಿನ, ಉತ್ಸಾಹಶಾಲಿ ರೋಖಡೆಯವರೂ ಒಬ್ಬರು.

1955ರಲ್ಲಿ ಹುಬ್ಬಳ್ಳಿಯ ಪ್ರಮೀಳಾಬಾಯಿಯವರನ್ನು ರೋಖಡೆಯವರು ವಿವಾಹವಾದರು. ಇವರ ಉತ್ಸಾಹದಲ್ಲಿ ಉಲ್ಲಾಸದ ರಂಗೇರಿತು. ಈ ದಂಪತಿಗಳ ಪ್ರೇಮಾಕಾಶದಲ್ಲಿ ಸಪ್ತವರ್ಣದ ಕಾಮನಬಿಲ್ಲು ಮೂಡಿದಂತೆ ವಿದ್ಯಾಮಣಿ, ವಿನಯಾವತಿ, ಅಜಿತಕುಮಾರ, ಚಂದ್ರಕಾಂತ, ಸಂತೋಷಕುಮಾರ್, ಮಹಾವೀರ ಮತ್ತು ಉದಯಕುಮಾರ್—ಈ ರೀತಿ ಏಳು ಜನ ಮಕ್ಕಳಾಗಿ ಇವರ ದಾಂಪತ್ಯ ಕಂಗೊಳಿಸುತ್ತಿದೆ.

ರೋಖಡೆಯವರು ಭಾಗ್ಯವಂತರಾಗಿರುವಂತೆ ಉದಾರಿಗಳೂ ಆಗಿರುವರು. ಹುಂಚದಲ್ಲಿ ವಿದ್ಯಾರ್ಥಿಗಳ ಊಟಕ್ಕಾಗಿ 1000/– ರೂ., ಹುಬ್ಬಳ್ಳಿ ಮಹಿಳಾ ವಿದ್ಯಾಪೀಠಕ್ಕೆ 500/– ರೂ., ಮಹಾವೀರ ಎಜುಕೇಷನ್ ಸೊಸೈಟಿಗೆ 500/– ರೂ. ಕೊಟ್ಟಿದ್ದಲ್ಲದೆ ಹುಬ್ಬಳ್ಳಿಯ ಜೈನ ವಿದ್ಯಾರ್ಥಿನಿಲಯವನ್ನು ತಾವೇ ವಹಿಸಿಕೊಂಡು ಕಟ್ಟುವಾಗ ಹತ್ತುಸಹಸ್ರ ರೂ. ಸೋಡಿ ಬಿಟ್ಟಿದ್ದಲ್ಲದೆ 1000/– ರೂ. ದಾನವನ್ನೂ ಕೊಟ್ಟರು. ಮಿತಭಾಷಿಯಾದ ಇವರು ಸದಾ ಹಸನ್ಮುಖಿಗಳಾಗಿ ಸ್ನೇಹಪರರಾಗಿರುವರು. ಕೇಳಿದವರಿಗೆ ಇಲ್ಲವೆನ್ನಲಾರದ ದಾಕ್ಷಿಣ್ಯಪರರಾಗಿರುವರು.

ದೇವೇಂದ್ರಪ್ಪ ಲಕ್ಷ್ಮಪ್ಪ ಬಾಗಿ, ಹುಬ್ಬಳ್ಳಿ

ಸ್ವಾತಂತ್ರ್ಯಪೂರ್ವದಲ್ಲಿ ಬಾಗಿಯವರು ಗುಪ್ತವಾಗಿ ಕಾಂಗ್ರೆಸಿನ ಚಳವಳಿಗೆ ಸಹಾಯ ಮಾಡುತ್ತಿದ್ದರು. ಇವರು ಜೈಲಿಗೆ ಹೋಗದಿದ್ದರೂ. ಜೈಲಿಗೆ ಹೋದಂತ ಕಾಂಗ್ರೆಸ್ ಮುಖಂಡರ ಮನೆಗಳ ಯೋಗಕ್ಷೇಮವನ್ನು ವಿಚಾರಿಸಿ ಅವರ ಸುಖದುಃಖದಲ್ಲಿ ಭಾಗಿಯಾಗುತ್ತಿದ್ದರು. ವಲ್ಲಭಭಾಯಿ ಪಟೇಲ್ ಮತ್ತು ನೆಹರೂರವರ ಸ್ನೇಹವೂ ಇವರಿಗೆ ಲಭಿಸಿತ್ತು. ನೂರಾರು ಜನ ವಿದ್ಯಾರ್ಥಿಗಳು ಇವರಿಂದ ನೆರವು ಪಡೆದು ಈಗ ಗಣ್ಯವ್ಯಕ್ತಿಗಳಾಗಿರುವರು. ಹುಬ್ಬಳ್ಳಿಯ ನಗರ ಸಭೆಗೂ ಇವರಿಗೂ ಬಿಚ್ಚಲಾರದ ಗಂಟು. 13 ವರ್ಷ ಎಡೆಬಿಡದೆ ನಗರಸಭೆಗೆ ಸದಸ್ಯರಾಗಿದ್ದರು. 5 ವರ್ಷ ಉಪಾಧ್ಯಕ್ಷರಾಗಿದ್ದರು. 6 ವರ್ಷ ಕಾರ್ಪೊರೇಷನ್ ಸದಸ್ಯರಾಗಿದ್ದರು. 1953ರಲ್ಲಿ ಇವರು ಅಂದಿನ ಪ್ರಧಾನಿಗಳಾದ ಜವಾಹರಲಾಲ್ ನೆಹರೂರವರನ್ನು ಕರೆಸಿ ಹುಬ್ಬಳ್ಳಿಯ ನಗರಸಭೆಯ ಶತಮಾನೋತ್ಸವವನ್ನು ವಿಜೃಂಭಣೆಯಿಂದ ಆಚರಿಸಿದರು. ಜಿಲ್ಲಾ ಕಾಂಗ್ರೆಸ್ ಸಮಿತಿಯಲ್ಲಿ ಇವರು 25 ವರ್ಷದಿಂದಲೂ ಸದಸ್ಯರಾಗಿರುವರು.



ದೇವೇಂದ್ರಪ್ಪ ಲಕ್ಷ್ಮಪ್ಪ ಬಾಗಿ

ಲಕ್ಷ್ಮಪ್ಪ ಬಾಗಿ ಮತ್ತು ರಾಯಮ್ಮ ಕಡವಿ ಈ ದಂಪತಿಗಳ ಪುತ್ರರತ್ನವಾಗಿ ಬಾಗಿಯವರು 1910-11ರಲ್ಲಿ ಜನ್ಮತಳೆದರು. ಶ್ರೀ ಮಹದೇವಪ್ಪ, ಶ್ರೀ ರಾಮ ಚಂದ್ರಪ್ಪ ಮತ್ತು ಶ್ರೀಮತಿ ಗಂಗಮ್ಮ ಇವರು ದೇವೇಂದ್ರಪ್ಪ ಬಾಗಿಯವರ ಒಡ

ಹುಟ್ಟಿದವರು. ಬಾಗಿಯವರು ಪ್ರಾಥಮಿಕ ವಿದ್ಯಾಭ್ಯಾಸವನ್ನು ಮಾತ್ರ ಮುಗಿಸಿರುವರು. ಆದರೆ ಹಿಂದಿ, ಮರಾಠಿ ಭಾಷೆಗಳ ಪರಿಚಯವೂ ಇವರಿಗಿದೆ. ಇವರು ಬಾಲ್ಯದಲ್ಲೇ ವ್ಯಾಪಾರದಲ್ಲಿ ನಿಪುಣರೆನಿಸಿಕೊಂಡರು. ತಮ್ಮ 14ನೆಯ ವಯಸ್ಸಿನಲ್ಲಿ ಇವರು ಅಥಣಿಯಿಂದ ಜೋಳವನ್ನು ತೆಗೆದುಕೊಂಡು ಆಗ್ರಾ ನಗರಕ್ಕೆ ಹೋಗಿ ವ್ಯಾಪಾರ ಮಾಡಿಕೊಂಡು ಬಂದರೆಂಬುದನ್ನು ಕೇಳಿದಾಗ ಎಂಥವರಿಗೂ ಸೋಜಿಗವಾಗದಿರದು. ಬೀಡಿಯೆಲೆಯನ್ನು ಮಧ್ಯಪ್ರದೇಶ, ಬಿಹಾರ ಮತ್ತು ಆಂಧ್ರ ಪ್ರಾಂತಗಳಿಂದಲೂ, ಗುಜರಾತ್ ಮತ್ತು ನಿಪ್ಪಾಣಿ ಭಾಗದಿಂದ ಹೊಗೆಸೊಪ್ಪನ್ನೂ ತರಿಸಿ 35 ವರ್ಷಗಳಿಂದಲೂ ಇವರು ಬೀಡಿ ಫ್ಯಾಕ್ಟರಿ ನಡೆಸುತ್ತಿರುವರು.

1930–31ರಲ್ಲಿ ದೇವೇಂದ್ರಪ್ಪ ಬಾಗಿಯವರು ಶಾರದಾಬಾಯಿ ಕಲಘಟಗಿಯವರನ್ನು ವಿವಾಹವಾದರು. ಈ ದಂಪತಿಗಳಿಗೆ ನೇತ್ರದ್ವಯದಂತೆ ಪದ್ಮಾವತಿ ಮತ್ತು ಹೀರಾಬಾಯಿ ಎಂಬ ಇಬ್ಬರು ಪುತ್ರಿಯರಿರುವರು. ಈ ದಂಪತಿಗಳಿಗೆ 'ಧರ್ಮ'ವೇ ಪುತ್ರರತ್ನವಾಗಿದೆ.

ಹುಬ್ಬಳ್ಳಿಯ ಕಾಮರ್ಸ್ ಮತ್ತು ಲಾ ಕಾಲೇಜುಗಳ ಕಟ್ಟಡ ನಿರ್ಮಾಣಕ್ಕೆ ಬಾಗಿಯವರು ಧನಸಹಾಯ ಮಾಡಿರುವರು. ಹುಬ್ಬಳ್ಳಿ ಜೈನವಿದ್ಯಾರ್ಥಿನಿಲಯ, ಹುಂಚ ಕ್ಷೇತ್ರ ಈ ಕ್ಷೇತ್ರಗಳಲ್ಲಿ ಬಾಗಿಯವರು ಒಂದೊಂದು ಕೋಣೆಯನ್ನು ಕಟ್ಟಿಸಿ ಕೊಟ್ಟಿರುವರು. ಬಾಹುಬಲಿ ಆಶ್ರಮಕ್ಕೂ 1000/– ರೂ. ಧನಸಹಾಯ ಮಾಡಿರುವರು. ಸಾಂಗ್ಲಿಯ ಶ್ರಾವಿಕಾಶ್ರಮಕ್ಕೆ ಇವರು 2000/- ರೂ. ದಾನಮಾಡಿರುವರು. ಬರಗಾಲ ಪರಿಹಾರ ನಿಧಿಗೆ 1000/– ರೂ. ಕೊಟ್ಟಿರುವರು. ಪಿ. ಸಿ. ಜಾಬೀನ್ ಅವರನ್ನು ಪ್ರೇರೇಪಿಸಿ ಜಾಬೀನ್ ಕಾಲೇಜಿಗೆ 50,000/– ರೂ. ದಾನಮಾಡಿಸಿ ಅನುಮೋದನ ಪುಣ್ಯ ಗಳಿಸಿರುವರು. ಶ್ರೀ ಸಿದ್ಧಾರೂಢ ಮಠದ ಧರ್ಮದರ್ಶಿಗಳ ಸಮಿತಿಯಲ್ಲಿ ಇವರು ಐದು ವರ್ಷ ಗೌರವ ಸದಸ್ಯರಾಗಿ ಶ್ರಮದಾನ ಮಾಡಿರುವರು. ಸನ್ಮಾರ್ಗದಲ್ಲಿ ಇವರು ಸಿರಿವಂತರಾದರು. ಸನ್ಮಾರ್ಗದಲ್ಲೇ ಹಣವನ್ನು ವಿನಿಯೋಗಿಸಿ ಬಾಗಿಯವರು ಗಣ್ಯರಾಗಿರುವರು. ಸುಸಂಸ್ಕೃತರೂ ಸಂಪನ್ನರೂ ಆದ ದೇವೇಂದ್ರಪ್ಪ ಬಾಗಿಯವರು ಜೈನ ತೀರ್ಥಕ್ಷೇತ್ರಗಳ ಯಾತ್ರೆಯನ್ನೂ ಮಾಡಿ ಪುಣ್ಯಭಾಗಿಗಳಾಗಿರುವರು.

ಶೃಂಗಾರ ಸುಲಭ ಸುಜ್ಞಾನ ಕಲಾಧರ |
ಭಂಗವಿಲ್ಲದ ಭಾಗ್ಯದೊಡೆಯಾ ||
ಮಂಗಲವಂತಿದೋರು ಸಂಗದೊಳಿರ್ದು ನಿ |
ಸ್ಸಂಗಾ ನಿರಂಜನಸಿದ್ಧಾ ||

ಜಿ. ಎಂ. ಸೋನೇವಾಲ, ಹುಬ್ಬಳ್ಳಿ

ಮೃಗರಾಜನಿಗೆ ತನ್ನ ಕಾಡೇನು, ಪರರ ಕಾಡೇನು ? ಗುಜರಾತೆಲ್ಲಿ ಕರ್ನಾಟಕ ಎಲ್ಲಿ ? ಸೋನೇವಾಲರ ತಂದೆಯವರಾದ ಮುಲ್ಜಿಯವರು ಗುಜರಾತಿನ ಕಚ್ ಪ್ರದೇಶದಿಂದ ಕರ್ನಾಟಕಕ್ಕೆ ಬಂದು ಗದಗಿನಲ್ಲಿ ಹತ್ತಿವ್ಯಾಪಾರವನ್ನು ಪ್ರಾರಂಭಿಸಿ ಶ್ರೀಮಂತರಾದರು. ಇವರ ಮಡದಿ ಕೂವರಬಾಯಿ. ಈ ದಂಪತಿಗಳಿಗೆ ಸಪ್ತತತ್ವಗಳಂತೆ ಏಳು ಜನ ಮಕ್ಕಳಾದರು.

ಶ್ರೀ ಜಿ. ಎಂ. ಸೋನೇವಾಲರು ಗದಗಿನಲ್ಲಿ ಮೆಟ್ರಿಕ್ ಮುಗಿಸಿ ಅನಂತರ ಬೊಂಬಾಯಿ, ಅಹಮದಾಬಾದ್ ನಗರಗಳಲ್ಲಿ ಇಂಜಿನಿಯರಿಂಗ್ ಅಭ್ಯಾಸಮಾಡಿ ಉನ್ನತ ಪದವೀಧರರಾದರು (ಬಿ.ಇ., ಎಂ.ಐ.ಇ.), ಪ್ರತಿಭಾವಂತರೆನಿಸಿಕೊಂಡರು.



ಜಿ. ಎಂ. ಸೋನೇವಾಲ

ಸೋನೇವಾಲ್‌ರವರು ಬೊಂಬಾಯಿ ಮಹಾನಗರದಲ್ಲಿ ಏಳು ವರ್ಷಕಾಲ ಕಂಟ್ರಾಕ್ಟರ್ ಆಗಿ 30 ಲಕ್ಷ ರೂ. ತನಕ ನಿರ್ಮಾಣಕಾರ್ಯ ಮಾಡಿದರು. 1970ರಲ್ಲಿ ಗದಗಿನಲ್ಲೂ 1971ರಲ್ಲಿ ಹುಬ್ಬಳ್ಳಿಯಲ್ಲೂ ಇವರು ಯೋಜನೆ ಮತ್ತು ಮೇಲ್ವಿಚಾರಣೆ ಇಂಜಿನಿಯರ್ ಆಗಿ ಕಾಯಂ ಕಚೇರಿಗಳನ್ನು ಪ್ರಾರಂಭಿಸಿ ಇಂದಿಗೂ ಎರಡು ಕಡೆಯೂ ಕಾರ್ಯ ಮಾಡುತ್ತಿರುವರು. ತಮ್ಮ ನೆರವಿಗೆ ಕೆಲವು ಜನ ಕಾರಕೂನರನ್ನೂ ಇಟ್ಟುಕೊಂಡಿದ್ದಾರೆ. ಗದಗಿನಲ್ಲಿ ಇವರು 15 ಕಟ್ಟಡಗಳನ್ನು ಕಟ್ಟಿಸಿರುವರು.

ಹುಬ್ಬಳ್ಳಿಯಲ್ಲೂ ಇವರಿಗೆ ಒಂದು ನಿಮಿಷವೂ ಪುರಸತ್ತು ಇಲ್ಲದಂತೆ ಕಟ್ಟಡ ನಿರ್ಮಾಣ ಕಾರ್ಯಗಳಿದ್ದೇ ಇವೆ. ತಾವು ವಹಿಸಿಕೊಂಡ ಕಾರ್ಯವನ್ನು ಶ್ರದ್ಧೆಯಿಂದಲೂ ನಿಷ್ಠೆಯಿಂದಲೂ ಪೂರೈಸಿ ಇವರು ಪ್ರಖ್ಯಾತಿ ಪಡೆಯುತ್ತಿರುವರು.

ಸೋನೇವಾಲರು ವಿದ್ಯಾವಂತರೂ ಅಹುದು, ರೂಪವಂತರೂ ಅಹುದು. 1963ರಲ್ಲಿ ಇವರು ಬೊಂಬಾಯಿನ ಶ್ರೀಮತಿ ಮೀನಾದೇವಿಯನ್ನು ಮದುವೆಯಾದರು. ಇವರೂ ವಿದ್ಯಾವಂತರೇ. ಬಿ.ಎ., ಎಸ್.ಟಿ.ಸಿ.. ಸಾಹಿತ್ಯರತ್ನ (ಹಿಂದಿ), ಸಂಸ್ಕೃತ ಡಿಪ್ಲೊಮ, ಡಿಪ್ಲೊಮ ಇನ್ ಮದರ್ ಕ್ರಾಫ್ಟ್ಸ್—ಈ ನಾಲ್ಕು ಶಾಖೆಗಳಲ್ಲಿ ಮೀನಾದೇವಿಯವರು ಪ್ರವೀಣೆಯಾಗಿರುವರು. ಕರ್ಣಾಟಕದ ವಾತಾವರಣಕ್ಕೆ ಒಗ್ಗಿಕೊಂಡಿರುವರು. ಸಾಹಿತ್ಯಪ್ರಿಯರಾದ ಇವರು ಇಂಗ್ಲಿಷ್, ಹಿಂದಿ, ಮರಾಠಿ, ಗುಜರಾತಿ ಮತ್ತು ಕನ್ನಡ ಈ ಪಂಚಭಾಷೆಗಳನ್ನೂ ಓದುವರು ಮತ್ತು ಬರೆಯುವರು. ಸೋನೇವಾಲರಿಗೂ ಈ ಐದು ಭಾಷೆಗಳ ಪರಿಚಯವಿದೆ. ಆದರೆ ಕನ್ನಡವನ್ನು ಓದದೇ ಹೋದರೂ ಮಾತನಾಡಬಲ್ಲರು. ಈ ವಿದ್ಯಾವಂತ ದಂಪತಿಗಳಿಗೆ ರತ್ನತ್ರಯದಂತೆ ಗೌರಾಂಗಿ, ಅತೂಲ್ ಮತ್ತು ವಿಪುಲ್ ಎಂಬುದಾಗಿ ಮೂರು ಜನ ಮಕ್ಕಳು ಇರುವರು.



ಶ್ರೀಮತಿ ಸೋನೇವಾಲ

ಸೋನೇವಾಲರು ಮಹಾವೀರ ಎಜುಕೇಷನ್ ಸೊಸೈಟಿಯ ಉಪಾಧ್ಯಕ್ಷರಾಗಿರುವರು. ಫೋರೂಂ ಆಫ್ ಆರ್ಕಿಟೆಕ್ಟ್ ಇಂಜಿನಿಯರ್ಸ್ ಹುಬ್ಬಳ್ಳಿ-ಧಾರವಾಡ ಸಮಿತಿಗೆ ಇವರು ಕಾರ್ಯದರ್ಶಿಗಳಾಗಿರುವರು. ಶ್ರೀ ವರ್ಧಮಾನ ಬ್ಯಾಂಕಿನ ಸಂಸ್ಥಾಪಕರಲ್ಲಿ ಇವರೂ ಒಬ್ಬರಾಗಿರುವರು. ಬ್ಯಾಡ್ಮಿಂಟನ್, ಕ್ರಿಕೆಟ್ ಮತ್ತು ಈಜು ಇವುಗಳಲ್ಲಿ ಸೋನೇವಾಲರಿಗೆ ಅಭಿರುಚಿಯಿದೆ.

ಮೀನಾದೇವಿಯವರು ಸದ್ಗೃಹಿಣಿಯಾಗಿದ್ದುಕೊಂಡು ಲೋಕಸೇವಾನಿರತರಾಗಿರುವರು. ಮಹಾವೀರ ಎಜುಕೇಷನ್ ಸೊಸೈಟಿಯ ಇಂಗ್ಲೀಷ್ ಮೀಡಿಯಂ ಸ್ಕೂಲಿನಲ್ಲಿ ಇವರು ಗೌರವ ಪ್ರಿನ್ಸಿಪಾಲರಾಗಿರುವರು. ಈ ವಿದ್ಯಾಸಂಸ್ಥೆಯನ್ನು ಹೈಸ್ಕೂಲ್ ಮಟ್ಟಕ್ಕೆ ಏರಿಸಲು ಮೀನಾದೇವಿಯರು ಶ್ರಮಿಸುತ್ತಿರುವರು. ಇವರಿಗೆ ನಿಸರ್ಗಚಿಕಿತ್ಸೆಯಲ್ಲಿ ನಂಬಿಕೆಯಿದೆ. ನಿಸರ್ಗಚಿಕಿತ್ಸಾ ಕೇಂದ್ರ, ಹುಬ್ಬಳ್ಳಿ ಸಲಹಾ ಸಮಿತಿಗೆ ಇವರು ಸದಸ್ಯರಾಗಿರುವರು. ಇವರಿಗೆ ಈಜುವುದರಲ್ಲೂ, ಕಾರು ನಡೆಸುವುದರಲ್ಲೂ ಅಭಿರುಚಿ. ಈಜುವುದನ್ನು ಬಲ್ಲ ಸೋನೇವಾಲ ದಂಪತಿಗಳು ಸಂಸಾರ ಸಾಗರವನ್ನೂ ಈಜಲು ಧರ್ಮಾನುರಾಗಿಗಳಾಗಿರುವರು, ಸೇವಾತತ್ಪರರಾಗಿರುವರು, ಪರೋಪಕಾರಿಗಳಾಗಿರುವರು. ಆದರ್ಶ ದಂಪತಿಗಳಾದ ಇವರು ನಮ್ಮ ಸಮಾಜದ ಕಣ್ಮಣಿಗಳಾಗಿರುವರು.

ಹೊಂಬಣ್ಣ ಮೆಯ್ಯ ಚಕ್ರೇಶನ ಮನದಲ್ಲಿ |
ಬಿಂಬಿಸಿದಂತೆ ನನ್ನೊಳಗೆ ||
ಇಂಬುಗೊಂಡಿರು ನನ್ನ ಗುರುವೆ ನಿನ್ನನು ಬೇಡಿ |
ಕೊಂಬೆ ಚಿದಂಬರಪುರುಷಾ ||

ಗಾತ್ರದೊಳಿರುತಿರ್ದು ಗಾತ್ರಾತೀತ ವಿ |
ಚಿತ್ರಸಂಸಾರವಿನಾಶಾ ||
ಪಾತ್ರವಾಡಿದವೊಲು ನುಡಿಸು ಕಾವ್ಯವ ಭಾಸು |
ನೇತ್ರಾ ನಿರಂಜನಸಿದ್ಧಾ ||

ಭರತ ರಾಜೇಂದ್ರನ ಮೆಚ್ಚಿನ ಗುರುವೆ ಭ |
ವ್ಯರಿಗಾತ್ಮಸುಖಕಲ್ಪತರುವೆ ||
ಕಿರಣದ ಕರುವೆ ಪ್ರಸನ್ನವಾಗೆನ್ನ ಸ |
ಸದ್ಗುರುವೆ ಚಿದಂಬರಪುರುಷಾ ||

ಶಾಂತಿನಾಥ ಭೀಮರಾವ್ ಪತ್ರಾವಳಿ, ಹುಬ್ಬಳ್ಳಿ

ಈ ನವನಾಗರಿಕತೆಯ ಕಾಲದಲ್ಲೂ ಶ್ರೀ ಶಾಂತಿನಾಥರೂ ಇವರ ಧರ್ಮಪತ್ನಿ ಶ್ರೀಮತಿ ಇಂದುಮತಿ ಹೋತಪೇಟೆ ಇವರೂ ದಿನವೂ ದೇವರ ದರ್ಶನ ಮಾಡದೆ, ದೇವರ ಪೂಜೆ ಆಗದೆ, ಬಸದಿಗೆ ಹೋಗದೆ ಆಹಾರವನ್ನು ಸ್ವೀಕರಿಸುವುದಿಲ್ಲ ಎಂಬುದು ಆಶ್ಚರ್ಯದ ಸಂಗತಿ. ಇವರು ಮಹಾವೀರಕೀರ್ತಿಗಳ ಸಂಘದೊಡನೆ ಹತ್ತುಹನ್ನೆರಡು ದಿನ ಪ್ರಯಾಣಮಾಡಿ ಹುಂಚದ ತನಕ ಹೋಗಿರುವರು. ಇವರ ಮುನಿಭಕ್ತಿ ಅಸದೃಶ್ಯವಾದುದು. ಈ ಸಂಘಕ್ಕೆ ಹುಂಚದಲ್ಲಿ ಎಂಟು ದಿನದ ಆಹಾರ ದಾನಮಾಡಿ ಈ ದಂಪತಿಗಳು ಪುಣ್ಯಭಾಗಿಗಳಾಗಿರುವರು. ಕುಂತಲಗಿರಿಯಲ್ಲಿ ಮಹಾವೀರಕೀರ್ತಿಗಳು ಚಾತುರ್ಮಾಸ ಮಾಡಿದಾಗಲೂ ಇವರು ಎಂಟು ದಿನ ಆಹಾರ ದಾನ ಮಾಡಿ ಪುಣ್ಯಪುಂಜರಾಗಿರುವರು. ವಿಮಲಸಾಗರರು, ಸನ್ಮತಿ ಸಾಗರರು, ಜಂಬೂಸಾಗರರು—ಈ ಮುನಿಸಂಘಗಳಿಗೆ ಈ ದಂಪತಿಗಳು ಮನಸಾರೆ ಸೇವೆಮಾಡಿರುವರು.

ದಶಲಕ್ಷಣಪರ್ವದಲ್ಲಿ ಧಾರ್ಮಿಕೋತ್ಸಾಹದಿಂದ ಪೂಜಾಸಾಮಗ್ರಿಯೊಡನೆ ಹೊರಟಿರುವ



ಶಾಂತಿನಾಥ ಭೀಮರಾವ್ ಮತ್ತು ಇಂದುಮತಿ ಶಾಂತಿನಾಥ ಪತ್ರಾವಳಿ

ಈ ದಂಪತಿಗಳು ಎಲ್ಲಿ ಜಿನಾಲಯಗಳ ಜೀರ್ಣೋದ್ಧಾರವಾಗಲಿ, ಪಂಚಕಲ್ಯಾಣವಾಗಲಿ ಅಲ್ಲಿಗೆ ತಪ್ಪದೆ ಆಗಮಿಸುವರು. ಮುನಿರಾಬಾದ್, ಹೊಸದುರ್ಗಗಳಲ್ಲಿ ಪಂಚಕಲ್ಯಾಣವಾದಾಗ ಇವರು ಮೊದಲಿಂದ ಕೊನೆಯ ತನಕ ಅಲ್ಲಿ ತಂಗಿದರು. ಹೇರಳವಾಗಿ ಧನಸಹಾಯ ಮಾಡಿದರು. ಹೊಸದುರ್ಗದಲ್ಲಿ ಇಂದ್ರ-ಇಂದ್ರಾಣಿಗಳಾಗಿ ಪಂಚಕಲ್ಯಾಣಕ್ಕೆ ಕಳೆಕಟ್ಟಿಸಿದರು. ಇವರ ಧಾರ್ಮಿಕೋತ್ಸಾಹ ಅನುಕರಣೀಯವಾದುದು. ಹುಂಚ, ನರಸಿಂಹರಾಜಪುರಕ್ಕೆ ಈ ದಂಪತಿಗಳು ಆಗಾಗ ಹೋಗಿ ಕೈಲಾದ ಸಹಾಯ ಮಾಡುವರು. ಹುಬ್ಬಳ್ಳಿ ಜೈನ ವಿದ್ಯಾರ್ಥಿನಿಲಯಕ್ಕೆ ಇವರು ಧನಸಹಾಯ ಮಾಡಿರುವರು. ಭರತಖಂಡದ ಎಲ್ಲ ಸಿದ್ಧಕ್ಷೇತ್ರಗಳನ್ನೂ ಅತಿಶಯ ಕ್ಷೇತ್ರಗಳನ್ನೂ ಇವರು ದರ್ಶನ ಮಾಡಿರುವರು.

ಸಮ್ಯಕ್ತ್ವಶಿರೋಮಣಿಗಳಾದ ಈ ದಂಪತಿಗಳು ನೇಮವಂತರು. ಇವರು ದಶಲಕ್ಷಣನೋಂಪಿಯನ್ನು ಎಂಟು ವರ್ಷಗಳಿಂದ ಆಚರಿಸುತ್ತಿರುವರು. 9 ವರ್ಷ ಅನಂತನಾಥ ನೋಂಪಿ ಮಾಡಿರುವರು. ಮೂರು ಸೂತಕಪರಿಹಾರ ನೋಂಪಿ ಮಾಡಿರುವರು. ಈ ದಂಪತಿಗಳು ಸಂಸಾರದಲ್ಲಿದ್ದುಕೊಂಡೇ ಆಗಾಗ ಸನ್ಯಾಸ ಜೀವನವನ್ನು ಅನುಸರಿಸುವರು. ಇಂಥ ದಾಂಪತ್ಯವೇ ಸಮವಸರಣದ ಆಗರವಾಗುವುದು. ಎಲ್ಲಿ ನೇಮಿಷ್ಠರಿರುವರೋ ಅಲ್ಲಿ ಸಮವಸರಣವಿರುತ್ತದೆ. ಈ ಭವ್ಯ ದಂಪತಿಗಳ ಭೋಗದಲ್ಲೂ ಯೋಗವಿದೆ. ಇವರ ಗಳಿಕೆಯಲ್ಲೂ ತ್ಯಾಗವಿದೆ.

ಬೆಳಗಾಂ ಭೀಮರಾವ್ ಪತ್ರಾವಳಿ ಇವರು ಮಂಡಿ ವ್ಯಾಪಾರಿಗಳು. ಇವರ ಧರ್ಮಪತ್ನಿ ಶ್ರೀಮತಿ ಚಂಪಾಬಾಯಿ ಅಮ್ಮಿನಭಾವಿ ಇವರು. ಈ ದಂಪತಿಗಳಿಗೆ 31-12-1937ರಲ್ಲಿ ಶಾಂತಿನಾಥ ಪತ್ರಾವಳಿ ಜನಿಸಿದರು. ಇವರು ಬೆಳಗಾಂ ನಗರದಲ್ಲಿ ಮೆಟ್ರಿಕ್ ಪರೀಕ್ಷೆ ಉತ್ತೀರ್ಣರಾದರು. ಅನಂತರ ಬನಿಯನ್ ಮತ್ತು ಸ್ವೆಟರ್ ಫ್ಯಾಕ್ಟರಿಯಲ್ಲಿ ದುಡಿದರು. ಇವರು 15-5-1958ರಲ್ಲಿ ಹುಬ್ಬಳ್ಳಿಯ ಇಂದುಮತಿ ಹೋತಪೇಟೆಯವರನ್ನು ಮದುವೆಯಾದರು. ಇವರ ಸುಖಸಂಸಾರದಲ್ಲಿ ಪಂಚಾಶ್ಚರ್ಯಗಳಾದಂತೆ ಸಂತೋಷಕುಮಾರ್, ಭಾನುಮತಿ, ವೀಣಾ, ಕಿರಣ ಮತ್ತು ಶ್ರೀಧರ ಈ ರೀತಿ ಐದು ಜನ ಮಕ್ಕಳಾದರು.

ಶಾಂತಿನಾಥರು ಮದುವೆಯಾದಮೇಲೆ ಹುಬ್ಬಳ್ಳಿಗೆ ಬಂದು ಎಂ.ಬಿ.ಟಿ. ಲಾರಿ ಕಂಪನಿಯಲ್ಲಿ ಮ್ಯಾನೇಜರ್ ಆದರು. ಧರ್ಮಾತ್ಮರಾದ ಇವರಿಗೆ ಲಕ್ಷ್ಮೀಕಟಾಕ್ಷ ಪ್ರಾಪ್ತವಾಯಿತು. ಹಾಸಿಗೆಯಿದ್ದಷ್ಟು ಕಾಲುಚಾಚಿ ಸತಿಪತಿಯರಿಬ್ಬರೂ ಮಿತ ವ್ಯಯದಿಂದ ಸಂಸಾರವನ್ನು ತೂಗಿಸಿದರು. ಕಾಸಿಗೆ ಕಾಸು ಸೇರಿತು. ಈಗ ಶ್ರೀ ಶಾಂತಿನಾಥರು ಎರಡು ಲಾರಿಗಳ ಮಾಲೀಕರಾಗಿರುವರು.

ಶ್ರೀಶಾಂತಿನಾಥರಿಗೆ ಕನ್ನಡ ಓದಲು ಬರುವುದಿಲ್ಲ. ಮರಾಠಿ ಮತ್ತು ಇಂಗ್ಲೀಷನ್ನು ಚೆನ್ನಾಗಿ ಬಲ್ಲರು. ಇವರ ಮಡದಿ ಶ್ರೀಮತಿ ಇಂದುಮತಿಯವರು

ಕನ್ನಡವನ್ನು ಓದಬಲ್ಲರು ಮತ್ತು ಬರೆಯಬಲ್ಲರು. ಇವರು ಪುಸ್ತಕಪ್ರಿಯರು. ಮಹಾಪುರಾಣ, ರತ್ನಕರಂಡಕ, ಚೇಳಿನಿ, ಚಕ್ರೇಶ್ವರಿ, ದಾನಚಿಂತಾಮಣಿ, ಪೂರ್ವಪುರಾಣ, ಭರತೇಶವೈಭವ ಮತ್ತು ರತ್ನಾಕರನ ಶತಕಸಾಹಿತ್ಯ ಇವನ್ನು ಇಂದುಮತಿಯವರು ಪಾರಾಯಣ ಮಾಡುವರು. ಇವರುಗಳು ಇನ್ನೂ ಅನೇಕ ಕಡೆಗಳಲ್ಲಿ ಧರ್ಮಕಾರ್ಯಗಳಿಗೆ ಧನಸಹಾಯ ಮಾಡಿರುತ್ತಾರೆ.

ಇವರ ದಾಂಪತ್ಯ ಆದರ್ಶ ದಾಂಪತ್ಯ. ಪಂಚನಮಸ್ಕಾರವೇ ಇವರ ಅಷ್ಟೈಶ್ವರ್ಯವಾಗಿದೆ. ನೋಂಪಿಗಳೇ ಇವರ ಶ್ರೀಮಂತಿಕೆಯಾಗಿದೆ. ದೈವಭಕ್ತಿಯೇ ಇವರ ಸಕಲ ಶಕ್ತಿಯಾಗಿದೆ. ಇಂಥ ಮನೆತನಗಳೇ ಜೈನ ಸಮಾಜದ ಅಭಿನವಸಮವಸರಣಗಳು.

ಸುಜನಮನೋಹರ ಸುಜ್ಞಾನದ ಭಾಸ್ಕರ |
ತ್ರಿಜಗದಾಶ್ಚರ್ಯಸೌಂದರ್ಯಾ ||
ನಿಜಮತಿದೋರೆರೊಲವಿಂದಷ್ಟಕರ್ಮ ದಿ |
ಗ್ವಿಜಯಾ ನಿರಂಜನಸಿದ್ಧಾ ||

ಅಧಿಕಕಧಿಕನೆ ಮತ್ತಮುಲತ್ವಕಮಲನೆ |
ಮಧುರಕತ್ಯಂತ ಮಧುರನೆ ||
ಸುಧೆಯ ಸೂಸುತ ನನ್ನ ಹೃದಯದೊಳಿರು ಸುಖ |
ನಿಧಿಯೆ ಚಿದಂಬರಪುರುಷಾ ||

ಕಾಣುತರಿವುತ ವೈಗವಸನಣಿಗೆಯೊಳಿಹ |
ಮಾಣಿಕ್ಯ ಮುಕುರವೆ ಸ್ವಾಮಿ ||
ಕಾಣಿಸು ನನಗೆ ಸನ್ಮತಿಯನು ನಿತ್ಯಕ |
ಲ್ಯಾಣಾ ನಿರಂಜನಸಿದ್ಧಾ ||

ನಾಭಿರಾಜಪ್ಪ ದೇವೇಂದ್ರಪ್ಪ ಕೊಲ್ಹಾಪುರಿ, ಬೆಳಗಾಂ

ಇವರು ಬೆಳಗಾಂ ನಗರದಲ್ಲಿ ಸ್ಟೈಯಿನ್‌ಲೆಸ್‌ಸ್ಟೀಲ್‌ನ ದೊಡ್ಡವ್ಯಾಪಾರಿಗಳು. ಜನಾನುರಾಗಿಗಳಾದ ಇವರ ಸುತ್ತ ಬೆಲ್ಲಕ್ಕೆ ಇರುವೆ ಮುತ್ತಿದಂತೆ ಗಿರಾಕಿಗಳು ಮುತ್ತಿಕೊಳ್ಳುತ್ತಿದ್ದರು. ದೂರದೃಷ್ಟಿಯುಳ್ಳ ಇವರು ಎರಕದ ಫ್ಯಾಕ್ಟರಿ ಸ್ಥಾಪಿಸಿದರು. ಉದ್ಯಮಶೀಲರಾದ ಕೊಲ್ಹಾಪುರಿಯವರು ಫ್ಯಾಕ್ಟರಿಯಲ್ಲಿ ಹಗಲುರಾತ್ರಿ ಶ್ರಮಿಸಿದರು; ದೊಡ್ಡದಾಗಿ ಬೆಳೆಸಿದರು. ನೂರಾರು ಜನ ಬಡವರಿಗೆ ಕೈತುಂಬ ಕೆಲಸ, ಹೊಟ್ಟೆತುಂಬ ಅನ್ನವನ್ನು ಒದಗಿಸಿದರು. ವ್ಯಕ್ತಿ ಮುಂದುವರಿಯಬೇಕಾದರೂ ಉತ್ಪನ್ನ ಹೆಚ್ಚಿಸಬೇಕು; ರಾಷ್ಟ್ರ ಮುಂದುವರಿಯಬೇಕಾದರೂ ಉತ್ಪನ್ನ ಹೆಚ್ಚಿಸಬೇಕು. ಮಹತ್ವಾಕಾಂಕ್ಷಿಗಳಾದ ಇವರು ವ್ಯಾಪಾರವನ್ನೂ ವಿಸ್ತರಿಸಿದರು, ಕೈಗಾರಿಕೆಯನ್ನೂ ವಿಸ್ತರಿಸಿದರು. ಮುನ್ನೆಚ್ಚರಿಕೆಯಿಂದ ಲಕ್ಷಾಂತರ ರೂ. ಇನ್‌ಷೂರೆನ್ಸ್ ಮಾಡಿದರು. ದುಡಿಮೆಯೇ ದೇವರು, ಪರೋಪಕಾರವೇ ಧರ್ಮ ಎಂದು ಕೊಲ್ಹಾಪುರಿ ನಂಬಿದ್ದರು.



ನಾಭಿರಾಜ್ ದೇವೇಂದ್ರಪ್ಪ ಮತ್ತು ಸುನೀತ ನಾಭಿರಾಜ್ ಕೊಲ್ಹಾಪುರಿ

ಪಾತ್ರೆ ವ್ಯಾಪಾರಿಗಳಾದ ದೇವೇಂದ್ರಪ್ಪ ಚಿಂತಾಮಣಿ (ಬೆಳಗಾಂ) ಇವರ ಧರ್ಮಪತ್ನಿ ಚಂದ್ರಾಬಾಯಿ. ಈ ದಂಪತಿಗಳಿಗೆ 1935ರಲ್ಲಿ ಪುತ್ರರತ್ನ ನಾಭಿ ರಾಜಪ್ಪನವರು ಜನಿಸಿದರು. ಬೆಳಗಾಂನಲ್ಲಿ ಇವರು ಮೆಟ್ರಿಕ್ ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ವ್ಯಾಪಾರ ರಂಗವನ್ನು ಪ್ರವೇಶಿಸಿದರು. ತಮ್ಮ ಚಾಕಚಕ್ಯತೆ ಯಿಂದ ವಾಣಿಜ್ಯರಂಗದ ತಿಮಿಂಗಲವಾದರು. ಸುತ್ತಮುತ್ತಣ ವ್ಯಾಪಾರಿಗಳೆಲ್ಲ ಇವರನ್ನು ಕಂಡು ಕರುಬುವಂತಾಯಿತು. ಆದರೆ ಪುಣ್ಯಪುರುಷನ ರಾಜಯೋಗ ವನ್ನು ತಡೆಯಲು ಯಾರಿಂದ ಸಾಧ್ಯ ?

ಕೊಲ್ಹಾಪುರಿಯವರು ಧರ್ಮಾನುರಾಗಿಗಳು, ಸಮ್ಯಕ್ತ್ವ ಶಿರೋಮಣಿಗಳು. ಶ್ರೀಮಂತರಾಗುವುದರ ಜೊತೆಗೆ ಧರ್ಮಾತ್ಮರೂ ಆದರು. ಬೆಳಗಾಂ ನಗರದ ಕೊಲ್ಹಾಪುರಿ ಬಸದಿಯ ಜೀರ್ಣೋದ್ಧಾರವನ್ನು ಮಾಡಿ ಚಂದ್ರಪ್ರಭ ತೀರ್ಥಂಕರ ಸ್ಥಾಪನೆ ಮಾಡಿ ವೈಭವಯುತವಾಗಿ ಪಂಚಕಲ್ಯಾಣವನ್ನೂ ಕೊಲ್ಹಾಪುರಿಯವರು ತಮ್ಮ ಸಹೋದರರ ನೆರವನ್ನು ಪಡೆದು ಪೂರೈಸಿದರು. ಪುಣ್ಯಾತ್ಮರಾದ ಇವರು ಪ್ರಖ್ಯಾತಿಗೆ ಬಂದರು. ಜೈನ ಸಮಾಜದ ಕಣ್ಮಣಿಯಾದರು. ಗಣ್ಯರಲ್ಲಿ ಗಣ್ಯ ರಾದರು. ಮಾತಾಪಿತೃಗಳ ಅಭಿಲಾಷೆಯನ್ನು ಪೂರೈಸಿದರು. ಕೊಲ್ಹಾಪುರಿ ಮನೆ ತನಕ್ಕೆ ತಿಲಕಪ್ರಾಯರಾದರು.

1958-59ರಲ್ಲಿ ಕೊಲ್ಹಾಪುರಿಯವರು ಹುಬ್ಬಳ್ಳಿಯ ಪಿ. ಎಸ್. ದಿನಕರ್ ಅವರ ಪ್ರೇಮಪುತ್ರಿಯಾದ ಸುನೀತರವರನ್ನು ವಿವಾಹವಾದರು. ಇವರ ಮಹತ್ವಾ ಕಾಂಕ್ಷೆಗೆ ಇವರ ಪ್ರಿಯತಮೆ ಮೆರಗು ಹಾಕಿದರು. ಇವರ ಧರ್ಮಾನುರಾಗಕ್ಕೆ ಶ್ರೀಮತಿ ಸುನೀತಕುಮಾರಿಯವರು ತಿಲಕವಿಟ್ಟರು. ಇವರು ಕೊಲ್ಹಾಪುರಿಯವರ ಮನೆಯನ್ನೂ ಮನವನ್ನೂ ತುಂಬಿದರು. ಚತುರ್ವಿಧ ಪುರುಷಾರ್ಥಗಳಲ್ಲೂ ಪತಿ ಯೊಡನೆ ಹೆಗಲಿಗೆ ಹೆಗಲು ಕೊಟ್ಟು ಶ್ರಮಿಸಿದರು. ಶ್ರಾವಿಕೆಯರ ಶಿರೋಮಣಿ ಎನಿಸಿದರು. ಈ ದಂಪತಿಗಳಿಗೆ ಚತುರ್ವಿಧ ಪುರುಷಾರ್ಥಗಳಂತೆ ಸಂಜೀವ್, ರಾಜೀವ್, ಪದ್ಮಾವತಿ ಮತ್ತು ಅಶೋಕ್ ಎಂಬುದಾಗಿ ನಾಲ್ಕು ಜನ ಮಕ್ಕಳಾದರು. ಮಕ್ಕಳ ಏಳಿಗೆಯನ್ನು ನೋಡುತ್ತ ಈ ದಂಪತಿಗಳ ಕಣ್ಣಿಗೆ ಹಬ್ಬವಾಯಿತು. ಕೊಲ್ಹಾಪುರಿಯವರು ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಹೇರಳವಾಗಿ ಇನ್‌ಷೂರೆನ್ಸ್ ಮಾಡಿದರು. ಇವರು ಎಲ್ಲವೂ ಸುಸೂತ್ರವಾಗಿ ನಡೆಯುವಂತೆ ಯೋಜನೆಯನ್ನು ರೂಪಿಸಿದರು.

ಸತಿಪತಿಯರಿಬ್ಬರೂ; ದೈವಭಕ್ತರು ಸಮಾಜಹಿತಚಿಂತಕರು. ಬಾಹುಬಲಿ ಆಶ್ರಮಕ್ಕೆ ಧಾರಾಳವಾಗಿ ಸಹಾಯ ಮಾಡಿದರು. ಸ್ತವನಿಧಿ, ಹುಂಚ ಮುಂತಾದ ಕ್ಷೇತ್ರಗಳಿಗೆ ಗುಪ್ತವಾಗಿ ದಾನಮಾಡಿದರು. ಬಲಗೈ ಕೊಟ್ಟುದನ್ನು ಎಡಗೈ ಕಾಣ

ದಂತೆ ಈ ದಂಪತಿಗಳು ಎಚ್ಚರವಹಿಸಿದರು. ಕೇಳಿದವರಿಗೆ ಇಲ್ಲವೆನ್ನದೆ ಸಂದರ್ಭೋಚಿತವಾಗಿ ದಾನಧರ್ಮ ಮಾಡಿದರು.

1970ರಲ್ಲಿ ತಮ್ಮ 35ನೇ ವರ್ಷದಲ್ಲಿ ಶ್ರೀ ಕೊಲ್ಹಾಪುರಿಯವರು ಹೃದಯಾಘಾತದಿಂದ ಸ್ವರ್ಗಸ್ಥರಾದರು. ಜೈನ ಸಮಾಜದ ಒಂದು ಧ್ರುವತಾರೆ ಉರುಳಿದಂತಾಯಿತು. ಕರ್ಣಾಟಕವು ನಿಷ್ಠಾವಂತ ಉದ್ಯಮಶೀಲನನ್ನು ಕಳೆದುಕೊಂಡಂತೆ ಆಯಿತು. ಬೆಳಗಾಂ ನಗರಸಭೆ ಈ ಭವ್ಯ ಚೇತನದ ಅವಸಾನವನ್ನು ಕೇಳಿ ಕಂಬನಿ ಮಿಡಿಯಿತು. ನೂರಾರು ಜನ ಬಂಧುವರ್ಗ ಗೋಳಾಡಿತು. ನೂರು ವರ್ಷದಲ್ಲಿ ಸಾಧಿಸಬಹುದಾದ್ದನ್ನು ಕೊಲ್ಹಾಪುರಿಯವರು 30 ವರ್ಷದಲ್ಲೇ ಸಾಧಿಸಿದ್ದರು. ಹೆಂಡತಿಮಕ್ಕಳಿಗೆ ಲಕ್ಷಾಂತರ ದ್ರವ್ಯವನ್ನು ಬಿಟ್ಟುಹೋದರು.

ಈ ಮಹಾ ಆಘಾತದಲ್ಲಿ ಶ್ರೀಮತಿ ಸುನೀತಕುಮಾರಿ ಕಂಗೆಡಲಿಲ್ಲ; ಅಳುತ್ತ ಕೂರಲಿಲ್ಲ. ಕರ್ತವ್ಯಪ್ರಜ್ಞೆಯಿಂದ ಇವರು ಎಚ್ಚರಗೊಂಡರು. ವಿಪರೀತ ಅಡೆತಡೆಗಳಲ್ಲಿ ಎರಕದ ಕಾರ್ಖಾನೆಯನ್ನು ನಿಲ್ಲಿಸದೆ ಮುಂದುವರಿಸಿದರು. ಗಂಡನ ವ್ಯಾಪಾರವನ್ನೂ ನೋಡಿಕೊಂಡರು. ಹೆಣ್ಣಾದರೂ ಗಂಡಾಗಿ ದುಡಿಯುತ್ತ ನಮ್ಮ ಸ್ತ್ರೀ ಸಮಾಜಕ್ಕೆ ಮಾರ್ಗದರ್ಶಕರಾಗಿರುವರು. ಇಂತು ತೊಟ್ಟಿಲ ತೂಗುವ ಕೈ ಕರ್ತವ್ಯಪ್ರಜ್ಞೆಯಿಂದ ಸ್ತ್ರೀಸಮೂಹಕ್ಕೆ ಆದರ್ಶಪ್ರಾಯವಾಗಿ ಧರ್ಮಶ್ರದ್ಧೆಯಿಂದ ಇಹಪರಗಳೆರಡನ್ನೂ ಶೋಭಾಯಮಾನವಾಗಿ ಮಾಡುತ್ತಲಿರುವುದೊಂದು—ದೈವದ ಕೊಡುಗೆಯೇ ಸರಿ !

ಅತ್ಯಂತ ಭೋಗವನಧಿಕಸೌಭಾಗ್ಯವ |
ಸತ್ಯಾತ್ಮರಿಗೆ ಮಾಳ್ಪ ಶಾಂತಾ ||
ಸ್ತುತ್ಯಾ ನೀನೆನ್ನೊಳಗಿರು ಭವ್ಯಕಮಲಾ |
ಧಿತ್ಯಾ ಚಿದಂಬರಪುರುಷಾ ||

ಎಸ್. ಎ. ನೇಮಿಚಂದ್ರಯ್ಯ, ಬೆಂಗಳೂರು

ಶ್ರೀ ನೇಮಿಚಂದ್ರಯ್ಯನವರ ಮನೆತನದಲ್ಲಿ 200 ವರ್ಷಗಳಿಂದ ಜ್ಯೋತಿಷ್ಯ ವಿದ್ಯೆ ನೆಲಸಿದೆ. ತಲೆಯಿಂದ ತಲೆಗೆ ಇದು ಹಬ್ಬಿಕೊಂಡೇ ಬಂದಿದೆ. ಶ್ರೀ ನೇಮಿ ಚಂದ್ರಯ್ಯನವರು ಸೆಂಕಿಘಟ್ಟದಲ್ಲಿ ಪ್ರಾಥಮಿಕ ವಿದ್ಯಾಭ್ಯಾಸವನ್ನು ಪೂರೈಸಿ ಶ್ರವಣ ಬೆಳಗೊಳಕ್ಕೆ ಹೋಗಿ ಸಂಸ್ಕೃತ ಮಹಾಪಾಠಶಾಲೆಯಲ್ಲಿ 9 ವರ್ಷ ಓದಿ ವಿಶಾರದ ಉತ್ತೀರ್ಣರಾದರು. ಇವರು ಸಂಸ್ಕೃತವನ್ನು ಕಲಿತುದರಿಂದ ಇವರ ಪುರೋಹಿತ ವೃತ್ತಿಗೂ ಜ್ಯೋತಿಷ್ಯಕ್ಕೂ ಮೆರುಗು ಬಂದಂತಾಯಿತು. ಪ್ರತಿಷ್ಠಾತಿಲಕವನ್ನು ಆಮೂಲಾಗ್ರವಾಗಿ ಇವರು ಓದಿರುವರು. ಯಂತ್ರ, ಮಂತ್ರ, ತಂತ್ರಗಳಲ್ಲಿ ಇವರು ಪ್ರವೀಣರಾಗಿರುವರು. ಇಂದ್ರವರ್ಗದಲ್ಲಿ ದೇವೇಂದ್ರರಂತಿರುವ ಇವರ ಸುತ್ತ ಸದಾ ಒಂದಲ್ಲ ಒಂದು ಸಮಸ್ಯೆಯ ಪರಿಹಾರಕ್ಕೆ ಜನ ಇದ್ದೇ ಇರುತ್ತಾರೆ. ಪಂಚಕಲ್ಯಾಣ ವಿಧಿಯಲ್ಲಿ ಪ್ರವೀಣರಾದ ಇವರನ್ನು ಹಳ್ಳಿಯಿಂದ ದಿಳ್ಳಿಯ ತನಕ ಕರೆಸಿಕೊಂಡು ಗೌರವಿಸಿರುವರು. ಈವರೆಗೆ ನೂರಾರು ಪಂಚಕಲ್ಯಾಣಗಳನ್ನೂ, ಉದ್ಯಾಪನೆ ಗಳನ್ನೂ ಮಾಡಿಸಿ ಇವರು ಜೈನಸಮಾಜದಲ್ಲಿ ಗಣ್ಯರಾಗಿರುವರು. ಆರ್ಥಿಕವಾಗಿ ಬಡವರಾದ ಪುರೋಹಿತ ವರ್ಗದಲ್ಲಿ ಶ್ರೀ ನೇಮಿಚಂದ್ರಯ್ಯನವರು ಪೂಜೆಯಿಂದ, ಜ್ಯೋತಿಷ್ಯದಿಂದ ಹಾಗೂ ವ್ಯಾಪಾರದಿಂದ ಗಳಿಸಿ ಸಿರಿವಂತರಾಗಿರುವರು. ಬಡವರನ್ನು ಕಂಡರೆ ಮನಕರಗುವ ಇವರು ಬಡವರಿಗಾಗಿ ಒಂದು ಕಲ್ಯಾಣಮಂಟಪವನ್ನು ತಾವೇ ಕಟ್ಟಿಸಿ ಸರಳವಾದ ಮದುವೆಗಳನ್ನು ನಡೆಸಿಕೊಟ್ಟು ಬಡಶ್ರಾವಕರ ಸಮಸ್ಯೆಯನ್ನು ಬಗೆಹರಿಸುವ ಧ್ಯೇಯವನ್ನಿಟ್ಟುಕೊಂಡಿರುವರು. ಬೆಂಗಳೂರಿನ ಶ್ರೀಮಂತವರ್ಗ ತೆಪ್ಪಗಿರುವಾಗ ಶ್ರೀ ನೇಮಿಚಂದ್ರಯ್ಯನವರಿಗೆ ಇಂಥ ಆಲೋಚನೆ ಬಂದುದು ನಮ್ಮ ಸೌಭಾಗ್ಯವೇ ಸರಿ. ಎಲ್ಲ ಜನಾಂಗದವರು ಇವರಿಂದ ಣಾಮೋಂಕಾರಮಂತ್ರವನ್ನು ಹೇಳಿಸಿಕೊಂಡು, ಅದನ್ನು ಜಪಿಸುತ್ತ ತಮ್ಮ ಕಷ್ಟಕಾರ್ಪಣ್ಯಗಳಿಂದ, ರೋಗರುಜಿನ ಗಳಿಂದ ಪಾರಾಗುತ್ತಿರುವರು. ಜೈನರೇ ಈ ಮಂತ್ರವನ್ನು ಈಗ ಬಿಡುತ್ತಿರುವಾಗ ಜೈನೇತರರಿಗೂ ಇವರು ಕಲಿಸಿ ಒಂದು ಪವಾಡವನ್ನೆಸಗಿರುವರು. ಇವರ ಕ್ರಾಂತಿ ನಿಶ್ಶಬ್ದವಾದ ಕ್ರಾಂತಿ. ಆಡಂಬರವಿಲ್ಲ, ಅಟ್ಟಹಾಸವಿಲ್ಲ. ಶ್ರೀ ನೇಮಿಚಂದ್ರಯ್ಯ ನವರು ಒಬ್ಬ ವ್ಯಕ್ತಿಯಲ್ಲ, ಈಗ ಒಂದು ಶಕ್ತಿಯಾಗಿರುವರು.

ಬತ್ತದ ಆಗರವಾದ ಸೆಂಕಿಘಟ್ಟವು ಮಾಗಡಿ ತಾಲ್ಲೂಕಿನಲ್ಲಿದೆ. ಇಲ್ಲಿಯ ಜಿನಾಲಯದಲ್ಲಿ ಅನಂತಯ್ಯನವರು ಪುರೋಹಿತರು. ಇವರ ಮಡದಿ ರಾಂಪುರದ ಯಶೋಮತಮ್ಮ. ಈ ದಂಪತಿಗಳಿಗೆ ಪಂಚಾಸ್ತಿಕಾಯಗಳಂತೆ ಶ್ರೀಮತಿ ಪೊನ್ನಕ್ಕ, ಶ್ರೀಯುತರಾದ ನೇಮಿಚಂದ್ರಯ್ಯ, ಬ್ರಹ್ಮಸೂರಯ್ಯ, ಶ್ರೀಧರಯ್ಯ ಮತ್ತು ಶ್ರೀಮತಿ

ಕಾಂತಮ್ಮ—ಈ ರೀತಿ ಐದು ಜನ ಮಕ್ಕಳಾದರು. ಇವರಲ್ಲಿ ಶ್ರೀ ನೇಮಿಚಂದ್ರಯ್ಯನವರು 3-6-1916ರಲ್ಲಿ ಜನಿಸಿದರು. ಇವರಿಗೆ 1934ರಲ್ಲಿ ಕುರುಡಿ ಪಾರ್ಶ್ವನಾಥಯ್ಯನವರ ಪುತ್ರಿ ಶ್ರೀಮತಿ ಪದ್ಮಾವತಮ್ಮನೊಡನೆ ಮದುವೆಯಾಯಿತು. ಈ ದಂಪತಿಗಳಿಗೆ ಏಕಾಕ್ಷರೀ ಮಂತ್ರದಂತೆ ಒಂದೇ ಒಂದು ಮಗು ಜಿನಚಂದ್ರ. 1950ರಲ್ಲಿ ಶ್ರೀಮತಿ ಪದ್ಮಾವತಮ್ಮನವರು ಪರಂಧಾಮವನ್ನೈದಿದರು. ಅನಂತರ ಶ್ರೀ ನೇಮಿಚಂದ್ರಯ್ಯನವರು ರಾಂಪುರದ ಪದ್ಮಯ್ಯನವರ ಮಗಳು ಶ್ರೀಮತಿ ಹೊಂಬುಜಮ್ಮನವರನ್ನು ವರಿಸಿದರು.

ಶ್ರೀ ನೇಮಿಚಂದ್ರಯ್ಯನವರು ಸೆಂಕಿಘಟ್ಟದ ಜಿನಾಲಯದಲ್ಲಿ ಹತ್ತು ವರ್ಷ, ತೋವಿನಕೆರೆ ಜಿನಾಲಯದಲ್ಲಿ ಎರಡು ವರ್ಷ, ಬೆಳ್ಳೂರು ಜಿನಾಲಯದಲ್ಲಿ 22 ವರ್ಷ ಅರ್ಚಕರಾಗಿದ್ದು ಎಲ್ಲ ಕಡೆಯೂ ಊರಿಗೆ ಬೇಕಾದವರಾಗಿ ಗಣ್ಯರೆನಿಸಿಕೊಂಡರು. ಬೆಳ್ಳೂರಿನಲ್ಲಿದ್ದಾಗ ಇವರು ಮರದ ವ್ಯಾಪಾರ ಮಾಡಿದರು. ಗರಗಸದ ಕಾರ್ಖಾನೆ ಇಟ್ಟರು. ಇಲ್ಲೇ ಸಿರಿವಂತರಾದರು. 12-12-1971ರಲ್ಲಿ ಇವರು ಬೆಳ್ಳೂರನ್ನು ತೊರೆದು ಬೆಂಗಳೂರು ಜಿನಾಲಯದ ಅರ್ಚಕರಾಗಿ ಆಗಮಿಸಿದರು. ಹಳ್ಳಿಯಿಂದ ನಗರಕ್ಕೆ ಬಂದರು.

ವಿದ್ಯಾವಂತರಾದ ಇವರು ಅಷ್ಟಾವಧಾನಪದಸಂಗ್ರಹ, ಭಕ್ತಾಮರಸ್ತೋತ್ರ ಇವುಗಳಿಗೆ ಟೀಕೆ ಬರೆದು ಪ್ರಕಟಿಸಿರುವರು. ಪ್ರತಿಷ್ಠಾತಿಲಕವನ್ನು ಪ್ರಕಟಿಸುವ ಆಸೆ ಇಟ್ಟುಕೊಂಡಿರುವರು. ಎರಡು ಮೂರು ಬಾರಿ ಭರತಖಂಡವನ್ನೆಲ್ಲ ಇವರು ತಮ್ಮ ಪತ್ನಿ ಹೊಂಬುಜಮ್ಮನವರೊಡನೆ ಸುತ್ತಾಡಿ ಸಿದ್ಧಕ್ಷೇತ್ರಗಳ ದರ್ಶನ ಮಾಡಿರುವರು.

ಜ್ಯೋತಿಷ್ಯದಲ್ಲಿ ಇವರು ಸಿದ್ಧಹಸ್ತರು. ದೆಹಲಿಯ ಒಬ್ಬ ಶ್ರೀಮಂತರ ಜಾತಕವನ್ನು ಅಲ್ಲಿಯ ಜೋಯಿಸರೊಬ್ಬರು ತಪ್ಪಾಗಿ ಗುಣಿಸಿ ಆಯುಷ್ಯನಿರ್ಧಾರದಲ್ಲಿ ಎಡವಿದ್ದರು. ಭೇದವಿಜ್ಞಾನಿಯಾದ ಆ ಶ್ರೀಮಂತರು ಸಾವನ್ನು ಸ್ವಾಗತಿಸುತ್ತ ಸಿದ್ಧರಾದರು. ಆಗ ನೇಮಿಚಂದ್ರಯ್ಯನವರು ಅವರ ಜಾತಕವನ್ನು ಪರಿಷ್ಕಾರಮಾಡಿ ಇನ್ನೂ ಹತ್ತು ವರ್ಷ ಅವರು ಬದುಕುವರೆಂದು ಭರವಸೆ ನೀಡಿದರು. ಅದರಂತೆ ಆ ಶ್ರೀಮಂತರು ಇನ್ನೂ ಬದುಕಿರುವರು.

ಕೆ. ಟಿ. ರಾಮಯ್ಯ, ಬೆಂಗಳೂರು

ಮಾಗಡಿ ತಾಲ್ಲೂಕು ಕಲ್ಯವು ಹಿಂದೆ ಪ್ರಖ್ಯಾತ ಜೈನಕ್ಷೇತ್ರವಾಗಿದ್ದಿತು. ಈಗಲೂ ಇಲ್ಲಿ ಜೀರ್ಣವಾದ ಜಿನಾಲಯಗಳಿವೆ; ಭಿನ್ನವಾದ ಜಿನಬಿಂಬಗಳಿವೆ ಇಲ್ಲಿ ಸಾಧುಜನಾಂಗ ಹೇರಳವಾಗಿರುವರು. ಹಿಂದೆಲ್ಲ ಇವರು ಜೈನರಾಗಿದ್ದರು. ಕಾಲಕ್ರಮೇಣ ಜೈನ ಆಚಾರಗಳನ್ನು ಇವರು ಮರೆತರಾದರೂ ಎಂಥ ಸಂದರ್ಭದಲ್ಲೂ ತಿನ್ನುವುದರಲ್ಲೂ ಕುಡಿಯುವುದರಲ್ಲೂ ಅಪಮಾರ್ಗಕ್ಕೆ ಇವರು ಹೋದವರಲ್ಲ. ಅಹಿಂಸಾವ್ರತಧಾರಿಗಳಾಗಿ ಈ ಜನಾಂಗ ಇಂದಿಗೂ ಇರುವುದು ಒಂದು ಸೋಜಿಗವೇ ಆಗಿದೆ.

ಕಲ್ಯದ ತಿಮ್ಮಪ್ಪನವರು ವ್ಯವಸಾಯಗಾರರು. ಇವರ ಮಡದಿ ಮಲ್ಲಮ್ಮ ಸದ್ಗೃಹಿಣಿಯಾಗಿ ಮನೆತನದ ಹಿರಿಮೆಗೆ ಸಾಕ್ಷಿಯಾದರು. ಈ ದಂಪತಿಗಳಿಗೆ ಚತುರ್ವಿಧ ಪುರುಷಾರ್ಥಗಳಂತೆ ಶ್ರೀ ರಾಮಯ್ಯ, ಚನ್ನಪ್ಪ, ಶ್ರೀಮತಿಯರಾದ ತಾಯಮ್ಮ ಮತ್ತು ಅಕ್ಕಯ್ಯಮ್ಮ ಎಂಬ ನಾಲ್ಕು ಮಂದಿ ಮಕ್ಕಳಾದರು. ಇವರಲ್ಲಿ ಶ್ರೀಯುತ ರಾಮಯ್ಯನವರು 1914ರಲ್ಲಿ ಜನಿಸಿದರು. ಇವರು ಲೋವರ್ ಸೆಕಂಡರಿಯಲ್ಲಿ ಉತ್ತೀರ್ಣರಾಗಿ ಅಂದಿಗೆ ದೊಡ್ಡ ವಿದ್ಯಾವಂತರೆನಿಸಿದರು. ಮನೆತನದ ವೃತ್ತಿಯಾದ ವ್ಯವಸಾಯವನ್ನೇ ಇವರೂ ಹಿಡಿದರು. ಬೆವರು ಸುರಿಸಿ ಬದುಕುವುದನ್ನು ಕಲಿತರು. ಅತಿಥಿ-ಅಭ್ಯಾಗತರ ಸೇವೆಯನ್ನು ನಿಷ್ಠೆಯಿಂದ ಮಾಡುತ್ತ ಸಂತೃಪ್ತರಾಗಿ ಇವರು ಬಾಳಿದರು.

ರಾಮಯ್ಯನವರು ಮಾಗಡಿ ತಾಲ್ಲೂಕು ಬಿಸ್ಕೂರಿನ ಶ್ರೀಮತಿ ನಂಜಮ್ಮನವರನ್ನು ಮದುವೆಯಾದರು. ಅತಿಥಿ-ಅಭ್ಯಾಗತರ ಸೇವೆಗೆ ಇವರ ಜೊತೆಗೆ ಇನ್ನೊಬ್ಬರು ಬಂದಂತಾಯಿತು. ನಂಜಮ್ಮನವರು ಮನೆಗೆ ಸರ್ವಮಂಗಳೆಯಾಗಿ ಆಗಮಿಸಿದರು. ರಾಮರಾಜ್ಯದಲ್ಲಿ ಸೋಮಕಳೆಯನ್ನು ಇವರು ತುಂಬಿದರು, ಈ ದಂಪತಿಗಳಿಗೆ ಅಷ್ಟಗುಣಗಳಂತೆ ತೀರ್ಥರಾಜು, ವರ್ಧಮಾನ್. ಪದ್ಮಯ್ಯ ಪದ್ಮರಾಜಯ್ಯ, ಮಂಜುಳ, ಪದ್ಮಾವತಮ್ಮ, ಕಮಲ ಮತ್ತು ನವರತ್ನ ಎಂಬುದಾಗಿ ಎಂಟು ಜನ ಮಕ್ಕಳಾದರು. ರಾಮರಾಜ್ಯದಲ್ಲಿ ಅಷ್ಟೈಶ್ವರ್ಯಗಳೂ ಅವತರಿಸಿದಂತಾಯಿತು !

1956ರಲ್ಲಿ ಶ್ರೀ ಶ್ರೀ ಭದ್ರಬಾಹುಸ್ವಾಮಿಗಳು ಸಾಧುಜನಾಂಗಕ್ಕೆ ಧಾರ್ಮಿಕ ಪ್ರಚೋದನೆಯನ್ನು ನೀಡಿ ಅವರಲ್ಲಿದ್ದ ಧರ್ಮಾನುರಾಗವನ್ನು ಉದ್ದೀಪನಗೊಳಿಸಿದರು. ಬೂದಿ ಮುಚ್ಚಿದ ಕೆಂಡವಾಗಿದ್ದ ಶ್ರೀ ರಾಮಯ್ಯನವರು ಈ ಆಕರ್ಷಣೆಗೆ ಒಳಗಾಗಿ, ಮರೆತುದನ್ನು ಜ್ಞಾಪಿಸಿಕೊಳ್ಳುವಂತೆ, ಪಂಚಪದವನ್ನು ನೆನಪು ಮಾಡಿ

ಕೊಂಡರು. ನಾಮೋಕಾರಮಂತ್ರವನ್ನು ಮತ್ತೆ ಆವಾಹನೆ ಮಾಡಿದರು. ಅಹಿಂಸಾ ವ್ರತವನ್ನು ಸಮ್ಯಕ್ತ್ವದಲ್ಲಿ ಅದ್ದಿದರು. ಈ ಮನೆತನ ಜೈನಧರ್ಮವನ್ನು ವಿಧಿ ಪೂರ್ವಕ ಸ್ವೀಕರಿಸಿತು. ಇದೇ ಸಂದರ್ಭದಲ್ಲಿ ವೈನಾಡಿನ ದಾನಚಿಂತಾಮಣಿಯೂ ಸಮ್ಯಕ್ತ್ವ ಶಿರೋಮಣಿಯೂ ಆದ ಶ್ರೀ ಪದ್ಮಯ್ಯಗೌಡರ ಕೃಪಾಕಟಾಕ್ಷವೂ ಶ್ರೀ ರಾಮಯ್ಯನವರ ಮೇಲೆ ಬಿದ್ದಿತು. ಇವರ ಸಮ್ಯಕ್ತ್ವ ಸದೃಢವಾಯಿತು ! ಸಂಪನ್ನವಾಯಿತು ! ಸಮೃದ್ಧಿಯಾಯಿತು ! ರಾಮಯ್ಯನವರ ಹೆಂಡತಿಮಕ್ಕಳೂ ಪದ್ಮಯ್ಯಗೌಡರ ಅಭಿನವಸಮವಸರಣದ ಸದಸ್ಯರಾದರು. ಎಲ್ಲರೂ ರಾತ್ರಿಭೋಜನ ತ್ಯಾಗಮಾಡಿದರು. ಸಂಧ್ಯಾವಂದನೆ ಕಲಿತರು. ಭಾವಪೂಜೆಯಲ್ಲಿ ತನ್ಮಯರಾದರು. ಅಷ್ಟವಿಧಾರ್ಚನೆ ಮಾಡುತ್ತ ಅಷ್ಟಗುಣಗಳನ್ನು ಬಾಚುವ ಯೋಜನೆ ಹಾಕಿದರು. ಪವಾಡವೆಂದರೆ ಇದೇ ತಾನೆ ? ಧರ್ಮಾನುರಾಗಿಗಳಾದ ಇವರು ಕರ್ಮದ ಒತ್ತಡ ವನ್ನು ತಗ್ಗಿಸುವ ಉಪಾಯವನ್ನು ಕಂಡುಕೊಂಡರು. ರಾಮಯ್ಯನವರಂತೂ ಈಗ ಏಕಭುಕ್ತವ್ರತವನ್ನು ಪಾಲಿಸುತ್ತಿರುವರು. ಭಾವತಾಪಸಿಗಳಾಗಿ ನಿಶ್ಚಿಂತರಾಗಿರುವರು. ಆಗಾಗ ಶ್ರವಣಬೆಳಗುಳ, ಹುಂಚ, ಸಿಂಹನಗದ್ದೆ, ಕಾರ್ಕಳ, ಮೂಡುಬಿದರೆ, ಧರ್ಮ ಸ್ಥಳಗಳಿಗೆ ಈ ಮನೆತನ ಯಾತ್ರೆಮಾಡುತ್ತ ತಮ್ಮ ಭಕ್ತಿಯ ಸೊಡರನ್ನು ಉಜ್ವಲ ಗೊಳಿಸುವರು.

1965ರಿಂದ ಶ್ರೀ ರಾಮಯ್ಯನವರು ಸಂಸಾರಸಮೇತ ಬಂದು ಬೆಂಗಳೂರು ನಗರದಲ್ಲಿ ಸ್ವಂತ ಮನೆ ಮಾಡಿಕೊಂಡು ವಾಸಮಾಡುತ್ತಿರುವರು. ಮಕ್ಕಳನ್ನೆಲ್ಲ ವಿದ್ಯಾವಂತರನ್ನಾಗಿ ಮಾಡುತ್ತಿರುವರು. ಮಾರ್ಪಡುತ್ತಿರುವ ಯುಗಧರ್ಮವನ್ನು ಇವರು ಗ್ರಹಿಸಿರುವರು. ಕಾಲದ ಕುಣಿತಕ್ಕೆ ತಾವೂ ತಾಳಹಾಕುವುದನ್ನು ಕಲಿಯ ಬೇಕಲ್ಲವೆ ? ಬೆಂಗಳೂರಿನಲ್ಲಿ ಇವರು ಇಂಡಿಯನ್ ಎಜುಕೇಷನ್ ಸೊಸೈಟಿ ಮತ್ತು ಸುಜಾತ ವಿದ್ಯಾಸಂಸೆಗಳನ್ನು ಸ್ಥಾಪಿಸಿ ಶಿಶುವಿಹಾರ, ಪ್ರಾಥಮಿಕ ಶಿಕ್ಷಣ, ಹಿಂದಿ, ಸಂಸ್ಕೃತ ಮತ್ತು ಸಂಗೀತ ಶಿಕ್ಷಣ ಶಾಲೆಗಳನ್ನು ಸ್ಥಾಪಿಸಿರುವರು. ಇವುಗಳಲ್ಲಿ 75 ಜನ ನೌಕರರಿದ್ದಾರೆ; ಎರಡು ಸಹಸ್ರ ಮಂದಿ ವಿದ್ಯಾರ್ಥಿಗಳಿರುವರು. ಈ ಸಂಸ್ಥೆಗಳಿಗೆ ತಮ್ಮ ಪರಿಶ್ರಮದಿಂದ ಹಾಗೂ ಜನತೆಯ ಸಹಕಾರದಿಂದ ಸ್ವಂತ ಕಟ್ಟಡ ಗಳನ್ನೂ ರಾಮಯ್ಯನವರು ಕಟ್ಟಿಸಲಿರುವರು. ಹೆಚ್ಚು ಕಲಿಯದ ಕಲ್ಯದ ರಾಮಯ್ಯ ನವರು ಬೆಂಗಳೂರಿಗೆ ಬಂದು ಬೇರು ಬಿಟ್ಟುದು ಸಾಮಾನ್ಯದ ಮಾತೆ ? ಅದೂ ಉಸಿರಾಡಲು 'ಎಡೆಯಿಲ್ಲದ ಈ ನಗರದಲ್ಲಿ ವಿದ್ಯಾಸಂಸ್ಥೆಗಳನ್ನು ಸ್ಥಾಪಿಸಿ ಎಲ್ಲಕ್ಕೂ ಸ್ಥಳಾವಕಾಶವನ್ನು ಮಾಡಿಕೊಂಡಿರುವುದು ಇವರ ಸಾಹಸಕ್ಕೆ ಸಾಕ್ಷಿಯಾಗಿಲ್ಲವೆ ? ಎಲ್ಲವೂ ಪಂಚ ಪರಮೇಷ್ಠಿಗಳ ಕೃಪೆಯೆಂದು ರಾಮಯ್ಯನವರು ನಂಬಿರುವರು.

ಎ. ಜ್ವಾಲ್ನಪ್ಪನವರು, ಭದ್ರಾವತಿ

ಆದಿರಾಜಯ್ಯನವರು ಬೆಂಗಳೂರಿನ ಸುಪ್ರಸಿದ್ಧ ವ್ಯಾಪಾರಿಗಳು. ಇವರ ಮಡದಿ ಚಂದ್ರಮ್ಮನವರು ಮೈಸೂರಿನ ಅಡಿಕೆ ಮಂಡಿ ಬ್ರಹ್ಮಯ್ಯನವರ ಮಗಳು. ಈ ದಂಪತಿ ಗಳಿಗೆ ದ್ವಾದಶಾನುಪ್ರೇಕ್ಷೆಗಳಂತೆ ಹನ್ನೆರಡು ಜನ ಮಕ್ಕಳಾದರು. ಇವರಲ್ಲಿ 8ನೆಯವರಾದ ಶ್ರೀ ಜ್ವಾಲ್ನಪ್ಪನವರು 31-7-1912ರಲ್ಲಿ ಜನಿಸಿದರು. ಇವರು ಮೈಸೂರಿನ ಎಂ. ಎಲ್. ವರ್ಧಮಾನಯ್ಯನವರ ವಿದ್ಯಾರ್ಥಿನಿಲಯದಲ್ಲಿದ್ದು ಕೊಂಡು ಎಸ್.ಎಸ್.ಎಲ್.ಸಿ.ಯಲ್ಲಿ ಉತ್ತೀರ್ಣರಾದರು ಮತ್ತು ಬೆಂಗಳೂರಿಗೆ ಬಂದು 1933ರಲ್ಲಿ ಎಲೆಕ್ಟ್ರಿಕಲ್ ಡಿಪ್ಲೊಮ ಮಾಡಿದರು. ಇಲ್ಲಿಗೆ ಇವರ ವಿದ್ಯಾಭ್ಯಾಸ ಪೂರೈಸಿತು. ಇವರು ದೋರ್ಬಲಶಾಸ್ತ್ರಿಗಳ ಬಳಿ ತ್ರಿಕಾಲಸಂಧ್ಯಾವಂದನೆ ಕಲಿತರು. ಶ್ರೀ ಎ. ಶಾಂತಿರಾಜಶಾಸ್ತ್ರಿಗಳು ಇವರಿಗೆ ಜೈನ ಧಾರ್ಮಿಕ ಗ್ರಂಥಗಳ ರಹಸ್ಯವನ್ನು ಹೇಳಿಕೊಟ್ಟರು. ಇಬ್ಬರು ವಿದ್ವಾಂಸರ ಉಪಕಾರವನ್ನು ಈಗಲೂ ಇವರು ಸ್ಮರಿಸುವರು.



ಎ. ಜ್ವಾಲ್ನಪ್ಪ

1933-39ರ ತನಕ ಶ್ರೀ ಜ್ವಾಲ್ನಪ್ಪನವರು ಹಾಸನದಲ್ಲಿ ಕಂಟ್ರಾಕ್ಟರ್ ಆಗಿದ್ದರು. ಕೆಲವು ದಿನ ಸಂಚಾರೀ ಚಲನಚಿತ್ರವನ್ನೂ ನಡೆಸಿದರು. 1939ರಲ್ಲಿ ಎಲೆಕ್ಟ್ರಿಕಲ್ ಡಿಪಾರ್ಟ್‌ಮೆಂಟಿನಲ್ಲಿ ಆಪರೇಟರ್ ಆದರು. ಆಗಿನ ಸಂಬಳ ತಿಂಗಳಿಗೆ 55/- ರೂ. ಇವರು ಸಂಘಟನಾಚತುರರು. ಕಾರ್ಮಿಕ ಸಂಘವನ್ನು ಕಟ್ಟಿ ಅದಕ್ಕೆ ಕೆಲವು ವರ್ಷ ಅಧ್ಯಕ್ಷರಾಗಿ, ಕಾರ್ಯದರ್ಶಿಗಳಾಗಿ ಮಾರ್ಗದರ್ಶನ ಮಾಡಿದರು.

1954ರಲ್ಲಿ ಇವರು ಕಾರ್ಮಿಕರ ಸ್ಥಿತಿ ಉತ್ತಮವಾಗಬೇಕೆಂದು ಮುಷ್ಕರ ಹೂಡಿದರು. ಇಡೀ ಪ್ರಾಂತವೇ ಆಗ ಇವರ ದಿಟ್ಟತನವನ್ನು ಮೆಚ್ಚಿ ಕೊಂಡಾಡಿತು. ಇದರ ಪರಿಣಾಮವೆಂದರೆ ಸರ್ಕಾರವು ಇವರನ್ನು ಬಳ್ಳಾರಿ ಜಿಲ್ಲೆಯ ಕೂಡ್ಲಿಗೆಗೆ ವರ್ಗ ಮಾಡಿತು. ಶತಾಯುಗತಾಯ ಇವರು ಹಿಡಿದ ಪಟ್ಟನ್ನು ಬಿಡದೆ, ಕ್ಷಮಾಯಾಚನೆ ಮಾಡದೆ ಧೀರೋದಾತ್ತರಾಗಿ ಕಾರಣಪುರುಷರೆನಿಸಿದರು. ಬಳ್ಳಾರಿ ಜಿಲ್ಲೆಯಲ್ಲಿಯೂ ಸಂಘಕಟ್ಟಿ ಅಧ್ಯಕ್ಷರಾಗಿ ಸಂಘಟಿಸಿದರು. ಎಂಟು ವರ್ಷ ಇವರು ಕೂಡ್ಲಿಗಿಯಲ್ಲಿದ್ದರು. ಅನಂತರ 64–65ರಲ್ಲಿ ಜೋಗಿನಲ್ಲಿದ್ದರು. ಗೇರುಸೊಪ್ಪೆ ಸುತ್ತಮುತ್ತ ಹಾಳಾದ ಜಿನಾಲಯಗಳಲ್ಲಿ ಮೂಲೆಗುಂಪಾಗಿದ್ದ ಜಿನಮೂರ್ತಿಗಳನ್ನು ಸಂಗ್ರಹಿಸಿ ಮೈಸೂರು, ಸಿಂಹನಗದ್ದೆ, ಮೂಗ್ತಿಹಳ್ಳಿ ಜಿನಾಲಯಗಳಿಗೆ ಕಳಿಸಿ ಅವಕ್ಕೆ ನೆರಳು ಮಾಡಿಕೊಟ್ಟರು.

1933ರಲ್ಲಿ ಶ್ರೀ ಜ್ವಾಲ್ನಪ್ಪನವರು ತಮ್ಮ ಅಕ್ಕ ಮಧುರಾಜಮ್ಮನ ಮಗುವಾದ ಶ್ರೀಮತಿ ಪುಟ್ಟತಾಯಮ್ಮನನ್ನು ವರಿಸಿದರು. ಇವರು ಸಮ್ಯಕ್ತ್ವಶಿರೋಮಣಿಗಳಾಗಿರುವರು. ಇಡಕ್ಕಿನೋಂಪಿ, ಶುಕ್ರವಾರ ನೋಂಪಿ, ಆದಿತ್ಯವಾರದ ನೋಂಪಿ, ಫಲಮಂಗಳವಾರದ ನೋಂಪಿ, ಜ್ಯೋತಿನೋಂಪಿ ಇಷ್ಟನ್ನೂ ಮಾಡಿ ಪುಟ್ಟತಾಯಮ್ಮನವರು ಪಾವನೆಯರಾಗಿರುವರು. ಈ ದಂಪತಿಗಳಿಗೆ ಏಕಾಕ್ಷರೀಮಂತ್ರದಂತೆ ಒಬ್ಬನೇ ಒಬ್ಬ ಮಗ ಶ್ರೀ ಜಯಪ್ರಕಾಶ್. ಇವರು ಕೊನೆಯ ವರ್ಷದ ಬಿ.ಇ. ಓದುತ್ತಿರುವರು ಮತ್ತು ತಮ್ಮ ಸೋದರಸೊಸೆಯಾದ ಎಚ್. ಎಂ. ನಾಗಲಕ್ಷ್ಮಿಯನ್ನು ಸಾಕುಮಗಳಾಗಿ ಸಾಕುತ್ತಾ ಇದ್ದಾರೆ.

ಶ್ರೀ ಜ್ವಾಲ್ನಪ್ಪನವರು ಧಾರ್ಮಿಕ ಗ್ರಂಥಗಳನ್ನು ರಾಶಿರಾಶಿಯಾಗಿಟ್ಟುಕೊಂಡು ಅವನ್ನೆಲ್ಲ ತಾವೂ ಓದುವುದಲ್ಲದೆ ಜೈನರ ಮನೆಮನೆಗೂ ಹೋಗಿ ಪುಕ್ಕಟೆಯಾಗಿ ಪುಸ್ತಕಗಳನ್ನು ಹಂಚಿ ಶಾವಕ-ಶ್ರಾವಿಕೆಯವರು ಓದುವಂತೆ ಪ್ರೇರೇಪಿಸಿರುವರು. ಜಿಗಣೆ ಹಿಡಿದಂತೆ ಹಿಡಿದು ಜನ ಓದುವಂತೆ ಮಾಡಿರುವರು. ಇವರ ಸಾಧನೆ ಸ್ತುತ್ಯಾರ್ಹವಾದುದು.

ಶ್ರೀ ಜ್ವಾಲ್ನಪ್ಪನವರು ಎಲ್ಲೇ ಇರಲಿ ಅಲ್ಲಿನ ಶ್ರಾವಕರನ್ನು ಸಂಘಟಿಸುವರು. ರಚನಾತ್ಮಕ ಯೋಜನೆಯನ್ನು ರೂಪಿಸುವರು. ಸಮಾಜವನ್ನು ಎಚ್ಚರಗೊಳಿಸುವರು. ಸಾಂಸ್ಕೃತಿಕ ಸಮಾರಂಭಗಳನ್ನು ಏರ್ಪಡಿಸಿ ಸಮಾಜವನ್ನು ಜೀವಂತಗೊಳಿಸುವರು. ಬಾಲ್ಯದಿಂದ ಮುಪ್ಪಿನ ತನಕ ಸಂಘಟನಾಕಾರ್ಯವನ್ನು ಇವರು ಬಿಡದೆ ಮಾಡಿರುವರು.

ದಯಾರ್ದ್ರಹೃದಯರಾದ ಶ್ರೀ ಜ್ವಾಲ್ನಪ್ಪನವರು ತಬ್ಬಲಿಗಳಾದ ತಮ್ಮ ಸೋದರಳಿಯಂದಿರನ್ನು ತಮ್ಮ ಮಕ್ಕಳಂತೆ ಸಾಕಿದರು. ವಿದ್ಯಾವಂತರನ್ನಾಗಿ ಮಾಡಿದರು ಅವರನ್ನೆಲ್ಲ ಒಂದು ನೆಲೆ ನಿಲ್ಲಿಸಿದರು. ಇವರ ಸಂಪಾದನೆಯೆಲ್ಲ ಈ ರೀತಿ ಸದ್ವಿನಿಯೋಗವಾಗಿದೆ. ಲೋಕಕಲ್ಯಾಣಕ್ಕಾಗಿ ಇವರು ಬಾಳಿದರು. ನಿವೃತ್ತಿ

ಹೊಂದುವ ತನಕ ಹತ್ತಾರು ಜನರನ್ನು ಬೆಳೆಸಿ ಬೆಳಕಿಗೆ ತಂದರು. ಎಷ್ಟೋ ಜನ ಇವರ ಹೆಸರು ಹೇಳಿಕೊಂಡು ಬದುಕುತ್ತಿರುವರು.

1969ರಲ್ಲಿ ಶ್ರೀ ಜ್ವಾಲ್ನಪ್ಪನವರು ತಮ್ಮ ಮಡದಿಮಕ್ಕಳನ್ನೂ ಸೇರಿಸಿಕೊಂಡೇ ಸಮ್ಮೇದ ಶಿಖರಾದಿಯಾಗಿ ತೀರ್ಥಕ್ಷೇತ್ರಗಳನ್ನು ಸಂದರ್ಶಿಸಿದರು. ಸುಖವನ್ನು ಹಂಚುವರು; ಕಷ್ಟವನ್ನು ಮಾತ್ರ ತಾವೇ ನುಂಗುವರು. ಪುಸ್ತಕಪ್ರಿಯರಾದ ಜ್ವಾಲ್ನಪ್ಪನವರು ಮಹಾಪುರಾಣದಿಂದ ಹಿಡಿದು ಮೊನ್ನೆಮೊನ್ನೆ ಅಚ್ಚಾದ ಯಾವ ಜೈನಗ್ರಂಥವನ್ನೂ ಬಿಡದೆ ಓದಿರುವರು. ತತ್ವಾರ್ಥಸೂತ್ರ, ರತ್ನಕರಂಡ ಮುಂತಾದ ಆಗಮಗ್ರಂಥಗಳನ್ನೂ ಇವರು ಪಾರಾಯಣ ಮಾಡಿರುವರು. ಇವರು 1967ರಲ್ಲಿ ಕೆ.ಎಸ್.ಇ.ಬಿ.ಯಲ್ಲಿ ಅಸಿಸ್ಟೆಂಟ್ ಇಂಜಿನಿಯರ್ ಆಗಿ ರಿಟೈರ್ ಆದಮೇಲೆ ಭದ್ರಾವತಿಗೆ ಬಂದು ನೆಲೆಸಿದಮೇಲೆ ಇಲ್ಲಿನ ಜೈನ ಸಮಾಜ ನವಚೈತನ್ಯವನ್ನು ಪಡೆಯಿತು.

ಮೂಜಗವೆ ತುಂಬಿದ ಜೀವರಾಶಿಯು ಪೌಜ |
ಮೊಜದಾವಾಗ ಕಾಣ್ಬಭವಾ ||
ರಾಜಿತಮತಿದೋರು ಕೈವಲ್ಯ ಲೋಕಾಧಿ |
ರಾಜಾ ನಿರಂಜನಸಿದ್ಧಾ ||

ಅರಿವು ನೋಟವೆ ನಿಜರೂಪಾಗಿ ಕಾಂತಿಯು |
ಕರೆವ ಜ್ಯೋತಿರ್ಮಯರೂಪಾ ||
ಮರೆಯಾಗದೆನ್ನ ಮೈಮರೆಯೊಳಗಿರು ಭವ್ಯ |
ರೆರೆಯ ಚಿದಂಬರ ಪುರುಷಾ ||

ಭವದುಃಖಭಂಜನ ಭವ್ಯಾನುರಂಜನ |
ಅವಧೂತಕರ್ಮ ಸುಶರ್ಮಾ ||
ಸವಿಸುಡಿದೋರು ಸನ್ಮುನಿ ಮನೋಹರ ಸದಾ |
ಶಿವನೆ ನಿರಂಜನಸಿದ್ಧಾ ||


ಎಸ್. ಪಿ. ರಾಜಣ್ಣ, ಭದ್ರಾವತಿ

ಮಧುಗಿರಿ ತಾಲ್ಲೂಕು ಶ್ರಾವಂಡನ ಹಳ್ಳಿಯಲ್ಲಿ ಫಲವತ್ತಾದ ಭೂಮಿಯಿದೆ. ಅಂತರ್ ಜಲಸಮೃದ್ಧಿಯಾಗಿದೆ. ಇಲ್ಲಿ ಹತ್ತಾರು ಜೈನರ ಮನೆತನಗಳಿವೆ. ಬಹುಮಟ್ಟಿಗೆ ಎಲ್ಲರೂ ವ್ಯವಸಾಯಗಾರರೇ. ಈ ಶತಮಾನದ ಪ್ರಾರಂಭದಲ್ಲೇ ಈ ಗ್ರಾಮ ಎಚ್ಚೆತ್ತುಕೊಂಡು ನವನಾಗರಿಕತೆಯ ಪ್ರಭಾವಕ್ಕೊಳಗಾಯಿತು. ಜೈನರ ಮನೆ ಮನೆಯಲ್ಲೂ ವಿದ್ಯಾವಂತರು ತಯಾರಾದರು. ಹಿಂದೆ ಸುತ್ತಮುತ್ತ ಈ ಭಾಗದಲ್ಲಿ ಮುಸಲ್ಮಾನರ ಹಾವಳಿಯಿದ್ದಿತು. ಸಾಹಸವಂತರಾದ ಜಿಗರೆ ಪಾಯಣ್ಣನವರ ತಂದೆಯವರನ್ನು ಶ್ರಾವಂಡನಹಳ್ಳಿಯ ಬಂಧುಗಳು ತಮ್ಮ ರಕ್ಷಣೆಗಾಗಿ ರಮಾಪುರದಿಂದ ಕರೆಸಿಕೊಂಡರು. ಇಲ್ಲಿ ಪಾಯಣ್ಣನವರೂ ವ್ಯವಸಾಯ ಮಾಡಿಕೊಂಡು ಹೊಟ್ಟೆ ಹೊರೆಯುತ್ತಿದ್ದರು. ಇವರ ಮಡದಿ ಶ್ರೀಮತಿ ಪದ್ಮಾವತಮ್ಮನವರು. ಈ ದಂಪತಿಗಳಿಗೆ ಸಪ್ತವಾರಗಳಂತೆ ಶ್ರೀಮತಿ ಜಯಮ್ಮ, ಶ್ರೀ ಚಂದ್ರಣ್ಣ, ಶ್ರೀಮತಿ ರುಕ್ಮಿಣಮ್ಮ, ಶ್ರೀ ರಾಜಣ್ಣ, ಶ್ರೀಮತಿಯರಾದ ಲಕ್ಷ್ಮೀದೇವಮ್ಮ, ಜ್ವಾಲ್ನಮ್ಮ ಮತ್ತು ರತ್ನಮ್ಮ ಎಂಬ ಏಳು ಜನ ಮಕ್ಕಳಾದರು. ಇವರಲ್ಲಿ ಶ್ರೀ ರಾಜಣ್ಣನವರು ಸು. 1913ರಲ್ಲಿ ಜನಿಸಿದರು.



ಎಸ್. ಪಿ. ರಾಜಣ್ಣ

ಶ್ರೀ ರಾಜಣ್ಣನವರು ಪ್ರಾಥಮಿಕ ವಿದ್ಯಾಭ್ಯಾಸವನ್ನು ಶ್ರಾವೆಂಡನಹಳ್ಳಿಯಲ್ಲಿ ಮುಗಿಸಿ ಮುಂದೆ ಓದಲು, ಬೆಂಗಳೂರಿಗೆ ಕೊಟ್ಟಿದ್ದ ತಮ್ಮ ಅಕ್ಕಂದಿರಾದ ಶ್ರೀಮತಿ ರುಕ್ಮಿಣಮ್ಮನವರ ಮನೆ ಸೇರಿದರು. ಎಸ್.ಎಸ್.ಎಲ್.ಸಿ. ತನಕ ಇವರು ಓದಿದರು. ಆ ವೇಳೆಗೆ ಇವರ ಅಕ್ಕನವರ ಪತಿ ಕಾಲವಾದರು. ಮುಂದೆ ಓದಲು ಅನುಕೂಲ ಇಲ್ಲದಂತಾಯಿತು. ಆದರೆ ಅಂದಿಗೆ ಅದೇ ದೊಡ್ಡ ಸಾಧನೆ. 20-11-1940ರಲ್ಲಿ ಇವರಿಗೆ ಮೈಸೂರ್ ಬ್ಯಾಂಕಿನಲ್ಲಿ ಷರಾಫ್ ಕೆಲಸ ದೊರೆಯಿತು. ಮಂಡ್ಯದ ನೂಲಿನ ಅಂಗಡಿ ದಿ. ಎನ್. ಧರಣಪ್ಪನವರಿಗೂ ಹಾಗೂ ಅವರ ಮನೆತನದವರು ಕೆಲಸಕ್ಕೆ ಸೇರುವಾಗಲು ಹಾಗೂ ಅನಂತರವೂ ಸಹಾಯ ಮಾಡಿರುತ್ತಾರೆ. ಅವರೆಲ್ಲರಿಗೂ ರಾಜಣ್ಣನವರು ಚಿರಋಣಿ. ಆಗ ಸಂಬಳ ತಿಂಗಳಿಗೆ ಕೇವಲ 20 ರೂ. ಆದರೂ ಅಗ್ಗವಾದ ಆ ಕಾಲದಲ್ಲಿ ಇವರ ಇಪ್ಪತ್ತು ರೂ. ಗಳಿಗೆ 250 ಕೆ.ಜಿ. ಅಕ್ಕಿ ಬರುತ್ತಿತ್ತು. ಮಂಡ್ಯ, ಮೈಸೂರು, ಚನ್ನಪಟ್ಟಣ ಇಲ್ಲೆಲ್ಲ ಇದ್ದು ಶ್ರೀ ರಾಜಣ್ಣನವರು ಈಗ ಭದ್ರಾವತಿಯಲ್ಲಿ ಸುಮಾರು 19 ವರ್ಷಗಳಿಂದ ನೆಲೆಸಿರುವರು. ಈಗ ಸಂಬಳ ತಿಂಗಳಿಗೆ 1300/- ರೂ. ಮೇಲ್ಪಟ್ಟು ಬರುತ್ತಿದೆ.



ದಯಾನಂದ ಪ್ರಸಾದ್

ಶ್ರೀ ರಾಜಣ್ಣನವರಿಗೆ 1935ರಲ್ಲಿ ವೇದಲವೇಣಿಯ (ಗೌರಿಬಿದನೂರು ತಾಲ್ಲೂಕು) ಶ್ರೀ ಬ್ರಹ್ಮಪ್ಪನವರ ಪುತ್ರಿ ಶ್ರೀಮತಿ ಸುಭದ್ರಮ್ಮನವರೊಡನೆ ವಿವಾಹವಾಯಿತು. ಏಳೆಂಟು ವರ್ಷ ಈ ದಂಪತಿಗಳಿಗೆ ಮಕ್ಕಳಾಗಲಿಲ್ಲ. 1943ರಲ್ಲಿ ಅಪರೂಪವಾಗಿ ಇವರಿಗೆ ಗಂಡುಮಗುವಾಯಿತು ಆಕಾಶವೇ ಕೈಗೆ ಬಂದಂತಾಯಿತು. ಮಗುವಿಗೆ ದಯಾನಂದ ಪ್ರಸಾದ್ ಎಂದು ನಾಮಕರಣ ಮಾಡಿದರು. ಅನಂತರ ಕ್ರಮವಾಗಿ ಶಾಂತಮ್ಮ, ಪ್ರಮೀಳ ಮತ್ತು ಸುಧ ಎಂಬ ಹೆಣ್ಣುಮಕ್ಕಳಾದರು.

ಅನಂತಚತುಷ್ಟಯ ದೊರೆತಂತೆ ಈ ದಂಪತಿಗಳು ಹಿಗ್ಗಿದರು. ಸಂಸಾರದಲ್ಲಿ ಈ ಹಿಗ್ಗು ಬಹುಕಾಲ ಇರಲಾರದು. ಶ್ರೀ ದಯಾನಂದ ಪ್ರಸಾದ್ ಬೆಳೆದು ಕೈಗೆ ಬಂದನು. ಎಸ್.ಎಸ್.ಎಲ್.ಸಿ. ಉತ್ತೀರ್ಣರಾಗಿ ಜೂನಿಯರ್ ಟೈಪ್‌ರೈಟಿಂಗ್ ಮಾಡಿಕೊಂಡು ಕ್ರೀಡಾರಂಗದಲ್ಲಿ ಹೆಸರುವಾಸಿಯಾಗಿ ಕಬ್ಬಿಣದ ಕಾರ್ಖಾನೆಯಲ್ಲಿ ಅಕೌಂಟ್ಸ್ ವಿಭಾಗದಲ್ಲಿ ಕೆಲಸಕ್ಕೆ ಸೇರಿದನು. ತನ್ನ ಕಾಲಮೇಲೆ ತಾನು ನಿಂತನೆಂದು ಮಾತಾಪಿತರು ಸಂತೃಪ್ತರಾದರು. ಏಕಮಾತ್ರಪುತ್ರನು ಯಾರ ಹಂಗೂ ಇಲ್ಲದೆ ಬಾಳುವಂತಾದನೆಂದು ಇವರು ಹಿರಿಹಿಗ್ಗಿದರು. ವಿಧಿ ಇದನ್ನು ಸಹಿಸಲಿಲ್ಲ. 1970ರಲ್ಲಿ ದಯಾನಂದ ಪ್ರಸಾದ್ ಅಕಾಲಮರಣವನ್ನು ಕೈಬೀಸಿ ಕರೆದು ಕಣ್ಮರೆಯಾದನು. ಅಂದಿನಿಂದ ಶ್ರೀ ರಾಜಣ್ಣನವರು ಉತ್ಸಾಹಹೀನರಾದರು. ಒಂದು ರೀತಿ ಬೇಸರ ಇವರನ್ನು ಆವರಿಸಿತು. ಈ ಮನೆಗೆ ಮಂಕು ಬಡಿದಂತಾಯಿತು. ದಂಪತಿಗಳಿಬ್ಬರೂ ಮಗನನ್ನು ನೆನೆದು ಆಗಾಗ ಕಂಬನಿ ಮಿಡಿಯುವರು.

ಶ್ರೀ ರಾಜಣ್ಣನವರು ಧರ್ಮಾನುರಾಗಿಗಳು. ಹುಂಚ, ಸಿಂಹನಗದ್ದೆ, ಬಾಹುಬಲಿ ಕ್ಷೇತ್ರಗಳಿಗೆ ಸಂದರ್ಭೋಚಿತ ಸಹಾಯ ಮಾಡಿರುವರು. 1973ರಲ್ಲಿ ಇವರು ತಮ್ಮ ಪತ್ನೀಸಮೇತ ಹೊರಟು ಭರತಖಂಡದ ಸಿದ್ಧಕ್ಷೇತ್ರಗಳನ್ನು, ಅತಿಶಯಕ್ಷೇತ್ರಗಳನ್ನು ಭಕ್ತಿಯಿಂದ ದರ್ಶನ ಮಾಡಿ ಬಂದರು. ಪ್ರವಾಸಪ್ರಿಯರಾದ ಇವರು ಆಗಾಗ ಪುಣ್ಯಕ್ಷೇತ್ರಗಳಿಗೆ ಪ್ರವಾಸ ಹೋಗುವರು. ಪ್ರಕೃತಿಸೌಂದರ್ಯವೆಂದರೆ ಇವರಿಗೆ ಪಂಚಪ್ರಾಣ. ವನ್ಯಮೃಗಗಳನ್ನು ಕಾಣಲು ಎಷ್ಟು ದೂರ ಬೇಕಾದರೂ ಹೋಗುವರು; ಎಷ್ಟು ದಿನ ಬೇಕಾದರೂ ಅಲೆಯುವರು. ವನ್ಯಮೃಗಗಳ ಜೀವನ ಚರಿತ್ರೆಯಲ್ಲಿ ತುಂಬಾ ಆಸಕ್ತಿ. ಇಡಿ ಸಂಸ್ಥಾನದಲ್ಲಿರುವ ಎಲ್ಲಾ ಪ್ರೇಕ್ಷಣೀಯ ಸ್ಥಳಗಳಿಗೂ ಕುಟುಂಬಸಮೇತ ಹೋಗಿ ನೋಡಿರುತ್ತಾರೆ.

ಶ್ರೀ ರಾಜಣ್ಣನವರು ಭದ್ರಾವತಿಯ ಜೈನಸಮಾಜವನ್ನು ಸಂಘಟಿಸಿರುವರು. ಮಹಾವೀರ ಜಯಂತಿ ಮುಂತಾದ ಪರ್ವದಿನಗಳಲ್ಲಿ ಉತ್ಸವಗಳನ್ನೇರ್ಪಡಿಸುವರು, ಸಮಾರಂಭವನ್ನು ಉಜ್ವಲಗೊಳಿಸುವರು. ಈ ಸಾಂಸ್ಕೃತಿಕ ಕಾರ್ಯಗಳಾಗಿ ತಮ್ಮ ಕಾಲವನ್ನು ಹಣವನ್ನು ಧಾರಾಳವಾಗಿ ಖರ್ಚುಮಾಡುವರು. ಇವರಂಥವರು ಇರುವುದರಿಂದ ಸಮಾಜ ಜೀವಕಳೆಯಿಂದ ಕಂಗೊಳಿಸುವುದು.

ಜಿ. ಪಿ. ನೇಮಿರಾಜಯ್ಯ, ಭದ್ರಾವತಿ

ಮಧುಗಿರಿ ತಾಲ್ಲೂಕು ಗೊಲ್ಲಹಳ್ಳಿ ಚಿಕ್ಕ ಗ್ರಾಮ. ಇಲ್ಲಿ ವ್ಯವಸಾಯದಿಂದ ಜೀವಿಸುವ ಜೈನ ಕುಟುಂಬದಲ್ಲಿ ಸಣ್ಣಪ್ಪನವರು ಜನಿಸಿದರು. ಇವರಿಗೆ ಇಬ್ಬರು ತಮ್ಮಂದಿರು, ಒಬ್ಬ ತಂಗಿ. ಶ್ರೀಮಂತ ಬಂಧುಗಳು ಇವರ ಸುತ್ತಮುತ್ತ ಇದ್ದರೂ ಇವರು ಮಾತ್ರ ಕಡುಬಡವರು. ಬೆಳಗಿನಿಂದ ಸಂಜೆ ತನಕ ಬಿಸಲಲ್ಲಿ ಸತ್ತುಸುಣ್ಣವಾದರೂ ಇವರಿಗೆ ಎಂದೂ ಲಕ್ಷ್ಮೀಕಟಾಕ್ಷ ದೊರೆಯಲಿಲ್ಲ. ವ್ಯವಸಾಯಮಾಡಿದರು, ಗಾಣ ಆಡಿದರು, ಕೊನೆಗೆ ಕುರಿಯನ್ನೂ ಕಾದರು! ಹಂಚಿದವರಿಗೆ ಹಲ್ಲು–ಬಾಯಿ ಎನ್ನುವಂತೆ ಇವರ ದುಡಿಮೆಯನ್ನೆಲ್ಲ ದೊಡ್ಡಸಂಸಾರ ನುಂಗಿಹಾಕುತ್ತಿತ್ತು. ಇವರ ಮಡದಿ ವೇದಲವೇಣಿಯು ಶ್ರೀಮತಿ ಪುಟ್ಟಮ್ಮ. ಹೊರಗಡೆ ಗಂಡನ ದುಡಿಮೆ, ಒಳಗಡೆ ಈಕೆಯ ದುಡಿಮೆ. ಗಂಡ ಗೇಯುವುದಕ್ಕೆ, ಈಕೆ ಬೇಯಿಸುವುದಕ್ಕೆ. ಹೀಗೇ ಸಾಗಿತು ಸಂಸಾರ.



ಜಿ. ಪಿ. ನೇಮಿರಾಜಯ್ಯ

ಸಣ್ಣಪ್ಪನವರಿಗೂ ಶ್ರೀಮತಿ ಪುಟ್ಟಮ್ಮನವರಿಗೂ ಮೂರು ಜನ ಗಂಡು ಮಕ್ಕಳು, ಇಬ್ಬರು ಹೆಣ್ಣುಮಕ್ಕಳು ಹುಟ್ಟಿದರು. ಇವರಲ್ಲಿ ಕಿರಿಯ ಮಗ ಶ್ರೀ ನೇಮಿರಾಜಯ್ಯನವರು 2-10-1942ರಲ್ಲಿ ಜನಿಸಿದರು. ತಮ್ಮಂತೆ ತಮ್ಮ ಮಕ್ಕಳು ಈ ಹಳ್ಳಿಗಾಡಿನಲ್ಲಿ ಒದ್ದಾಡಬಾರದೆಂದು ಈ ದಂಪತಿಗಳು ಬಯಸಿದರು. ಯಾರು ಯಾರೋ ಕಾಲುಕಟ್ಟಿ ಮಕ್ಕಳನ್ನು ಓದಿಸಲು ಪ್ರಯತ್ನಿಸಿದರು. ಶ್ರೀ ನೇಮಿರಾಜಯ್ಯ

ಪ್ರಾಥಮಿಕ ವಿದ್ಯಾಭ್ಯಾಸವನ್ನು ಹಳ್ಳಿಯಲ್ಲೇ ಮುಗಿಸಿ, ಮಾಧ್ಯಮಿಕ ಶಾಲೆಗೆ ಸೇರಲು ತುಮಕೂರಿಗೆ ಬಂದರು. ಆಗ ಧರ್ಮಾತ್ಮರಾದ ಶ್ರೀ ಎ.ಸಿ. ನೇಮಿಚಂದ್ರಯ್ಯನವರು ಇವರಿಗೆ ಆಶ್ರಯ ನೀಡಿದರು. ನಾಲ್ಕು ವರ್ಷ ತುಮಕೂರಿನಲ್ಲಿದ್ದು ಮಾಧ್ಯಮಿಕ ವಿದ್ಯಾಭ್ಯಾಸವನ್ನು ಪಡೆದರು. ಬಡವರಾದ ಶ್ರೀ ನೇಮಿರಾಜಯ್ಯನವರಿಗೆ ಈ ಸಾಧನೆಯೇ ದೊಡ್ಡದಾಯಿತು.

1956–57ರಲ್ಲಿ ಹುಂಚ ಕ್ಷೇತ್ರದ ಸ್ವಸ್ತಿಶ್ರೀ ದೇವೇಂದ್ರಕೀರ್ತಿಗಳು ಶಿವಮೊಗ್ಗದಲ್ಲಿ ವರ್ಧಮಾನ ವಿದ್ಯಾರ್ಥಿನಿಲಯವನ್ನು ಪ್ರಾರಂಭಿಸಿದರು. ಬಡ ವಿದ್ಯಾರ್ಥಿಗಳಿಗೆ ಇವರು ಅನ್ನದಾತರಾದರು. ಶ್ರೀ ನೇಮಿರಾಜಯ್ಯನವರಿಗೆ ಅರಸುವ ಬಳ್ಳಿ ಕಾಲಿಗೆ ತೊಡರಿದಂತಾಯಿತು. ನೇರವಾಗಿ ಇವರು ಶಿವಮೊಗ್ಗಕ್ಕೆ ಬಂದು ವರ್ಧಮಾನ ವಿದ್ಯಾರ್ಥಿನಿಲಯಕ್ಕೆ ಸೇರಿದರು. ಇಲ್ಲಿ ಪ್ರೌಢ ವಿದ್ಯಾಭ್ಯಾಸದ ಜೊತೆಗೆ ಜೈನಧಾರ್ಮಿಕ ತಳಹದಿಯೂ ಇವರಿಗೆ ಬಿದ್ದಿತು. ಈ ಗುರುಕುಲದಲ್ಲಿ ರತ್ನಕರಂಡಕ ಶ್ರಾವಕಾಚಾರವನ್ನೂ ನಾಲ್ಕು ಭಾಗ ಜೈನಧರ್ಮವನ್ನೂ ಇವರು ಕಲಿತರು. ಎಷ್ಟೋ ಜನ ಶ್ರೀಮಂತರ ಮಕ್ಕಳಿಗೆ ಈ ಧಾರ್ಮಿಕ ಶಿಕ್ಷಣ ದುರ್ಲಭವಾಗಿರುವಾಗ ತನ್ನಂತಹ ಬಡವರಿಗೆ ಇದು ಪ್ರಾಪ್ತಿಯಾದುದು ಪೂರ್ವಪುಣ್ಯವೆಂದು ಶ್ರೀ ನೇಮಿರಾಜಯ್ಯನವರು ಭಾವಿಸಿರುವರು. ಇವರ ಪ್ರೌಢ ವ್ಯಾಸಂಗಕ್ಕೆ ಭದ್ರಾವತಿಯ ಮೈಸೂರು ಬ್ಯಾಂಕಿನ ಹೆಡ್ ಕ್ಯಾಷಿಯರ್ ಶ್ರೀ ಎಸ್. ಪಿ. ರಾಜಣ್ಣನವರು ನೆರವಾದುದನ್ನು ಇವರು ಕೃತಜ್ಞತಾಪೂರ್ವಕವಾಗಿ ನೆನೆಯುವರು.

ಶ್ರೀ ನೇಮಿರಾಜಯ್ಯನವರು 1959ರಲ್ಲಿ ಶಿಕಾರಿಪುರದ ಪಿ.ಡಬ್ಲ್ಯೂ.ಡಿ.ನಲ್ಲಿ ಮೇಸ್ತ್ರಿಯಾಗಿದ್ದರು. 1962ರಲ್ಲಿ ಕಬ್ಬಿಣ ಗಣಿಯಲ್ಲಿ ಮೇಸ್ತ್ರಿಯಾದರು. 1964ರಲ್ಲಿ ಭದ್ರಾವತಿ ಸಿಂಡಿಕೇಟ್ ಬ್ಯಾಂಕಿನಲ್ಲಿ 60/– ರೂ. ಸಂಬಳಕ್ಕೆ ಸೇರಿದರು. ಈಗ ತಿಂಗಳಿಗೆ 350/– ರೂ. ಬರುತ್ತಿದೆ. ತಮ್ಮ ತಾಯಿ ಮತ್ತು ಅಣ್ಣನ ಜೊತೆಯಲ್ಲಿ ಇವರೂ ಇದ್ದಾರೆ.

ಶ್ರೀ ನೇಮಿರಾಜಯ್ಯನವರಿಗೆ 1973ರಲ್ಲಿ ಶ್ರವಣಬೆಳಗುಳದ ಶ್ರೀ ಜಿನ್ನಪ್ಪನವರ ಪುತ್ರಿ ಶ್ರೀಮತಿ ಪುಷ್ಪ ಇವರೊಡನೆ ವಿವಾಹವಾಯಿತು. ಈ ದಂಪತಿಗಳಿಗೆ ಮೃತ್ಯುಂಜಯ ಎಂಬ ಗಂಡು ಕೂಸಿದೆ. ಶ್ರೀ ನೇಮಿರಾಜಯ್ಯನವರು ಜೈನಸಮಾರಂಭಗಳಲ್ಲಿ, ಉತ್ಸವಗಳಲ್ಲಿ ಟೊಂಕಕಟ್ಟಿ ಶ್ರಮಿಸುವರು. ಜೈನೇತರರನ್ನೂ ಜೈನ ಧರ್ಮಕ್ಕೆ ಸೆಳೆಯಲು ಪರಿತಪಿಸುವರು. ಅನೇಕರ ಮೇಲೆ ಜೈನಧರ್ಮದ ಪ್ರಭಾವ ಬೀರಿರುವರು.

ವಿ. ನಾರಾಯಣ, ಭದ್ರಾವತಿ

ನಾಗಮಂಗಲ ತಾಲ್ಲೂಕು ಮೊದಳ್ಳಿಯಲ್ಲಿ ಶ್ರೀ ವೆಂಕಟೇಗೌಡರು ಬಡ ರೈತರು. ಬೆಳಗಿನಿಂದ ಸಂಜೆಯ ತನಕ ಬೆವರು ಸುರಿಸಿದರೂ ಹೊಟ್ಟೆ ತುಂಬುವುದು ಕಷ್ಟ. ಜೊತೆಗೆ ಮಳೆ ಕೈಕೊಡುವುದೇ ಹೆಚ್ಚು. ಇವರ ಧರ್ಮಪತ್ನಿ ಶ್ರೀಮತಿ ನಂಜಮ್ಮ. ಈ ದಂಪತಿಗಳಿಗೆ ತಮ್ಮ ಬಡತನವನ್ನು ಹಂಚಿಕೊಳ್ಳಲು ಆರು ಗಂಡು ಮಕ್ಕಳೂ ಒಂದು ಹೆಣ್ಣುಮಗುವೂ ಆಗಬೇಕೆ? ಇವರಲ್ಲಿ ಶ್ರೀ ವಿ. ನಾರಾಯಣ ಎಂಬುವರು 18-5-52ರಲ್ಲಿ ಜನಿಸಿದರು. ಹಳ್ಳಿಯಲ್ಲೇ ಪ್ರಾಥಮಿಕ ವಿದ್ಯಾಭ್ಯಾಸ ವನ್ನು ಮುಗಿಸಿದರು. ಈ ವೇಳೆಗೆ ಇವರ ಅಣ್ಣ ಹೊಟ್ಟೆಪಾಡಿಗಾಗಿ ಭದ್ರಾವತಿಗೆ ಬಂದು ನೆಲೆಸಿದ್ದರು. ಶ್ರೀ ನಾರಾಯಣ ಇವರು ಅಣ್ಣನ ಬಳಿಗೆ ಬಂದು ವಿದ್ಯಾಭ್ಯಾಸ ವನ್ನು ಮುಂದುವರಿಸಿ, 1969ರಲ್ಲಿ ಭದ್ರಾವತಿಯಲ್ಲಿ ಹೈಸ್ಕೂಲ್ ಶಿಕ್ಷಣ ಮುಗಿಸಿ ದರು. ಕಿತ್ತು ತಿನ್ನುವ ಬಡತನದಲ್ಲೂ ಇಷ್ಟು ಸಾಧಿಸಿದ್ದು ಹೆಚ್ಚೇ!



ವಿ. ನಾರಾಯಣ

ಶ್ರೀ ವಿ. ನಾರಾಯಣ ಇವರಿಗೆ ದೇವರು ಕೊಟ್ಟ ಎರಡು ಕೈಗಳಿವೆ. ಎರಡು ಕೈಗಳೂ ದುಡಿದಾಗ ಒಂದು ಬಾಯಿ ಎಷ್ಟು ತಿನ್ನಬಲ್ಲದು? ಇವರು ದುಡಿಮೆಗೆ ಪ್ರಾರಂಭಿಸಿದರು. ಮೊದಲೇ ರೈತರ ಮಕ್ಕಳು, ಬೆವರು ಸುರಿಸಿ ಬದುಕುವಂಥವರು. ಮೀನಿಂಗಲಕ್ಕೆ ಈಜು ಕಲಿಸಬೇಕೆ? ಕಬ್ಬಿಣ ಕಾರ್ಖಾನೆಯಲ್ಲಿ ಕಂಟ್ರಾಕ್ಟ್ ಪ್ರಾರಂಭಿ

ಸಿದರು. ನಾಲ್ಕು ವರ್ಷ ಕಂಟ್ರಾಕ್ಟ್ ಮಾಡಿದರು. 1971 ಇವರ ಜೀವನದಲ್ಲಿ ಒಂದು ಪರ್ವಕಾಲ. ಶ್ರೀ ಜಿ. ಪಿ. ನೇಮಿರಾಜಯ್ಯನವರ ಪರಿಚಯವಾಯಿತು. ಪರಿಚಯ ಸ್ನೇಹಕ್ಕೆ ತಿರುಗಿತು. ಅವರ ಜೊತೆಯಲ್ಲೇ ಓಡಾಡುವುದು, ಅವರ ಜೊತೆಯಲ್ಲೇ ಊಟ, ಅವರ ಜೊತೆಯಲ್ಲೇ ನಿದ್ರೆ. ಅವರು ಯಾತ್ರೆ ಹೊರಟರೆ ಇವರೂ ಹಿಂದೆ ಹೊರಟರು. ಹುಂಚ, ಸಿಂಹನಗದ್ದೆ, ಶ್ರವಣಬೆಳಗುಳ, ಕಾರ್ಕಳ, ವೇಣೂರು, ಬಾಹುಬಲಿ ಆಶ್ರಮ ಈ ಪವಿತ್ರ ಕ್ಷೇತ್ರಗಳನ್ನೆಲ್ಲ ಶ್ರೀ ನಾರಾಯಣರು ಸುತ್ತಾಡಿದರು. ಜಿನಮೂರ್ತಿಗಳ ದರ್ಶನ ಮಾಡಿದರು. ಕಾಲಲಬ್ಧಿ ದೊರೆಯಿತು. ಸಮ್ಯಕ್ತ್ವ ಪ್ರಾಪ್ತವಾಯಿತು. ಶ್ರೀ ನೇಮಿರಾಜಯ್ಯನವರಿಂದಲೇ ಪಂಚನಮಸ್ಕಾರದ ಬೋಧೆ ಯಾಯಿತು. ಈಗ ಇವರು ಮಾನಸಿಕವಾಗಿ ಜೈನರಾಗಿರುವರು. ಯಾರಾದರೂ ಗುರುಗಳ ಬಳಿ ಅಧಿಕೃತವಾಗಿ ದೀಕ್ಷೆಪಡೆಯಲು ಕಾತರರಾಗಿರುವರು.

ಶ್ರೀ ನಾರಾಯಣರವರು ದಿನೇದಿನೇ ಸಮ್ಯಕ್ತ್ವವನ್ನು ವೃದ್ಧಿಮಾಡಿಕೊಳ್ಳು ತ್ತಿರುವರು. ಪಂಚಕಲ್ಯಾಣಗಳಿಗೆ ತಪ್ಪದೇ ಹೋಗುತ್ತಿರುವರು. ಹೊಸದುರ್ಗ, ಜಾನಕಲ್ಲು, ಹೊಳಲ್ಕೆರೆ ಜಿನಾಲಯಗಳ ದರ್ಶನವನ್ನು ಮಾಡಿ ಬಂದರು. ವರ್ಷಕ್ಕೆ ಒಮ್ಮೆಯಾದರೂ ಶ್ರವಣಬೆಳಗುಳಕ್ಕೆ ಹೋಗಿ ಬಾಹುಬಲಿ ಬೃಹನ್ಮೂರ್ತಿಯೆದಿರು ಈ ಭಕ್ತಚೇತನ ಆನಂದಜಲವನ್ನು ಅರ್ಪಿಸದೇ ಬಿಡದು !

ಈಗ ಶ್ರೀ ನಾರಾಯಣ ಇವರಿಗೆ ಕಬ್ಬಿಣ ಕಾರ್ಖಾನೆಯಲ್ಲಿ ಕಾಯಂ ಕೆಲಸ ಸಿಕ್ಕಿದೆ. ತಿಂಗಳಿಗೆ 300/- ರೂ. ಸಂಬಳ. ಇದು ಜಿನೇಂದ್ರನ ಕೃಪೆ ಎಂದು ನಂಬಿ ದ್ದಾರೆ. 1974ರ ಮೇ ತಿಂಗಳಲ್ಲಿ ಇವರಿಗೆ ಮದುವೆ ಗೊತ್ತಾಗಿದೆ. ಮಾದೇಹಳ್ಳಿ ಕೃಷ್ಣಪ್ಪಗೌಡರ ಮಗಳು ಶ್ರೀಮತಿ ಕಮಲ ಇವರ ಭಾವೀಪತ್ನಿ. ಮದುವೆಯಾದ ಮೇಲೆ ಪತ್ನಿಯ ಜೊತೆಯಾಗಿ ಹೋಗಿ ಜೈನಧರ್ಮಕ್ಕೆ ಅಧಿಕೃತವಾಗಿ ಸೇರ ಬೇಕೆಂದಿರುವರು.* ಈ ಶುಭಾಕಾಂಕ್ಷೆ ಸಾಮಾನ್ಯವಾದುದಲ್ಲ.

ಶ್ರೀ ನಾರಾಯಣ ಇವರು ಭದ್ರಾವತಿಯ ಜೈನಸಮಾರಂಭಗಳಲ್ಲಿ ಹಿಗ್ಗಿನಿಂದ ಶ್ರಮದಾನ ಮಾಡುವರು. ಜಿನಪೂಜೆಯಲ್ಲಿ ಭಾಗವಹಿಸಿ ಪುಲಕಗೊಳ್ಳುವರು. ಜಿನೋತ್ಸವಗಳಲ್ಲಿ ತನ್ಮಯರಾಗಿ ಆನಂದಾಶ್ರು ಸುರಿಸುವರು. ಇದಕ್ಕಿಂತ ಭಾಗ್ಯ ಬೇಕೆ ? ಇದಕ್ಕಿಂತ ಸಂಸ್ಕಾರ ಬೇಕೆ?

---

* 2-5-1974ರಂದು ಶ್ರೀ ನಾರಾಯಣರು ಇದೇ ಕನ್ಯೆಯನ್ನು ಕೈಹಿಡಿದರು.

ಪಿ. ಅನಂತರಾಜಯ್ಯ, ಪಾವಗಡ

ಪಾವಗಡದ ಪಾಯಣ್ಣನವರಿಗೂ ಹಾಸನದ ಲಕ್ಷ್ಮೀವತಮ್ಮನವರಿಗೂ ಇಹಪರಗಳಂತೆ ಶ್ರೀಯುತರಾದ ಅನಂತರಾಜಯ್ಯ ಮತ್ತು ಶ್ರೀಮತಿ ಜಿನ್ನಮ್ಮ ಎಂಬ ಇಬ್ಬರು ಮಕ್ಕಳು. ಪಾಯಣ್ಣನವರು ವ್ಯವಸಾಯ ಮತ್ತು ವ್ಯಾಪಾರ ಎರಡನ್ನೂ ಸರಿದೂಗಿಸಿಕೊಂಡು ಸುಖವಾಗೇ ಬಾಳಿದರು. ಶ್ರೀ ಅನಂತರಾಜಯ್ಯನವರು ಎರಡು ವರ್ಷದವರಾಗಿರುವಾಗಲೇ ತಮ್ಮ ತಂದೆಯನ್ನು ಕಳೆದುಕೊಂಡು ತಬ್ಬಲಿಯಾದರು. ಇವರ ಚಿಕ್ಕಪ್ಪ ಪಾರ್ಶ್ವನಾಥಯ್ಯನವರಿಗೆ ಆದ ಮಕ್ಕಳಲ್ಲಿ ಒಂದೂ ಬದುಕಲಿಲ್ಲ. ಅನಂತರಾಜಯ್ಯನವರನ್ನೇ ಮಗನೆಂದುಕೊಂಡು ಅವರು ಸಾಕಿ ದೊಡ್ಡವರನ್ನಾಗಿ ಮಾಡಿದರು.



ಪಿ. ಅನಂತರಾಜಯ್ಯ

ಇವರು ಲೋಯರ್ ಸೆಕೆಂಡರಿ ಓದಿ ವ್ಯಾಪಾರಕ್ಕೆ ಕೈಹಾಕಿದರು. ಜನಾನುರಾಗಿಗಳಾದ ಇವರು ಬಹುಬೇಗ ವ್ಯಾಪಾರದಲ್ಲಿ ನುರಿತರು. ಇವರು ಮುಟ್ಟಿದ್ದೆಲ್ಲ ಬಂಗಾರವಾಯಿತು! ಬಡವರ ಆಧಾರಿಯಾದ ಇವರು ಪರೋಪಕಾರ ಮಾಡುತ್ತ ಶ್ರೀಮಂತರಾದರು. ಗಳಿಸುವುದನ್ನೇ ಗುರಿಯಾಗಿಟ್ಟುಕೊಳ್ಳದೆ ಸದ್ಗುಣಸಂಪನ್ನರಾಗಿ ಬಾಳಿದರು. ಮೊದಲು ಭವ್ಯರಾಗಿ ಅನಂತರ ಭಾಗ್ಯವಂತರಾದರು!

ಅಮರಾಪುರದ ಪದ್ದಣ್ಣನವರ ಸುಪುತ್ರಿ ಶ್ರೀಮತಿ ಜ್ವಾಲ್ನಮ್ಮನವರು ಅನಂತರಾಜಯ್ಯನವರ ಮನೆಯನ್ನೂ ಮನವನ್ನೂ ತುಂಬಿ ಸದ್ಗೃಹಿಣಿಯಾಗಿ ಆಗಮಿಸಿದರು. ಈ ದಂಪತಿಗಳು ಸದಾಚಾರಸಂಪನ್ನರಾಗಿ 28 ವರ್ಷ ಅನಂತನೋಂಪಿಯನ್ನು ಆಚರಿಸಿ ಉದ್ಯಾಪನೆ ಮಾಡಿ ಚಳ್ಳಕೆರೆ ಜಿನಾಲಯಕ್ಕೆ ಅನಂತನಾಥಸ್ವಾಮಿ ಬಿಂಬವನ್ನು ಮಾಡಿಸಿಕೊಟ್ಟರು. ಅಮರಾಪುರದ ಜಿನಾಲಯಕ್ಕೂ ಒಂದು ಬಿಂಬ ಕೊಡಿಸಿದರು. ಕುಣಿಗಲು ಜಿನಾಲಯಕ್ಕೆ ಈ ದಂಪತಿಗಳು ಹೇರಳವಾಗಿ ಧನಸಹಾಯ ಮಾಡಿದರು. ಕೋಲಾರದ ಅನಾಥಾಶ್ರಮಕ್ಕೆ ಧಾರಾಳವಾಗಿ ದಾನಮಾಡಿದರು. ಶ್ರೀಮತಿ ಜ್ವಾಲ್ನಮ್ಮನವರು ಹೂವಿನ ನೋಂಪಿ, ಬುಧಾಷ್ಟಮಿನೋಂಪಿಗಳನ್ನು ಮಾಡಿ ಪುಣ್ಯಭಾಗಿಗಳಾದರು. ಪಾವಗಡದಲ್ಲಿ ಜಿನಾಲಯವಿಲ್ಲವಲ್ಲ ಎಂಬ ಕೊರಗಿನಿಂದ ಜ್ವಾಲ್ನಮ್ಮನವರು ಉತ್ತರ ಭಾರತದ ಯಾತ್ರೆ ಮಾಡಿ ಬಂದರು. ಈ ಪುಣ್ಯದಂಪತಿಗಳು ದಶಧರ್ಮಗಳನ್ನೂ ಸಾಧಿಸುವಂತೆ ಶ್ರೀಯುತರಾದ ಲಕ್ಷ್ಮೀಪತಿಯ್ಯ, ಕಾಂತರಾಜಯ್ಯ, ಪದ್ಮನಾಭಯ್ಯ, ಪಾರಿಜಾತ, ಸುಂದರರಾಜಯ್ಯ, ಅಜಿತರಾಜಯ್ಯ, ನಾಗಚಂದ್ರ ಮತ್ತು ಶ್ರೀಮತಿಯರಾದ ಸುಮಿತ್ರಮ್ಮ, ಇಂದ್ರಮ್ಮ, ವಿಜಯಮ್ಮ ಎಂಬ ಹತ್ತು ಜನ ಮಕ್ಕಳನ್ನು ಪಡೆದರು. ಇವರ ಮನೆ ನಂದಗೋಕುಲವಿದ್ದಂತೆ.



ಜ್ವಾಲ್ನಮ್ಮ. ಪಿ. ಅನಂತರಾಜಯ್ಯ

ಅನಂತರಾಜಯ್ಯನವರು ಪಾವಗಡ ನಗರದಲ್ಲಿ ಗಣ್ಯರೆನಿಸಿದ್ದರು. ಊರಿಗೇ ಒಂದು ಕಣ್ಣಾಗಿದ್ದರು. ನಗರದ ಸಹಕಾರ ಸಂಸ್ಥೆಗೆ ಇವರು ಅನೇಕ ವರ್ಷ ಡೈರೆಕ್ಟರ್ ಆಗಿ ಒಳ್ಳೆಯ ಹೆಸರನ್ನು ಗಳಿಸಿದರು. ದೀನದಲಿತರ ಬಗ್ಗೆ ದಯಾರ್ದ್ರಹೃದಯರಾಗಿ ಇವರು ಉದಾರಿಗಳೆನಿಸಿದರು.

18–5–1903ರಲ್ಲಿ ಜನಿಸಿದ ಅನಂತರಾಜಯ್ಯನವರಂ ಎಲ್ಲರಿಗೂ ಬೇಕಾದವರಾಗಿ ಬಾಳಿ 30–1–1969ರಂದು ಸ್ವರ್ಗಸ್ಥರಾದರು. ಅಂದು ಇಡೀ ನಗರವೇ ಮೃತರ ಆತ್ಮಕ್ಕೆ ಶಾಂತಿಕೋರಿ ಕಂಬನಿ ಮಿಡಿಯಿತು. ಅನಂತರಾಜಯ್ಯನವರು ಸತ್ತ ಮೇಲೂ ಬದುಕಿರುವರು ! ಇವರ ಸ್ಮರಣಾರ್ಥವಾಗಿ ಇವರ ಕುಟುಂಬವರ್ಗದವರು ಅಷ್ಟವಿಧಾರ್ಚನೆ ಕಥೆಗಳನ್ನು ಪ್ರಕಟಿಸಿ ಶಾಸ್ತ್ರದಾನ ಮಾಡಿದರು. ಧರ್ಮಪ್ರಭಾವನಾ ಮೂರ್ತಿಗಳಾದ ಅನಂತರಾಜಯ್ಯನವರು ಸತ್ತಮೇಲೂ ಧರ್ಮಪ್ರಭಾವನೆ ಮಾಡುತ್ತಿರುವುದು ಸೋಜಿಗವೇ ಸರಿ !

ಕಡಲ ನಗುವ ಕಡುಗಂಭೀರ ಕಡಲೊಂದು |
ಕಡುಪಿಗೆ ತೆರಪಾದ ಮಹಿಮಾ ||
ಕಡೆಸಾರದೆನ್ನೆದೆಯೊಳಗಿರು ನೀನೆಡೆ |
ಬಿಡದೆ ಚಿದಂಬರಪುರುಷಾ ||

ಮಾರಮದೇಭ ಕಂಠೀರವ ಬೋಧಪ |
ಯೋರಾಶಿಪೂರ್ಣ ಸುಧಾಂಶು ||
ಕಾರುಣ್ಯದೋರು ಸನ್ಮತಿದೋರು ಕರ್ಮಸಂ |
ಹಾರಾ ನಿರಂಜನಸಿದ್ಧಾ ||

ಉಲ್ಬಣ ದುಃಖವನೆಣಿಸುವ ಕರ್ಮದ |
ಬಲ್ವಡೆಯನು ನೋಟದಿಂದ ||
ಗೆಲ್ವ ಸಾಮರ್ಥ್ಯ ನನ್ನೆದೆಯೊಳಗಿರು ಕಡು |
ಚೆಲ್ವಾ ಚಿದಂಬರಪುರುಷಾ ||

ಎಸ್. ಪಿ. ಬ್ರಹ್ಮಪ್ಪ, ಹಾಸನ

ಬ್ರಹ್ಮಪ್ಪನವರು ಕೇವಲ ಲೋಯರ್ ಸೆಕೆಂಡರಿ ಉತ್ತೀರ್ಣರಾಗಿ ತಮ್ಮ ಚಾಕಚಕ್ಯತೆಯಿಂದ, ಚತುರತೆಯಿಂದ, ಪ್ರತಿಭೆಯಿಂದ 8 ವರ್ಷಕಾಲ ಹಾಸನದ ನಗರಸಭಾ ಉಪಾಧ್ಯಕ್ಷರಾದುದು ಒಂದು ಪವಾಡವೇ ಸರಿ. 16 ವರ್ಷ ನಗರ ಸಭೆಯ ಸದಸ್ಯರಾಗಿ ಹಾಸನದ ಸರ್ವತೋಮುಖವಾದ ಏಳಿಗೆಗೆ ಅಸ್ತಿವಾರ ಹಾಕಿ ಇವರು ನಗರದ ಇತಿಹಾಸದಲ್ಲಿ ಅಚ್ಚಳಿಯದೆ ನಿಂತಿರುವುದು ಇಡೀ ನಮ್ಮ ಸಮಾಜಕ್ಕೆ ಹೆಮ್ಮೆ ತರುವಂಥ ವಿಷಯವಾಗಿದೆ. ಸಾಡಿಗಾಗಿ ಇವರು ಬಹುಮುಖ ಸೇವೆಮಾಡಿದ್ದಾರೆ. ಎರಡು ವರ್ಷ ಬೆಂಚ್ ಮ್ಯಾಜಿಸ್ಟ್ರೇಟರಾಗಿದ್ದರು. ಆರು ವರ್ಷ ಡಿಸ್ಟ್ರಿಕ್ಟ್ ಬೋರ್ಡ್ ಸದಸ್ಯರಾಗಿದ್ದರು. ಎಂಟು ವರ್ಷಕಾಲ ವಿಧಾನಸಭೆ ಸದಸ್ಯರಾಗಿದ್ದರು 1916ರಲ್ಲಿ ಇವರು ಹಾಸನದಲ್ಲಿ ಒಂದು ಜೈನ ಸೊಸೈಟಿ ಸ್ಥಾಪಿಸಿದರು. ಈಗಲೂ ಈ ಸೊಸೈಟಿ ಜೀವಂತವಾಗಿದೆ. ಜೈನ ವಿದ್ಯಾರ್ಥಿನಿಲಯಕ್ಕಾಗಿ ನಗ ದ ಆವರಣದಲ್ಲಿ ವಿಸ್ತಾರವಾದ ಒಂದು ನಿವೇಶನವನ್ನು ಇವರು ಧರ್ಮಾರ್ಥ ಕೊಡಿಸಿದರು. ಇಂದಿನ ಸಮಾಜ ಇದನ್ನು ಅಭಿವೃದ್ಧಿಗೆ ತರಬೇಕಾಗಿದೆ. 1932ರಲ್ಲಿ ಅನಂತನೋಂಪಿ ಉದ್ಯಾಪನೆಯಾದಾಗ ಜಿನೇಂದ್ರೋತ್ಸವವನ್ನು ಬ್ರಹ್ಮಪ್ಪನವರು ತಮ್ಮನೇತೃತ್ವದಲ್ಲಿ ವಿಜೃಂಭಣೆಯಿಂದ ನಡೆಸಿದ್ದನ್ನು ಯಾರೂ ಮರೆಯುವಂತಿಲ್ಲ. ಮುಖ್ಯವಾಗಿ ಹಾಸನ



ಎಸ್. ಪಿ. ಬ್ರಹ್ಮಪ್ಪ

ನಗರದ ಸೌಂದರ್ಯ ಮತ್ತು ಶುಚಿ ಇವರ ಆಡಳಿತದಲ್ಲಿ ಹೆಚ್ಚಿದ್ದನ್ನು ಗಮನಿಸಿ ರಾಷ್ಟ್ರಶಿಲ್ಪಿಯಾಗಿದ್ದ ಸರ್ ಮಿರ್ಜಾರವರೂ ಇವರನ್ನು ಕೊಂಡಾಡಿದುದನ್ನು ನೆನೆದಾಗ ರೋಮಾಂಚನವಾಗದಿರದು. ಇವರನ್ನು ಹಾಸನದ ಶ್ವಾಸಕೋಶವೆಂದು ಕರೆದರೆ ತಪ್ಪಾಗದು !

ಬ್ರಹ್ಮಪ್ಪನವರ ತಂದೆ ಪುಟ್ಟಯ್ಯನವರು; ತಾಯಿ ಪೊಮ್ಮಕ್ಕನವರು. ಇವರ ಮನೆತನ ಐತಿಹಾಸಿಕವಾದುದು. ಶ್ರವಣಬೆಳಗುಳದ ಚಿಕ್ಕಬೆಟ್ಟದ ಮೇಲೆ ಶ್ರೀ ಪಾರ್ಶ್ವನಾಥ ಜಿನಾಲಯದ ಮುಂಭಾಗದಲ್ಲಿರುವ ಊರ್ಧ್ವಗಾಮಿಯಾದ ಮಾನಸ್ತಂಭದ ಸ್ಥಾಪಕನಾದ ಪುಟ್ಟಯ್ಯನು ಈ ಮನೆತನದ ಐತಿಹಾಸಿಕ ವ್ಯಕ್ತಿಯಾಗಿದ್ದಾನೆ (ಕ್ರಿ.ಶ. 1672–1704). ಮೂಡುಬಿದ್ರೆ ಸಹಸ್ರಕಂಬದ ಬಸದಿ ಜೀರ್ಣೋದ್ಧಾರ ಕಾರ್ಯವನ್ನು ಈ ಪುಟ್ಟಯ್ಯನೇ ಮಾಡಿಸಿ ಮೇಲ್ಛಾವಣಿಗೆ ತಾಮ್ರದ ತಗಡನ್ನು ಹಾಕಿಸಿರುವನು.

ಬ್ರಹ್ಮಪ್ಪನವರು 25–12–1884ರಲ್ಲಿ ಜನಿಸಿದರು. ಬಾಲ್ಯದಲ್ಲೇ ಬೆರಳು ನೋಡ್ತಿದ್ದರೆ ಹಸ್ತ ನುಂಗುವಂಥ ಚಾಣಾಕ್ಷರಾದ ಇವರು ಅಡಿಕೆ, ತೆಂಗಿನಕಾಯಿ ಮತ್ತು ಬೆಲ್ಲ ಈ ಸರಕುಗಳನ್ನು ಮೈಸೂರಿಗೆ ಕೊಂಡುಹೋಗಿ ಮಾರಾಟಮಾಡುತ್ತಿದ್ದರು. 1908–16ರ ತನಕ ಮದ್ರಾಸ್ ಬಿನ್ನಿ ಬಟ್ಟೆಯ ಏಜನ್ಸಿ ಪಡೆದು ದೊಡ್ಡ ಪ್ರಮಾಣದಲ್ಲಿ ಬಟ್ಟೆ ವ್ಯಾಪಾರ ಮಾಡಿದರು. ಜನಾನುರಾಗಿಗಳಾದ ಇವರು ಬಹುಬೇಗ ಪ್ರಖ್ಯಾತರಾಗಿ ನಮ್ಮ ಸಮಾಜದಲ್ಲಿ ತಿಲಕಪ್ರಾಯರಾದರು.

ಬ್ರಹ್ಮಪ್ಪನವರು ದೀರ್ಘಾಯುಗಳು. ಆದರೆ ಇವರ ಕೈಹಿಡಿದ ಮೂರು ಜನ ಮಡದಿಯರೂ ಇವರ ಕಣ್ಣು ಮುಂದೆಯೇ ಮೃತ್ಯುದೆಸಾವನ್ನು ಪಡೆದು ಧನ್ಯರಾದರು. ಜ್ವಾಲಮ್ಮನವರು ಇವರ ಮೊದಲ ಹೆಂಡತಿ. ಇವರಿಗೆ ಇಬ್ಬರು ಹೆಣ್ಣುಮಕ್ಕಳು. ಇವರ ಎರಡನೇ ಹೆಂಡತಿ ಪ್ರಭಾವತಮ್ಮನವರು. ಇವರಿಗೆ ಒಂದು ಗಂಡು, ಒಂದು ಹೆಣ್ಣುಮಕ್ಕಳಾದರು. ಮೂರನೆಯ ಹೆಂಡತಿ ಜಯಮ್ಮನವರು. ಇವರಿಗೆ ಮೂರು ಜನ ಗಂಡುಮಕ್ಕಳು ಮತ್ತು ಎರಡು ಜನ ಹೆಣ್ಣುಮಕ್ಕಳಾದರು. ನವರತ್ನಗಳಂತೆ ಬ್ರಹ್ಮಪ್ಪನವರಿಗೆ ಮೂರು ಜನ ಪತ್ನಿಯರಿಂದ ಶ್ರೀಮತಿಯರಾದ ರತ್ನಮ್ಮ, ಪ್ರಭಾವತಮ್ಮ, ಶ್ರೀಯುತರಾದ ಪುಟ್ಟಣ್ಣಯ್ಯ, ಜ್ವಾಲಮ್ಮ, ಅನಂತರಾಜಯ್ಯ, ಧರಣಪ್ಪ, ನವರತ್ನಮ್ಮ, ದೇವೇಂದ್ರಕುಮಾರ್ ಮತ್ತು ಸುಮಂಗಲ— ಈ ರೀತಿ ಒಂಬತ್ತು ಜನ ಮಕ್ಕಳಾದರು. ಬ್ರಹ್ಮಪ್ಪನವರ ಬಾಳೆಲ್ಲ ಮದುವೆಗಳನ್ನು ಮಾಡುವುದರಲ್ಲೇ ಹಣ್ಣಾಯಿತು. ಇವರು ಮಾಡಿಕೊಂಡುದು ಮೂರು ಮದುವೆ. ಮೂರು ಜನ ತಂಗಿಯರಿಗೆ ಕಲ್ಯಾಣ ಮಾಡಿದರು. ಇಬ್ಬರು ತಮ್ಮಂದಿರಿಗೆ ಹೆಣ್ಣು ತಂದು ಮದುವೆ ಮಾಡಿದರು. ಐದು ಜನ ಹೆಣ್ಣುಮಕ್ಕಳಿಗೂ, ನಾಲ್ಕು ಜನ ಗಂಡುಮಕ್ಕಳಿಗೂ ತಾವೇ ಮುಂದೆ ನಿಂತು ವಿವಾಹ ನೆರವೇರಿಸಿದರು. ಒಟ್ಟಾರೆ ಇವರು 17 ಮದುವೆ

ಗಳನ್ನು ಮಾಡಿ ಕೃತಕೃತ್ಯರಾಗಿರುವರು.

1940ರಲ್ಲಿ ಶ್ರವಣಬೆಳಗುಳದ ಮಹಾಮಸ್ತಕಾಭಿಷೇಕ ನಡೆದಾಗ ಆ ಸಮಿತಿಯಲ್ಲಿ ಬ್ರಹ್ಮಪ್ಪನವರ ಪಾತ್ರ ಸಕ್ರಿಯವಾದುದು. ಶ್ರವಣಬೆಳಗುಳದ ಪೀಠಾಧಿಕಾರಿಗಳನ್ನು ಆರಿಸಲು ಹಿಂದೆ ಏರ್ಪಟ್ಟ ಸಮಿತಿಯಲ್ಲಿ ಇವರೂ ಸದಸ್ಯರಾಗಿದ್ದರು. ಈ ಶತಮಾನದ ಪೂರ್ವಾರ್ಧವೆಲ್ಲ ಬ್ರಹ್ಮಪ್ಪನವರ ಐತಿಹಾಸಿಕ ಮಹತ್ಕಾರ್ಯಗಳಿಂದ ತುಂಬಿಹೋಗಿದೆ. ಇಂಥ ಬಹುಮುಖ ವ್ಯಕ್ತಿತ್ವವುಳ್ಳ ಜನ ನಮ್ಮಲ್ಲಿ ಅಂದಿಗೂ ಇಂದಿಗೂ ವಿರಳ.

ಬ್ರಹ್ಮಪ್ಪನವರು ರತ್ನಪರೀಕ್ಷೆಯಲ್ಲಿ ಪ್ರವೀಣರು. ಇವರು ಓದಿದ್ದು ಕಡಿಮೆ. ಅನುಭವದಿಂದ ಕಲಿತುದು ಹೆಚ್ಚು. ಶ್ರೀಮಂತರಾದ ಇವರು ಸಂಪನ್ನವಾದ ಬಾಳ್ವೆಯನ್ನು ನಡೆಸಿ ಕೀರ್ತಿಶೇಷರಾದರು. ರತ್ನಪರೀಕ್ಷಕರಾದ ಇವರು ನಮ್ಮ ಸಮಾಜದಲ್ಲಿ ರತ್ನಪ್ರಾಯರೆನಿಸಿಕೊಂಡರು.


12–7–72ರಂದು ತಮ್ಮ 88ನೆಯ ವಯಸ್ಸಿನಲ್ಲಿ ಬ್ರಹ್ಮಪ್ಪನವರು ಪಂಚನಮಸ್ಕಾರಗಳನ್ನು ಜಪಿಸುತ್ತ ನಿಶ್ಚಿಂತೆಯಿಂದ ಮರಣವನ್ನು ಸ್ವಾಗತಿಸಿದರು. ಹಸನ್ಮುಖಿಗಳಾಗಿ ಕಣ್ಣುಮುಚ್ಚಿದರು. ಶುಭಪರಿಣಾಮದಿಂದ ಸ್ವರ್ಗಸ್ಥರಾದ ಇವರು ಸ್ವರ್ಗಕ್ಕೆ ಹೋಗಿರುವರು ಎಂಬುದರಲ್ಲಿ ಸಂದೇಹವಿದೆಯೆ ?

ಜೀವಂತವಾಗಿರುವಾಗಲೇ ಇವರ ಆಸ್ತಿಯನ್ನು ಮಕ್ಕಳಲ್ಲಿ ಹಂಚಿ ತಾವು ಮಾತ್ರ ತಮ್ಮ ಮೂರನೆಯ ಮಕ್ಕಳಾದ ಶ್ರೀ ಧರಣಪ್ಪನವರ ಬಳಿ ನಿಂತರು. ವೃದ್ಧಾಪ್ಯದಲ್ಲಿ ಇವರ ಸೇವಾಭಾಗ್ಯವು ಶ್ರೀ ಧರಣಪ್ಪನವರಿಗೆ ಲಭಿಸಿತು. ಇವರು ಕಾಲವಾದ ಮೇಲೆ ಶ್ರೀ ಶ್ರೀ ಚಾರುಕೀರ್ತಿ ಪಂಡಿತಾಚಾರ್ಯರ ನೇತೃತ್ವದಲ್ಲಿ ಜಿನಪೂಜೋತ್ಸವಗಳಾಗಿ ಮೃತರ ಆತ್ಮಕ್ಕೆ ಶಾಂತಿಯನ್ನು ಕೋರಲಾಯಿತು.

ಪುಣ್ಯವ ಕಾಣಿಸಿ ಕೊಂಡಾಳುತಘಮಹಾ |
ರಣ್ಯವ ತೊತ್ತಳದುಳಿವ ||
ಗಣ್ಯಾ ನೀನೆನಗೆ ಸನ್ಮತಿದೋರು ಲೋಕಶ |
ರಣ್ಯಾ ನಿರಂಜನಸಿದ್ಧಾ ||

ಎಸ್. ಎನ್. ನಾಭಿರಾಜಯ್ಯ, ಸಾಲಗ್ರಾಮ

ಸಾಲಗ್ರಾಮವು ಮೈಸೂರು ಜಿಲ್ಲೆಯಲ್ಲಿರುವ ಒಂದು ದೊಡ್ಡ ಗ್ರಾಮ. ನೀರು ಸಮೃದ್ಧಿಯಾಗಿದೆ. ಭೂಮಿ ಫಲವತ್ತಾಗಿದೆ. ವರ್ಷಕ್ಕೆ ಎರಡು ಬೆಳೆ ಆಗುವುದು. ಇಲ್ಲಿಯ ಮುಖ್ಯ ಬೆಳೆ ಬತ್ತ. ಇಲ್ಲಿ ನೂರಾರು ಜೈನರ ಮನೆಗಳಿವೆ. ಬಹುಮಟ್ಟಿಗೆ ಎಲ್ಲರೂ ಅನುಕೂಲವಾಗಿರುವರು. ಐದು ಜಿನಾಲಯಗಳಿವೆ. ಶ್ರೀ ಎಸ್. ಎನ್. ನಾಭಿರಾಜಯ್ಯನವರು ಇಲ್ಲಿ ಎಲ್ಲರಿಗೆ ಚಿರಪರಿಚಿತರು. ಇವರು ಶ್ರೀಮಂತರಲ್ಲದಿದ್ದರೂ ಬಡವರಲ್ಲ. ಶಾಸ್ತ್ರಿಗಳಿಗೆ, ಸಾಧುಸಂತರಿಗೆ, ಸಾಹಿತಿಗಳಿಗೆ ಸಾಲಗ್ರಾಮದಲ್ಲಿ ಇವರು ಸುಲಭವಾಗಿ ಕೈಗೆ ಸಿಗುವರು. ಸಹೃದಯರಾದ ಇವರಿಗೆ ಸಾಹಿತಿಗಳನ್ನು ಕಂಡರಂತೂ ಪಂಚಪ್ರಾಣ. ಸಾಹಿತಿ ಇರುವ ತನಕ ಇವರ ಮನೆಯಲ್ಲೇ ಬಿಡಾರ, ಊರಿನ ಪ್ರಮುಖರಿಗೆ ಸಾಹಿತಿಯ ಪರಿಚಯಮಾಡಿಸಿ ಸಂದರ್ಭೋಚಿತವಾಗಿ ಸಹಾಯ ಮಾಡಿಸುವರು. ಊರಿನ ಧಾರ್ಮಿಕ ಚಟುವಟಿಕೆಗಳಲ್ಲೂ ಇವರೇ ಮುಂದಾಳು. ಸಾರ್ವಜನಿಕ ಹಾಗೂ ಧಾರ್ಮಿಕ ಕಾರ್ಯಕರ್ತೃ.



ಎಸ್. ಎನ್. ನಾಭಿರಾಜಯ್ಯ

ಸಾಲಗ್ರಾಮದ ಜೈನಸಮಾಜವನ್ನು ಶ್ರೀ ಎಸ್. ಎನ್. ನಾಭಿರಾಜಯ್ಯನವರು ಸಂಘಟಿಸಿ ರಚನಾತ್ಮಕ ಕಾರ್ಯಗಳಿಗೆ ಪ್ರೇರೇಪಣೆ ನೀಡುತ್ತಿರುವರು. ಜೈನಸಮಾಜದ ಜೀವನಾಡಿಯೇ ಇವರೆನ್ನಬಹುದು. ಜಿನವಾಣಿ ಸೇವಾಸಂಘ, ಮಹಾವೀರ ಸಂಘ ಇವಕ್ಕೆಲ್ಲ ಇವರು ಉಸಿರು ತುಂಬಿರುವರು. ಶ್ರೀ ಎಸ್. ಜಿ. ಪದ್ಮರಾಜಯ್ಯನವರು

ಸಲ್ಲೇಖನ ತೆಗೆದುಕೊಂಡಾಗ ನಾಭಿರಾಜಯ್ಯನವರು ಹಗಲುರಾತ್ರಿ ಟೊಂಕಕಟ್ಟಿ ಮಹಾವ್ರತ ನಿರ್ವಿಘ್ನವಾಗಿ ನಡೆಯುವಂತೆ ನೋಡಿಕೊಂಡರು. ಮಹಾವೀರ ಮಿಷನ್ನಿನಲ್ಲಿ ಇವರು ಸಕ್ರಿಯ ಸದಸ್ಯರಾಗಿರುವರು ಮತ್ತು ಕೆಲವು ಕಾಲ ವೈಸ್-ಪ್ರೆಸಿಡೆಂಟರಾಗಿ ದುಡಿದಿರುವರು. ಈಗ ಡಿ.ಸಿ.ಸಿ. ಸದಸ್ಯರಾಗಿರುವರು. ಚುಂಚನಕಟ್ಟೆ ಶ್ರೀರಾಮದೇವರ ದೇವಸ್ಥಾನದ ಧರ್ಮದರ್ಶಿಗಳಾಗಿಯೂ ಜಾತ್ರೆಯ ಸಮಿತಿಯಲ್ಲೂ ಇವರು ಗಣ್ಯವಾದ ಪಾತ್ರವಹಿಸುವರು. ಇವರ ಉಸಿರೇ ಸಮತಾವಾದ, ಎಲ್ಲರೂ ಸುಖವಾಗಿರಬೇಕೆಂದು ಹಾರೈಸುವರು.

ಶ್ರೀ ನಾಭಿರಾಜಯ್ಯನವರು ಉದಾರಿಗಳು. ಸಾಲಗ್ರಾಮದ ಮಾಧ್ಯಮಿಕ ಶಾಲೆಯ ಮತ್ತು ಪ್ರೌಢಶಾಲೆಯ ಒಂದನೆ ಮತ್ತು ಎರಡನೆಯ ಪಿ.ಯು.ಸಿ. ವಿದ್ಯಾರ್ಥಿಗಳಲ್ಲಿ ಪ್ರತಿಭಾವಂತರಾದವರಿಗೆ ಪ್ರತಿವರ್ಷ ಇವರು ಆರು ಬಹುಮಾನಗಳನ್ನು ಕೊಡುತ್ತಿರುವರು. ಆಜೀವಪರ್ಯಂತ ಈ ಬಹುಮಾನ ವಿತರಣೆಯನ್ನು ನಡೆಸುವುದಾಗಿ ವ್ರತ ತೊಟ್ಟಿರುವರು. ಮಹಾವೀರ ಮಿಷನ್ನಿನ ಮುಖೇನ ಪ್ರತಿವರ್ಷವೂ ಇವರು ಒಂದು ವಿದ್ಯಾರ್ಥಿವೇತನ ನೀಡುತ್ತಿರುವರು. 1960ರಲ್ಲಿ ಇವರು ತಮ್ಮ ತಂದೆಯವರ ಹೆಸರಿನಲ್ಲಿ 'ದಶಲಾಕ್ಷಣಿಕ ಪರ್ವ' ಎಂಬ ಧಾರ್ಮಿಕ ಗ್ರಂಥವನ್ನು ಪ್ರಕಟಿಸಿ ಉಚಿತವಾಗಿ ಹಂಚಿ ಧರ್ಮಜಾಗೃತಿ ಉಂಟುಮಾಡಿರುವರು. 1968ರಲ್ಲಿ ಇವರು ತಮ್ಮ ದಿವಂಗತ ತಾಯಿಯವರ ಹೆಸರಿನಲ್ಲಿ ಸಾಲಗ್ರಾಮದ ಕೋಟೆ ದೇವಾಲಯಕ್ಕೆ ಒಂದು ಸಹಸ್ರ ರೂ.ಗಳನ್ನು ದಾನವಾಗಿ ವಾಗ್ದಾನ ಮಾಡಿದ್ದಾರೆ. ಇವರು ಮಾಡುವ ದಾನ ಸೋನೆಮಳೆಯಂತೆ, ಪ್ರತಿದಿನವೂ ಅಷ್ಟೋ ಇಷ್ಟೋ ಇದ್ದೇ ಇರುತ್ತದೆ. ಗಳಿಸಿದ್ದನ್ನು ಸದ್ವಿನಿಯೋಗ ಮಾಡುತ್ತಿರುವರು. ಇವರು ಶುಭಪರಿಣಾಮದ ಸುಭದ್ರಚೇತನ. ಪರಿಗ್ರಹಪರಿಮಾಣವ್ರತಕ್ಕೆ ಇವರು ಜೀವಂತಸಾಕ್ಷಿಯಾಗಿರುವರು. ಎಷ್ಟು ಬೇಕೋ ಅಷ್ಟನ್ನೇ ಸಂಪಾದಿಸುವರು. ಯಾವುದರಲ್ಲೂ ಅತಿಯಾಸೆ ಇಲ್ಲ. ಅತಿಥಿ-ಅಭ್ಯಾಗತರಿಗೆ ಇವರ ಮನೆ ಸದಾ ತೆರೆದಿರುತ್ತದೆ.

ಇವರ ತಂದೆ ನಾಗೇಂದ್ರಯ್ಯನವರು ಸಾಲಗ್ರಾಮದಲ್ಲಿ ಮಧ್ಯಮ ವರ್ಗದ ಶ್ರಾವಕರಾಗಿದ್ದರು. ಇವರ ಧರ್ಮಪತ್ನಿ ಗುಬ್ಬಿ ಪಾರ್ವತಮ್ಮನವರು. ಈ ದಂಪತಿಗಳಿಗೆ ಒಂಬತ್ತು ಜನ ಮಕ್ಕಳು. ಇವರಲ್ಲಿ ಶ್ರೀ ನಾಭಿರಾಜಯ್ಯನವರು 1924ರಲ್ಲಿ ಜನಿಸಿದರು. ಇವರು 1942ರಲ್ಲಿ ಎಸ್.ಎಸ್.ಎಲ್.ಸಿ. ಓದುತ್ತಿದ್ದಾಗ ಕ್ವಿಟ್ ಇಂಡಿಯಾ ಚಳುವಳಿಯಲ್ಲಿ ಸೇರಿ ಸೆರೆವಾಸವನ್ನೂ ಅನುಭವಿಸಿದರು. ಅನಂತರ ಜವಳಿ ವ್ಯಾಪಾರಕ್ಕಿಳಿದರು.

ನಾಭಿರಾಜಯ್ಯನವರಿಗೆ 1941ರಲ್ಲಿ ಬೆಳ್ಳಾವಿಯ ಶ್ರೀಮತಿ ಪದ್ಮಾವತಮ್ಮನವರೊಡನೆ ವಿವಾಹವಾಯಿತು. ಗಂಡನ ಧಾರ್ಮಿಕೋತ್ಸಾಹಕ್ಕೆ ಶ್ರೀಮತಿ ಪದ್ಮಾವತಮ್ಮನವರೂ ಪುಲಕವಿಟ್ಟರು. ಈ ದಂಪತಿಗಳಿಗೆ ಷಡ್‌ದ್ರವ್ಯಗಳಂತೆ

ಆರು ಜನ ಮಕ್ಕಳಾದರು. ನಾಲ್ಕು ಗಂಡು, ಎರಡು ಹೆಣ್ಣು. ಇವರ ಮನೆತನ ಜೈನ ಸಮಾಜಕ್ಕೆ ಮಾದರಿಯಾಗಿದೆ. ಶ್ರೀ ನಾಭಿರಾಜಯ್ಯನವರು ಸಂಸ್ಕಾರ ಸಂಪನ್ನರು. ಇವರ ಸತೀಮಣಿ ಸೇವಾತತ್ಪರರು. ಇವರ ಮಕ್ಕಳು ವಿನಯದ ಕುಡಿಗಳು. ಇವರೆಲ್ಲ ದೈವಭಕ್ತರು, ಧರ್ಮಾನುರಾಗಿಗಳು, ಪರೋಪಕಾರಿಗಳು. ದಯಾದಾಕ್ಷಿಣ್ಯವೇ ಇವರೆಲ್ಲರ ಸಂಪದವಾಗಿದೆ. ಇವರು ನಿತ್ಯಪೂಜೆಗೋಸ್ಕರ ತಮ್ಮ ಮನೆಯಲ್ಲಿ ಚಿಕ್ಕದಾಗಿ 'ಶಾಂತಿಮಂದಿರ'ವನ್ನು ಕಟ್ಟಿಸಿದ್ದಾರೆ. ಎಷ್ಟೋ ಜನ ಈ ಮಂದಿರದ ದರ್ಶನ ಮಾಡಿ ಪುನೀತರಾಗಿರುವರು.


ನಿಂದಲ್ಲಿ ನಡೆದಲ್ಲಿ ಕುಳಿತಲ್ಲಿ ಸರ್ವತ್ರ |
ಕುಂದದೆ ಕುಶಲಲೀಲೆಯನು ||
ಸಂಧಿಸುವಭವ ನನ್ನೆದೆಯೊಳಗಿರು ಚಿದಾ |
ನಂದ ಚಿದಂಬರಪುರುಷಾ ||

ನಡೆವಾಗ ನುಡಿವಾಗ ನೆನಹಿನೊಳಗೆ ತೋರಿ |
ನಡೆದತ್ತ ಸಾಧ್ಯವ ಮಾಳ್ಪ ||
ನಡೆನಾಟಕಾಂಗ ಸನ್ಮತಿದೋರು ರನ್ನಗ |
ನ್ನಡಿಯೆ ನಿರಂಜನಸಿದ್ಧಾ ||

ಈರೈದುದಿಕ್ಕನು ಮೂರುಲೋಕವನೊಂದೆ |
ಬಾರಿ ತುಂಬುವ ಘನಮಹಿಮಾ ||
ಆರು ಬಲ್ಲರು ನಿನ್ನ ಘನವ ನನ್ನೊಳಗಿರು |
ವೀರಾ ಚಿದಂಬರಪುರುಷಾ ||

ಟಿ. ಬಿ. ರಾಜಣ್ಣ, ತೊಂಡೇಬಾವಿ

ಗೌರಿಬಿದನೂರು ತಾಲ್ಲೂಕು ತೊಂಡೇಬಾವಿಯಲ್ಲಿ ಬ್ರಹ್ಮಸೂರಪ್ಪನವರು ಸಂತೆ ವ್ಯಾಪಾರದಿಂದ ಜೀವನ ಮಾಡುತ್ತಿದ್ದರು. ಇವರ ಧರ್ಮಪತ್ನಿ ಕಲಿದೇವಪುರದ ಕಮಲಮ್ಮನವರು. ಈ ದಂಪತಿಗಳಿಗೆ ಇಹಪರಗಳಂತೆ ಇಬ್ಬರು ಗಂಡುಮಕ್ಕಳಾದರು. ಹಿರಿಯ ಮಕ್ಕಳು ಟಿ. ಬಿ. ರಾಜಣ್ಣನವರು, ಕಿರಿಯವರು ನೇಮಿರಾಜರು.



ಟಿ. ಬಿ. ರಾಜಣ್ಣ

ಟಿ. ಬಿ. ರಾಜಣ್ಣನವರು ಬಾಲ್ಯದಿಂದಲೂ ಮೇಧಾವಿಗಳು. ಇವರು ತೊಂಡೇಬಾವಿಯಲ್ಲಿ ಪ್ರಾಥಮಿಕ ವಿದ್ಯಾಭ್ಯಾಸ ಮಾಡಿದರು. ಮಂಡ್ಯ, ಹಾಸನ, ಚಿತ್ರದುರ್ಗಗಳಲ್ಲೂ ಓದಿದರು. 1938ರಲ್ಲಿ ಉತ್ತಮ ದರ್ಜೆಯಲ್ಲಿ ಎಸ್.ಎಸ್.ಎಲ್.ಸಿ. ಉತ್ತೀರ್ಣರಾದರು. ಅನಂತರ ಬೆಂಗಳೂರಿಗೆ ಬಂದು ಉನ್ನತ ವ್ಯಾಸಂಗಮಾಡಿದರು. 1942ರಲ್ಲಿ ಇವರು ಬಿ.ಎಸ್‌ಸಿ. ಪದವೀಧರರಾದರು. ಇವರ ಮನೆತನ ಶ್ರೀಮಂತ ಮನೆತನವೇನೂ ಅಲ್ಲ. ಹೊಟ್ಟೆಪಾಡಿಗಾಗಿ ಈ ಮೇಧಾವಿಗಳು ಕಾರಕೂನರಾಗಿ ಎರಡು ವರ್ಷ ಕಳೆದರು ರೆವಿನ್ಯೂ ಹೈಯರ್ ಪರೀಕ್ಷೆಯಲ್ಲಿ ಪ್ರಥಮ ದರ್ಜೆಯಲ್ಲಿ ತೇರ್ಗಡೆ ಹೊಂದಿದರು. ಈ ಪ್ರತಿಭಾವಂತ ಚೇತನ ಕಾರಕೂನರಾಗಿ ಕೊನೆತನಕ ಬಾಳಲು ಇಷ್ಟಪಡದೆ ಕೆಲಸಕ್ಕೆ ರಾಜೀನಾಮೆ ಕೊಟ್ಟು ಇಂಜಿನಿಯರಿಂಗ್ ವಿದ್ಯಾಭ್ಯಾಸಕ್ಕೆ ನುಗ್ಗಿದರು. 1947ರಲ್ಲಿ ಇವರು ಇಂಜಿನಿಯರಿಂಗ್‌ಪರೀಕ್ಷೆಯಲ್ಲೂ ಉತ್ತೀರ್ಣರಾದರು. ಇವರು ಯಾವ ತರಗತಿಯಲ್ಲೂ ಅನುತ್ತೀರ್ಣರಾದವರಲ್ಲ.

ಅಂದಂದಿನ ಪಾಠಪ್ರವಚನವನ್ನು ಅಂದಂದೇ ಮನನಮಾಡಿ ತರಗತಿಯಲ್ಲಿ ಸದಾ ಪ್ರಥಮಶ್ರೇಣಿಯಲ್ಲಿರುತ್ತಿದ್ದರು.

16-10-1947ರಲ್ಲಿ ಶ್ರೀ ಟಿ. ಬಿ. ರಾಜಣ್ಣನವರು ಇಂಜಿನಿಯರ್ ಆದರು. ಬಾಲ್ಯದಲ್ಲೇ ತಬ್ಬಲಿಯಾದ ಇವರನ್ನು ಇವರ ಸೋದರಮಾವಂದಿರು ಕೈಬಿಡದೆ ಉನ್ನತವ್ಯಾಸಂಗಕ್ಕೆ ಸಹಾಯ ಮಾಡಿದರು. ಕೆಲಸ ದೊರೆತ ಒಂದೇ ವರ್ಷದಲ್ಲಿ ಇವರು ತಮ್ಮ ಸೋದರಮಾವಂದಿರಾದ ಶ್ರೀ ಕೆ. ಎನ್. ಪದ್ಮನಾಭಯ್ಯನವರ ಪುತ್ರಿಯಾದ ಶ್ರೀಮತಿ ಕಾಂತಮ್ಮನವರನ್ನು ಮದುವೆಯಾದರು. ಈ ದಂಪತಿಗಳಿಗೆ ರತ್ನತ್ರಯಗಳಂತೆ ಪ್ರೇಮಸಾಗರ, ಸೂರ್ಯಕಲಾ ಮತ್ತು ಅರವಿಂದ್ ಈ ರೀತಿ ಮೂರೇ ಜನ ಮಕ್ಕಳು.

ಶ್ರೀ ಟಿ. ಬಿ. ರಾಜಣ್ಣನವರು ತಮ್ಮ ಸರ್ಕಾರಿವೃತ್ತಿಯಲ್ಲಿ ಒಳ್ಳೆಯ ಹೆಸರನ್ನು ಪಡೆದಿರುವರು. ಅತ್ತ ಜನಕ್ಕೂ ಪ್ರಿಯರಾಗಿ ಇತ್ತ ಮೇಲಧಿಕಾರಿಗಳಿಗೂ ಬೇಕಾದವರಾಗಿರುವರು. 5-11-1955ರಲ್ಲಿ ಇವರು ಅಸಿಸ್ಟೆಂಟ್ ಇಂಜಿನಿಯರ್ ಆದರು. 3-2-1973ರಲ್ಲಿ ಎಕ್ಸಿಕ್ಯುಟಿವ್ ಇಂಜಿನಿಯರ್ ಆದರು. ಇವರು ಜೂನಿಯರ್ ಇಂಜಿನಿಯರ್ ಆಗಿದ್ದಾಗ ವಿಶ್ವೇಶ್ವರಯ್ಯ ನಾಲೆ ನೀರುಸರಬರಾಜನ್ನು ನೋಡಿಕೊಂಡರು. ಕಡೂರು-ಚಿಕ್ಕಮಗಳೂರು ಹೆದ್ದಾರಿಯ ಸಿಮೆಂಟ್ ಕಾಂಕ್ರೀಟ್ ಇವರ ಮೇಲ್ವಿಚಾರಣೆಯಲ್ಲೇ ಆದುದು (1956-58). ತುಂಗಭದ್ರ ಕೆಳಮಟ್ಟದ ಕಾಲುವೆಯಲ್ಲಿ 25 ಮೈಲಿ ಉಸ್ತುವಾರಿ ನಡೆಸಿದರು. 1959-62ರಲ್ಲಿ ಇವರು ರಾಯಚೂರು ಜಿಲ್ಲೆಯಲ್ಲಿ 50 ಲಕ್ಷ ರೂ. ಕೆಲಸ ಮಾಡಿಸಿದರು. 1962-64ರಲ್ಲಿ ಇವರು ಬೆಂಗಳೂರು ಟ್ರಸ್ಟ್ ಬೋರ್ಡ್ ನಿವೇಶನ ರಚನೆ, ಉನ್ನತ ಭವನಗಳ ನಿರ್ಮಾಣಕಾರ್ಯಗಳನ್ನು ನೆರವೇರಿಸಿ ಸೈಯೆನಿಸಿಕೊಂಡರು.

1965ರಲ್ಲಿ ಇವರು ಹೊಸದೆಹಲಿಗೆ ತೆರಳಿ ಕೇಂದ್ರ ರಸ್ತೆ ಸಂಶೋಧನಾ ವಿಭಾಗದಲ್ಲಿ ಟ್ರೈನಿಂಗ್ ಮಾಡಿಕೊಂಡರು. ನೆಲಮಂಗಲ, ಕೊರಟಗೆರೆ, ತುಮಕೂರು —ಈ ಸ್ಥಳಗಳಲ್ಲಿ ಇವರು ಅಸಿಸ್ಟೆಂಟ್ ಇಂಜಿನಿಯರ್ ಆಗಿ ಸಂದರ್ಭೋಚಿತ ಜವಾಬ್ದಾರಿಗೆ ಹೆಗಲುಕೊಟ್ಟು ಒಳ್ಳೆ ಹೆಸರನ್ನು ಪಡೆದಿರುವರು.

1973ರಿಂದ ಭಾರತದ ಜನನ ನಿಯಂತ್ರಣ ಯೋಜನೆಯಲ್ಲಿ ಇವರು ಚಿತ್ರದುರ್ಗ, ಶಿವಮೊಗ್ಗ ಮತ್ತು ತುಮಕೂರು ವಿಭಾಗದ ಕಟ್ಟಡಗಳ ನಿರ್ಮಾಣ ಕಾರ್ಯದಲ್ಲಿ ನಿರತರಾಗಿರುವರು. ಇಲ್ಲಿ ಎರಡು ಕೋಟಿ ರೂ.ಗಳಷ್ಟು ಕಾಮಗಾರಿಕೆ ಆಗಬೇಕಾಗಿದೆ.

ಶ್ರೀ ರಾಜಣ್ಣನವರು ಜನಾನುರಾಗಿಗಳು ಮತ್ತು ಧರ್ಮಾನುರಾಗಿಗಳು. ಅಕ್ಕರಾಂಪುರದ ಜಿನಾಲಯಕ್ಕೆ ಬರುವ ಯಾತ್ರಿಕರ ಅನುಕೂಲಕ್ಕಾಗಿ ಇವರು ತಮ್ಮ

ತಾಯಿಯವರ ಹೆಸರಿನಲ್ಲಿ ಒಂದು ಬಚ್ಚಲುಮನೆ ಕಟ್ಟಿಸಿರುವರು. ಮಹಾವೀರ ಮಿಷನ್, ವಿವೇಕೋದಯ ಗ್ರಂಥಮಾಲೆ, ಅತ್ತಿಮಬ್ಬೆ ಪ್ರಕಾಶನ ಇವಕ್ಕೆಲ್ಲ ರಾಜಣ್ಣ ನವರು ತ್ರಿಕರಣಪೂರ್ವಕ ಪೋಷಕರಾಗಿರುವರು. ಬೆಂಗಳೂರು ಎಂ.ಟಿ. ಜೈನ ವಿದ್ಯಾರ್ಥಿನಿಲಯದ ಪುಸ್ತಕ ಭಂಡಾರಕ್ಕೆ ಸಹಾಯಮಾಡಿರುವರು. ಪುಸ್ತಕಪ್ರಿಯ ರಾದ ಇವರು ನೂರಾರು ಜೈನ ಗ್ರಂಥಗಳನ್ನು ಓದಿದ್ದಾರೆ. ರತ್ನಾಕರನ ಭರತೇಶ ವೈಭವ, ಶತಕಸಾಹಿತ್ಯ ಇವನ್ನು ಪಾರಾಯಣ ಮಾಡುತ್ತ ಇವರು ತನ್ಮಯರಾಗು ವರು. ನವನಾಗರಿಕತೆಯ ಬಿರುಗಾಳಿ ಇವರ ಮೇಲೆ ಪರಿಣಾಮವನ್ನು ಬೀರಿಲ್ಲ. ದಿನವೂ ಇವರು ಜಿನಪೂಜೆಮಾಡಿ ಮುಂದಿನ ಕಾರ್ಯಕ್ಕೆ ತೊಡಗುವರು. ಗುರುಹಿರಿಯ ರಲ್ಲಿ ಇವರಿಗೆ ಭಕ್ತಿಯಿದೆ. ಆಗಾಗ ಟೆನಿಸ್ ಆಟವನ್ನೂ ಆಡುವರು.

ವಿಶಾಲ ಕರ್ಣಾಟಕ ಆದಂದಿನಿಂದ ಸೀನಿಯಾರಿಟಿಯಲ್ಲಿ ತೊಡಕಾಗಿ ಇವರ ಪ್ರಗತಿ ಸ್ವಲ್ಪ ಕುಂಠಿತವಾಯಿತು. ಇಲ್ಲದಿದ್ದರೆ ಇದುವರೆವಿಗೆ ಸೂಪೆರಿಂಟೆಂಡಿಂಗ್ ಇಂಜಿನಿಯರ್ ಆಗುತ್ತಿದ್ದರು.

ಜಿನಭಕ್ತರಾದ ರಾಜಣ್ಣನವರು ತಮ್ಮ ತಾಯಿ, ಹೆಂಡತಿ ಮತ್ತು ಮಕ್ಕಳನ್ನು ಸಮ್ಮೇದಗಿರಿಯಾತ್ರೆಗೆ ಕಳಿಸಿ ಪುಣ್ಯಭಾಗಿಗಳಾಗಿರುವರು. ಇವರಿಗೆ ಮಾತ್ರ ಸಿದ್ಧ ಕ್ಷೇತ್ರ ಸಂದರ್ಶನಕ್ಕೆ ಇನ್ನೂ ವೇಳೆ ದೊರೆತಿಲ್ಲ.

ಕಮಲ ಷಟ್ಕಗಳೆಸಳ್ಳೈವತ್ತರೊಳಗೆಸೆ |
ವಮಳಿನಾಕ್ಷರಗಳೈವತ್ತಾ ||
ಕ್ರಮದೊಳೀಕ್ಷಿಸುತ ಸನ್ಮತಿದೋರು ಲೋಕವಿ |
ಕ್ರಮನೆ ನಿರಂಜನಸಿದ್ಧಾ ||

ಒಸಗೆಯ ಮೇಲೊಸಗೆಯನಿತ್ತು ಸತತ ಭಾ |
ವಿಸುವರ ಪಾಲಿಪ ಮಹಿಮಾ ||
ನಸು ಮಾಸದೆನ್ನೆದೆಯೊಳಗಿರು ನಿಚ್ಚ ಸಂ |
ತಸನೆ ಚಿದಂಬರಪುರುಷಾ ||

ಎಸ್ .ಆರ್. ನೇಮಿರಾಜಯ್ಯ, ಕುಣಿಗಲು

ಮಾಗಡಿ ತಾಲ್ಲೂಕು ಸೆಂಕಿಘಟ್ಟದ ಶ್ರೀ ರಾಮುಸೆಟ್ಟಪ್ಪನವರು ವ್ಯವಸಾಯಗಾರರು. ಭೂದೇವಿಯ ಆರಾಧಕರು. ಇವರ ಮಡದಿ ಪೊಮ್ಮಕ್ಕಮ್ಮನರು ಬಿದರೆ ಪೊಮ್ಮಯ್ಯಸೆಟ್ಟರ ಸುಪುತ್ರಿ. ಈ ದಂಪತಿಗಳಿಗೆ ಪಂಚಾಶ್ಚರ್ಯಗಳಂತೆ ಶ್ರೀಯುತರಾದ ಪುಟ್ಟಪ್ಪನವರು, ನಾಗಪ್ಪನವರು, ನೇಮಿರಾಜಯ್ಯನವರು, ಆದಿರಾಜಯ್ಯನವರು ಮತ್ತು ಶಾಂತಿರಾಜಯ್ಯನವರು—ಈ ರೀತಿ ಐದು ಜನ ಪುತ್ರರತ್ನರು ಜನಿಸಿದರು. ಇವರಲ್ಲಿ ಶ್ರೀ ಎಸ್. ಆರ್. ನೇಮಿರಾಜಯ್ಯನವರು 1921ರಲ್ಲಿ ಜನಿಸಿದರು. ಇವರು ಹೆಚ್ಚಿಗೆ ಓದಲಿಲ್ಲ. ಸೆಂಕಿಘಟ್ಟದಲ್ಲಿದ್ದ ಪ್ರೈಮರಿ ಶಾಲೆಯಲ್ಲಿ ಎಷ್ಟು ಓದಬಹುದಾಗಿತ್ತೋ ಅಷ್ಟನ್ನೂ ಓದಿದರು. ಅನಂತರ ಕುಲಕಸುಬಾದ ವ್ಯವಸಾಯಕ್ಕೆ ನಿಂತರು.

ನೇಮಿರಾಜಯ್ಯನವರಿಗೆ 1942ರಲ್ಲಿ ವಿವಾಹವಾಯಿತು. ಬೆಳ್ಳೂರಿನ ಪದ್ಮರಾಜಯ್ಯನವರ ಸುಪುತ್ರಿ ಶ್ರೀಮತಿ ಶ್ರೀಯಾಲಮ್ಮನವರು ಇವರ ಮನೆಯನ್ನೂ ಮನವನ್ನೂ ತುಂಬಿ ಅಚ್ಚುಮಚ್ಚಿನ ಮಡದಿಯುರಾದರು. ಸೆಂಕಿಘಟ್ಟದಲ್ಲೂ ಜಿನಾಲಯವಿದೆ, ಬೆಳ್ಳೂರಿನಲ್ಲೂ ಜಿನಾಲಯವಿದೆ. ವಾತಾವರಣದ ಪ್ರಭಾವದಿಂದ ಈ ದಂಪತಿಗಳಿಬ್ಬರೂ ದೈವಭಕ್ತರಾದರು, ಧರ್ಮಾನುರಾಗಿಗಳಾದರು, ವ್ರತನಿಯಮಪರಿಪಾಲಕರಾದರು. ಶ್ರೀಮತಿ ಶ್ರೀಯಾಲಮ್ಮನವರು ಮದುವೆಗೆ ಮುಂಚೆಯೇ ಭಾನುವಾರದ ನೋಂಪಿಯನ್ನು ಮಾಡಿದ್ದರು. ಮದುವೆಯಾದಮೇಲೆ ಇವರು ಶುಕ್ರವಾರದ ನೋಂಪಿಯನ್ನು ಆಚರಿಸಿದರು. ಈ ಸತಿಪತಿಯರು 14 ವರ್ಷ ತಪ್ಪದೆ ಅನಂತನೋಂಪಿಯನ್ನು ಆಚರಿಸಿ ಅನಂತಸಿರಿಗೆ ಸಂಚುಕಾರ ಕೊಟ್ಟಿರುವರು. ಎರಡು ಬಾರಿ ಇವರು ತೀರ್ಥಯಾತ್ರೆ ಮಾಡಿರುವರು. ಭರತಖಂಡದ ಸಿದ್ಧಕ್ಷೇತ್ರಗಳನ್ನೂ ಅತಿಶಯಕ್ಷೇತ್ರಗಳನ್ನೂ ದರ್ಶನಮಾಡಿ ದರ್ಶನಾವರಣೀಯ ಕರ್ಮದಿಂದ ಪಾರಾಗಲು ಪ್ರಯತ್ನಿಸಿರುವರು. ಪರಿಗ್ರಹಪರಿಮಾಣವ್ರತಧಾರಿಗಳಾದ ಈ ದಂಪತಿಗಳಿಗೆ ಒಬ್ಬಳೇ ಒಬ್ಬಳು ಮಗಳು. ಪ್ರತಿವರ್ಷವೂ ತಾವು ಗಳಿಸುವ ಆದಾಯದಲ್ಲಿ ಬಹುಭಾಗವನ್ನು ಇವರು ಕಡ್ಡಾಯವಾಗಿ ದಾನಮಾಡುತ್ತಿರುವರು. ಮನಸಾರೆ ಪುಣ್ಯಕಾರ್ಯವನ್ನು ಈ ದಂಪತಿಗಳು ನೆರವೇರಿಸುತ್ತಿರುವರು.

ಶ್ರೀ ನೇಮಿರಾಜಯ್ಯನವರು ಕುಣಿಗಲಿಗೆ ಬಂದು ಬೆಲ್ಲದ ವ್ಯಾಪಾರ ಪ್ರಾರಂಭಿಸಿದರು. ಈ ವ್ಯಾಪಾರದಲ್ಲಿ ಇವರಿಗೆ ಲಕ್ಷ್ಮೀಕಟಾಕ್ಷ ದೊರೆಯಿತು. ಚಿಕ್ಕ ಹಾಗೂ ಚೊಕ್ಕವಾದ ಈ ಕುಟುಂಬ ಮಿತವ್ಯಯದಿಂದ ಬಾಳಿ ದಿನದಿನವೂ ಹಣವನ್ನು ಉಳಿಸಿದರು. ಹಣ ಉಳಿಸುವವರಿಗೆ ನಮ್ಮಲ್ಲಿ ಕೊರತೆಯಿಲ್ಲ. ಆದರೆ ಲೋಭಿಗಳಾಗದೆ

ಉಳಿಸಿದ ಹಣವನ್ನು ಸದ್ವಿನಿಯೋಗ ಮಾಡುವವರು ನಮ್ಮಲ್ಲಿ ಎಷ್ಟು ಜನ ಇದ್ದಾರೆ? ಶ್ರೀ ನೇಮಿರಾಜಯ್ಯನವರು ಅನ್ನದಾನದಲ್ಲಿ ಶ್ರದ್ಧೆಯುಳ್ಳವರು. ಶ್ರವಣಬೆಳಗುಳದಲ್ಲಿ ಜಿನಾಗಮವನ್ನು ಕಲಿಯುವ ವಿದ್ಯಾರ್ಥಿಗಳಿಗೆ ಧರ್ಮಾರ್ಥವಾಗಿ ಊಟದ ವ್ಯವಸ್ಥೆ ಮಾಡಲು ಇವರು ಹೇರಳವಾಗಿ ಧನಸಹಾಯ ಮಾಡಿರುವರು. ಹುಂಚದ ಕುಂದ ಕುಂದ ವಿದ್ಯಾಪೀಠಕ್ಕೆ ಬರುವ ಬಡವಿದ್ಯಾರ್ಥಿಗಳ ಭೋಜನವ್ಯವಸ್ಥೆಗಾಗಿ ಅಪಾರ ವಾದ ಸಹಾಯ ಮಾಡಿರುವರು. ಕುಣಿಗಲು ಜಿನಾಲಯದ ನಿತ್ಯಪೂಜಾವ್ಯವಸ್ಥೆಗಾಗಿ ಧ್ರುವನಿಧಿ ಇಟ್ಟಿದ್ದಾರೆ. ಜಿನಾಲಯದ ಮೊಗಸಾಲೆಯನ್ನು ಶ್ರೀ ನೇಮಿರಾಜಯ್ಯ ನವರು ಕಟ್ಟಿಸಿಕೊಟ್ಟಿರುವರು. ಬೆಂಗಳೂರಿನ ವಿಮಾನ ನಗರದ ಜಿನಾಲಯದ ಪೂಜಾವ್ಯವಸ್ಥೆಗೂ ಸಹಾಯ ಮಾಡಿರುವರು. ಮಂದಲಗೆರೆ ಕ್ಷೇತ್ರಕ್ಕೂ ಉದಾರವಾಗಿ ದಾನಮಾಡಿರುವರು. ಪ್ರತಿವರ್ಷವೂ ಹೆಚ್ಚಿದ ಹಣವನ್ನು ದಾನಮಾಡುತ್ತ ಈ ದಂಪತಿಗಳು ಅಪರಿಗ್ರಹವ್ರತಧಾರಿಗಳಾಗುತ್ತಿರುವರು.

ಉಸುರೆಂಬ ಗರಗಸದಿಂದ ದೇಹಾತ್ಮರ |
ಬೆಸುಗೆಯ ಬಿಡಿಸಿ ನೋಡಿದರೆ ||
ಮಸುಳದೆ ತೋರ್ಪ ಮಹಾತ್ಮನೀನೆನಗೊಳ್ಪ |
ನೆಸಗು ನಿರಂಜನಸಿದ್ಧಾ ||

ಅಕ್ಷೋಣಿಸಾಮರ್ಥ್ಯ ಅನುಪಮಲಾವಣ್ಯ |
ಮೋಕ್ಷಾಗ್ರಗಣ್ಯ ವರೇಣ್ಯಾ ||
ಸಾಕ್ಷಾತ್ತಾಗಿ ನನ್ನೆದೆಯೊಳಗಿರು ಲೋಕ |
ದಕ್ಷಾ ಚಿದಂಬರಪುರುಷಾ ||

ಪದ್ಮಯ್ಯಗೌಡರು, ವೈನಾಡು

ಕೈಚೀಲದಲ್ಲಿ ನೋಟಿನ ಕಂತೆಗಳನ್ನು ಇಟ್ಟುಕೊಂಡು ಸತ್ಪಾತ್ರಗಳನ್ನು ಹುಡುಕುತ್ತಿದ್ದ ಮಹಾಮಹಿಮರು ದಿವಂಗತ ಪದ್ಮಯ್ಯಗೌಡರು. ಸತ್ಪಾತ್ರರು ದೊರೆತಾಕ್ಷಣ ಸಂತೋಷವಾಗಿ ಹಣವನ್ನು ಅವರಿಗೆ ಕೊಟ್ಟು ಭಾರವಿಳಿಸಿಕೊಂಡವರಂತೆ ಇವರು ನಿಶ್ಚಿಂತರಾಗುತ್ತಿದ್ದರು. ದೀನದಲಿತರ ಮನೆಗೆ ಬಂದು ಹಣವನ್ನು ಹಂಚುತ್ತಿದ್ದ ಜೀವಂತ ಕಲ್ಪವೃಕ್ಷ ಪದ್ಮಯ್ಯಗೌಡರು. ಸಾವಿರಾರು ಜನ ವಿದ್ಯಾರ್ಥಿಗಳೂ, ನೂರಾರು ಬಸದಿಗಳೂ, ಹತ್ತಾರು ಜನ ಸಾಹಿತಿಗಳೂ ಇವರಿಂದ ನೆರವನ್ನು ಪಡೆದಿರುವರು. ಪಂಚನಮಸ್ಕಾರ ಜಪಿಸುವ ಭರವಸೆ ಕೊಟ್ಟವರಿಗೆಲ್ಲ ಇವರು ಧಾರಾಳವಾಗಿ ಹಣ ಕೊಟ್ಟಿರುವರು. ಭಾವಪೂಜೆಮಾಡಲು ಒಪ್ಪಿದವರಿಗೆಲ್ಲ ಇವರು ಕೈತೊರೆದು ದಾನಮಾಡಿದ್ದರು. ಇವರ ಕಣ್ಣಿಗೆ ಬಿದ್ದವರೆಲ್ಲ ಜಿನಭಕ್ತರಾದರು, ಇವರ ಸಂಪರ್ಕದಿಂದ ಭಾಗ್ಯವಂತರಾದರು.



ಪದ್ಮಯ್ಯಗೌಡರು

ವೈನಾಡಿನ ಮಣೆಯಂಗೂಡು ಸುಬ್ಬಯ್ಯಗೌಡರು ಮತ್ತು ಗುಣಾವತಮ್ಮ ಇವರಿಗೆ 1900ರಲ್ಲಿ ಪದ್ಮಯ್ಯಗೌಡರು ಏಕಮಾತ್ರಪುತ್ರರಾಗಿ ಜನಿಸಿದರು. ವೈನಾಡಿನ

ನಾಮಧಾರಿಗೌಡ ಸಮಾಜದ ಮೇಲೆ ಶ್ರವಣಬೆಳಗುಳದ ದಿವಂಗತ ನೇಮಿಸಾಗರರು ಅಹಿಂಸಾಧರ್ಮದ ಪ್ರಭಾವವನ್ನು ಬೀರಿ ಅನೇಕ ಮನೆತನಗಳಿಗೆ ಜೈನದೀಕ್ಷೆಯನ್ನು ದಯಪಾಲಿಸಿದರು. ಸುಬ್ಬಯ್ಯಗೌಡರ ತಂದೆ ಕೃಷ್ಣಯ್ಯಗೌಡರು. ಇವರೂ ನೇಮಿಸಾಗರರ ಶಿಷ್ಯರಾದರು, ಜಿನಭಕ್ತರಾದರು. ಈ ವಂಶದ ಪದ್ಮಯ್ಯಗೌಡರು ಮೈಸೂರಿಗೆ ಬಂದು ಮಾಧ್ಯಮಿಕ ಶಾಲೆಯಲ್ಲಿ ಓದಿದರು. ದಿವಂಗತ ಎ. ಶಾಂತಿರಾಜಶಾಸ್ತ್ರಿಗಳ ಬಳಿ ಕುಳಿತು ಇವರು ಜೈನತತ್ತ್ವಗಳನ್ನು ಗ್ರಹಿಸಿದರು.

1941ರ ತನಕ ಸುಬ್ಬಯ್ಯಗೌಡರು ಜೀವಂತರಾಗಿದ್ದರು. ಆದರೆ ದೊಡ್ಡ ಎಸ್ಟೇಟಿನ ಮಾಲೀಕರಾದ ಇವರು ಕೊನೆಕೊನೆಗೆ ಸಾಲಗಾರರಾಗಿ ಆಸ್ತಿಯನ್ನೆಲ್ಲ ಕಳೆದುಕೊಂಡರು. ಏನು ಬೆಳೆದರೂ ಬೆಲೆಯಿಲ್ಲದಂತಾಗಿ ಜಮೀನ್ದಾರರು ಮುಳುಗಿ ಹೋಗುತ್ತಿದ್ದ ಕಾಲವದು.

ಪದ್ಮಯ್ಯಗೌಡರು ಅಪಾರವಾದ ಜಿನಭಕ್ತಿಯನ್ನು ತಮ್ಮ ಹೃತ್ಕಮಲದಲ್ಲಿ ತುಂಬಿಕೊಂಡು ಧರ್ಮಾನುರಾಗದಿಂದ ರೋಮಾಂಚನಗೊಂಡು ಶುಭಪರಿಣಾಮದ ಸಾಕಾರಮೂರ್ತಿಯಾಗಿ ಪಂಚನಮಸ್ಕಾರ ಜಪಿಸುತ್ತ ಕೂಲಿನಾಲಿಮಾಡಿ ಜೀವಿಸಿದರು. ಇವರ ಪೂರ್ವಪುಣ್ಯವೋ, ಧರ್ಮಪ್ರೇಮವೋ ಅಥವಾ ಪಂಚನಮಸ್ಕಾರದ ಮಹಿಮೆಯೋ, ಕೂಲಿಕಾರರಾಗಿದ್ದ ಪದ್ಮಯ್ಯಗೌಡರು ಕ್ರಮೇಣ ಸಿರಿವಂತರಾದರು! ತಂದೆ ಕಳೆದುದಕ್ಕೆ ಹತ್ತುಪಟ್ಟು ಸಂಪತ್ತನ್ನು ಇವರು ಗಳಿಸಿದರು. "ಅನಂತಸಿರಿ ಲೋಲನನ್ನು ನನ್ನ ಹೃದಯದಲ್ಲಿ ಸದಾ ಆವಾಹನೆ ಮಾಡಿಕೊಂಡುದರಿಂದ ನಾನೂ ಸಿರಿವಂತನಾಗಿರುವೆನು"—ಎಂದು ಪದ್ಮಯ್ಯಗೌಡರು ದೀನದಲಿತರ ಮುಂದೆ ಹೇಳುತ್ತಿದ್ದರು.

ಇವರ ಮನೆತನವೇ ಧಾರ್ಮಿಕ ಮನೆತನ. ಒಮ್ಮೆ ಬೇಟೆಗಾರರು ಕೋವಿಗಳನ್ನು ಹಿಡಿದು ಬೇಟೆಗೆ ಹೋದರು. ಈ ದೃಶ್ಯವನ್ನು ಪದ್ಮಯ್ಯಗೌಡರು ಕಂಡು ಬಲಿಯಾಗಲಿರುವ ಪ್ರಾಣಿಗಳ ಬಗ್ಗೆ ಕರುಣೆಯಿಂದ ಕರಗಿ ಕಂಬನಿ ಮಿಡಿದರು. ಇದ್ದಕ್ಕಿದ್ದಂತೆ ಕಾರ್ಮೋಡ ಕವಿದು ರಪರಪನೆ ಮಳೆಬಿದ್ದು ಬೇಟೆಗಾರರ ತಂಡ ಬರಿಗೈಯಲ್ಲಿ ನಿರಾಶೆಯಿಂದ ಹಿಂದಿರುಗಿತು. ಪದ್ಮಯ್ಯಗೌಡರು ನೆಮ್ಮದಿಯನ್ನು ತಾಳಿದರು. ಒಮ್ಮೆ ತಮ್ಮ ಸಮೀಪಬಂಧು ತನ್ನ ಹೆಂಡತಿಮಕ್ಕಳನ್ನು ತೊರೆದು ದೇಶಾಂತರ ಹೋದನು. ಅವನ ಸಂಸಾರದ ಗೋಳಾಟವನ್ನು ಕಂಡು ಪದ್ಮಯ್ಯಗೌಡರ ಮನಸ್ಸು ಕರಗಿತು. ಹೋದವನನ್ನು ಹಿಂದಕ್ಕೆ ಸೆಳೆಯಲು ಇವರು ಪಂಚನಮಸ್ಕಾರ ಜಪಿಸಿದರು. ಕೆಲವು ದಿನ ಇವರ ಜಪ ನಡೆಯಿತು. ಹೋಗಿದ್ದವನು ತನಗೆ ತಾನೇ ಹಿಂದಿರುಗಿದನು. ಹೆಜ್ಜೆಹೆಜ್ಜೆಗೂ ಇವರಿಗೆ ಪಂಚನಮಸ್ಕಾರದ ಅಪಾರಶಕ್ತಿ ಅರಿವಾಗುತ್ತಬಂದು ಇವರು ಸದಾ ಸಮವಸರಣದ ವಾತಾವರಣವನ್ನು ಅನುಭವಿಸಿದರು. ಜಾತಿ-ಮತ ಒಂದನ್ನೂ ನೋಡದೆ ಇವರು ಪಂಚನಮಸ್ಕಾರವನ್ನು ಎಲ್ಲರಿಗೂ

ಹಂಚಿದರು. ಪಂಚನಮಸ್ಕಾರದ ಅರವಂಟಿಗೆಯನ್ನು ಇವರಷ್ಟು ವ್ಯಾಪಕವಾಗಿ ಸ್ಥಾಪಿಸಿದವರು ವಿರಳ.

ಪದ್ಮಯ್ಯಗೌಡರು ಸಮ್ಯಕ್ತ್ವಶಿರೋಮಣಿಗಳು. ಕೈಯೆಣ್ಣೆ ಮಾಡಿಕೊಂಡು ಹಲಸು ಬಿಚ್ಚುವಂತೆ ಇವರು ಸಂಸಾರದಲ್ಲಿ ಭೇದವಿಜ್ಞಾನಿಗಳಾಗಿ ಬಾಳುತ್ತ ಸಂಸಾರದಲ್ಲೂ ಸಮವಸರಣವನ್ನು ಕಂಡರು. ಇವರಿಗೆ ಇಬ್ಬರು ಪತ್ನಿಯರು. ಮೊದಲನೆಯವರು ಸತ್ಯಭಾಮ. ಇವರ ಮಕ್ಕಳೇ ಶಾಂತಿವರ್ಮರು. ಎರಡನೆಯ ಪತ್ನಿ ಜಯಮತಮ್ಮ. ಇವರಿಗೆ ಧರ್ಮಪಾಲ್, ಗುಣಮಾಲ, ಮರುದೇವಿ ಮತ್ತು ಶಾಂತಕುಮಾರಿ—ಈ ರೀತಿ ನಾಲ್ಕು ಮಕ್ಕಳಾದರು. ಪಂಚನಮಸ್ಕಾರದ ಮಹಿಮೆಯನ್ನು ಕಂಡುಂಡ ಪದ್ಮಯ್ಯಗೌಡರಿಗೆ ಒಟ್ಟಿನಲ್ಲಿ ಪಂಚರತ್ನಗಳಂಥ ಮಕ್ಕಳಾದರು.

ಸತತವಾಗಿ ದಾನಧರ್ಮಗಳು ನಡೆಯುತ್ತಿರಬೇಕೆಂಬುದೇ ಪದ್ಮಯ್ಯಗೌಡರ ಆಶಯ. ಆದಕ್ಕಾಗಿ ಇವರು ಎಂ.ಕೆ.ಎಸ್. ಫ್ಯಾಮಿಲಿ ಜೈನಧರ್ಮೋದ್ಧಾರಕ ಟ್ರಸ್ಟ್, ಎಂ.ಎಸ್.ಪಿ. ಫ್ಯಾಮಿಲಿ ಜೈನ ಟ್ರಸ್ಟ್, ಎಂ.ಪಿ. ಧರ್ಮಪಾಲ ಜೈನ ಟ್ರಸ್ಟ್ ಎಂಬ ಕಲ್ಪವೃಕ್ಷಗಳನ್ನು ಇವರು ನಟ್ಟಿರುವರು. ತಮ್ಮ ಆಸ್ತಿಯ ಬಹುಭಾಗವನ್ನು ಈ ಧಾರ್ಮಿಕ ಟ್ರಸ್ಟ್‌ಗಳಲ್ಲಿ ಹಾಕಿರುವರು. ಕನ್ನಡಿಯ ಕೋಣೆಯಲ್ಲಿ ಜಿನಬಿಂಬಗಳನ್ನಿಟ್ಟು ಇವರು ನಿರ್ಮಿಸಿರುವ ಜಿನಮಂದಿರ ನಂದೀಶ್ವರದಂತೆ ಶೋಭಾಯಮಾನವಾಗಿದೆ. ಜೈನಸಂಕ್ಷಿಪ್ತಕ್ರಿಯಾದರ್ಪಣ ಮತ್ತು ಜೈನತತ್ತ್ವೋಪದೇಶ ಗ್ರಂಥಗಳನ್ನು ಪ್ರಕಟಿಸಿ ಮನೆಮನೆಗೂ ಇವರು ಹಂಚಿ ಧರ್ಮಪ್ರಭಾವನೆ ಮಾಡಿರುವರು. ಇಂಥ ಮಹಿಮಾವಂತ ಚೇತನ 12-12-1969 ಸಂಜೆಯ ಹೊತ್ತಿನಲ್ಲಿ ಸ್ವರ್ಗಸ್ಥವಾಗಿ ಜೈನಸಮಾಜ ಅನಾಥವಾಯಿತು.

ಧಾರಣೆಯೆಂದೆಂಬ ದಂಡರತ್ನದೊಳು ಕ |
ಠೋರಕರ್ಮವನೊಡೆಹೊಯ್ದ ||
ಧೀರೋದಾತ್ತ ಸನ್ಮತಿದೋರು ದುಃಖಜ |
ಜ್ಞಾರಾ ನಿರಂಜನಸಿದ್ಧಾ ||

ದಿ॥ ಎಂ. ಎನ್. ಧರಣಪ್ಪ ಮಂಡ್ಯ

ಆಹಾರ, ಅಭಯ, ಔಷಧಿ ಮತ್ತು ಶಾಸ್ತ್ರ ಇವುಗಳ ದಾನ ಶ್ರೇಷ್ಠವಾದುದು. ಧರಣಪ್ಪನವರು ಚತುರ್ವಿಧ ದಾನಗಳನ್ನೂ ಮನಸಾರೆ ಮಾಡಿ ಶ್ರೀಮನ್ ಮಹಾರಾಜ ನಾಲ್ಮಡಿ ಕೃಷ್ಣರಾಜರಿಂದ ಪ್ರಶಸ್ತಿಯನ್ನು ಪಡೆದರು. ಇವರು 25-10-1875 ರಲ್ಲಿ ಜನಿಸಿದರು. ಇವರ ತಂದೆ ನಂಜಪ್ಪನವರು, ತಾಯಿ ಧರಣಮ್ಮನವರು. ಇವರು ಹುಟ್ಟಿದ ಹನ್ನೊಂದನೆಯ ದಿನಕ್ಕೇನೆ ತಾಯಿಯನ್ನು ಕಳೆದುಕೊಂಡು ತಬ್ಬಲಿಯಾದರು. ತಂದೆಯ ತೋಳತೆಕ್ಕೆಯಲ್ಲಿ ಬೆಳೆದ ಧರಣಪ್ಪನವರು ಕನ್ನಡ ಲೋಯರ್ ಸೆಕೆಂಡರಿ (ಕೆ.ಎಲ್.ಎಸ್.) ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ವ್ಯಾಪಾರಕ್ಕೆ ನುಗ್ಗಿದರು. ಇವರಿಗೆ ಇಂಗ್ಲೀಷ್ ಬರುತ್ತಿರಲಿಲ್ಲ. ನೂಲಿನ ವ್ಯಾಪಾರದಲ್ಲಿ ಇವರು ಏಳಿಗೆಗೆ ಬಂದರು. ಜವಳಿ ಅಂಗಡಿಯನ್ನೂ ಪ್ರಾರಂಭಿಸಿ ವಹಿವಾಟನ್ನು ಹೆಚ್ಚಿಸಿದರು. ಜೊತೆಗೆ ಬಟ್ಟೆ ನೇಯುವ ಫ್ಯಾಕ್ಟರಿಯನ್ನೂ ಸ್ಥಾಪಿಸಿದರು. ವ್ಯಾಪಾರದಲ್ಲಿ ಪಳಗಿದರು, ಪ್ರಖ್ಯಾತರಾದರು. ಜನಾನುರಾಗಿಗಳಾದ ಇವರು ಪರೋಪಕಾರವನ್ನು ಮಾಡುತ್ತ ಶ್ರೀಮಂತರಾದರು.



ಎಂ. ಎನ್. ಧರಣಪ್ಪ

ಬಾಳಿನುದ್ದಕ್ಕೂ ಸಾವುನೋವುಗಳನ್ನು ಕಂಡು ಕಂಡು ಧರಣಪ್ಪನವರಿಗೆ ಬಾಳಿನ ಬೆಲೆ ಅರ್ಥವಾಯಿತು. ಇವರಿಗೆ ಮೂರು ಜನ ಪತ್ನಿಯರು. ಮೊದಲ ಹೆಂಡತಿ ಬೆಂಗಳೂರಿನ ರತ್ನಮ್ಮನವರು ಮದುವೆಯಾದ ಮೂರೇ ವರ್ಷದಲ್ಲಿ ಕಣ್ಮುಚ್ಚಿದರು.

ಇವರಿಗೆ ಮಕ್ಕಳಾಗಿರಲಿಲ್ಲ. ಅರ್ತಿಯ ಗುಣಾವತಮ್ಮ ಧರಣಪ್ಪನವರ ಎರಡನೆಯ ಹೆಂಡತಿ. ಇವರೊಡನೆ ಶ್ರೀ ಧರಣಪ್ಪನವರು ತುಂಬುಜೀವನವನ್ನು ಬಾಳಿದರು. ಶ್ರೀಧರಪ್ಪ, ಜಯೇಂಧರಪ್ಪ, ವಿದ್ಯಾಧರಪ್ಪ, ಯಶೋಧರಪ್ಪ, ಅಜಿತಕುಮಾರ್, ಶ್ರೇಯಾಂಸಪ್ಪ, ವಿಜಯಮ್ಮ, ಸರೋಜಮ್ಮ, ಪದ್ಮಾವತಮ್ಮ ಈ ರೀತಿ ನವರತ್ನಗಳು ಜನಿಸಿದವು. ಗಂಡನ ಕಣ್ಮುಂದೆಯೇ ಗುಣಾವತಮ್ಮನವರು ಮುತ್ತೈದೆಯಾಗಿ ಸ್ವರ್ಗಸ್ಥರಾದರು. ಧರಣಪ್ಪನವರು ಕೆಲವು ದಿನ ಕಂಗಾಲಾದರೂ ಮತ್ತೆ ಚೇತರಿಸಿಕೊಂಡರು. 1937ರಲ್ಲಿ ತಮ್ಮ 52ನೆಯ ವಯಸ್ಸಿನಲ್ಲಿ ಭಂಗವಾಡಿಯ ರಾಜಪುತ್ರಿಯಾದ ಶ್ರೀಯಲದೇವಮ್ಮನವರನ್ನು ಇವರು ವಿವಾಹವಾದರು. ಸುತಾರದೇವಮ್ಮ, ವಿಮಲದೇವಮ್ಮ, ಐರಾದೇವಮ್ಮ ಮತ್ತು ವೃಷಭೇಂದ್ರಕುಮಾರ್ ಈ ರೀತಿ ಶ್ರೀಯಲದೇವಮ್ಮನವರು ಚತುರ್ವಿಧ ಪುರುಷಾರ್ಥಗಳಂತೆ ನಾಲ್ವರು ಮಕ್ಕಳನ್ನು ಪಡೆದರು. ಧರಣಪ್ಪನವರು ಒಟ್ಟು ಹದಿಮೂರು ಮಂದಿ ಮಕ್ಕಳ ತಂದೆಯಾದರು.



ಶ್ರೀಮತಿ ಧರಣಪ್ಪ

ಇವರು ತಾವು ಗಳಿಸಿದ ಬಹುಭಾಗವನ್ನು ಧರ್ಮಕಾರ್ಯಕ್ಕೋಸ್ಕರ ವಿನಿಯೋಗಿಸಿದರು. ಶ್ರವಣಬೆಳಗುಳದ ರಥೋತ್ಸವದಲ್ಲಿ ಪಾಲ್ಗೊಳ್ಳುವ ಶ್ರಾವಕರಿಗೆಲ್ಲ ಅನ್ನಸಂತರ್ಪಣೆ ಒಂದು ವಾರಕಾಲ ಎಡಬಿಡದೆ ಸಾಗಲು ಧರಣಪ್ಪನವರು ಉದಾರಹೃದಯರಾಗಿ ಇಪ್ಪತ್ತು ಸಹಸ್ರ ರೂಗಳನ್ನು ಧೃವನಿಧಿಯಾಗಿ ಇಟ್ಟರು. ಈಗಲೂ ಇವರ ಕುಟುಂಬವರ್ಗದವರು ಈ ಸಂತರ್ಪಣೆಯನ್ನು ಅಚ್ಚುಕಟ್ಟಾಗಿ ನೆರವೇರಿಸುತ್ತಿರುವರು. ಇದುವರೆವಿಗೆ ಲಕ್ಷೋಪಲಕ್ಷಮಂದಿ ಇವರ ಅನ್ನದಾನವನ್ನು ಸ್ವೀಕರಿಸಿರುವರು. ಮಂಡ್ಯದ ಜಿನಾಲಯದಲ್ಲಿ ಅನಂತನೋಂಪಿ ಸಾಂಗೋಪಾಂಗವಾಗಿ ನಡೆಯಲು ಇವರು ಧ್ರುವನಿಧಿ ಏರ್ಪಡಿಸಿರುವರು. ಜಿನರಾತ್ರಿಯ ಉತ್ಸವಕ್ಕಾಗಿ

ಕನ್ನಡಿಮಂಟಪ ಮಾಡಿಸಿ ಪ್ರತಿವರ್ಷ ತಪ್ಪದೆ ಈ ಉತ್ಸವ ನಡೆಯಲು ಧ್ರುವನಿಧಿ ಮಾಡಿರುವರು. ಶಿವಮೊಗ್ಗದ ವರ್ಧಮಾನ ವಿದ್ಯಾರ್ಥಿನಿಲಯಕ್ಕೂ ಊಟದ ವ್ಯವಸ್ಥೆಗಾಗಿ ಇವರು ಸಹಾಯ ಮಾಡಿರುವರು. ಇವರ ಪತ್ನಿ ಶ್ರೀಯಾಲದೇವಿಯವರು ಕುಂದಾದ್ರಿ ಬ್ರಹ್ಮಚರ್ಯಾಶ್ರಮಕ್ಕೆ ಒಂದು ದಿನದ ಊಟದ ವ್ಯವಸ್ಥೆಗಾಗಿ ಒಂದು ಸಹಸ್ರ ರೂ. ಗಳನ್ನು ಧ್ರುವನಿಧಿಯಾಗಿ ಕೊಟ್ಟಿರುವರು.

ಧರಣಪ್ಪನವರು 1938ರಲ್ಲಿ ಧರ್ಮಪರೀಕ್ಷೆಯನ್ನು ಪ್ರಕಟಿಸಿ ಶಾಸ್ತ್ರದಾನ ಮಾಡಿದರು. 1948ರಲ್ಲಿ 'ಜೈನಧರ್ಮದ ಸನಾತನ ತತ್ವ' ಎಂಬ ಗ್ರಂಥವನ್ನು ಪ್ರಕಟಿಸಿ ಧರ್ಮಪ್ರಭಾವನೆ ಮಾಡಿದರು.

ಕ್ಷುಲ್ಲಕಪಾಯಸಾಗರರನ್ನು ಇವರು ಮಂಡ್ಯಕ್ಕೆ ಕರೆದು ತಂದು ಜಿನಾಲಯದಲ್ಲಿ ಅವರಿಗೆ ಜೀವನಪರ್ಯಂತ ಆಹಾರದ ವ್ಯವಸ್ಥೆ ಮಾಡಿದರು. ಈ ಜಿನಭಕ್ತರ ನೆರವಿನಿಂದ ಪಾಯಸಗಾರರು ಇಲ್ಲಿ ನಿಶ್ಚಿಂತೆಯಿಂದ ತಪವೆಸಗಿದರು.

1940ರಲ್ಲಿ ಧರಣಪ್ಪನವರು ಮಂಡ್ಯದ ಸರ್ಕಾರಿ ಆಸ್ಪತ್ರೆಯಲ್ಲಿ ಒಂದು ವಾರ್ಡನ್ನು ಧರ್ಮಾರ್ಥವಾಗಿ ಕಟ್ಟಿಸಿಕೊಟ್ಟರು. ಸಹಸ್ರಾರು ಜನ ರೋಗಿಗಳು ಇದರಲ್ಲಿ ಗುಣ ಹೊಂದಿರುವರು. ಇವರ ಸೇವಾಮನೋಭಾವವನ್ನು ಕಂಡು ಮೈಸೂರು ಸರ್ಕಾರ ಇವರನ್ನು ಕೊಂಡಾಡಿತು.

ಧರಣಪ್ಪನವರು ಜೈನ ಅಸೋಷಿಯೇಷನ್ ಪ್ರೆಸಿಡೆಂಟರಾಗಿದ್ದರು. ಶ್ರೀರಂಗಪಟ್ಟಣದ ಜಿನಾಲಯದ ವ್ಯವಸ್ಥಾಪಕರಾಗಿದ್ದರು. ತಮ್ಮ ಬಾಳನ್ನೆಲ್ಲ ಧರ್ಮಕಾರ್ಯಗಳಿಗೂ, ಸಾಮಾಜಿಕ ಕಾರ್ಯಗಳಿಗೂ ಇವರು ವಿನಿಯೋಗಿಸಿ ಅಮರರಾಗಿರುವರು. ಇವರು ಅನೇಕ ಬಾರಿ ನಗರಸಭೆ ಅಧ್ಯಕ್ಷರಾಗಿದ್ದರು. ಮೂರು ವರ್ಷ ಗೌರವ ನ್ಯಾಯಾಧೀಶರಾಗಿದ್ದರು. ಇವರು ಸತ್ತಮೇಲೂ ಬದುಕಿರುವರು. ತಮ್ಮ 89ನೆಯ ವಯಸ್ಸಿನಲ್ಲಿ 4-6-1964ರಲ್ಲಿ ವಿಧಿವಶರಾದರು. ಆಗ ಮಂಡ್ಯ ನಗರವೆಲ್ಲ ಕಂಬನಿ ಮಿಡಿಯಿತು. ಜೈನ ಸಮಾಜದ ಜೀವನಾಡಿ ನಿಂತುಹೋದಂತಾಯಿತು.

ಕೆತ್ತಿ ಮಿಥ್ಯಾತ್ವದ ಕದವನೊಡೆದು ಮುಕ್ತಿ
ಗುತ್ತುಂಗಧೈರ್ಯದಿ ನಡೆವ ||
ಚಿತ್ತಸಂಧಾನಿ ನನ್ನೆದೆಯೊಳಿರೆನ್ನ ಸಂ|
ಪತ್ತೆ ಚಿದಂಬರಪುರುಷಾ ||

ಕಸ್ತೂರಿ ಪಾಯಣ್ಣನವರು, ಮಂಡ್ಯ

ಇವರಿಗೆ ಈಗ 95 ವರ್ಷವಾಗಿದೆ. ಈಗಲೂ ಹಸುಮಗುವಿನಂತೆ ಚುರುಕಾಗಿರುವರು. ಸದಾ ನಗುಮುಖ, ಉತ್ಸಾಹದ ಅಲೆ ಏಳುವುದು. ಇದಕ್ಕೆ ಇವರ ಮನೋಧರ್ಮವೇ ಕಾರಣ. ಎಲ್ಲಿ ಪಂಚಕಲ್ಯಾಣವಾದರೂ ಇವರು ಕಾಣಿಸಿಕೊಳ್ಳುವರು; ಎಲ್ಲಿ ರಥೋತ್ಸವವಾದರೂ ಇವರು ಹಾಜರಾಗುವರು. ಬಂದ ಕಡೆಯೆಲ್ಲ ಕೈತೊರೆದು ಧಾರಾಳವಾಗಿ ದಾನಮಾಡುವರು. ತ್ಯಾಗ ಮೊದಲು, ಭೋಗ ಅನಂತರ—ಇದೇ ಇವರ ಉತ್ಸಾಹದ, ಉಲ್ಲಾಸದ ರಹಸ್ಯ.

ಕಸ್ತೂರಿ ಪಾಯಣ್ಣನವರು 1878ರಲ್ಲಿ ಜನಿಸಿದರು. ತಂದೆ ನಾಗಪ್ಪನವರು, ತಾಯಿ ಹೊಂಬಕ್ಕ. ಈ ದಂಪತಿಗಳಿಗೆ ನಾಲ್ವರು ಹೆಣ್ಣುಮಕ್ಕಳು, ಇಬ್ಬರು ಗಂಡು ಮಕ್ಕಳಾದವು. ಪಾಯಣ್ಣನವರು ಎಲ್ಲರಿಗಿಂತ ಚಿಕ್ಕವರು. ಕನ್ನಡ ಲೋಯರ್ ಸೆಕೆಂಡರಿ ಓದಿ ಇವರು ವ್ಯಾಪಾರಕ್ಕೆ ಇಳಿದರು. ಮಂಡಿ, ಚಿಲ್ಲರೆ ಅಂಗಡಿ, ಚಿನ್ನ ಬೆಳ್ಳಿ ಅಂಗಡಿ—ಇಷ್ಟು ರೀತಿಯಲ್ಲಿ ಇವರು ವ್ಯಾಪಾರವನ್ನು ರೂಢಿಸಿದರು. ಕೈತುಂಬ ಗಳಿಸಿದರು. ಇವರು ಮುಟ್ಟಿದ್ದೆಲ್ಲ ಬಂಗಾರವಾಯಿತು! ಮಂಡ್ಯ ನಗರದಲ್ಲಿ ಇವರು ಗಣ್ಯರಾದರು.

1928ರಲ್ಲಿ ಇವರು ಗುಡಿಬಂಡೆಯ ಪೊಮ್ಮಯ್ಯನವರ ಮಗಳು ಆದಿಮತಿಯನ್ನು ಮದುವೆಯಾದರು. ಪಾಯಣ್ಣನವರು ಧಾರಾಳಿಯಾದರೆ ಇವರ ಪತ್ನಿ ಉದಾರಿ. ಗಂಡನ ಧರ್ಮಕಾರ್ಯಗಳಿಗೆ ಅಡ್ಡನಿಲ್ಲದೆ ಇವರು ಪ್ರೋತ್ಸಾಹ ನೀಡಿ ಅನುಮೋದನ ಪುಣ್ಯವನ್ನು ಬಾಚಿದರು. ಈ ದಂಪತಿಗಳಿಗೆ ಶ್ರೀಯುತರಾದ ನಾಗರಾಜು, ನೇಮಿರಾಜು, ವಜ್ರನಾಭಯ್ಯ, ಸುಮತಿ ಕುಮಾರ್, ರವಿರಾಜು ಎಂಬ ಪುತ್ರರತ್ನಗಳೂ, ಇಂದ್ರಮ್ಮ, ರಾಜಮ್ಮ, ಕಮಲಮ್ಮ, ಸುಶೀಲ, ಜಯರತ, ಎಂಬ ಕನ್ಯಾರತ್ನಗಳೂ ಜನಿಸಿದರು. ದಶಧರ್ಮಗಳಂತೆ ಈ ಮಕ್ಕಳು ದಂಪತಿಗಳ ಬಾಳ್ವೆಗೆ ಬೆಳಕನ್ನು ನೀಡಿದವು. ಮನೆತುಂಬ ಮಕ್ಕಳು, ಮನೆತುಂಬ ದವಸಧಾನ್ಯ, ಮನೆತುಂಬ ನಂಟರು ಇಷ್ಟರು! ಆದಿಮತಿಯವರು ಅನ್ನಪೂರ್ಣೆಯಾಗಿ ಮಕ್ಕಳನ್ನು ಸಾಕಿದರು, ಹೋಗಿ ಬರುವ ಮಂದಿಯನ್ನು ಸಾಕಿದರು.

ಕಸ್ತೂರಿ ಪಾಯಣ್ಣನವರು ಗಳಿಸುವಾಗ ಕಾಸನ್ನು ರೂಪಾಯಿ ಎಂದು ಭಾವಿಸಿ ಭದ್ರಪಡಿಸಿದರು. ತ್ಯಾಗಕ್ಕೆ ನಿಂತಾಗ ಒಂದು ರೂಪಾಯನ್ನು ಒಂದು ಕಾಸೆಂದು ತಿಳಿದು ತೊರೆಬಿಟ್ಟ ಕಾಮಧೇನುವಾಗಿ ದಾನಮಾಡಿರುವರು.

ಹೊಸದುರ್ಗದ ಜಿನಾಲಯಕ್ಕೆ 1000/– ರೂ., ಶಿವಮೊಗ್ಗ ಜೈನವಿದ್ಯಾರ್ಥಿ ನಿಲಯಕ್ಕೆ ವರ್ಷದಲ್ಲಿ ಒಂದು ದಿನದ ಊಟದ ವ್ಯವಸ್ಥೆ, ಕುಂದಾದ್ರಿಗೆ 500/– ರೂ.

ಗೋಮಟಗಿರಿಗೆ 2000/- ರೂ., ಹುಂಚಕ್ಕೆ 1001/- ರೂ., ಶ್ರವಣಬೆಳಗುಳಕ್ಕೆ 1001/- ರೂ., ಸಂಕಿಘಟ್ಟದ ಜಿನಾಲಯಕ್ಕೆ 1001/- ರೂ., ಬೆಂಗಳೂರು ಜಿನಾಲಯದ ಗೋಪುರ ನಿರ್ಮಾಣಕ್ಕೆ 250/-ರೂ., ಅಟ್ಟ ಜಿನಾಲಯಕ್ಕೆ, ಕುಂತಲಗಿರಿಗೆ ಚಳ್ಳಕರೆ ಜಿನಾಲಯಕ್ಕೆ, ಮಂಡ್ಯ ಜಿನಾಲಯಕ್ಕೆ ಸಂದರ್ಭೋಚಿತವಾಗಿ ಸಹಾಯ ಮಾಡಿರುವರು. ಜೈನಗ್ರಂಥ ಯಾವುದೇ ಕಣ್ಣಿಗೆ ಬೀಳಲಿ ಇವರು ಕೊಂಡುಕೊಳ್ಳುವರು. ಜೈನ ಸಾಹಿತಿ ಯಾರೇ ಇವರನ್ನು ಕಾಣಲಿ ಬರಿಗೈಯಲ್ಲಿ ಕಳಿಸುವುದಿಲ್ಲ. ಇವರ ಮನೆಗೆ ಬಂದವರು ಯಾರೂ ಉಣ್ಣದೆ ಹೋಗುವಂತಿಲ್ಲ.


ಪಾಯಣ್ಣನವರು ಆಗರ್ಭಶ್ರೀಮಂತರೇನೂ ಅಲ್ಲ. ಮಧ್ಯಮ ವರ್ಗದವರು. ಹತ್ತುಜನ ಮಕ್ಕಳನ್ನು ಸಾಕಿ ಅವರಿಗೆ ವ್ಯವಸ್ಥೆಮಾಡಿ ಇದರ ಜೊತೆಗೆ ದಾನಧರ್ಮವನ್ನು ಮಾಡಿರುವುದು ಅವರ ಸಾಹಸವೇ ಸರಿ. ತಾವು ಮಾಡಿದ್ದನ್ನು ಇವರು ಹೇಳಿಕೊಳ್ಳುವುದಿಲ್ಲ. ತಮ್ಮ ಭಾವಚಿತ್ರವನ್ನು ಇವರು ಪ್ರಕಟಣೆಗೆ ಕೊಡುವುದಿಲ್ಲ. ಎಲೆ ಮರೆ ಕಾಯಂತೆ ಸದಾ ನಮ್ರರಾಗಿರುವುದೇ ಇವರ ವೈಶಿಷ್ಟ್ಯ. ಹೊಗಳಿಕೆ ಇವರಿಗೆ ಬೇಕಿಲ್ಲ. ತೆಗಳುವಂಥ ಕಾರ್ಯವನ್ನು ಇವರು ಮರೆತೂ ಮಾಡಿಲ್ಲ. ಇವರು ಯಾರ ಕಣ್ಣಿಗೂ ಬೀಳದಂತೆ ಇರಬೇಕೆಂದು ಹಟ ತೊಟ್ಟರೂ ಜನ ಇವರನ್ನು ಕೊಂಡಾಡುವರು. ಎಷ್ಟಾದರೂ ಇವರುಕಸ್ತೂರಿ ಪಾಯಣ್ಣನವರಲ್ಲವೇ ! ಕಸ್ತೂರಿಯ ಕಂಪನ್ನು ಮುಚ್ಚಿಡಲಾದೀತೆ ?

ನಿಚ್ಚ ಸಮಾಧಿಭಾವನೆಯಿಂದ ಸುಖದುಃಖ |
ಹೆಚ್ಚು ಕುಂದೆಂಬಿವೆ ಗೆಲ್ವ ||
ಸಚ್ಚರಿತಾತ್ಮ ಸನ್ಮತಿದೋರು ಭವ್ಯರ |
ಮೆಚ್ಚೆ ನಿರಂಜನಸಿದ್ಧಾ ||

ಅನಿತಿನಿತೆಂದು ಸೊಲ್ಲಿಸಬಾರದನುಪಮ |
ಘನಮಹಿಮೆಯ ದೇಹವಾದ ||
ಮುನಿಜನವಂದ್ಯ ನನ್ನೆದೆಯೊಳಗಿರು ನಿರಂ|
ಜನನೆ ಚಿಂದಬರಪುರುಷಾ ||

ಎಂ. ಎಸ್. ಜಿನ್ನಪ್ಪನವರು, ಮಂಡ್ಯ

"ನಮ್ಮ ಧಣಿಗಳು ಬೆಂಗಳೂರಿನ ಸಜ್ಜನರಾಯರು" ಎಂದು ಶ್ರೀ ಜಿನ್ನಪ್ಪನವರು ಕೃತಜ್ಞತೆಯಿಂದ ಹೇಳುವರು. ತಾವು ಕೂರುವ ಕೋಣೆಯಲ್ಲಿ ಎದುರುಗಡೆ ಎದ್ದು ಕಾಣುವಂತೆ ದಿವಂಗತ ಸಜ್ಜನರಾಯರ ಭಾವಚಿತ್ರವನ್ನು ಇವರು ತೂಗುಹಾಕಿರುವರು. ಅನಂತರ ಇವರು ಸ್ಮರಿಸುವುದು ಮಂಡ್ಯದ ಧರಣಪ್ಪನವರನ್ನು. ಇಬ್ಬರೂ ಜೊತೆಯಾಗಿ ನೂಲಿನ ವ್ಯಾಪಾರ ಮಾಡುತ್ತಿದ್ದರು. ಸಜ್ಜನರಾಯರು ಇವರಿಬ್ಬರಿಗೂ ಹಿತಚಿಂತಕರಾಗಿದ್ದರು. ಧರಣಪ್ಪನವರು ಮಾಡಿದ ಧರ್ಮಕಾರ್ಯಗಳಿಗೆಲ್ಲ ಶ್ರೀ ಜಿನ್ನಪ್ಪನವರು ಉತ್ತೇಜನ ಕೊಟ್ಟು ಅನುಮೋದನ ಪುಣ್ಯ ಗಳಿಸಿದರು. ಶ್ರವಣಬೆಳಗುಳದ ರಥೋತ್ಸವ ಸಮಯದಲ್ಲಿ ಊಟದ ಏರ್ಪಾಟಿಗಾಗಿ ಇವರು ಹಣವನ್ನು ಧೃವ ನಿಧಿಗೆ ಹಾಕಿರುವರು. ಮಂಡ್ಯದ ಜಿನಾಲಯದ ಧೃವನಿಧಿಗೆ, ಹುಂಚ ಕ್ಷೇತ್ರಕ್ಕೆ ಸಹಾಯ ಮಾಡಿರುವರು.



ಜಿನ್ನಪ್ಪನವರು, ಮಂಡ್ಯ

ಶ್ರೀ ಜಿನ್ನಪ್ಪನವರು ಪ್ರವಾಸಪ್ರಿಯರು. ಮೂರು ಬಾರಿ ಭರತಖಂಡವನ್ನೆಲ್ಲ ಸುತ್ತಿ ಪವಿತ್ರಕ್ಷೇತ್ರಗಳ ದರ್ಶನ ಮಾಡಿರುವರು. 1951ರಲ್ಲಿ ಇವರು ಯೂರೋಪಿಗೆ ಹೋಗಿ ನಾಲ್ಕು ತಿಂಗಳು ಕಾಲ ಸುತ್ತಾಡಿ ಲೋಕಾನುಭವವನ್ನು ಹೆಚ್ಚಿಸಿಕೊಂಡಿರುವರು. 1970ರಲ್ಲಿ ಎಕ್ಸ್‌ಪೋ–ಎಪ್ಪತ್ತು ಸಮಾರಂಭಕ್ಕಾಗಿ ಜಪಾನು ಪ್ರವಾಸ ಕೈಗೊಂಡು ಸಿಂಗಪುರ, ಹಾಂಕಾಂಗ್, ಥೈಲ್ಯಾಂಡ್ ಮುಂತಾದ ಪ್ರದೇಶಗಳನ್ನೂ

ನೋಡಿಕೊಂಡು ಬಂದಿರುವರು. ನಮ್ಮ ಹಿರಿಯ ತಲೆಗಳಲ್ಲಿ ಇವರಷ್ಟು ಪ್ರವಾಸ ಮಾಡಿದವರು ವಿರಳ.

ಮಂಡ್ಯದ ಸುಬ್ಬಣ್ಣನವರು ಮಡದಿ ಬೇಗೂರು ಲಕ್ಷ್ಮತಮ್ಮನವರು. ಈ ದಂಪತಿಗಳಿಗೆ 1894ರಲ್ಲಿ ಶ್ರೀ ಜಿನ್ನಪ್ಪನವರು ಜನಿಸಿದರು. ಇವರಲ್ಲದೆ ಇನ್ನೂ ಐದು ಜನ ಹೆಣ್ಣುಮಕ್ಕಳನ್ನು ಪಡೆದ ಇವರ ಮನೆ ನಂದಗೋಕುಲದಂತೆ ಕಂಗೊಳಿಸಿತು. ಜಿನ್ನಪ್ಪನವರು ಕನ್ನಡ ಲೋಯರ್ ಸೆಕೆಂಡರಿ ಮಾಡಿಕೊಂಡು ನೂಲಿನ ವ್ಯಾಪಾರವನ್ನು ಪ್ರಾರಂಭಿಸಿದರು. ಬೆಂಗಳೂರಿನ ಸಜ್ಜನರಾಯರ ಸಹಾಯದಿಂದಲೂ ಮಂಡ್ಯದ ಧರಣಪ್ಪನವರ ಮಾರ್ಗದರ್ಶನದಿಂದಲೂ ಇವರು ಏಳಿಗೆಗೆ ಬಂದರು. ಬಡವರಾಗಿದ್ದವರು. ಶ್ರೀಮಂತರಾದರು. ಶ್ರೀಮಂತಿಕೆಯ ಜತೆಗೆ ಸಂಸ್ಕಾರಸಂಪನ್ನರೂ ಆದರು.

ಇವರಿಗೆ 1916ರಲ್ಲಿ ವೀರರಾಜಪೇಟೆಯ ಶ್ರೀಮತಿ ನಾಗಮ್ಮನವರೊಡನೆ ವಿವಾಹವಾಯಿತು. ಈ ದಂಪತಿಗಳಿಗೆ ಪಂಚಾಶ್ಚರ್ಯಗಳಂತೆ ಶ್ರೀಯುತರಾದ ಎಂ. ಜಿ. ಪದ್ಮನಾಭಯ್ಯ, ಮಹಾಬಲ, ಚಂದ್ರಕೀರ್ತಿ ಮತ್ತು ಶ್ರೀಮತಿಯರಾದ ರಾಜಮ್ಮ, ಸುಶೀಲಮ್ಮ ಎಂಬ ಐದು ಜನ ಮಕ್ಕಳಾದರು. ಶ್ರೀಮತಿ ನಾಗಮ್ಮನವರು ಶ್ರದ್ಧಾವಂತ ಜಿನಭಕ್ತೆಯಾಗಿದ್ದರು. ಇವರು ಒಂದು ಬಾರಿ ಸಿದ್ಧಕ್ಷೇತ್ರಗಳನ್ನೆಲ್ಲ ದರ್ಶನ ಮಾಡಿದರು. ಅನಂತನೋಂಪಿಯನ್ನು ಶಾಸ್ತ್ರೋಕ್ತವಾಗಿ ಆಚರಿಸಿ ಉದ್ಯಾಪನೆ ಮಾಡಿದರು. 1959ರಲ್ಲಿ ಈ ಸದ್ಗೃಹಿಣಿ ಕಾಲವಾದರು. ಅಂದಿನಿಂದ ಶ್ರೀ ಜಿನ್ನಪ್ಪನವರು ಒಂಟಿಬಾಳನ್ನು ನಡೆಸುತ್ತಿರುವರು. ನಿರ್ಲಿಪ್ತರಾಗಿ ವ್ಯಾಪಾರವನ್ನೂ ತೊರೆದು ವಿಶ್ರಾಂತಜೀವನ ನಡೆಸುತ್ತಿರುವರು. ಯೌವನದಲ್ಲಿ ಇವರು ಉತ್ಸಾಹಶಾಲಿಗಳಾಗಿ 12 ವರ್ಷ ನಗರಸಭೆಯ ಸದಸ್ಯರಾಗಿ ಮಂಡ್ಯ ಜನತೆಯ ಸೇವೆ ಮಾಡಿರುವರು. ಈಗ ಪಂಚನಮಸ್ಕಾರವನ್ನು ಜಪಿಸುತ್ತ ಶುಭಪರಿಣಾಮದಲ್ಲಿ ಸದಾ ತನ್ಮಯರಾಗಿರುವರು.

ಎಷ್ಟೆಷ್ಟು ಕರ್ಮನಿರ್ಜರೆಯಾದುದೊಡನೊಡ |
ನಷ್ಟಷ್ಟು ಸೌಖ್ಯವ ಪಡೆವ ||
ಶಿಷ್ಟ ನೀನೆನಗೆ ಸನ್ಮತಿದೋರು ಲೋಕಕು |
ತೃಷ್ಣಾ ನಿರಂಜನಸಿದ್ಧಾ ||

ಬಿ. ಟಿ. ಪದ್ದಣ್ಣ, ಮಂಡ್ಯ

ಗುಂಡ್ಲುಪೇಟೆ ತಾಲ್ಲೂಕು ಬೇಗೂರು ತಮ್ಮಣ್ಣನವರು ಮಂಡ್ಯದ ಗುಣಾವತಮ್ಮ ನವರನ್ನು ಮದುವೆಯಾದರು. ಅನಂತರ ಅವರೂ ಮಂಡ್ಯದಲ್ಲೇ ಬಂದು ನೆಲಸಿದರು. ಈ ದಂಪತಿಗಳಿಗೆ ರತ್ನತ್ರಯಗಳಂತೆ ಶ್ರೀಯುತರಾದ ಪದ್ದಣ್ಣ, ದೇವೇಂದ್ರಪ್ಪ ಮತ್ತು ಶ್ರೀಮತಿ ಪದ್ಮ ಈ ರೀತಿಯಲ್ಲಿ ಮೂರು ಜನ ಮಕ್ಕಳಾದರು. ಇವರಲ್ಲಿ ಶ್ರೀ ಪದ್ದಣ್ಣನವರು 1925ರ ಮಹಾಮಸ್ತಕಾಭಿಷೇಕದಲ್ಲಿ 14 ದಿವಸದ ಮಗು ವಾಗಿದ್ದರು. ಇವರು ಲೋಯರ್ ಸೆಕೆಂಡರಿ ಉತ್ತೀರ್ಣರಾಗಿ ಸುಣ್ಣಕಲ್ಲು ವ್ಯಾಪಾರಕ್ಕೆ ಕೈಹಾಕಿ ಅದರಲ್ಲೇ ಏಳಿಗೆಗೆ ಬಂದರು.



ಬಿ. ಟಿ. ಪದ್ದಣ್ಣ, ಶ್ರೀಮತಿ ವಿಜಯಮ್ಮ

ಇವರಿಗೆ 1947ರಲ್ಲಿ ಮೈಸೂರಿನ ಶ್ರೀ ಆದಿರಾಜಯ್ಯನವರ ಪುತ್ರಿ ವಿಜಯಮ್ಮ ನವರೊಡನೆ ವಿವಾಹವಾಯಿತು. ಈ ದಂಪತಿಗಳಿಗೆ ಅನಂತಚತುಷ್ಟಯಗಳಂತೆ ಶ್ರೀ ವೀರೇಂದ್ರಕುಮಾರ್, ಶ್ರೀಮತಿ ಸುಜಾತ, ಸುನೀಲಕುಮಾರ್ ಮತ್ತು ಪಾರಿಜ ಎಂಬ ನಾಲ್ಕು ಮಂದಿ ಮಕ್ಕಳಾದರು. ಚಿಕ್ಕ ಸಂಸಾರ ಚೊಕ್ಕವಾಗಿ ಸಾಗಿತು.

ಶ್ರೀ ಪದ್ದಣ್ಣನವರು ಶ್ರೀಮಂತರಲ್ಲದಿದ್ದರೂ ಅವರ ಅಂತರಂಗ ಔದಾರ್ಯದ ಖನಿ ಯಾಗಿದ್ದಿತು. ಮಿತವ್ಯಯದಿಂದ ಶ್ರೀಮತಿ ವಿಜಯಮ್ಮನವರು ಸಂಸಾರ ತೂಗಿಸಿದರು. ಉಳಿದ ಹಣವನ್ನು ಈ ದಂಪತಿಗಳು ದಾನಧರ್ಮ ಮಾಡಿ ಶ್ರಾವಕಧರ್ಮವನ್ನು

ಎತ್ತಿಹಿಡಿದರು. ಹುಂಚ ಕ್ಷೇತ್ರಕ್ಕೆ ಇವರು 1001/– ರೂ. ಉದಾರವಾಗಿ ಕೊಟ್ಟರು. ಮಂಡ್ಯ, ಸಿಂಹನಗದ್ದೆ, ಗೋಮಟಗಿರಿ ಕ್ಷೇತ್ರಗಳಿಗೂ ಸಂದರ್ಭೋಚಿತ ಸಹಾಯ ಮಾಡಿದರು.


ಶ್ರೀಮತಿ ವಿಜಯಮ್ಮನವರು ಶ್ರಾವಿಕತಿಲಕೆಯಾಗಿರುವರು. ಶುಕ್ರವಾರದ ನೋಂಪಿ, ಆದಿತ್ಯವಾರದ ನೋಂಪಿ, ಶ್ರೀಫಲ ನೋಂಪಿ, ತ್ರೈಲೋಕ್ಯತಿಲಕ ನೋಂಪಿ—ಇವನ್ನೆಲ್ಲ ಮಾಡಿ ಜೈನಸಂಸ್ಕೃತಿಗೆ ಒಪ್ಪಹಾಕಿರುವರು. 1959ರಲ್ಲಿ ಇವರು ಉತ್ತರ ಭಾರತದ ಯಾತ್ರೆ ಹೊರಟು ಸಿದ್ಧಕ್ಷೇತ್ರಗಳನ್ನೂ ಅತಿಶಯಕ್ಷೇತ್ರ ಗಳನ್ನೂ ದರ್ಶನಮಾಡಿ, ಶ್ರೀಮತಿ ವಿಜಯಮ್ಮನವರು ಪುಣ್ಯಭಾಗಿಗಳಾಗಿರುವರು.

ಶ್ರೀ ಪದ್ಮಣ್ಣನವರು ಎಲೆಮರೆಕಾಯಂತೆ ಬಾಳಿದರು. ಉಜ್ವಲವಾದ ಇವರ ಬಾಳ್ವೆ ಬೂದಿ ಮುಚ್ಚಿದ ಕೆಂಡದಂತೆ ಇತ್ತು. ಇವರು ಬಾಳಿನುದ್ದಕ್ಕೂ ಗುಪ್ತದಾನಿ ಗಳು, ಗುಪ್ತಭಕ್ತರು. ಮಂಡ್ಯದ ಜಿನಪೂಜೆಯಲ್ಲೂ, ಉತ್ಸವದಲ್ಲೂ ಹೃತ್ಪೂರ್ವಕ ವಾಗಿ ಭಾಗಿಗಳಾಗಿ ಕೈತೊರೆದು ಖರ್ಚು ಮಾಡುತ್ತಿದ್ದರು. ಜೈನ ಮಾಸಿಕಗಳನ್ನೆಲ್ಲ ಮನೆಗೆ ತರಿಸಿ ಜೈನ ಸಾಹಿತ್ಯದ ಪುನರುತ್ಥಾನಕ್ಕೆ ಪರೋಕ್ಷವಾಗಿ ನೆರವಾದರು.

ಶ್ರೀ ಪದ್ಮಣ್ಣನವರು 16–5–1971ರಲ್ಲಿ ಬೇಗೂರಿಗೆ ಬಂಧುಗಳ ಮದುವೆಗೆ ಹೋಗುತ್ತ ಆಕಸ್ಮಿಕವಾಗಿ ಕಾರಿನಲ್ಲಿ ಅಪಘಾತಕ್ಕೆ ಸಿಕ್ಕಿ ಅಕಾಲಮರಣವನ್ನು ಪಡೆದರು. ಶ್ರೀಮತಿ ವಿಜಯಮ್ಮನವರಿಗೆ ಇದನ್ನು ಕೇಳಿ ಸಿಡಿಲು ಬಡಿದಂತಾಯಿತು. ಮಕ್ಕಳೆಲ್ಲ ಚಿಕ್ಕವರು; ಆದರೂ ಕಂಗೆಡದೆ, ಧೈರ್ಯ ತಂದುಕೊಂಡು ಜೈನ ಸಮಾಜದ ಕುಡಿಗಳಾದ ತಮ್ಮ ಮಕ್ಕಳನ್ನು ಅಕ್ಕರೆಯಿಂದ ಬೆಳಸುತ್ತಿರುವರು. ಪುಸ್ತಕಪ್ರಿಯ ರಾದ ಇವರು ಮಾನಸಿಕ ವೇದನೆಯನ್ನು ಧರ್ಮಗ್ರಂಥಗಳನ್ನು ಓದುತ್ತ ಸಹಿಸು ತ್ತಿರುವರು. ವಿವೇಕೋದಯ ಗ್ರಂಥಮಾಲೆ, ಅತ್ತಿಮಬ್ಬೆ ಪ್ರಕಾಶನ ಇವುಗಳಿಗೆ ಸಂದರ್ಭೋಚಿತವಾಗಿ ಸಹಾಯ ಕೊಟ್ಟು, ಶ್ರೀಮತಿ ವಿಜಯಮ್ಮನವರು ಪತಿಯನ್ನು ಕಳೆದುಕೊಂಡರೂ ಧರ್ಮದಲ್ಲಿ ಶ್ರದ್ಧೆಯಿಟ್ಟು ಭವ್ಯಾತ್ಮರಾಗಿ ಬಾಳುತ್ತಿರುವರು.

ಪುರೋಹಿತ ಚಂದ್ರಯ್ಯ, ಮಂಡ್ಯ

ಮಂಡ್ಯ ಅನಂತನಾಥಸ್ವಾಮಿ ಜಿನಾಲಯದಲ್ಲಿ ಕುಳಿತರೆ ಏಳುವುದಕ್ಕೇ ಮನಸ್ಸು ಬಾರದು. ಎತ್ತ ತಿರುಗಿದರೂ ಶುಚಿಯಾದ ವಾತಾವರಣ. ಯಾವ ಬಿಂಬವನ್ನು ನೋಡಿದರೂ ಶುಭ್ರವಾಗಿ ಪರಮಾತ್ಮಪ್ರಕಾಶ ಸೂಸುವುದು. ಜಿನಾಲಯಗಳಿಗೆ ಮಂಡ್ಯ ಜಿನಾಲಯ ಮಾದರಿಯಾಗಿದೆ. ಇದಕ್ಕೆ ಕಾರಣ ಪುರೋಹಿತ ಚಂದ್ರಯ್ಯನವರು. ಜಿನಾಲಯವನ್ನು ಅಭಿನವಸಮವಸರಣವಾಗಿ ಪರಿವರ್ತಿಸಿ ಇವರು ಪ್ರಶಾಂತತೆಯನ್ನು ಹರಡಿರುವರು. ಇಲ್ಲಿ ಜಪಕ್ಕೆ ಕುಳಿತವರಿಗೆ ಪ್ರಸನ್ನತೆ ಅಪ್ರಯತ್ನವಾಗಿ ಮೂಡುವುದು.



ಪುರೋಹಿತ ಚಂದ್ರಯ್ಯ

ಇವರ ತಂದೆ ಪದ್ಮರಾಜಯ್ಯನವರು ಚಾಮರಾಜನಗರದ ಪುರೋಹಿತರಾಗಿದ್ದರು. ಇವರ ತಾಯಿ ಹೊಂಬೂಜಮ್ಮ ನಾಮಗೊಂಡಲಿನವರು (ಕೋಲಾರ ಜಿಲ್ಲೆ). ಇವರು 23-10-1906ರಲ್ಲಿ ಜನಿಸಿದರು. ಬಾಲ್ಯದಲ್ಲಿ ಚಂದ್ರಯ್ಯನವರು ದಿವಂಗತ ಎ. ಶಾಂತಿರಾಜಶಾಸ್ತ್ರಿಗಳ ಬಳಿ ಜಿನಾಗಮದ ಅಭ್ಯಾಸ ಮಾಡಿದರು. ಈಗ ಇವರಿಗೆ ಐದು ಜನ ಪತ್ನಿಯರು. ಬಂದವರೆಲ್ಲ ಇವರ ಕಣ್ಮುಂದೆಯೇ ಮುತ್ತೈದೆ ಸಾವನ್ನು ಪಡೆಯುತ್ತ ಹೋದರು. ಇವರು ಮತ್ತೆ ಮತ್ತೆ ಮದುವೆ ಆಗುತ್ತ ಬಂದರು.

1925ರಲ್ಲಿ ಇವರು ಮಂಡ್ಯ ಜಿನಾಲಯಕ್ಕೆ ಅರ್ಚಕರಾಗಿ ಬಂದರು. ಅದೇ ಸಂದರ್ಭದಲ್ಲಿ ಕ್ಷುಲ್ಲಕ ಬಿದರೆ ಪಾಯಸಾಗರರೂ ಬಂದು ಮಂಡ್ಯ ಜಿನಾಲಯದಲ್ಲಿ

ತಮ್ಮ ಜೀವನಪರ್ಯಂತ ತಂಗಿದರು. ಚಂದ್ರಯ್ಯನವರು ದೇವರ ಸೇವೆ ಮಾಡುವಂತೆ ಈ ತ್ಯಾಗಿಗಳ ಸೇವೆಯನ್ನೂ ತ್ರಿಕರಣಪೂರ್ವಕ ಮಾಡಿರುವರು.

ಚಂದ್ರಯ್ಯನವರಿಗೆ ಪೂಜಾಗ್ರಂಥಗಳ ಪುನಃ ಪ್ರಸಾರದ ಹಂಬಲ ಹೆಚ್ಚು. ತಾವು ಗಳಿಸಿದ ಹಣದಲ್ಲಿ ಬಹುಭಾಗ ಪೂಜಾಗ್ರಂಥಗಳ ಪ್ರಕಾಶನಕ್ಕಾಗಿ ಖರ್ಚು ಮಾಡಿರುವರು. ಪಂಚಪರಮೇಷ್ಠಿಗಳ ಸಹಸ್ರನಾಮ, ನವದೇವತಾಸಹಸ್ರನಾಮ, ಪಂಚಪರಮೇಷ್ಠಿ ಮಹಾಮಂಡಲವಿಧಾನ, ಜಿನಗುಣಸಂಪತ್ತಿವಿಧಾನ, ಜೈನತೀರ್ಥ ಕ್ಷೇತ್ರ ಪೂಜಾವಿಧಾನಾದಿ ಪಂಚವಿಧಾನ ಸಂಗ್ರಹ—ಇಷ್ಟು ಗ್ರಂಥಗಳನ್ನೂ ಇವರು ಸ್ವಂತ ಖರ್ಚಿನಿಂದ ಪ್ರಕಟಿಸಿರುವರು. ಬೃಹತ್ ಸಿದ್ಧಚಕ್ರ ವಿಧಾನವನ್ನು ಇವರು ಪ್ರಕಟಣೆಗೆ ಸಿದ್ಧಪಡಿಸಿರುವರು.

ಪರಿಗ್ರಹಪರಿಮಾಣ ವ್ರತವನ್ನು ಇವರು ಆಚರಿಸಿ ತೋರಿಸುತ್ತಿರುವರು. ಇದ್ದುದರಲ್ಲಿ ಸಂತೃಪ್ತರಾದ ಇವರು ಸದಾ ಸಂತೋಷಚಿತ್ತರಾಗಿರುವರು. ಅರ್ಚನೆ ಮತ್ತು ಅಧ್ಯಯನದಲ್ಲಿ ತಮ್ಮ ಕಾಲವನ್ನು ಸದ್ವಿನಿಯೋಗ ಮಾಡುತ್ತ ಸದಾ ಶುಭ ಪರಿಣಾಮವನ್ನು ಕಾಪಾಡಿಕೊಂಡು ಬರುತ್ತಿರುವರು. ಪುರೋಹಿತ ವೃಂದಕ್ಕೆ ಇವರು ಮಾದರಿಯಾಗಿರುವರು.

ಸಾಕ್ಷಿಯಲ್ಲದೆ ಸುಖದುಃಖಕೆ ನೀನಲ್ಲಿ |
ಸಾಕ್ಷಾದನುಭವಿಯಲ್ಲ ||
ಮೋಕ್ಷವೆ ನೀನಲ್ತೆ ನನ್ನೊಳಗಿರು ನಿರ |
ಪೇಕ್ಷಾ ಚಿದಂಬರಪುರುಷಾ ||

ಪರಮಗುರು ಪರಮಾರಾಧ್ಯ ಜಯ ಪರಾ |
ತ್ಪರವಸ್ತು ನಿನಗೆ ನಮೋಸ್ತು ||
ಪರಿಪಾಲಿಸೆನಗೆ ಸನ್ಮತಿಯನು ಸೌಖ್ಯತ |
ತ್ಪರನೆ ನಿರಂಜನಸಿದ್ಧಾ ||

ಡಿ. ಪಾರ್ಶ್ವನಾಥ್, ತುಮಕೂರು

ಅಡಿಯಿಂದ ಮುಡಿತನಕ ಸಮರಸಗೊಂಡ ಆಕಾರ, ವೇಷ-ಭಾಷೆ-ಭೂಷಣ ಮೂರರಲ್ಲೂ ರಸಿಕತೆಯ ಸಾಕಾರ, ಭವ್ಯತೆಯ ಸಂಸ್ಕಾರ ಇವೆಲ್ಲ ಎರಕಹೊಯ್ದಂಥ ಚೇತನ ಶ್ರೀ ಡಿ. ಪಾರ್ಶ್ವನಾಥ್‌ರವರದು. ಅತಿಥಿಗಳು ಅವರ ಕೈಗೆ ಸಿಕ್ಕಿದರೆ ಸಾಕು —ಬೆಳಗಿನಿಂದ ಸಂಜೆಯ ತನಕ ಕಾಲಕಳೆದುದೇ ಗೊತ್ತಾಗದಂತೆ ನಯವಾಗಿ ಮಾತಾಡುತ್ತ, ಆಗಾಗ ರುಚಿರುಚಿಯಾದ ಭಕ್ಷ್ಯಗಳನ್ನು ತಮ್ಮ ಪತ್ನಿಯವರಿಂದ ಕೊಡಿಸುತ್ತ, ತಾವೂ ಬಾಯಾಡಿಸುತ್ತ ಹಿಗ್ಗುವರು. ಆಗರ್ಭ ಶ್ರೀಮಂತರಾದ ಇವರಲ್ಲಿ ಎಂದೂ ಒಣಪ್ರತಿಷ್ಠೆಯನ್ನು ನಾವು ಕಾಣಲಾರೆವು. ಇವರ ಮನೆ ಮತ್ತು ಮನ ಎರಡೂ ಕಲಾತ್ಮಕವಾಗೇ ಇವೆ.



ಡಿ. ಪಾರ್ಶ್ವನಾಥ್

ತುಮಕೂರಿನ ಸುಪ್ರಸಿದ್ಧ ಮನೆತನದ ಎ. ಕೆ. ಎ. ಧರಣಸೆಟ್ಟರು ಇವರ ತಂದೆ. ಬೆಂಗಳೂರಿನ ಪುಟ್ಟೆಎಲ್ಲಮ್ಮನವರು ಇವರ ತಾಯಿ. ಇವರಿಗೆ ನಾಲ್ಕು ಜನ ಸೋದರಿಯರೂ ಒಬ್ಬ ಸೋದರರೂ ಇರುವರು. 1925ರಲ್ಲಿ ತುಮಕೂರಿನಲ್ಲಿ ಇವರು ಎಸ್.ಎಸ್.ಎಲ್.ಸಿ. ಉತ್ತೀರ್ಣರಾಗಿ, 1929ರಲ್ಲಿ ಮೈಸೂರು ಮಹಾರಾಜ ಕಾಲೇಜಿನಲ್ಲಿ ಬಿ.ಎ. ಪದವಿಯನ್ನು ಪಡೆದು, 1932ರಲ್ಲಿ ಮದ್ರಾಸಿನಲ್ಲಿ ಬಿ.ಎಲ್. ಪದವಿಯನ್ನು ಪಡೆದರು. ಲಕ್ಷ್ಮೀ-ಸರಸ್ವತಿ ಇಬ್ಬರನ್ನೂ ಒಲಿಸಿಕೊಂಡ ಇವರು ಪುಣ್ಯವಂತರು.

1926ರಲ್ಲಿ ತುಮಕೂರಿನ ಚಾಮರಾಜಪ್ಪನವರ ಪುತ್ರಿ ನವರತ್ನಮ್ಮ ನವರೊಡನೆ ಇವರ ವಿವಾಹವಾಯಿತು. ಲಕ್ಷ್ಮಿ ಸರಸ್ವತಿಯರ ಜೊತೆಗೆ ಅನ್ನಪೂರ್ಣೆಯೂ ಇವರ ಸನಿಹಕ್ಕೆ ಬಂದಂತಾಯಿತು. ಪಿ. ಪ್ರಕಾಶ್‌ಕುಮಾರ್, ಪುಷ್ಪಾವತಮ್ಮ, ಸುನಂದಮ್ಮ ಮತ್ತು ಸುಜಿತ್‌ಕುಮಾರ್ ಎಂಬ ಅನಂತಚತುಷ್ಟಯವನ್ನು ಪಡೆದು ಪಾರ್ಶ್ವನಾಥಯ್ಯನವರು ಸದಾ ಹರ್ಷಚಿತ್ತರಾಗಿರುವರು. ಪ್ರಸನ್ನತೆಯೇ ಈ ದಂಪತಿಗಳಿಗೆ ಪೀಠವಾಗಿ ಸೌಜನ್ಯವೇ ಇವರ ಕಿರೀಟವಾಗಿ ರಾರಾಜಿಸಿದೆ. ಇವರ ಮಕ್ಕಳಾದ ಪಿ. ಪ್ರಸನ್ನಕುಮಾರರು ಎಚ್.ಎಂ.ಟಿ.ಯ ಡೆಪ್ಯುಟಿ ಮ್ಯಾನೇಜರ್ ಆಗಿರುವರು, ಸುಜಿತ್‌ಕುಮಾರರು ಇಂಗ್ಲೆಂಡಿನಲ್ಲಿ ಎಫ್.ಆರ್.ಸಿ.ಎಸ್. ಓದುತ್ತಿರುವರು. ಪುಣ್ಯವಂತರ ಮಕ್ಕಳು ವಿದ್ಯಾವಂತರಾಗುವುದು ಅಪರೂಪವಲ್ಲವೆ ?



ಶ್ರೀಮತಿ ನವರತ್ನಮ್ಮ

ಪಿ. ಪಾರ್ಶ್ವನಾಥ್‌ರವರು ದಾನಧರ್ಮಗಳಲ್ಲಿ ಎಂದೂ ಹಿಂದುಳಿದಿಲ್ಲ. ತುಮಕೂರು ಜಿನಾಲಯದ ಜೀರ್ಣೋದ್ಧಾರಕ್ಕಾಗಿ 10,000/– ರೂ., ಹುಂಚ ಕ್ಷೇತ್ರಕ್ಕೆ 1,000/– ರೂ., ತುಮಕೂರಿನ ಇಂಜಿನಿಯರಿಂಗ್ ಕಾಲೇಜಿಗೆ 1,000/– ರೂ. ದಾನಮಾಡಿರುವರು. ಕೇಳಿದವರಿಗೆ ಇಲ್ಲವೆನ್ನಲು ಇವರಿಗೆ ಬಾಯೇ ಬಾರದು.

ಮಂದಲಗಿರಿ ಕ್ಷೇತ್ರದ ಸಮಿತಿಗೆ ಇವರು 21 ವರ್ಷ ಅಧ್ಯಕ್ಷರಾಗಿದ್ದರು. ತುಮಕೂರಿನ ಜೈನಮಂಡಲಿಗೆ ಇವರು 22 ವರ್ಷ ಅಧ್ಯಕ್ಷರಾಗಿದ್ದು ಮಂಡಲಿಗೆ ಐವತ್ತು ಸಹಸ್ರ ರೂ. ತನಕ ನಿಧಿ ಮಾಡಿ ಆಮೇಲೆ ಅಧ್ಯಕ್ಷಪದವಿಯಿಂದ ನಿವೃತ್ತರಾದರು. 1940ರಿಂದಲೂ ಇವರು ಶ್ರವಣಬೆಳಗುಳದ ಮಸ್ತಕಾಭಿಷೇಕ ಸಮಿತಿಯ ಸದಸ್ಯರಾಗಿರುವರು. ಮಹಾವೀರನ 2,500 ವರ್ಷಗಳ ನಿರ್ವಾಣೋತ್ಸವ ಸಮಿತಿ

ಯಲ್ಲಿ ಇವರು ಸರ್ಕಾರದಿಂದ ಸದಸ್ಯರಾಗಿ ಆರಿಸಲ್ಪಟ್ಟಿರುವರು.

ಗಿರ್ನಾರ್ ಒಂದನ್ನು ಬಿಟ್ಟು ಉಳಿದ ಎಲ್ಲ ಜೈನ ತೀರ್ಥಕ್ಷೇತ್ರಗಳನ್ನೂ ಇವರು ದರ್ಶನ ಮಾಡಿ ಪುನೀತರಾಗಿರುವರು. "ನನ್ನ ಹೆಂಡತಿಯು ಸೇವೆಮಾಡುವಾಗ ದಾಸಿಯಾಗಿ, ಊಟಕ್ಕೆ ಬಡಿಸುವಾಗ ತಾಯಿಯಾಗಿ, ತಲೆ ಬಿಸಿಯಾದಾಗ ಮಾರ್ಗ ದರ್ಶನ ಮಾಡುತ್ತ ಗುರುವಾಗಿ, ಬಾಳಿನುದ್ದಕ್ಕೂ ಸತೀಮಣಿಯಾಗಿ ನನ್ನ ಬಾಳನ್ನು ಬೆಳಗುತ್ತಿರುವಳು" ಎಂದು ಹೇಳುತ್ತ ಡಿ. ಪಾರ್ಶ್ವನಾಥಯ್ಯನವರು ಆನಂದಜಲ ಸುರಿಸುವರು. ಎಲ್ಲ ಜೈನಪೀಠಾಧಿಕಾರಿಗಳಿಗೂ ಇವರು ಭಕ್ತರಾಗಿರುವರು. • ಇವರ ಸಂಪತ್ತಿಗಿಂತಲೂ ಹಿರಿದು ಇವರ ಸಂಸ್ಕಾರಸಂಪನ್ನತೆ. ಸಹೃದಯರಾದ ಇವರು ಸಚ್ಚಾರಿತ್ರವಂತರೂ ಆಗಿದ್ದಾರೆ. "ನವರತ್ನವೇ ನನ್ನ ಕೈಲಿರುವಾಗ ನನಗೆ ಇನ್ನೇನು ಬೇಕು ?" ಎಂದು ಇವರು ಮುಗುಳ್ನಗುವರು. ಇವರ ಬಳಿ ಕುಳಿತರೆ ಬೆಳ್ದಿಂಗಳಲ್ಲಿ ಕುಳಿತಂತಾಗುವುದು. ಸಾಹಿತ್ಯ, ಸಂಗೀತ, ಶಿಲ್ಪ ಮುಂತಾದ ಕಲೆಗಳಲ್ಲಿ ಇವರಿಗೆ ಪ್ರೀತಿ ಹೆಚ್ಚು. ಒಟ್ಟಿನಲ್ಲಿ ಇವರ ಪರಿಣಾಮ ಪರಿಮಳಯುಕ್ತವಾದುದು.

ಪ್ರೌಢರ ಪರಮಪರಾಕ್ರಮರಧ್ಯಾತ್ಮ |
ಗಾಢರ ಹೃದಯವೆಂದೆಂಬ ||
ಗೂಢನಿವಾಸಿ ನನ್ನೆದೆಯೊಳಗಿರು ಲೋಕಾ |
ರೂಢ ಚಿದಂಬರಪುರುಷಾ || |

ಸುಗುಣರದೇವ ಸುಜ್ಞಾನಿಗಳರಸ ಮೋ |
ಕ್ಷಗರ ಮನೋಹರಚರಿತಾ ||
ದ್ವಿಗುಣ ಚರುರ್ಗುಣವೆನೆ ಮತಿದೋರು ಲೇ |
ಸುಗನೆ ನಿರಂಜನಸಿದ್ಧಾ ||

ಡಿ. ಎಸ್. ಕಾಂತರಾಜಪ್ಪನವರು, ತುಮಕೂರು

ತುಮಕೂರು ಜಿಲ್ಲಾ ಕೇಂದ್ರದಲ್ಲಿ ನೂರಾರು ಜೈನರ ಮನೆಗಳಿವೆ. ಇಲ್ಲಿಯ ಶ್ರೀ ಪಾರ್ಶ್ವನಾಥ ಜಿನಾಲಯದ ಸಂಸ್ಥಾಪಕರು ದಿ|| ಶಾಮರಾಜಪ್ಪನವರು. ಇವರ ಮಕ್ಕಳಾದ ಕಾಂತರಾಜಪ್ಪನವರು ತುಂಬ ಧಾರ್ಮಿಕ ಪ್ರವೃತ್ತಿಯವರು. ಈ ಜಿನಾಲಯದ ಜೀರ್ಣೋದ್ಧಾರಕರು. ದಿನವಿಡೀ ಜಿನಾಲಯದ ನವನೂತನ ಕಟ್ಟಡ ನಿರ್ಮಾಣ ಕಾರ್ಯದಲ್ಲಿ ಇವರು ಶ್ರದ್ಧೆವಹಿಸಿದರು. ಕಲ್ಲು ಎಲ್ಲಿಂದ ಬರಬೇಕು, ಸೀಮೆಂಟು ಯಾವ ಕಂಪನಿಯದಾಗಬೇಕು, ಕಬ್ಬಿಣ ಎಲ್ಲಿಂದ ತರಿಸಬೇಕು, ಗಾರೆ ಕೆಲಸಕ್ಕೆ ಯಾರನ್ನು ಕರೆಸಬೇಕು, ನಯವಾದ ಕೆಲಸವನ್ನು ಯಾರಿಂದ ಮಾಡಿಸಬೇಕು—ಈ ಪ್ರತಿಯೊಂದು ವಿಚಾರದಲ್ಲೂ ಕಾಂತರಾಜಪ್ಪನವರದೇ ಕೊನೆಯ ತೀರ್ಮಾನ. ಒಂದೊಂದು ಕಲ್ಲೂ ಕಟ್ಟಡದ ಮೇಲೆ ಕೂರುವಾಗಲೂ ಇವರು ಪಂಚ ನಮಸ್ಕಾರ ಜಪಿಸಿರುವರು. ಮೊದಲು ದೇಗುಲ ಇವರ ಅಂತರಂಗದಲ್ಲಿ ರೂಪ ಗೊಂಡಿತು. ಪಂಚನಮಸ್ಕಾರವನ್ನು ಜಪಿಸುತ್ತ ಇವರು ಅದನ್ನು ಬಹಿರಂಗಕ್ಕೆ ತಂದರೆಂದರೆ ತಪ್ಪಾಗದು. ತಿಂಗಳಾನುಗಟ್ಟಲೆ ರೂಪಗೊಳ್ಳುತ್ತಿರುವ ಜಿನಾಲಯದ ಮುಂದೆ ಇವರು ಸರ್ಪಕಾವಲಾದರು. ಕಾಂತರಾಜಪ್ಪನವರ ಭಕ್ತಿ, ಶಕ್ತಿ ಮತ್ತು ಯುಕ್ತಿ ಇವು ಮುಪ್ಪುರಿಗೊಂಡು ಈ ಭವ್ಯ ದೇಗುಲವಾಗಿದೆ. ಊರವರ ಸಹಕಾರವನ್ನೂ ಪಡೆದು ಇವರು ನೀರಿನಂತೆ ಸ್ವಂತ ಹಣವನ್ನೂ ಹಾಕಿ ಈ ಭವ್ಯದೇಗುಲದ ನಿರ್ಮಾಪಕರೆನಿಸಿದರು. 1973ರಲ್ಲಿ ಇದರ ಪಂಚಕಲ್ಯಾಣ ಬಹು ವೈಭವವಾಗಿ ನಡೆಯಿತು. ಈ ಸಂದರ್ಭದಲ್ಲಿ ಸಹಸ್ರಾರು ಜನಕ್ಕೆ ಅನ್ನಸಂತರ್ಪಣೆಗಾಗಿ ಕಾಂತರಾಜಪ್ಪನವರು ತೊರೆಬಿಟ್ಟ ಕಾಮಧೇನುವಿನಂತೆ ಔದಾರ್ಯ ತೋರಿದರು. ದೇವಾಲಯ ನಿರ್ಮಾಣವಾಗಿ ಪಂಚಕಲ್ಯಾಣ ಪೂರೈಸಲು ಒಂದು ವರ್ಷವೇ ಹಿಡಿದಿರಬೇಕು. ಇಷ್ಟೂ ಕಾಲ ಶ್ರೀ ಕಾಂತರಾಜಪ್ಪನವರು ಕಂಕಣ ತೊಟ್ಟವರಂತೆ ಶುಭಕಾಮನೆಯ ಧರ್ಮ ಧ್ಯಾನದಲ್ಲಿ ಮುಳುಗಿದರು. ಅಪಾರವಾದ ಪುಣ್ಯದ ರಾಶಿಯನ್ನು ಗಳಿಸಿದರು. ಜೈನಜನತೆ ಇವರ ಜಿನಪೂಜಾಕಾತರತೆಗೆ ಮೆಚ್ಚಿ ಇವರನ್ನು ಆನೆಯ ಮೇಲೆ ಕೂರಿಸಿ ವಿಜೃಂಭಣೆಯಿಂದ ಮೆರವಣಿಗೆ ಮಾಡಿತು. ಮರುಭವದಲ್ಲಿ ಇವರು ದೇವೇಂದ್ರರಾಗುವ ಮುನ್ಸೂಚನೆ ಇದು.

ದಿ|| ಡಿ. ಎಸ್. ಶಾಮರಾಜಪ್ಪನವರು ಈ ಶತಮಾನದ ಪೂರ್ವಾರ್ಧದಲ್ಲಿ ತುಮಕೂರಿನ ವರ್ತಕ ಮಂಡಲಿಯಲ್ಲಿ ಗಣ್ಯರಾಗಿದ್ದರು. ವರ್ತಕ ಸಂಘಕ್ಕೂ ಪ್ರಾಣಿ ದಯಾ ಸಂಘಕ್ಕೂ ಇವರು ಅಧ್ಯಕ್ಷರಾಗಿದ್ದರು. ಇವರ ಮಡದಿ ಪದ್ಮಾವತಮ್ಮನವರು. ಈ ದಂಪತಿಗಳಿಗೆ ಸು. 1909ರಲ್ಲಿ ಶ್ರೀ ಡಿ. ಎಸ್. ಕಾಂತರಾಜಪ್ಪನವರು

ಜನಿಸಿದರು. ಇವರಿಗೆ ಶ್ರೀ ಪದ್ಮರಾಜಯ್ಯನವರು ಅಣ್ಣಂದಿರು, ಶ್ರೀಮತಿ ರಾಜಮ್ಮನವರು ಅಕ್ಕಂದಿರು, ಶ್ರೀಮತಿ ನವರತ್ನಮ್ಮ ಇವರ ತಂಗಿ. ಪುಣ್ಯಾತ್ಮರಾದ ಶಾಮರಾಜಪ್ಪನವರು ತುಮಕೂರಿನಲ್ಲಿ ಜಿನಾಲಯವನ್ನು ಸ್ಥಾಪಿಸಿದ್ದಲ್ಲದೆ ಮಂಡಲಗೆರೆಯ ಜಿನಾಲಯವನ್ನು ಜೀರ್ಣೋದ್ಧಾರಮಾಡಿ ಪೂಜಾವ್ಯವಸ್ಥೆ ಏರ್ಪಡಿಸಿದರು. ಎಂಥ ಧರ್ಮಾತ್ಮರಿಗೂ ಕರ್ಮದ ಕಾಟ ತಪ್ಪಿದ್ದಲ್ಲ. 1932ರಲ್ಲಿ ಶಾಮರಾಜಪ್ಪನವರ ಮಿಲ್ಲು ಅಗ್ನಿದೇವತೆಗೆ ಆಹುತಿಯಾಯಿತು. ತುಮಕೂರಿನ ದೊರೆ ಎನಿಸಿದ ಇವರು ಆರ್ಥಿಕ ಮುಗ್ಗಟ್ಟಿಗೆ ಸಿಕ್ಕಿದರು. ಇವರು ಮತ್ತೆ ಚೇತರಿಸಿಕೊಳ್ಳಲು ಹೋರಾಟ ನಡೆಸಿದರು. ಈ ಮಹಾಚೇತನ 1940ರಲ್ಲಿ ಪರಂಧಾಮವನ್ನೈದಿತು. ಆಗ ಇಡೀ ಜಿಲ್ಲೆ ವ್ಯಸನಪಟ್ಟಿತು.

ಶ್ರೀ ಡಿ. ಎಸ್. ಕಾಂತರಾಜಪ್ಪನವರು ಓದಿದ್ದು ಕೇವಲ ಲೋಯರ್ ಸೆಕೆಂಡರಿ ಮಾತ್ರ. ಕಾರ್ಯದಕ್ಷತೆ ಹಾಗೂ ವಿಚಕ್ಷಣತೆ ಇವರಿಗೆ ಹುಟ್ಟಿನಿಂದಲೇ ಬಂದಿದ್ದವು. ಮಿತಭಾಷಿಯಾದ ಇವರು ಏನನ್ನಾದರೂ ಹಿಡಿದರೆ ಪಾತಾಳಗರುಡಿಯಂತೆ ಹಿಡಿದುಬಿಡುವರು. ಇವರ ಉದ್ದ, ಆಳ ಅರ್ಥಮಾಡಿಕೊಳ್ಳುವುದು ಕಷ್ಟ. ಇವರು ಕಾರ್ಯಸಾಧಕರೇ ಹೊರತು ಬಡಾಯಿಕೊಚ್ಚುವರಲ್ಲ. ಉದ್ಯಮರಂಗದಲ್ಲಿ ಪರಿಣತರಾದ ಅವರು ಬಹುಬೇಗ ಚೇತರಿಸಿಕೊಂಡರು. ತಮ್ಮ ತಂದೆ ಕಾಲವಾದ ನಂತರ ಇವರು ವಿಭಾಗವಾಗಿ ಬೇರೆ ನಿಂತರು. ವಹಿವಾಟನ್ನು ವಿಸ್ತರಿಸಿದರು. ದಕ್ಷರನ್ನು ಆರಿಸಿ ಪಾಲುದಾರಿಕೆಗೆ ಸೇರಿಸಿಕೊಂಡರು. ತಂದೆಯ ಕಾಲಕ್ಕಿಂತ ಹತ್ತುಪಟ್ಟು ಶ್ರೀಮಂತರಾದರು. ಎಕ್ಸ್‌ಪೆಲರ್ ಸ್ಥಾಪಿಸಿದರು. ಈಗ ಶಾಮರಾಜಪ್ಪನವರು ಇದ್ದಿದ್ದರೆ ಆನಂದದಿಂದ ಕುಣಿಯುತ್ತಿದ್ದರೋ ಏನೋ!



ಡಿ. ಪಾರ್ಶ್ವನಾಥ, ಡಿ. ಎಸ್. ಕಾಂತರಾಜಪ್ಪ

5-12-1954ರಲ್ಲಿ ಶ್ರೀ ಡಿ. ಎಸ್. ಕಾಂತರಾಜಪ್ಪನವರು ಮಧುಗಿರಿಯಲ್ಲಿ

ಒಂದು ಮಂಡಿಯನ್ನು ಪ್ರಾರಂಭಿಸಿದರು. ಅದರ ಮೇಲ್ವಿಚಾರಣೆಗಾಗಿ ರತ್ನಗಿರಿಯ ಆರ್. ಎಸ್. ಚಾರಣ್ಣನವರನ್ನು ನೇಮಿಸಿದರು. ಈ ಮಂಡಿಯಿಂದ ಐಶ್ವರ್ಯದ ಹೊಳೆ ಹರಿಯಿತು. ಇದರ ಸ್ಥಾಪಕರೂ ಬದುಕಿಹೋದರು, ಇದರ ಮೇಲ್ವಿಚಾರಕರೂ ಶ್ರೀಮಂತರಾದರು. ಶ್ರೀ ಆರ್. ಎಸ್. ಚಾರಣ್ಣನವರು ತನ್ನ ಆಶ್ರಯದಾತರಾದ ಶ್ರೀ ಡಿ. ಎಸ್. ಕಾಂತರಾಜಪ್ಪನವರ ಶ್ರೇಯಸ್ಸನ್ನು ಕೋರಿ ಪಂಚನಮಸ್ಕಾರವನ್ನು ಜಪಿಸುವರು.

ಶ್ರೀ ಡಿ. ಎಸ್. ಕಾಂತರಾಜಪ್ಪನವರು ಯೋಗಪುರುಷರು. ಇವರನ್ನು ನೆರಳಾಗಿ ಅನುಸರಿಸಿದವರೆಲ್ಲ ತಾವೂ ಯೋಗಪುರುಷರಾಗುತ್ತಿರುವರು. ಧರ್ಮಾನುರಾಗಿಗಳಾದ ಇವರು ಕುಚ್ಚಂಗಿ, ಮಧುಗಿರಿ ಮತ್ತು ಮಿಡಿಗೇಸಿ ಜಿನಾಲಯಗಳ ವ್ಯವಸ್ಥಾಪಕರೂ ಆಗಿರುವರು. ಯೋಜನಾಚತುರರಾದ ಇವರು ಈಗ ಸಕ್ಕರೆ ಕಾರ್ಖಾನೆ ಸ್ಥಾಪಿಸಲು ಕಾರ್ಯೋನ್ಮುಖರಾಗಿದ್ದಾರೆ. ಸದ್ಗೃಹಸ್ಥರಾದ ಇವರಿಗೆ ಮಕ್ಕಳಿಲ್ಲವಲ್ಲ ಎಂಬ ಕೊರಗು. ಕಾರ್ಖಾನೆಗಳೇ ಇವರ ಗಂಡುಮಕ್ಕಳು, ಜಿನಾಲಯಗಳೇ ಇವರ ಪುಣ್ಯಪುತ್ತಳಿಗಳು!

ಸರಸದೊಳಗೆ ಸವಿಮಾತಿನೊಳಘವ ನಿ |
ರ್ಜರಿಸುವ ಸಾಮರ್ಥ್ಯವುಳ್ಳ ||
ಪರಮ ನೀನೆನ್ನಂತರಂಗದೊಳಿರು ಸುಖಾ |
ಕರನೆ ಚಿದಂಬರಪುರುಷಾ ||

ತನುಗುಹೆಯೊಳು ರಾಗರೋಷದ ನದಿಯ ಚಿ |
ಧ್ಘನಸೇತುಗಟ್ಟಿ ಲಂಘಿಸುವ ||
ವಿನುತಾತ್ಮ ನನಗೆ ಸನ್ಮತಿದೋರು ದಿವ್ಯಲೋ |
ಚನನೆ ನಿರಂಜನಸಿದ್ಧಾ ||

ಆರ್. ಪಿ. ಜ್ವಾಲ್ನಪ್ಪ, ತುಮಕೂರು

ಮೂಡಲಸೀಮೆ ಎಂದಾಕ್ಷಣ ದಿವಂಗತ ಆರ್. ಪಿ. ಜ್ವಾಲ್ನಪ್ಪನವರ ನೆನಪು ಬರುವುದು. ಈ ಭಾಗದ ಜೈನಸಮಾಜಕ್ಕೆ ಇವರು ತಿಲಕಪ್ರಾಯರಾಗಿದ್ದರು. ಸಂಸ್ಕಾರ ಸಂಪನ್ನರಾದ ಇವರು ಮರಳೂರು ಮನೆತನದ ಕಣ್ಮಣಿಯಾಗಿದ್ದರು. 19ನೆಯ ಶತಮಾನದ ಕೊನೆಯ ಭಾಗದಲ್ಲಿ ಕೋಲಾರ ಜಿಲ್ಲೆಯ ಗೌರಿಬಿದನೂರು ತಾಲ್ಲೂಕಿನ ರಮಾಪುರದ ಪೊಮ್ಮಣ್ಣನವರ ಜ್ಯೇಷ್ಠಪುತ್ರರಾಗಿ ಇವರು ಜನಿಸಿದರು. ಇವರಿಗೆ ನಾಲ್ಕು ಜನ ಸಹೋದರರೂ, ನಾಲ್ಕು ಜನ ಸಹೋದರಿಯರೂ ಇದ್ದರು. ಈ ನವಮಣಿಗಳಲ್ಲಿ ಜ್ವಾಲ್ನಪ್ಪನವರು ನಾಯಕರತ್ನರಾಗಿದ್ದರು.

ಇವರು ಲೋಯರ್ ಸೆಕೆಂಡರಿ ಓದಿ ಅಷ್ಟಕ್ಕೇ ಸಾಕುಮಾಡಿ ವ್ಯಾಪಾರ ಪ್ರಾರಂಭಿಸಿದರು. ಆಗರ್ಭಶ್ರೀಮಂತರ ಮನೆತನದಲ್ಲಿ ಜನಿಸಿದ ಇವರು ಹಾಯಾಗಿ ಇರಬಹುದಾಗಿತ್ತು. ಆದರೆ ಬೆವರು ಸುರಿಸದೆ ತಿನ್ನಬಾರದೆಂದು ಜವಳಿ, ಅಂಗಡಿಯನ್ನು ಇಟ್ಟು ರಮಾಪುರದ ಸುತ್ತಮುತ್ತಲಿನ ಜನತೆಗೆ ಬಟ್ಟೆಯನ್ನು ಒದಗಿಸಿದರು. ಹಿಂದೂಪುರದ ಧರಣಪ್ಪನವರ ಮಗಳು ಜ್ವಾಲ್ನಮ್ಮನವರನ್ನು ಮದುವೆಯಾಗಿ ಇವರು ಗೃಹಸ್ಥಾಶ್ರಮವನ್ನು ಲೋಕ ಮೆಚ್ಚುವಂತೆ ನಡೆಸಿದರು. ಪಂಚರತ್ನಗಳಂತೆ ಇವರಿಗೆ ಪಾಯಣ್ಣ, ನಾಭಿರಾಜಯ್ಯ, ನೇಮಿರಾಜಯ್ಯ, ಅನಂತರಾಜಯ್ಯ ಮತ್ತು ಪದ್ಮಾವತಮ್ಮ ಎಂಬ ಐದು ಜನ ಮಕ್ಕಳಾದರು. ಸಂಪತ್ತು ಮತ್ತು ಪ್ರತಿಷ್ಠೆಗಳಿದ್ದರೂ ಜ್ವಾಲ್ನಪ್ಪನವರು ಕೊನೆಯ ತನಕ ಸಂಯಮದಿಂದ ಬಾಳಿದರು. ಎಲ್ಲರ ಬಾಯಲ್ಲೂ ಸಂಸ್ಕಾರಸಂಪನ್ನರೆನಿಸಿಕೊಂಡರು. ಸಜ್ಜಾತಿಯಲ್ಲಿ ಜನಿಸಿದ ಇವರು ಸಜ್ಜನರಾಗಿ, ಸದ್ಗೃಹಸ್ಥರಾಗಿ, ಸಭ್ಯರಾಗಿ, ಜೈನಸಮಾಜದ ಪ್ರಮುಖರಾಗಿ ಪ್ರಖ್ಯಾತಿಗೆ ಬಂದರು. ಕೋಲಾರ ಜಿಲ್ಲಾ ಸಮಿತಿಗೆ ಸದಸ್ಯರಾದರು.

1943ರಲ್ಲಿ ಇವರು ತುಮಕೂರಿಗೆ ಬಂದು ಮಂಡಿ ವ್ಯಾಪಾರವನ್ನು ಪ್ರಾರಂಭಿಸಿದರು. ಹಿರಿಯ ಮಗನನ್ನು ರಮಾಪುರದ ಭೂಮಿಕಾಣಿ ವಹಿವಾಟಿಗೆ ಬಿಟ್ಟು, ನಾಭಿರಾಜಯ್ಯ, ನೇಮಿರಾಜಯ್ಯ ಮತ್ತು ಅನಂತರಾಜಯ್ಯ ಈ ಮೂವರನ್ನೂ ಮಂಡಿವ್ಯಾಪಾರಕ್ಕೆ ಸೆಳೆದು ಉತ್ತಮ ಮಾರ್ಗದರ್ಶನ ನೀಡಿದರು. ಪುಣ್ಯವಂತರಾದ ಇವರು ಮುಟ್ಟಿದ್ದೆಲ್ಲ ಬಂಗಾರವಾಯಿತು. ತಮ್ಮ ತಂದೆಯ ಕಾಲಕ್ಕಿಂತ ಹೆಚ್ಚಾಗಿ ಇವರು ಸಿರಿವಂತರಾದರು. ಐದಾರು ತಲೆಮಾರಿನಿಂದಲೂ ಈ ಮನೆತನದಲ್ಲಿ ಲಕ್ಷ್ಮಿ ಕಾಲ್ಮುರಿದು ಕುಳಿತಿರುವಳು! ಇವರ ಸಜ್ಜನಿಕೆಯೇ ಇದಕ್ಕೆ ಕಾರಣ.

ಜ್ವಾಲ್ನಪ್ಪನವರು ಧರ್ಮಾನುರಾಗಿಗಳು, ಹಾಗೂ ಜನಾನುರಾಗಿಗಳು. ತಮ್ಮ ಮನೆದೇವರಾದ ಪೆನುಗೊಂಡೆಯ ಪಚ್ಚೆಪಾರ್ಶ್ವನಾಥ ಜಿನಾಲಯದ ಜೀರ್ಣೋ

ಧ್ಧಾರಕ್ಕಾಗಿ ಇವರು ಹೇರಳವಾಗಿ ಹಣ ಖರ್ಚುಮಾಡಿದರು. ತಮ್ಮ ಮನೆತನ ಸುಖವಾಗಿರಬೇಕಾದರೆ ತಮ್ಮ ದೇವಾಲಯ ಭದ್ರವಾಗಿರಬೇಕೆಂದು ಇವರು ನಂಬಿದ್ದರು.

ಜೈನವಿದ್ಯಾರ್ಥಿಗಳಿಗೆ ಸಹಾಯ ಮಾಡಲು ಇವರು ಇಪ್ಪತ್ತೈದು ಸಹಸ್ರ ರೂ.ಗಳನ್ನು ಧ್ರುವನಿಧಿಯಾಗಿ ಇಟ್ಟರು. ಈ ನಿಧಿಯನ್ನು ಇವರ ಮಕ್ಕಳು ಜೋಪಾನ ಮಾಡಿ ಇನ್ನೂ ಬೆಳೆಸಿರುವರು! ತುಮಕೂರಿನ ಜೈನ ವಿದ್ಯಾರ್ಥಿನಿಲಯಕ್ಕೆ ಇವರು ಐದು ಸಹಸ್ರ ರೂ. ಗಳನ್ನು ದಾನವಾಗಿ ಕೊಟ್ಟರು. ತುಮಕೂರು ಜಿನಾಲಯದ ಜೀರ್ಣೋದ್ಧಾರಕ್ಕಾಗಿ ಇವರ ಮಕ್ಕಳು ಐದು ಸಹಸ್ರ ರೂಪಾಯಿಗಳನ್ನು ಕೊಟ್ಟಿದ್ದಾರೆ. ದಿನವೂ ಒಂದಲ್ಲ ಒಂದು ನೆಪ ಹೇಳಿ ಇವರ ಮಕ್ಕಳಿಂದ ಅವರಿವರು ಬಂದು ದಾನ ಪಡೆದೇ ಹೋಗುತ್ತಿರುವರು. ದಾನ ಕೊಟ್ಟು ಕೊಟ್ಟು ತಾವು ಶ್ರೀಮಂತರಾಗುತ್ತಿದ್ದೇವೆ ಎಂದು ಇವರ ಮಕ್ಕಳು ಹೇಳುವರು.

8–10–1961ರಲ್ಲಿ ಆರ್. ಪಿ. ಜ್ವಾಲ್ನಪ್ಪನವರು ಸ್ವರ್ಗಸ್ಥರಾದರು. ಮೂಡಲ ಸೀಮೆಯ ನಂದಾದೀವಿಗೆ ನಂದಿಹೋದಂತಾಯಿತು. ಇವರ ಮಕ್ಕಳು ರತ್ನಾಕರನ ಶತಕವನ್ನು ತಂದೆಯ ಹೆಸರಿನಲ್ಲಿ ಪ್ರಕಟಿಸಿ ಸಾವಿರಾರು ಜನಕ್ಕೆ ಶಾಸ್ತ್ರದಾನ ಮಾಡಿದರು. ಜ್ವಾಲ್ನಪ್ಪನವರು ಕಣ್ಮರೆಯಾದರೂ ಇವರು ತಮ್ಮ ಮನೆಯ ಮುಂದೆ ನಟ್ಟುಹೋದ ಸತ್ಪಾತ್ರದಾನವೃಕ್ಷ ಇವರ ಮಕ್ಕಳ ಆರೈಕೆಯಿಂದ ದಿನವೂ ಚಿಗುರುತ್ತಿದೆ. ಇದ್ದರೆ ಇಂಥ ಮಕ್ಕಳಿರಬೇಕು ಎನ್ನುವಂತೆ ಇವರ ಮಕ್ಕಳು ಲೋಕಹಿತಕಾರಿಗಳಾಗಿ ಬಾಳುತ್ತಿರುವರು.

ಕರ್ಮದಾಸ್ಯವೆಂಬ ಮಳೆಯುನಾತ್ಮಧ್ಯಾನ |
ಮರ್ಮಛತ್ರದಿ ನಿವಾರಿಸುವ ||
ನಿರ್ಮಮಕಾರ ನನ್ನೆದೆಯೊಳಗಿರು ಶುದ್ಧ |
ಧರ್ಮ್ಮ ಚಿದಂಬರಪುರುಷಾ ||

ಬಳಲಿದ ಕರಣಗಳಿಗೆ ಶಾಂತಿಮಾಡಿ ಮುಂ |
ದಲ ಘನತಪಕೆ ಪಟುಮಾಳ್ಪ ||
ಕಲೆನಂತೆ ನನಗೆ ಸನ್ಮತಿದೋರು ಜಗಕತಿ |
ಬಲನೆ ನಿರಂಜನಸಿದ್ಧಾ ||

ಕೆ. ಜಿ. ಪುಟ್ಟಸ್ವಾಮಯ್ಯ, ತುಮಕೂರು

ಬಂಧುವರ್ಗಕ್ಕೆ ಪುಟ್ಟಸ್ವಾಮಯ್ಯನವರ ಮನೆ ಆಲೆಮನೆಯಾಗಿದೆ. ಸಾಹಿತಿಗಳಿಗೆ ಇವರ ಮನೆ ಸಂತರ್ಪಣೆಯ ಮನೆಯಾಗಿದೆ. ತ್ಯಾಗಿಗಳಿದಿರು ಇವರು ತೊರೆ ಬಿಟ್ಟ ಕಾಮಧೇನುವಾಗಿ ನಿಲ್ಲುವರು. ಜಿನಾಲಯಗಳಿಗೆ, ಜೈನಸಾಹಿತ್ಯಕ್ಕೆ, ವಿದ್ಯಾಸಂಸ್ಥೆಗಳಿಗೆ ಇವರು ಹಿಗ್ಗಿ ಹಿಗ್ಗಿ ದಾನ ಕೊಡುವರು. ಇವರ ಬಳಿ ಬೇಡಲು ಹೋಗುವವರ ಮಡಿಲು ಗಟ್ಟಿಯಾಗಿರಬೇಕು. ಏಕೆಂದರೆ ಇವರು ಗ್ರಾಮ್‌ಗಳನ್ನು ನೀಡುವುದಿಲ್ಲ, ನೀಡುವಾಗ ಕೆ.ಜಿ.ಗಟ್ಟಲೆ ನೀಡಿಬಿಡುವರು! ಇವರ ಮನೆಗೆ ಊಟಕ್ಕೆ ಹೋಗುವಾಗ ಹೊಟ್ಟೆ ದೊಡ್ಡದು ಮಾಡಿಕೊಂಡು ಹೋಗಬೇಕು.

ಇವರ ತಂದೆ ಕುಂಕುಮದಹಳ್ಳಿ ಜಿನ್ನಪ್ಪನವರು. ತಾಯಿ ಕಲಿದೇವಪುರದ ಅಮಿದಾಲುಗೊಂದಿ ತಿಮ್ಮಪ್ಪನವರ ಮಗಳು ಪುಟ್ಟಬೊಮ್ಮಕ್ಕ. 1912ರಲ್ಲಿ ಜನಿಸಿದ ಪುಟ್ಟಸ್ವಾಮಯ್ಯನವರಿಗೆ ಒಬ್ಬ ಸೋದರಿಯೂ ಆರು ಜನ ಸೋದರರೂ ಇರುವರು. ಇವರು ಕನ್ನಡ ಲೋಯರ್ ಸೆಕೆಂಡರಿ ಓದಿ ಬಡತನದಿಂದಾಗಿ ವಿದ್ಯಾಭ್ಯಾಸವನ್ನು ಅಲ್ಲಿಗೇ ನಿಲ್ಲಿಸಿದರು. ಅನಂತರ ತುಮಕೂರಿಗೆ ಬಂದು ಶ್ರೀಯುತರಾದ ಟಿ. ಜಿ. ನಾಗರಾಜಪ್ಪನವರ ಮಂಡಿಯಲ್ಲಿ ಸೇರಿಕೊಂಡರು. ನಾಗರಾಜಪ್ಪನವರು ಇವರ ಚಿಕ್ಕಪ್ಪ, ಪಂಡಿತ ಎಲ್ಲಪ್ಪನವರು ಇವರ ದಾಯಾದಿಗಳು. ಯಕ್ಷಗಾನದ ಹುಚ್ಚೀರಪ್ಪನವರು ಇವರ ವಂಶಕ್ಕೆ ಬೀಗರಾಗಬೇಕು.

1942ರಲ್ಲಿ ಪುಟ್ಟಸ್ವಾಮಯ್ಯನವರು ತೊಂಡೇಬಾವಿ ಕಾಕಿ ನಾಗಕುಮಾರಯ್ಯನವರ ಮಗಳು ಶ್ರೀಮತಿ ಪ್ರಭಾವತಮ್ಮನವರನ್ನು ಮದುವೆಯಾದರು. ಅವರು ಬರುತ್ತಿದ್ದಂತೇ ಅದೃಷ್ಟವೂ ಬಂದಂತಾಯಿತು. ಇದರಿಂದ ಕಲ್ಪಲತೆ ಕಲ್ಪವೃಕ್ಷಕ್ಕೆ ಆಡರಿದಂತಾಯಿತು! ಆಲೆಮನೆಯನ್ನೇ ಅರವಂಟಿಗೆ ಮಾಡಿದಂತಾಯಿತು! ಈ ದಂಪತಿಗಳಿಗೆ ಸರೋಜಮ್ಮ, ಇಂದ್ರಕುಮಾರ್, ವಸಂತಕುಮಾರ್, ಸುರೇಂದ್ರಕುಮಾರ್, ವಿನೋದಕುಮಾರಿ ಮತ್ತು ಜಿತೇಂದ್ರಕುಮಾರ್ ಎಂಬುದಾಗಿ ಷಟ್ ಖಂಡಗಳಂತೆ ಆರು ಜನ ಮಕ್ಕಳಾದರು.

ದಾನವಿನೋದರಾದ ಪುಟ್ಟಸ್ವಾಮಯ್ಯನವರು ತಾವು ಗಳಿಸಿದ್ದರಲ್ಲಿ ಕಾಲು ಭಾಗ ದಾನ ಮಾಡಿದ್ದಾರೆ. ಶ್ರವಣಬೆಳಗುಳದ ಗೋಮಟೇಶ್ವರ ಕಾಲೇಜಿಗೆ 5001/-ರೂ. ತುಮಕೂರು ಇಂಜಿನಿಯರಿಂಗ್ ಕಾಲೇಜಿಗೆ 1001/-ರೂ. ಶಿವಮೊಗ್ಗ ವರ್ಧಮಾನ ವಿದ್ಯಾರ್ಥಿನಿಲಯಕ್ಕೆ 1001/-ರೂ. ತುಮಕೂರಿನ ಜಿನಾಲಯದ ಜೀರ್ಣೋದ್ಧಾರಕ್ಕೆ 3001/- ರೂ. ಗೋಮಟಗಿರಿ ಕ್ಷೇತ್ರಕ್ಕೆ ಕಲಶಗಳನ್ನು ಕೊಂಡು

3001/- ರೂ, ಮಂದಲಗಿರಿ ಕ್ಷೇತ್ರಕ್ಕೆ ಕಲಶಗಳನ್ನು ಕೂಗಿ 2001/- ರೂ. ಶ್ರವಣ ಬೆಳಗುಳದ ಶ್ರೀಮಠಕ್ಕೆ ವಿದ್ಯಾರ್ಥಿಗಳ ಒಂದು ದಿನದ ಊಟದ ವ್ಯವಸ್ಥೆಗಾಗಿ 1501/- ರೂ. ತಮ್ಮ ಕುಟುಂಬದ ಪರವಾಗಿ ದಾನಮಾಡಿರುವರು. ಬಾಹುಬಲಿ ಆಶ್ರಮ, ಮಹಾವೀರ ಮಿಷನ್, ತುಮಕೂರಿನ ಪಾರ್ಶ್ವನಾಥ ವಿದ್ಯಾರ್ಥಿನಿಲಯ, ಆಗಾಗ ಅಲ್ಲಲ್ಲೀ ನಡೆಯುವ ಪಂಚಕಲ್ಯಾಣಗಳು, ಜೀರ್ಣೋದ್ಧಾರಗಳು, ಜೈನಗ್ರಂಥ ಪ್ರಕಾಶನಗಳು ಇವುಗಳಿಗೆಲ್ಲ ಪುಟ್ಟಸ್ವಾಮಯ್ಯನವರು ತಾವು ಸಹಾಯ ಮಾಡಿರುವರು. ಗೋಮಟೇಶ್ವರ ಎಜುಕೇಷನ್ ಸೊಸೈಟಿಯ ಸದಸ್ಯರಾಗಿ ಇವರು ಪ್ರತಿವರ್ಷ ಆ ಸಂಸ್ಥೆಗೆ 500/- ರೂ. ಸಹಾಯದ್ರವ್ಯ ಕೊಡುತ್ತಿರುವರು. ಇವರು ಕಣ್ಣಿಗೆ ಬಿದ್ದ ಸಾಹಿತಿಯನ್ನು ತಮ್ಮ ಮನೆಗೆ ಕರೆದುಕೊಂಡು ಹೋಗಿ ಊಟೋಪಚಾರ ಮಾಡುವುದಲ್ಲದೆ ಧನಸಹಾಯವನ್ನೂ ಕೊಟ್ಟು ಕಳಿಸುವರು.

1946ರಲ್ಲಿ ಪುಟ್ಟಸ್ವಾಮಯ್ಯನವರು ಸ್ವಂತವಾಗಿ ಚಿಲ್ಲರೆವ್ಯಾಪಾರ ಪ್ರಾರಂಭಿಸಿದರು. 1953ರಲ್ಲಿ ತುಮಕೂರಿನಲ್ಲಿ ಶ್ರೀ ವರ್ಧಮಾನ ರೋಟರಿ ಆಯಿಲ್ ಮಿಲ್ಲನ್ನು ಹಾಕಿದರು. ಒಳ್ಳೆಯ ದಿನಗಳು ಬಂದವು. ಕಾಸಿಗೆ ಕಾಸು ಕೂಡಿತು. 1970ರಲ್ಲಿ ಎಕ್ಸ್‌ಪೆಲರ್ ಹಾಕಿ ಪುಟ್ಟಸ್ವಾಮಯ್ಯ ಅಂಡ್ ಸನ್ಸ್ ಎಂಬ ವಹಿವಾಟವನ್ನು ದೊಡ್ಡ ಪ್ರಮಾಣದಲ್ಲಿ ಪ್ರಾರಂಭಿಸಿದರು. ಹಿಂದೆಲ್ಲ ಕೆ.ಜಿ.ಪುಟ್ಟಸ್ವಾಮಯ್ಯನವರಾಗಿದ್ದ ಇವರು ಈಗ ಕ್ವಿಂಟಾಲ್ ಪುಟ್ಟಸ್ವಾಮಯ್ಯ ಆಗಿರುವರು! ಇವರ ದಾನಧರ್ಮಗಳೂ ಕೆಜಿಯಿಂದ ಕ್ವಿಂಟಾಲಿಗೆ ಏರುವುವು ಎಂಬುದರಲ್ಲಿ ಸಂದೇಹವಿಲ್ಲ.

ತೀರ್ಥಕೆ ತೀರ್ಥವೆ ಸಕಲ ಶಾಸ್ತ್ರಗಳ ಸಾ |
ರಾರ್ಥವೆ ಮುಕ್ತಿಯ ಮೊದಲೆ ||
ಅರ್ತಿಯೊಳೆನ್ನೆದೆಯೊಳಗಿರು ಸ್ವಪರಹಿ |
ತಾರ್ಥ ಚಿದಂಬರಪುರುಷಾ ||

ಮಂಗಲಮಹಿಮ ಮನೋಹರರೂಪ ಸೌ |
ಖ್ಯಂಗಳ ಸಾರ ಶೃಂಗಾರ ||
ಕಂಗೊಳಿಸೆನಗೆ ಸನ್ಮತಿಯನು ಸರಸ ಕ |
ಲಾಂಗಾ ನಿರಂಜನಸಿದ್ಧಾ ||

ಬಿ. ಪಿ. ನಾಗೇಂದ್ರಯ್ಯ, ,ತುಮಕೂರು

ಶ್ರವಣಬೆಳಗುಳದ ಬಳಿ ಚಂದ್ರಗಿರಿಯ ಒಂದು ಬದಿಯಲ್ಲಿ ಜಿನನಾಥಪುರವಿದೆ. ಕ್ರಿ.ಶ. 12ನೆಯ ಶತಮಾನದಲ್ಲಿ ಈ ಗ್ರಾಮವನ್ನು ವಿಷ್ಣುವರ್ಧನನ ಸೇನಾಧಿಪತಿಯಾದ ಗಂಗರಾಜನು ಕಟ್ಟಿಸಿದನು. ಇವನ ಅಣ್ಣ ಬೊಮ್ಮಚಮೂಪತಿ. ಇವನ ಮಗನೇ ಜಿನನಾಥಪುರದ ಅರೆಗಲ್ ಬಸದಿಯ ನಿರ್ಮಾಪಕನಾದ ಏಚಿರಾಜ. ಈ ಜಿನಾಲಯಕ್ಕೆ ಗಂಗರಾಜನ ಮಗನಾದ ಬೊಪ್ಪನು ಬೇಕಾದಷ್ಟು ದತ್ತಿಬಿಟ್ಟನು. ಅಂತು ಈ ಜಿನಾಲಯ 800 ವರ್ಷಕ್ಕೆ ಹಿಂದಿನದು. ಇದರ ಮೂಲಸ್ವಾಮಿ ಕಾಲಾನಂತರ ಭಿನ್ನವಾಯಿತು. ಜಿನಾಲಯ ಹಾಳುದೇಗುಲವಾಗಬಾರದೆಂದು ಶ್ರವಣಬೆಳಗುಳದ ಪಾತ್ರೆ ವ್ಯಾಪಾರಿಗಳಾದ ಪುಟ್ಟಪ್ಪನವರು 19ನೆಯ ಶತಮಾನದ ಉತ್ತರಾರ್ಧದಲ್ಲಿ ಅಮೃತಶಿಲೆಯ ಮುದ್ದಾದ ಪಾರ್ಶ್ವನಾಥ ಬಿಂಬವನ್ನು ಮಾಡಿಸಿ ಅರೆಗಲ್ ಬಸದಿಯಲ್ಲಿ ಸ್ಥಾಪಿಸಿ ಜೀರ್ಣೋದ್ಧಾರಮಾಡಿದರು. ಹಾಳುಬೀಳುತ್ತಿದ್ದ ಈ ಪುರಾತನ ಜಿನಾಲಯವು ಪುಟ್ಟಪ್ಪನವರ ಶ್ರದ್ಧಾಭಕ್ತಿಯಿಂದ ಪುನರುತ್ಥಾನವಾದಂತಾಯಿತು.

ಪುಟ್ಟಪ್ಪನವರಿಗೆ ಮೂರು ಜನ ಪತ್ನಿಯರು, ಇಬ್ಬರು ಹೆಣ್ಣುಮಕ್ಕಳು ಮತ್ತು ಇಬ್ಬರು ಗಂಡುಮಕ್ಕಳು. ಇವರ ಮಕ್ಕಳಾದ ಬಿ. ಪಿ. ಪಾರ್ಶ್ವನಾಥಯ್ಯ ಮತ್ತು ಭುಜಬಲಯ್ಯನವರು 1925ರ ತನಕ ಜೊತೆಯಾಗೇ ವ್ಯವಹಾರ ಮಾಡಿ ಅನಂತರ ಬೇರೆಬೇರೆಯಾದರು.

ಬಿ. ಪಿ. ಪಾರ್ಶ್ವನಾಥಯ್ಯನವರು 1908ರಲ್ಲಿ ಶ್ರವಣಬೆಳಗುಳದ ಜಿ. ಕೆ. ಧರಣಪ್ಪನವರ ಮಗಳು ಪದ್ಮಾವತಮ್ಮನನ್ನು ಮದುವೆಯಾದರು. ಈ ದಂಪತಿಗಳಿಗೆ ಬಿ. ಪಿ. ನಾಗೇಂದ್ರಯ್ಯ, ಬಿ. ಪಿ. ದೇವೇಂದ್ರಪ್ಪ ಮತ್ತು ಬಿ. ಪಿ. ಅಚ್ಯುತೇಂದ್ರಯ್ಯ ಎಂಬುದಾಗಿ ರತ್ನತ್ರಯದಂತೆ ಮೂರು ಜನ ಮಕ್ಕಳು.

ಬಿ. ಪಿ. ನಾಗೇಂದ್ರಯ್ಯ ಮತ್ತು ಬಿ. ಪಿ. ದೇವೇಂದ್ರಪ್ಪ ಇವರಿಬ್ಬರು ಬಲದೇವ-ವಾಸುದೇವರಂತೆ ದೇಹಗಳು ಎರಡಾದರೂ ಆತ್ಮ ಒಂದೇ ಎನ್ನುವಂತೆ ಅನ್ಯೋನ್ಯವಾಗಿ ಬಾಳಿದರು. ಇವರು 1942ರಲ್ಲಿ ಶ್ರವಣಬೆಳಗುಳದಲ್ಲಿ ಸೋಪ್ ಫ್ಯಾಕ್ಟರಿ ಹಾಕಿದರು. 1943ರಲ್ಲಿ ಈ ಫ್ಯಾಕ್ಟರಿಯನ್ನು ಚಿತ್ರದುರ್ಗಕ್ಕೆ ವರ್ಗಾಯಿಸಿದರು. 1950ರಲ್ಲಿ ಈ ಸೋದರರಿಬ್ಬರೂ ತುಮಕೂರಿಗೆ ಬಂದು ನೆಲೆಗೊಂಡರು. ಇಲ್ಲೇ ಜಿನೇಂದ್ರ ಸೋಪ್ ಫ್ಯಾಕ್ಟರಿಯನ್ನು ಸ್ಥಾಪಿಸಿದರು. ಇವರಿಗೆ ಗ್ರಹಚಾರದ ದಿನಗಳು ಕಳೆದವು. ತುಮಕೂರಿನಲ್ಲಿ ಲಕ್ಷ್ಮೀಕಟಾಕ್ಷ ಬಿದ್ದಿತು. ಸಣ್ಣದಾಗಿದ್ದ ಫ್ಯಾಕ್ಟರಿ ದೊಡ್ಡದಾಯಿತು. ಸ್ವಂತವಾಗಿ ಮನೆ ಮಾಡಿಕೊಂಡರು. ಫ್ಯಾಕ್ಟರಿಯ

ವಹಿವಾಟಿಗೆ ಅನುಕೂಲವಾಗುವಂತೆ ವಾಹನಗಳನ್ನು ಕೊಂಡುಕೊಂಡರು. ನೆಲಕ್ಕೆ ಬಿದ್ದವರು ಮತ್ತೊಮ್ಮೆ ಮೇಲೆದ್ದರು, ಸಿರಿವಂತರಾದರು. ಧರ್ಮವನ್ನು ಇವರು ರಕ್ಷಿಸಿದರು; ಧರ್ಮ ಇವರನ್ನು ರಕ್ಷಿಸಿತು.

1930ರಲ್ಲಿ ಬಿ. ಪಿ. ನಾಗೇಂದ್ರಯ್ಯನವರು ಶ್ರೀಮತಿ ನಾಗಮ್ಮನವರನ್ನು ವರಿಸಿದರು. ಈ ದಂಪತಿಗಳಿಗೆ ಬಿ. ಎನ್. ಪದ್ಮರಾಜ್, ಬಿ. ಎನ್. ಭಾನುಕುಮಾರ್, ಬಿ. ಎನ್. ಸುರೇಶ್, ಬಿ. ಎನ್. ನಂದಕುಮಾರ್ ಮತ್ತು ಫಣೀಂದ್ರಕುಮಾರಿ— ಈ ರೀತಿ ಐದು ಜನ ಮಕ್ಕಳಾದರು.

ಬಿ. ಪಿ. ದೇವೇಂದ್ರಪ್ಪನವರಿಗೆ 1935ರಲ್ಲಿ ಶ್ರೀಮತಿ ಬ್ರಾಹ್ಮಿಲಾವತಮ್ಮನೊಡನೆ ವಿವಾಹವಾಯಿತು. ಈ ದಂಪತಿಗಳಿಗೆ ಎಸ್. ಡಿ. ಗೋಮಟೇಶನ್, ಎಸ್. ಡಿ. ಭರತೇಶನ್, ಎಸ್. ಡಿ. ಜಿನೇಂದ್ರಕುಮಾರ್ ಈ ರೀತಿ ಮೂರು ಜನ ಮಕ್ಕಳಾದರು.

ನಾಗೇಂದ್ರಯ್ಯ ಮತ್ತು ದೇವೇಂದ್ರಪ್ಪನವರು ಪುಣ್ಯವಂತರು. ಬೆವರು ಸುರಿಸಿ ಬದುಕಬೇಕೆಂಬ ಸತ್ಪುತ್ರರನ್ನು ಪಡೆದಿರುವರು. ಇವರಲ್ಲಿ ಶ್ರೀ ಬಿ. ಎನ್. ಪದ್ಮರಾಜ್ ಮತ್ತು ಬಿ. ಎನ್. ಭಾನುಕುಮಾರ್ ಇವರು ಪ್ರತ್ಯೇಕವಾಗಿ ಹೊರಟು ಮೈಸೂರು ನಗರದಲ್ಲಿ ಬೇರೆಬೇರೆಯಾಗಿ ಪಾತ್ರೆವ್ಯಾಪಾರ ಮಾಡಿಕೊಂಡು ಏಳಿಗೆಗೆ ಬರುತ್ತಿರುವರು. ಉಳಿದವರೆಲ್ಲ ತುಮಕೂರಿನ ಜಿನೇಂದ್ರ ಸೋಪ್ ಫ್ಯಾಕ್ಟರಿಯ ವಹಿವಾಟನ್ನು ನೋಡಿಕೊಳ್ಳುತ್ತಿರುವರು. ಸಂತೃಪ್ತವಾದ ಹಾಗೂ ಸಮೃದ್ಧವಾದ ಈ ಸಂಸಾರದಲ್ಲಿ 1970ರ ಸೆಪ್ಟಂಬರ್ ತಿಂಗಳಲ್ಲಿ ದೇವೇಂದ್ರಪ್ಪನವರು ವಿಧಿವಶರಾಗಿ ತಮ್ಮ ಬಂಧುವರ್ಗವನ್ನು ಅಪಾರದುಃಖಕ್ಕೀಡುಮಾಡಿದರು.

ನಾಗೇಂದ್ರಯ್ಯನವರು ಕುಟುಂಬದ ಪರವಾಗಿ ಅನೇಕ ಧರ್ಮಕಾರ್ಯಗಳನ್ನು ಮಾಡಿರುವರು. ಅರೆಗಲ್ ಬಸದಿಯ ವ್ಯವಸ್ಥೆಯನ್ನು ಇವರೇ ಸ್ವಂತ ಖರ್ಚಿನಿಂದ ನೋಡಿಕೊಳ್ಳುತ್ತಿರುವರು. ಈ ಜಿನಾಲಯಕ್ಕಾಗಿ ಹತ್ತುಸಹಸ್ರ ರೂ.ಗಳನ್ನು ಮುಡಿಪು ಕಟ್ಟಿದ್ದಾರೆ. ಶ್ರವಣಬೆಳಗುಳದ ಶ್ರೀ ಗೋಮಟೇಶ್ವರ ಕಾಲೇಜಿಗೆ 501/– ರೂ. ಕೊಟ್ಟಿರುವರು. ಹುಂಚ ಕ್ಷೇತ್ರಕ್ಕೆ 1001/– ರೂ. ಸಹಾಯ ಮಾಡಿರುವರು. ತುಮಕೂರಿನ ಜಿನಾಲಯದ ಜೀರ್ಣೋದ್ಧಾರಕ್ಕೆ 1001/– ರೂ. ಕೊಟ್ಟಿರುವರು. ಹೊಸದುರ್ಗ, ಬಾಹುಬಲಿ ಆಶ್ರಮ ಇವಕ್ಕೂ ಸಹಾಯ ಮಾಡಿರುವರು. ದೇಹಿ ಎಂದವರಿಗೆ ನಾಸ್ತಿ, ಎನ್ನುವ ಅಭ್ಯಾಸವನ್ನು ಇವರು ಇಟ್ಟುಕೊಂಡಿಲ್ಲ. ತಂದೆಯಂತೆ ಮಕ್ಕಳೂ ಧರ್ಮಾನುರಾಗಿಗಳಾಗಿರುವರು. ಆಗ ಬಾ ಈಗ ಬಾ ಎನ್ನುವುದಿಲ್ಲ. ಮುಖ ಗಂಟುಹಾಕಿಕೊಳ್ಳದೆ ಸಂತೋಷಚಿತ್ತರಾಗಿ ಸಹಾಯ ಮಾಡುವ ಉದಾರಹೃದಯ ಈ ಕುಟುಂಬದ ಹೃದಯವಾಗಿದೆ.

ಆರ್. ಜಿ. ನೇಮಿರಾಜಯ್ಯ, ಹಿಂದೂಪುರ

ಶ್ರೀಮಂತರ ಮಕ್ಕಳು ಓದುವುದು ಅಪರೂಪ. ಅಂಥವರಲ್ಲಿ ನೇಮಿರಾಜಯ್ಯನವರು ಮೈಸೂರಿನ ಮಹಾರಾಜ ಕಾಲೇಜಿನಲ್ಲಿ ಓದಿ 1942ರಲ್ಲಿ ಬಿ.ಎ. ಪದವಿ ಪಡೆದರು. ಅಷ್ಟಕ್ಕೇ ಬಿಡದೆ ಕೊಲ್ಹಾಪುರಕ್ಕೆ ಹೋಗಿ ಎಲ್‌ಎಲ್.ಬಿ.ಯನ್ನೂ ಓದಿಕೊಂಡು ಬಂದರು. ಆಗ ಮೈಸೂರು ದೇಶದಲ್ಲಿ ಲಾ ಕಾಲೇಜುಗಳಿರಲಿಲ್ಲ. ಕೆಲವು ದಿನ ವಕೀಲ ವೃತ್ತಿಯನ್ನೂ ಇವರು ಮಾಡಿದ್ದುಂಟು. ಕೊನೆಯದಾಗಿ ಮಂಡಿ ವ್ಯಾಪಾರವನ್ನು ಕೈಗೊಂಡರು. ಮನೆತನದ ವೃತ್ತಿಯನ್ನು ಮುಂದುವರಿಸಿ ದಿನೇ ದಿನೇ ಮುಂದಕ್ಕೆ ಬರುತ್ತಿರುವರು. ಲೋಕದಲ್ಲಿ ಎಲ್ಲರೂ ಬದುಕಬೇಕು ಎಂಬುದು ಇವರ ಧ್ಯೇಯ. ದುಡಿಮೆಯಿಂದ ಬದುಕಬೇಕು ಎಂದು ಆಗಾಗ ಹೇಳುವರು.

ಮೊಡಲಸೀಮೆಯ ಮುಖಂಡರಾಗಿದ್ದ ರಮಾಪುರದ ಆರ್. ಪಿ. ಜ್ವಾಲಪ್ಪನವರು ಇವರ ತಂದೆ. ಹಿಂದೂಪುರದ ಜ್ವಾಲಮ್ಮ ಇವರ ತಾಯಿ. ಇವರಿಗೆ ಮೂರು ಜನ ಸೋದರರೂ ಒಬ್ಬ ಸೋದರಿಯೂ ಇದ್ದಾರೆ. ಆಗರ್ಭಶ್ರೀಮಂತ ಮನೆತನದಲ್ಲಿ ಜನಿಸಿದರೂ ನೇಮಿರಾಜಯ್ಯನವರು ಕಾಯಕವಿಲ್ಲದೆ ಉಣ್ಣುವುದಿಲ್ಲ. ತಮ್ಮ ತಂದೆಯಿಂದ ಈ ತತ್ವವನ್ನು ಇವರು ಕಲಿತರು. ತಮ್ಮ ಮಕ್ಕಳಿಗೂ ಇದೇ ತತ್ವವನ್ನು ಕಲಿಸಿರುವರು.

1944ರಲ್ಲಿ ನೇಮಿರಾಜಯ್ಯನವರು ಹಿಂದೂಪುರದ ಆಣಿಕಾರ್ ದೇವರಾಜಯ್ಯನವರ ಪುತ್ರಿಯಾದ ಶಾರದಮ್ಮನವರನ್ನು ಮದುವೆಯಾದರು. ಈ ದಂಪತಿಗಳಿಗೆ ಆರ್. ಎನ್. ಇಂದ್ರಕುಮಾರ್, ಆರ್. ಎನ್. ಮೋಹನ್‌ಕುಮಾರ್, ಆರ್. ಎನ್. ಪಾರ್ಶ್ವನಾಥ್ ಮತ್ತು ಆರ್. ಎನ್. ಜ್ವಾಲಾಮಾಲಿನೀದೇವಿ—ಈ ರೀತಿ ಸಮವಸರಣದ ಮಹಾದ್ವಾರಗಳಂತೆ ನಾಲ್ಕು ಮಂದಿ ಮಕ್ಕಳಿರುವರು.

ನೇಮಿರಾಜಯ್ಯನವರು ಚೆನ್ನಾಗಿ ಕೈತುಂಬ ಗಳಿಸುತ್ತಿರುವರು. ಸಂತೋಷವಾಗಿ ಖರ್ಚನ್ನೂ ಮಾಡುತ್ತಿರುವರು. ಇವರ ಸಂಸಾರ ಸುಖಮಯವಾಗಿದೆ. ದಾನಧರ್ಮ ಮಾಡುವುದನ್ನು ಇವರಿಂದ ಕಲಿಯಬೇಕು. ಕೂಗಿ ಕರೆದು ದಾನಮಾಡುವ ಸ್ವಭಾವ ಇವರದು. ಪೆನುಗೊಂಡೆ ಜಿನಾಲಯದ ಜೀರ್ಣೋದ್ಧಾರಕ್ಕಾಗಿ 1,000/- ರೂ. ಕೊಟ್ಟಿದ್ದಾರೆ. ತುಮಕೂರಿನ ಜೈನ ಕಲ್ಯಾಣಮಂಟಪಕ್ಕಾಗಿ 500/– ರೂ. ದಾನಮಾಡಿದ್ದಾರೆ. ಗೌರಿಬಿದನೂರು ಭಾವೀ ಜೈನ ವಿದ್ಯಾರ್ಥಿನಿಲಯಕ್ಕಾಗಿ 1000/– ರೂ. ನೀಡಿರುವರು. ಶ್ರವಣಬೆಳಗುಳದ ಕಾಲೇಜಿಗೆ 1000/– ರೂ. ಇವರ ಉದಾರವಾದ ಕೊಡುಗೆ. ಕುರುಡಿ ಜಿನಾಲಯದಲ್ಲಿ ಪ್ರತಿವರ್ಷ ಇವರು

ಕಾರ್ತಿಕಪೂಜೆ ಮಾಡಿಸುತ್ತಿರುವರು. ಹುಂಚ ಕ್ಷೇತ್ರಕ್ಕೂ ಪ್ರತಿವರ್ಷ ಸಹಾಯ ಮಾಡುತ್ತಿರುವರು. ತುಮಕೂರಿನ ಜೈನ ವಿದ್ಯಾರ್ಥಿನಿಲಯಕ್ಕೆ ಪ್ರತಿ ತಿಂಗಳೂ ಊಟದ ವ್ಯವಸ್ಥೆಗಾಗಿ ಸಹಾಯ ಮಾಡುತ್ತಿರುವರು. ಪ್ರತಿವರ್ಷ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ಕೊಡಲು ಧ್ರುವನಿಧಿಯನ್ನು ತಮ್ಮ ಮಂಡಿಯ ಲೆಕ್ಕದಲ್ಲಿ ಇಟ್ಟು ಕೊಂಡಿರುವರು. ಈ ಹಣದ ಬಡ್ಡಿಯನ್ನು ಉನ್ನತ ವ್ಯಾಸಂಗದ ವಿದ್ಯಾರ್ಥಿಗಳಿಗೆ ಕೊಡಲು ಸಂಕಲ್ಪ ಮಾಡಿರುವರು.

ನೇಮಿರಾಜಯ್ಯನವರು ಗ್ರಂಥ ಪ್ರಕಾಶನಕ್ಕೂ ಸಹಾಯ ಮಾಡುತ್ತಿರುವರು. ರನ್ನನ ಅಜಿತಪುರಾಣ ಸಂಗ್ರಹವನ್ನು ಪ್ರಕಟಿಸಲು ಅತ್ತಿಮಬ್ಬೆ ಪ್ರಕಾಶನಕ್ಕೆ 500/- ರೂ. ಸಹಾಯಧನ ಕೊಟ್ಟರು.

ನೇಮಿರಾಜಯ್ಯನವರು ಪುಣ್ಯವಂತರು. ಅನುರೂಪಳಾದ ಪತ್ನಿ, ಹೇಳಿದಂತೆ ಕೇಳುವ ಮಕ್ಕಳು—ಇದಕ್ಕಿಂತ ಸಂಸಾರದಲ್ಲಿ ಬೇರೆ ಸುಖ ಏನಿದೆ ?

ಪಂಕಜಷಟ್‌ಖಂಡದೊಳಗೆ ಸರ್ವಾಂಗದೊ |
ಳಂಕಮಾಲೆಯ ಲಿಪಿಯಂತೆ ||
ಅಂಕಿಸಿ ನೋಡುತೆನ್ನೆದೆಯೊಳಗಿರು |
ಳಂಕಾ ಚಿದಂಬರಪುರುಷಾ ||

ಧ್ಯಾನಿಸುವವರಿಗೆ ದಿವ್ಯಭೋಗಗಳ ಸಂ |
ಧಾನಿಸುವನು ಪರಮಮಹಿಮಾ ||
ಜ್ಞಾನಿಗಳೊಡೆಯ ಸನ್ಮತಿದೋರು ತಾಮಸ |
ಹೀನನು ನಿರಂಜನಸಿದ್ಧಾ ||

ಎಂ. ಸಿ. ನೇಮಿರಾಜಯ್ಯ, ತುಮಕೂರು

ಸೆಂಕಿಘಟ್ಟದ ಮಾಯಸಂದ್ರದಲ್ಲಿ ಮತೀಯ ಗಲಭೆ ಪ್ರಾರಂಭವಾಗಿ ಅಲ್ಪಸಂಖ್ಯಾತರಾದ ಜೈನರ ಸಂಪತ್ತೆಲ್ಲ ಲೂಟಿಯಾಯಿತು. ಅಡಕೆತೋಟದ ಅಡಕೆಗೊನೆಗಳನ್ನು ನಡುಹಗಲಲ್ಲೇ ದೋಚಿದರು. ಬೆಳೆದುನಿಂತ ಬತ್ತದ ಪಯಿರನ್ನು ಜೈನರ ಕಣ್ಣೆದಿರಲ್ಲೇ ಕೊಯ್ದು ಬಹುಸಂಖ್ಯಾತರು ತಮ್ಮ ಮನೆಗಳಲ್ಲಿ ರಾಶಿಹಾಕಿದರು. ಇಂಥ ಸಂದಿಗ್ಧ ಪರಿಸ್ಥಿತಿಯಲ್ಲಿ ಎಂ. ಸಿ. ನೇಮಣ್ಣನವರು ತಮ್ಮ ಗಾಡಿಯನ್ನು ಹೂಡಿಕೊಂಡು ಬೇಸರದಿಂದ ತುಮಕೂರಿಗೆ ಬಂದರು. ಎಲ್ಲಿ ಜಾಗವಿದ್ದರೆ ಅಲ್ಲಿ ಕುಳಿತು ಸಣ್ಣ ಪ್ರಮಾಣದಲ್ಲಿ ಬೆಲ್ಲದ ರಾಶಿಹಾಕಿಕೊಂಡು ವ್ಯಾಪಾರ ಪ್ರಾರಂಭಿಸಿದರು. ಯಾವ ಘಳಿಗೆಯಲ್ಲಿ ಪ್ರಾರಂಭಿಸಿದರೋ ಏನೋ, ಒಂದೆರಡು ವರ್ಷಗಳಲ್ಲಿ ಚೇತರಿಸಿಕೊಂಡರು. ಸ್ವಂತ ಅಂಗಡಿ ಮಾಡಿದರು. ಸಹಸ್ರಾರು ಮೂಟೆ ಬೆಲ್ಲ ತರಿಸುವಂತಾದರು. ಬೆಲ್ಲದ ವ್ಯಾಪಾರದಲ್ಲೇ ಇವರು ಶ್ರೀಮಂತರಾದರು, ಗಣ್ಯರೆನಿಸಿದರು. ಬೆಲ್ಲದಂತೆ ಇವರು ಎಲ್ಲರಿಗೂ ಬೇಕಾದವರಾದರು.



ಎಂ. ಸಿ. ನೇಮಿರಾಜಯ್ಯ

ಮಾಯಸಂದ್ರದ ಚಿಕ್ಕಬೋಗಯ್ಯನವರು ಏನೂ ಅರಿಯದ ರೈತರು. ಇವರು ಅರಸಾಪುರದ ಜವಳಿ ಮನೆತನದ ಶ್ರೀಮತಿ ಲಚ್ಚಮ್ಮನನ್ನು ಮದುವೆಯಾದರು. 1924ರಲ್ಲಿ ಇವರಿಗೆ ಗಂಡುಕೂಸಾಯಿತು. ಇದಕ್ಕೆ ನೇಮಣ್ಣನೆಂದು ಹೆಸರಿಟ್ಟರು. ಅನಂತರ ಈ ದಂಪತಿಗಳಿಗೆ ನಾಗಕುಮಾರಯ್ಯ, ಧರಣಪ್ಪ ಮತ್ತು ಪದ್ಮಾವತಮ್ಮ

ಈ ರೀತಿ ಮೂರು ಜನ ಮಕ್ಕಳಾದರು.

ಎಂ. ಸಿ. ನೇಮಿರಾಜಯ್ಯನವರು 1952ರಲ್ಲಿ ತುಮಕೂರಿಗೆ ಬಂದರು. ಇವರು ಹೇಳಿಕೊಳ್ಳುವಂಥ ವಿದ್ಯಾವಂತರೂ ಅಲ್ಲ. ಕನ್ನಡ ಓದಲು, ಬರೆಯಲು ಬರುವುದು. ಇವರಿಗೆ ಅದಲಗೆರೆ ತಾಯಮ್ಮನೊಡನೆ ವಿವಾಹವಾಯಿತು. ಈ ದಂಪತಿಗಳಿಗೆ ಕನಕರತ್ನ, ಮಧುರಮ್ಮ, ಪದ್ಮಾವತಮ್ಮ, ಜ್ವಾಲ್ನಮ್ಮ, ನಳಿನಿ ಮತ್ತು ನಾಗೇಂದ್ರ ಎಂಬುದಾಗಿ ಆರು ಜನ ಮಕ್ಕಳಾದರು.



ಎಂ. ಸಿ. ನೇಮಿರಾಜಯ್ಯ ಅವರ ತಾಯಿ ಶ್ರೀಮತಿ ಲಚ್ಚಮ್ಮ

ಎಂ. ಸಿ. ನೇಮಿರಾಜಯ್ಯನವರು ತುಮಕೂರಿಗೆ ಬಂದಮೇಲೆ ಸಮೃದ್ಧವಾಗಿ ಗಳಿಸಿದರು. ಮಾಯಸಂದ್ರದಲ್ಲಿದ್ದುದಕ್ಕಿಂತಲೂ ನೂರುಪಟ್ಟು ಶ್ರೀಮಂತರಾದರು. ಆದರೆ ಇವರು ಹುಟ್ಟೂರನ್ನು ಮರೆಯಲಿಲ್ಲ. ತಮ್ಮ ತಾಯಿಯ ಹೆಸರಿನಲ್ಲಿ ಇವರು ಒಂದು ಮಾಧ್ಯಮಿಕ ಶಾಲೆಯನ್ನು ಕಟ್ಟಿಸಿರುವರು. ಹುಂಚ ಕ್ಷೇತ್ರಕ್ಕೆ 1001/-ರೂ. ದಾನಮಾಡಿರುವರು. ಶ್ರವಣಬೆಳಗುಳದ ಜಿ.ಎಂ.ವಿ. ಕಾಲೇಜಿಗೆ 1001/- ರೂ. ಉದಾರವಾಗಿ ಕೊಟ್ಟಿರುವರು. ತುಮಕೂರಿನ ಜಿನಾಲಯದ ಜೀರ್ಣೋದ್ಧಾರಕ್ಕಾಗಿ 1001/- ರೂ. ಸಹಾಯ ಮಾಡಿರುವರು. ತುಮಕೂರಿನ ಜೈನ ಕಲ್ಯಾಣಮಂಟಪಕ್ಕಾಗಿ 501/- ರೂ. ನೆರವು ಕೊಟ್ಟಿದ್ದಾರೆ. ಕುಣಿಗಲಿನ ಜಿನಾಲಯದ ಪಂಚಕಲ್ಯಾಣವಾದಾಗ ಸಾವಿರಾರು ಜನಕ್ಕೆ ಅನ್ನಸಂತರ್ಪಣೆ ಮಾಡಿಸಿರುವರು. ಸೆಂಕಿಘಟ್ಟದ ಜಿನಾಲಯದಲ್ಲಿ ಪ್ರತಿವರ್ಷವೂ ಮಹಾವೀರ ಜಯಂತಿಯಂದು ವಿಶೇಷಪೂಜೆ ಮಾಡಿಸುತ್ತಿರುವರು.

ನೇಮಣ್ಣನವರು ತನ್ನವರಿಗಾಗಿ ಸದಾ ಕರಗುವರು. ತಮ್ಮ ಬಂಧುವರ್ಗದಲ್ಲಿ ಬಡವರಾದವರನ್ನೆಲ್ಲ ಕರೆಸಿಕೊಂಡು ಆಶ್ರಯನೀಡಿ ಮಾರ್ಗದರ್ಶನ ಮಾಡುತ್ತ ಆ ಕಡುಬಡವರನ್ನೆಲ್ಲ ಶ್ರೀಮಂತರನ್ನಾಗಿ ಮಾಡಿರುವರು. ಹತ್ತಾರು ಮನೆಗಳನ್ನು ಉಳಿಸಿರುವರು. ಇವರ ಕಣ್ಣಿಗೆಬಿದ್ದ ಬಂಧುಗಳೆಲ್ಲ ಭಾಗ್ಯವಂತರಾಗುತ್ತಿರುವರು. ಎಲ್ಲ ಶ್ರೀಮಂತರೂ ಈ ಉದಾರ ಹೃದಯವನ್ನು ತೋರಿದರೆ ನಮ್ಮ ಸಮಾಜವು ಉದ್ಧಾರವಾಗದಿರದು !


ತೆರೆಯ ಮೇಲ್ತೆರೆಗಳ ತೋರುವಿಂಗಡಲಂತೆ |
ಸಿರಿಯ ಮೇಲ್ಸಿರಿಯ ಸೂಚಿಸುವ ||
ಚರಿತಾರ್ಥ ನನ್ನಂತರಂಗದೊಳಿರು ಮನೋ |
ಹರನೆ ಚಿದಂಬರಪುರುಷಾ ||

ಉತ್ಸಾಹವರ್ಧನ ಉನ್ಮಾರ್ಗಮರ್ದನ |
ಚಿತ್ಸುಖ ಚಿತ್ರಾರ್ಥಚರಿತಾ ||
ಸತ್ಸಾರಮತಿದೋರು ಸನ್ಮುನಿಹೃದಯ ಶ್ರೀ |
ವತ್ಸಾ ನಿರಂಜನಸಿದ್ಧಾ ||

ನಿಮಿಷಮಾತ್ರವು ದುಃಖವಿಲ್ಲದೆ ಸೌಖ್ಯ ಸಂ |
ಭ್ರಮದೊಳೊಪ್ಪುವೆ ಮಹಾದೇವಾ ||
ಅಮೃತವ ಸೂಸುತೆನ್ನೆದೆಯೊಳಗಿರು ಸುಖೋ |
ತ್ತಮನೆ ಚಿದಂಬರಪುರುಷಾ ||

ಎ. ಸಿ. ನೇಮಿಚಂದ್ರಯ್ಯ, ತುಮಕೂರು

1942–44ರಲ್ಲಿ ತುಮಕೂರಿನ ಜಿನಾಲಯದಲ್ಲಿ ತಂಗಿ ಓದಲು ಬಂದಂಥ ಎ. ಸಿ. ನೇಮಿಚಂದ್ರಯ್ಯನವರು ಒಂದು ಜೈನ ವಿದ್ಯಾರ್ಥಿನಿಲಯ ಸ್ಥಾಪಿಸುವ ಪಣತೊಟ್ಟರು. ಅವರ ಸಹಪಾಠಿಗಳಾದ ನಾವೆಲ್ಲ ಆಗ ಹಾಸ್ಯಮಾಡಿ ಅವರ ಗೋಳು ಹೊಯ್ದುಕೊಂಡೆವು. ವಿದ್ಯಾರ್ಥಿನಿಲಯ ಆಗುವ ತನಕ ಕ್ಷೌರಮಾಡಿಸಿಕೊಳ್ಳುವುದಿಲ್ಲವೆಂದು ಹಟತೊಟ್ಟರು. ಸಿಹಿ ಊಟವನ್ನು ತೊರೆದರು. ಎರಡು-ಮೂರು ತಿಂಗಳಲ್ಲೇ ಇವರ ಮುಖದಲ್ಲಿ ಗಡ್ಡಮೀಸೆ ಬೆಳೆದು ಕೃಷ್ಣಪ್ರಭಾವಳಿ ಜೋಡಿಸಿದಂತಾಯಿತು. ತಲೆ ಕಂತೆಬೊಂತೆಯಾಯಿತು. ಶ್ರೀಮಂತರ ಗಮನವನ್ನೆಲ್ಲ ಈ ರೀತಿ ತಮ್ಮತ್ತ ಸೆಳೆದರು. ತಮ್ಮ ಆಶೋತ್ತರವನ್ನು ಮನೆಮನೆಗೂ ಬಿತ್ತಿದರು.



ಎ. ಸಿ. ನೇಮಿಚಂದ್ರಯ್ಯ

ಕೊನೆಗೆ 1943–44ರಲ್ಲಿ ತುಮಕೂರಿನಲ್ಲಿ ಪಾರ್ಶ್ವನಾಥ ಜೈನ ವಿದ್ಯಾರ್ಥಿನಿಲಯ ಈ ನೇಮಿಚಂದ್ರರ ದೃಢಸಂಕಲ್ಪದಿಂದ ಪ್ರಾರಂಭವಾಯಿತು. ಸುತ್ತಮುತ್ತಣ ಶ್ರೀಮಂತರ ಸಹಕಾರ ಒದಗಿಬಂದಿತು. ವಿದ್ಯಾರ್ಥಿನಿಲಯ ಆಗುವತನಕ ಈ ಚೇತನ ಹಗಲು-ರಾತ್ರಿ ಒದ್ದಾಡಿದೆ. ಇವರು ತಪಸ್ಸನ್ನೇ ಆಚರಿಸಿದರೆನ್ನಬೇಕು. ಇಂದು ಪಾರ್ಶ್ವನಾಥ ವಿದ್ಯಾರ್ಥಿನಿಲಯಕ್ಕೆ ಲಕ್ಷಾಂತರ ರೂ.ಗಳ ಭವ್ಯಕಟ್ಟಡವಿದೆ. ನೂರಾರು ವಿದ್ಯಾರ್ಥಿಗಳು ಇವರ ನೆರಳಿನಲ್ಲಿ ತಂಗಿ ಚೆನ್ನಾಗಿ ಓದಿ ಇಂದು ಉನ್ನತ ಹುದ್ದೆಗಳಲ್ಲಿರುವರು. ಎಲ್ಲರೂ ಶ್ರೀ ಎ. ಸಿ. ನೇಮಿಚಂದ್ರಯ್ಯನವರಿಗೆ ಕೃತಜ್ಞರಾಗಿರಬೇಕು.

ಗುಬ್ಬಿ ತಾಲ್ಲೂಕು ಅದಲಗೆರೆಯಲ್ಲಿ ಚಂದ್ರಪ್ಪ ಮತ್ತು ಜ್ವಾಲ್ನಮ್ಮ ಎಂಬ ದಂಪತಿಗಳಿದ್ದರು. ಇವರಿಗೆ ಏಳು ಜನ ಗಂಡು, ಇಬ್ಬರು ಹೆಣ್ಣುಮಕ್ಕಳಾದವು. ಇವರ ಸತ್ಪುತ್ರರಾಗಿ ನೇಮಿಚಂದ್ರರು 20–7–1922ರಲ್ಲಿ ಜನ್ಮತಾಳಿದರು. ಅದಲಗೆರೆ, ಕಡಬ ಮತ್ತು ತುಮಕೂರು ಈ ಸ್ಥಳಗಳಲ್ಲಿ ಓದಿ ಕೊನೆಗೆ ಹೈಸ್ಕೂಲ್ ವಿದ್ಯಾಭ್ಯಾಸವನ್ನು ಪೂರೈಸಿದರು. ಆಮೇಲೆ ಪಾರ್ಶ್ವನಾಥ ಪ್ರಾವಿಜನ್ ಸ್ಟೋರ್ಸ್ ಎಂಬ ಅಂಗಡಿಯಿಟ್ಟರು. ಇದರಲ್ಲೇ ದುಡಿದರು. ಜೊತೆಗೆ ಇನ್ಷೂರೆನ್ಸ್ ಏಜೆಂಟ ರಾಗಿ ಗಳಿಸಿದರು. ಸಾವಿರಾರು ಜನ ಇವರಿಗೆ ಮಿತ್ರರಿದ್ದಾರೆ. ಪರೋಪಕಾರಿಯಾದ ಇವರ ಸುತ್ತ ಮಾರ್ಗದರ್ಶನ ಪಡೆಯಲು, ಸಹಾಯ ಪಡೆಯಲು ಸದಾ ಹತ್ತಾರು ಜನರಿರುತ್ತಾರೆ. ಸೇವೆಯೇ ಇವರ ಸಂಪತ್ತು. ಜಿನಭಕ್ತಿಯೇ ಇವರ ಶಕ್ತಿ. ಶುಭ ಪರಿಣಾಮವೇ ಇವರ ಪೀಠ. ಕರುಣೆಯೇ ಇವರ ಕಿರೀಟ.

1947ರಲ್ಲಿ ಇವರು ಮಡಕಸಿರ ತಾಲ್ಲೂಕಿನ ಅಗಳಿಯಲ್ಲಿದ್ದ ತಮ್ಮ ಸೋದರ ಮಾವ ಶ್ರೀ ದೇವರಾಜಯ್ಯನವರ ಪುತ್ರಿ ಶ್ರೀಮತಿ ಪದ್ಮಾವತಿಯನ್ನು ಮದುವೆ ಯಾದರು. ಇವರಿಗೆ ಐದು ಜನ ಗಂಡುಮಕ್ಕಳು ಮತ್ತು ಇಬ್ಬರು ಹೆಣ್ಣುಮಕ್ಕಳು ಸಪ್ತತತ್ವಗಳಂತೆ ಜನಿಸಿರುವರು.

ಎ. ಸಿ. ನೇಮಿಚಂದ್ರಯ್ಯನವರು ಸಾಹಿತ್ಯಪ್ರಿಯರು. ವಿವೇಕವಾಣಿ ಎಂಬ ಕಿರುಹೊತ್ತಗೆಯನ್ನು ತಾವೇ ರಚಿಸಿ ಪ್ರಕಟಿಸಿ ಧರ್ಮಾರ್ಥವಾಗಿ ಹಂಚಿರುವರು. ಸಾಧುಸಂತರ ಸತ್ಸಂಗ ಸಿಕ್ಕಿದಾಗ ಇವರು ರೋಮಾಂಚನಗೊಳ್ಳುವರು.

ಇವರು ಗುಪ್ತದಾನಿಗಳು. ಬಲಗೈ ಕೊಟ್ಟುದನ್ನು ಎಡಗೈ ಕಾಣದಂತೆ ಗುಟ್ಟಾಗಿ ದಾನ ಮಾಡುವರು. ತುಮಕೂರು ಜಿನಾಲಯದ ಜೀರ್ಣೋದ್ಧಾರ, ನಿಟ್ಟೂರು ಜಿನಾಲಯದ ಪಂಚಕಲ್ಯಾಣಗಳ ಸಂದರ್ಭಗಳಲ್ಲಿ ಉದಾರವಾಗಿ ನೆರವಾಗಿರುವರು. ತುಮಕೂರಿನ ಪಾರ್ಶ್ವನಾಥ ವಿದ್ಯಾರ್ಥಿನಿಲಯವನ್ನು ಕಟ್ಟುವಾಗ ಹಗಲು-ರಾತ್ರಿ ಅಲ್ಲೇ ನಿಂತು ಶ್ರಮದಾನವೆಸಗಿರುವರು. ರಚನಾತ್ಮಕ ಯೋಗಿಯಾದ ಇಂಥವರು ನಮ್ಮಲ್ಲಿ ಎಷ್ಟು ಜನ ದೊರೆತಾರು ?

ಪುರೋಹಿತ ಧರಣೇಂದ್ರಯ್ಯ, ತುಮಕೂರು

ತುಮಕೂರು ಜಿಲ್ಲಾ ಕೇಂದ್ರವಾಗಿದೆ. ಇಲ್ಲಿ ನೂರಾರು ಜೈನರ ಮನೆಗಳಿವೆ. ಉದ್ಯೋಗಶೀಲರಾದ ಇಲ್ಲಿಯ ಶ್ರಾವಕರು ಶ್ರೀಮಂತರಾಗಿರುವರು. ಶುಭ್ರವಾದ ಇವರ ಜಿನಭಕ್ತಿ, ಸನ್ಮಾರ್ಗದಲ್ಲಿ ಗಳಿಸಿದ ಸಂಪತ್ತು, ಇದನ್ನು ಸದ್ವಿನಿಯೋಗ ಗೊಳಿಸುವ ಯುಕ್ತಿ ಮೂರೂ ಮುಪ್ಪುರಿಗೊಂಡು ತುಮಕೂರಿನ ಭವ್ಯಜಿನಾಲಯ ನಿರ್ಮಾಣವಾಯಿತು. ಅಭಿನವಸಮವಸರಣದಂತೆ ಕಂಗೊಳಿಸುವ ಈ ಜಿನಾಲಯ ವನ್ನು ಶ್ರೀ ಧರಣೇಂದ್ರಯ್ಯನವರು ಹಗಲು ರಾತ್ರಿ ಒಪ್ಪಹಾಕಿ ಶುಚಿಗೊಳಿಸಿ ಫಳ ಫಳ ಹೊಳೆಯುವಂತೆ ಇಟ್ಟಿದ್ದಾರೆ. ಇಲ್ಲಿಗೆ ಬಂದ ಶ್ರಾವಕರು ಜಿನಾಲಯವನ್ನು ಬಿಟ್ಟುಹೋಗಲು ತಳಮಳಗೊಳ್ಳುವರು. ಇಲ್ಲಿಯ ಪಾರ್ಶ್ವನಾಥ ಜಿನಬಿಂಬ ಬಂಗಾರ ದಲ್ಲಿ ಎರಕಹೊಯ್ದಂತೆ, ಮಹಿಮೆಯಲ್ಲಿ ಅದ್ದಿ ತೆಗೆದಂತೆ ರಾರಾಜಿಸುತ್ತಿದೆ. ಇದಕ್ಕೆ ಶ್ರೀ ಧರಣೇಂದ್ರಯ್ಯನವರ ಭಕ್ತಿಪೂರ್ಣವಾದ ಕೈವಾಡವೇ ಕಾರಣ. ಇಷ್ಟು ಶುಭ್ರವಾದ, ಇಷ್ಟು ನಯನಮನೋಹರವಾದ ಜಿನಾಲಯಗಳು ಕರ್ಣಾಟಕದಲ್ಲಿ ವಿರಳ. ಪುರೋಹಿತನ ಮನಸ್ಸು ಶುಭ್ರವಾಗಿದ್ದರೆ ಜಿನಾಲಯ ಶುಭ್ರವಾಗಿರುವುದು. ಪುರೋಹಿತನ ಮನಸ್ಸು ಪ್ರಸನ್ನವಾಗಿದ್ದರೆ ಜಿನಾಲಯ ಪವಿತ್ರವಾಗಿರುವುದು. ಇಂಥ ಜಿನಾಲಯಗಳಿಗೆ ಬಂದ ಶ್ರಾವಕರೂ ಶುಭಪರಿಣಾಮವನ್ನು ಪಡೆಯದಿರರು.



ಪುರೋಹಿತ ಧರಣೇಂದ್ರಯ್ಯನವರು

ಚಾಮರಾಜನಗರದ ಪುರೋಹಿತ ಶ್ರೀ ಪದ್ಮರಾಜಯ್ಯನವರು ನಾಮ ಗೊಂಡಲಿನ ಶ್ರೀಮತಿ ಹೊಂಬುಜಮ್ಮನವರನ್ನು ಮದುವೆಯಾದರು. ಈ ದಂಪತಿಗಳಿಗೆ 1911ರಲ್ಲಿ ಶ್ರೀ ಧರಣೇಂದ್ರಯ್ಯನವರು ಜನಿಸಿದರು. ಇವರು ತಂದೆಯ ಬಳಿಯೇ ಪುರೋಹಿತ ವೃತ್ತಿಯನ್ನು ಕಲಿತುದಲ್ಲದೆ ವ್ಯವಹಾರಕ್ಕಾಗಿ ಕನ್ನಡ ಲೋಯರ್ ಸೆಕೆಂಡರಿ ಪರೀಕ್ಷೆಯನ್ನೂ ಮಾಡಿಕೊಂಡರು.

ಶ್ರೀ ಧರಣೇಂದ್ರಯ್ಯನವರು ತಮ್ಮ 21ನೆಯ ವಯಸ್ಸಿನಲ್ಲಿ ತುಮಕೂರು ಜಿನಾಲಯಕ್ಕೆ ಪುರೋಹಿತರಾಗಿ ಆಗಮಿಸಿದರು. ಇವರಿಗೆ ತೋವಿನಕೆರೆಯ ಶ್ರೀಮತಿ ಸುನಂದಮ್ಮನವರೊಡನೆ (ಚಂದ್ರಸಾಗರರ ವಂಶದವರು) ವಿವಾಹವಾಯಿತು. ಒಂದು ವರ್ಷದಲ್ಲಿ ಸುನಂದಮ್ಮನವರು ಅಕಾಲಮರಣಕ್ಕೆ ತುತ್ತಾದರು. ಅನಂತರ ಶ್ರೀ ಧರಣೇಂದ್ರಯ್ಯನವರು ರತ್ನಗಿರಿಯ ಸಾಹುಕಾರ್ ಶ್ರೀ ಬ್ರಹ್ಮಪ್ಪನವರ ಸುಪುತ್ರಿ ಕಾಂತಮ್ಮನವರನ್ನು ಮದುವೆಯಾಗಿ ಶ್ರೀಮಂತರಾದರು. ಈ ಶ್ರೀಮಂತ ದಂಪತಿಗಳಿಗೆ ಮಂಗಳಾಷ್ಟಕಗಳಂತೆ ಶ್ರೀಯುತ ಪದ್ಮನಾಭ, ಪಾರ್ಶ್ವನಾಥ್, ನಾಗರಾಜು, ಜಯಣ್ಣ, ಮಹಾವೀರ, ಬಾಹುಬಲಿ ಮತ್ತು ಶ್ರೀಮತಿ ವಿಜಯಮ್ಮ, ಸರಳಮ್ಮ ಎಂಬ ಎಂಟು ಮಕ್ಕಳಾದರು. 1966ರಲ್ಲಿ ಶ್ರೀಮತಿ ಕಾಂತಮ್ಮನವರು ಕಾಲವಾದರು. ಶ್ರೀ ಧರಣೇಂದ್ರಯ್ಯನವರು ಏಕಾಂಗಿಯಾಗಬೇಕಾಯಿತು.

ಶ್ರೀ ಧರಣೇಂದ್ರಯ್ಯನವರು ಉದಾರಚಿತ್ತರು. ಬಾಹುಬಲಿ ಆಶ್ರಮ, ಹುಂಚ, ಕಾರ್ಕಳ ಈ ಕ್ಷೇತ್ರಗಳಲ್ಲಿ ಧಾರ್ಮಿಕ ಶಿಕ್ಷಣಪಡೆಯುವ ವಿದ್ಯಾರ್ಥಿಗಳ ಊಟೋಪಚಾರಕ್ಕೆ ಪ್ರತಿವರ್ಷವೂ ಸಹಾಯ ಮಾಡುತ್ತಿರುವರು. ಜೈನ ಸಾಹಿತ್ಯ ಪ್ರಕಾಶನಕ್ಕೂ ಆಗಾಗ ಹಣವನ್ನು ನೀಡುತ್ತಿರುವರು. ಬಡವಿದ್ಯಾರ್ಥಿಗಳನ್ನು ಕಂಡು ಸಹಾನುಭೂತಿ ತೋರಿಸುವರು. ಇವರು ಜೈನಧರ್ಮವನ್ನು ಗ್ರಹಿಸಿರುವರು, ಅಂತೆ ಮಾನವಧರ್ಮವನ್ನೂ ಗ್ರಹಿಸಿರುವರು.

ಜೈನಧರ್ಮ ಪ್ರಭಾವನಾಂಗಗಳಲ್ಲಿ ಜಿನಾಲಯಗಳ ಪಾತ್ರ ಹಿರಿದು. ಇಂಥ ಜಿನಾಲಯಗಳನ್ನು ಅಭಿನವಸಮವಸರಣಗಳಂತೆ ರೂಪಿಸಿ ಶುಭ್ರವಾಗಿಟ್ಟುಕೊಂಡು ಧಾರ್ಮಿಕ ವಾತಾವರಣವನ್ನು ನಿರ್ಮಿಸುವ ಪುರೋಹಿತರಲ್ಲಿ ಶ್ರೀ ಧರಣೇಂದ್ರಯ್ಯನವರು ಅಗ್ರಗಣ್ಯರಾಗಿರುವರು. ಇಂತಹ ಪುರೋಹಿತರನ್ನು ಜೈನಸಮಾಜ ಸನ್ಮಾನಿಸಿ ಸಮಾಜದ ಹಿರಿಮೆಯನ್ನು ಹೆಚ್ಚಿಸಿಕೊಳ್ಳಬೇಕು.

ರಾಮಚಂದ್ರ ಸ್ಯಾದ್ವಾದಿ, ತುಮಕೂರು

ಸಮ್ಯಕ್ತ್ವವೇ ಸಾಕಾರಗೊಂಡಂಥ ವಿನಯ ಮೂರ್ತಿ ಶ್ರೀ ರಾಮಚಂದ್ರ ಸ್ಯಾದ್ವಾದಿಗಳು. ಇವರ ಕಣ್ಣು ಜಿನಬಿಂಬದರ್ಶನಕ್ಕೆ ಹಾತೊರೆದರೆ, ಇವರ ಕಿವಿ ಜಿನನಾಮವನ್ನು ಆಲಿಸಲು ಕಾತರಗೊಳ್ಳುವುದು. ಇವರ ನಾಲಿಗೆ ಜಿನನಾಮಾಮೃತದಲ್ಲಿ ಸದಾ ಒದ್ದೆಯಾಗಿರುವುದು. ಇವರ ಅಂತರಂಗ ಸಮವಸರಣದ ಆಡುಂಬೊಲವಾಗಿದೆ. ಜಿನನಾಮವನ್ನು ಬಿತ್ತಲು ಇವರು ಎಷ್ಟು ದೂರ ಬೇಕಾದರೂ ನಡೆಯುವರು. ಜಿನ ಮಹಿಮೆಯಲ್ಲಿ ಮೈಮರೆಯಲು ಯಾವ ಊರಿಗೆ ಬೇಕಾದರೂ ಹೋಗಲು ಸಿದ್ಧ. ಸದಾ ಪಂಚನಮಸ್ಕಾರವನ್ನು ಇವರು ಜಪಿಸುವರು. ಹೆಚ್ಚೇನು, ಪಂಚನಮಸ್ಕಾರವೇ ಇವರ ಶ್ವಾಸೋಚ್ಛ್ವಾಸವೆಂದರೆ ಅತಿಶಯೋಕ್ತಿಯಾಗದು. ತುಮಕೂರು ನಗರದ ಜೈನರ ಮನೆಮನೆಗೂ ಹೋಗಿ ಇವರು ಜೈನಸಂಸ್ಕಾರವನ್ನು ಸುಸ್ಥಿರಗೊಳಿಸಿರುವರು. ಅಹಿಂಸಾಧರ್ಮವನ್ನು ಸುತ್ತಮುತ್ತ ಹರಡಿರುವರು. ಸ್ಯಾದ್ವಾದವನ್ನು ಎಲ್ಲೆಡೆಯೂ ಬೀರಿರುವರು. ಪ್ರಕಾಂಡ ವಿದ್ವಾಂಸರಾದ ಶ್ರೀ ಪಾರ್ಶ್ವನಾಥ ವರ್ಧಮಾನಶಾಸ್ತ್ರಿಗಳು 1953ರಲ್ಲಿ ಶ್ರವಣಬೆಳಗುಳದ ಮಹಾಮಸ್ತಕಾಭಿಷೇಕದಲ್ಲಿ ರಾಮಚಂದ್ರಯ್ಯ ನವರಿಗೆ 'ಸ್ಯಾದ್ವಾದಿ' ಎಂಬ ಬಿರುದನ್ನು ದಯಪಾಲಿಸಿರುವರು. 1969ರಲ್ಲಿ ತುಮಕೂರಿನ ಜೈನಸಮಾಜ ಇವರ ಧಾರ್ಮಿಕ ಸೇವೆಯನ್ನು ಮೆಚ್ಚಿ ಸುವರ್ಣಪದಕ ವನ್ನು ಇವರಿಗೆ ಅರ್ಪಿಸಿತು. ಇವರು ಹುಟ್ಟಿನಿಂದ ಜೈನರಲ್ಲವಾದರೂ ಸಂಸ್ಕಾರ ದಿಂದ ಜೈನರಾಗಿರುವರು. ಎಷ್ಟೋ ಜನ ತಿಳಿಗೇಡಿಗಳು ಜೈನರಾಗಿದ್ದೂ ಜೈನತತ್ವ ಮರೆಯುತ್ತಿರುವಾಗ ರಾಮಚಂದ್ರಯ್ಯನವರು ಕಾಲಲಬ್ಧಿ ದೊರೆತು ಜೈನರಿಗಿಂತಲೂ ಜೈನರಾಗಿರುವರು!

ಗುಬ್ಬಿ ತಾಲ್ಲೂಕು ಬಿದರೆಯಲ್ಲಿ ಚಿಕ್ಕಣ್ಣಸೆಟ್ಟಿ ಮತ್ತು ಪುಟ್ಟಲಕ್ಷ್ಮಮ್ಮ ಎಂಬ ದಂಪತಿಗಳಿದ್ದರು. ಈ ದಂಪತಿಗಳ ಪ್ರೇಮಾಮೃತದ ನವನೀತವಾಗಿ ರಾಮ ಚಂದ್ರಯ್ಯನವರು 16-6-1931ರಲ್ಲಿ ಅವತರಿಸಿದರು. ಪಿ.ಯು.ಸಿ. ತನಕ ಅಭ್ಯಾಸ ಮಾಡಿ ಉಪಾಧ್ಯಾಯ ವೃತ್ತಿಗೆ ಬಂದರು. ಹಿಂದಿಯನ್ನು ಆಳವಾಗಿ ಅಭ್ಯಾಸ ಮಾಡಿರುವರು. ಜೈನಾಗಮಗಳೆಂದರೆ ಇವರಿಗೆ ಪಂಚಪ್ರಾಣ. ಹಿಂದಿನ ಭವದಲ್ಲಿ ಇವರು ಸಮವಸರಣದಲ್ಲಿದ್ದಿರಬೇಕು. ಮುಂದಿನ ಭವದಲ್ಲೂ ಇವರು ಸಮವಸರಣ ವನ್ನು ಕಾಣುವರು. ಇವರು ಇದ್ದಕಡೆ ಧರ್ಮವಿರುವುದು. ಪ್ರತಿ ತಿಂಗಳು ಆಸ್ಪತ್ರೆಯ ರೋಗಿಗಳಿಗೆ ಹಣ್ಣುಹಂಪಲು ಹಂಚುವಂತೆ ಇವರು ಜೈನಶ್ರೀಮಂತರನ್ನು ಪ್ರಚೋ ದಿಸಿ ಅನುಮೋದನಪುಣ್ಯವನ್ನು ರಾಶಿಹಾಕಿರುವರು.

ಪುಸ್ತಕಪ್ರಿಯರಾದ ಇವರು ಲೇಖಕರೂ ಆಗಿರುವುದು ನಮ್ಮ ಸೌಭಾಗ್ಯವೇ ಸರಿ. ಜೈನಧರ್ಮ ಪ್ರಥಮ ಪಾಠ, ವೃಷಭದೇವರ ಜೀವನದರ್ಶನ, ಮಹಾವೀರರ ಜೀವನದರ್ಶನ, ಜಿನಮುನಿವಂದನೆ, ಸುಮನಸಂಚಯ, ಆತ್ಮಧರ್ಮಾರಾಧನೆ ಮುಂತಾದ ಧಾರ್ಮಿಕ ಗ್ರಂಥಗಳನ್ನು ರಚಿಸಿ ಇವರು ಜೈನಧರ್ಮಪ್ರಭಾವನೆ ಮಾಡಿರುವರು. ಭರತಖಂಡದ ಜೈನ ಸಿದ್ಧಕ್ಷೇತ್ರಗಳನ್ನೂ ಪ್ರಸಿದ್ಧ ಕ್ಷೇತ್ರಗಳನ್ನೂ ದರ್ಶನಮಾಡಿ ಇವರು ಪುನೀತರಾಗಿರುವರು.

ವಿವಿಧ ಸಿದ್ಧಿಗಳ ನೆರಹಿಕೊಂಡು ಸಂಸಿದ್ಧಿ ।
ಯುವತಿಯ ಹಸೆನಿಲ್ವ ನೀರಾ ॥
ಸವಿಯ ಸಾಲಿಡುವ ಸನ್ಮತಿದೋರು ಭವ್ಯಬಾಂ ।
ಧವನೆ ನಿರಂಜನಸಿದ್ಧಾ ॥

ಮನಮುಟ್ಟಿ ನೋಡುವ ಸುಖಿಗೆಡೆಬಿಡುವಿಲ್ಲ ।
ದನುಪಮ ಸುಖವೀವ ಸುಲಭಾ ॥
ಅನುದಿನ ಚಲಿಸದೆನ್ನೆದೆಯೊಳಗಿರು ಸುಖ ।
ವನಧಿ ಚಿದಂಬರಪುರುಷಾ ॥

ಮುಕ್ತಿಕಾಂತೆಯ ಮದುವೆಗೆ ಮುನ್ನ ಜಗವ ಸು ।
ಖೋಕ್ತಿಯೊಳ್ ಮನ್ನಿಪ ಸೊಬಗಾ ॥
ವ್ಯಕ್ತಮತಿಯ ತೋರು ಜಯಜಯ ಪರಮವಿ ।
ರಕ್ತಾ ನಿರಂಜನಸಿದ್ಧಾ ॥

ಎಚ್. ಎಸ್. ನಾಗಣ್ಣನವರು ಹಳೆಊರು

ಹಳೆಊರು ಕುಣಿಗಲು ತಾಲ್ಲೂಕಿನಲ್ಲಿರುವ ಗ್ರಾಮ. ತೋಟತುಡಿಕೆಗಳಿಂದ ಕೂಡಿ ಈ ಗ್ರಾಮ ನಂದನವನದ ನಡುವೆ ಇದ್ದಂತೆ ಕಂಗೊಳಿಸುವುದು. ಶಾಂತ ರಾಜಯ್ಯನವರು ಇಲ್ಲಿ ಗಣ್ಯರಾಗಿದ್ದರು. ಇವರ ಪತ್ನಿ ಪದ್ಮಮ್ಮನವರು. ಈ ದಂಪತಿ ಗಳಿಗೆ 1882ರಲ್ಲಿ ಶ್ರೀ ನಾಗಣ್ಣನವರು ಜನಿಸಿದರು. ಇವರಿಗೆ 9 ವರ್ಷ ಆಗುತ್ತಿದ್ದಂತೆ ಶಾಂತರಾಜಯ್ಯನವರು ಪರಂಧಾಮವನ್ನೈದಿದರು. ಮೊದಲೇ ಹೆದರಿದವರ ಮೇಲೆ ಹಾವು ಎಸೆದಂತೆ, ಆಸ್ತಿ ಬಗ್ಗೆ ತಕರಾರು ಪ್ರಾರಂಭವಾಯಿತು. ಈ ಗೋಳುಕರೆಯ ನಡುವೆಯೇ ನಾಗಣ್ಣನವರು ಕನ್ನಡ ಲೋಯರ್ ಸೆಕೆಂಡರಿ ಉತ್ತೀರ್ಣರಾದರು. ಆಂದಿಗೆ ಹಳ್ಳಿಗಾಡಿನ ಜನಕ್ಕೆ ಈ ಪರೀಕ್ಷೆಯೇ ಬಿ.ಎ. ಇದ್ದಂತೆ. ಇವರು ಛಲವಾದ ಗಳು. ಕಂಗೆಡದೆ ತೊಡಕುಗಳನ್ನು ನಿವಾರಿಸಿಕೊಳ್ಳಲು ಹೆಣಗಾಡಿದರು. ಹಾಗೂ ಹೀಗೂ ಕೈಗೆಬಂದುದನ್ನು ಶ್ರದ್ಧೆಯಿಂದ ರೂಢಿಸಿ ಮುಂದಕ್ಕೆಬಂದರು. ತನ್ನ ಪಾಲಿಗೆ ಬಂದ ತೋಟವನ್ನು ಆಗತೆಮಾಡಿ ಪ್ರತಿವರ್ಷ ಆರೈಕೆಮಾಡಿ, ಅದನ್ನೇ ನಂದನವನ ಮಾಡಿದರು. ನೋಡಿದವರು ಬೆರಗಾಗುವಂತೆ ಇವರ ಅಡಿಕೆ ತೋಟ ಕಂಗೊಳಿಸಿತು. ಪಾಲಿಗೆ ಬಂದುದನ್ನು ಅಚ್ಚುಕಟ್ಟುಮಾಡಿ ಅಂದಗೊಳಿಸುವುದರಲ್ಲಿ ಶ್ರಿ ನಾಗಣ್ಣ ನವರನ್ನು ಬಿಟ್ಟರಿಲ್ಲ.



ಹಳೆಊರು ನಾಗಣ್ಣನವರು

ಇವರಿಗೆ ಗುಬ್ಬಿಯ ಚಿಕ್ಕಣ್ಣಪ್ಪನವರ ಮಗಳು ಅನಂತಮ್ಮನವರೊಡನೆ ವಿವಾಹ ವಾಯಿತು. ಗಂಡ-ಹೆಂಡತಿ ಇಬ್ಬರೂ ಧಾರ್ಮಿಕ ಪ್ರವೃತ್ತಿಯ ಚೇತನರು. ಈ ದಂಪತಿಗಳಿಗೆ ಕಾಮನಬಿಲ್ಲಿನ ಸಪ್ತವರ್ಣಗಳಂತೆ ಶ್ರೀಯುತರಾದ ಶಾಂತರಾಜು, ಶ್ರೀಮತಿ ಶ್ರೀಯಾಲಮ್ಮ, ಪಾಯಮ್ಮ, ಜ್ವಾಲಣ್ಣ, ಸುಪ್ರಭಾದೇವಿ, ಸ್ವಯಂ ಪ್ರಭಾದೇವಿ ಮತ್ತು ಧರಣೇಂದ್ರಕುಮಾರ್ ಈ ರೀತಿ ಏಳು ಜನ ಮಕ್ಕಳಾದರು. ಅಡಿಕೆ ತೋಟವನ್ನು ಚೆನ್ನಾಗಿ ಬೆಳೆಸಿ ಅದರಲ್ಲೇ ಜೀವತುಂಬಿದ ಶ್ರೀ ನಾಗಣ್ಣನವರು ಜೀವಂತವಾದ ತಮ್ಮ ಮಕ್ಕಳನ್ನು ಸರಿಯಾದ ದಾರಿಗೆ ಹಚ್ಚದೆ ಬಿಟ್ಟಾರೆ? ಇವರ ಮಕ್ಕಳಲ್ಲಿ ಒಬ್ಬೊಬ್ಬರೂ ಒಂದೊಂದು ರತ್ನವೆಂದೇ ಹೇಳಬೇಕು. ಯಾರ ಬಾಯಿಗೂ ಬೀಳದೆ ಒಬ್ಬೊಬ್ಬರೂ ಎಲೆಮರೆಕಾಯಾಗಿ ಏಳಿಗೆಗೆ ಬಂದಿರುವರು.

ನಾಗಣ್ಣನವರು ಜನ್ಮತಃ ಧರ್ಮಾನುರಾಗಿಗಳು. ಜೊತೆಗೆ ಇವರ ಪತ್ನಿಯ ಪ್ರೋತ್ಸಾಹ ಬೇರೆ. ಗುಬ್ಬಿ, ಮಿಡಿಗೇಸಿ, ನಿಟ್ಟೂರು ಜಿನಾಲಯಗಳಿಗೆ ಇವರು ಧಾರಾಳವಾಗಿ ಸಹಾಯ ಮಾಡಿರುವರು. 1955ರಲ್ಲಿ ಇವರು ಸಮ್ಮೇದಗಿರಿಯಾತ್ರೆ ಮಾಡಿದರು. ತಮ್ಮ 75ನೇ ವಯಸ್ಸಿನಲ್ಲೂ ಸಮ್ಮೇದಗಿರಿಯನ್ನು ಕಾಲ್ನಡಗೆಯಲ್ಲಿ ಹತ್ತಿದ್ದು ಒಂದು ಸೋಜಿಗವೇ ಸರಿ. ಇವರು 28 ವರ್ಷ ಎಡೆಬಿಡದೆ ಅನಂತನೋಂಪಿ ಯನ್ನು ಮಾಡಿ ಅನಂತಚತುಷ್ಟಯಕ್ಕೆ ಅಡಿಗಲ್ಲು ಹಾಕಿದರು. ಇವರ ಎಲ್ಲ ಧಾರ್ಮಿಕ ಚಟುವಟಿಕೆಗಳಲ್ಲೂ ಇವರ ಧರ್ಮಪತ್ನಿ ನೆರಳಾಗಿ ಅನುಸರಿಸಿರುವರು. ಗಂಡ ಪುಣ್ಯ ರಾಶಿಯನ್ನು ಬಾಚುವಾಗ ಹೆಂಡತಿಯೂ ಸಮಭಾಗಿಯಾಗಿರುವರು.

ಶ್ರೀ ನಾಗಣ್ಣನವರು ಪುಸ್ತಕಪ್ರಿಯರು. ವಿವೇಕಾಭ್ಯುದಯ ಮಾಸಿಕ ಜನನ ವಾದಂದಿನಿಂದ ಇವರು ಚಂದಾದಾರರಾಗಿದ್ದರು. ಶ್ರದ್ಧೆಯಿಂದ ಈ ಮಾಸಿಕವನ್ನು ಓದುತ್ತಿದ್ದರು. ಮಹಾಪುರಾಣವನ್ನು ದಿನವೂ ಪಾರಾಯಣ ಮಾಡಿ ಅನಂತರ ಊಟ ಮಾಡುವ ಪದ್ಧತಿ ಇಟ್ಟುಕೊಂಡಿದ್ದರು.

ಗುರುಸೇವೆಯೆಂದರೆ ಇವರಿಗೆ ಪಂಚಪ್ರಾಣ. ಒಮ್ಮೆ ಜೈಪುರದ ನಿರ್ಗ್ರಂಥ ಮುನಿಗಳು ಆಗಮಿಸಿದಾಗ ನಾಗಣ್ಣನವರು ಹಳೆಯೂರಿನಲ್ಲಿ ಅವರ ಸೇವೆ ಮಾಡಿ ದ್ದಲ್ಲದೆ ಮಂಡ್ಯದ ತನಕ ಕಾಲ್ನಡಗೆಯಲ್ಲಿ ಗುರುಗಳನ್ನು ಹಿಂಬಾಲಿಸಿದರು. ಇವರ ಗುರುಭಕ್ತಿಗೆ ಬೇರೆ ಸಾಕ್ಷಿ ಬೇಕೆ? ತಮ್ಮ ಗಮನಕ್ಕೆ ಬಿದ್ದ ಎಲ್ಲ ಸಾಧುಸಂತರ ಸೇವೆಯನ್ನೂ ಶ್ರದ್ಧೆಯಿಂದ ಇವರು ಮಾಡಿ ಧನ್ಯರಾಗಿರುವರು.

ನಾಗಣ್ಣನವರು ಶ್ರಮಜೀವಿಗಳು. ಬೆವರಿನ ಬೆಲೆ ಅರಿತವರು. ಮುಂಜಾನೆ ಎದ್ದು ತೋಟಕ್ಕೆ ಹೋಗಿ ಅಗತೆ ಮಾಡುತ್ತಿದ್ದರು. ಕಾಲ್ನಡಗೆಯೆಂದರೆ ಇವರಿಗೆ ಹಿಗ್ಗು. ಸ್ವಾವಲಂಬನೆಯೇ ಮಕ್ಕಳಿಗೆ ಇವರು ಕಲಿಸಿದ ಮೊದಲನೆಯ ತತ್ವ. ಪ್ರಾಮಾಣಿಕರಾದ ಇವರನ್ನು ಊರಿನ ಜನ ತುಂಬ ಗೌರವಿಸಿದರು. ಸಾಲ ತೀರಿಸಿದ ಮೇಲೂ ತಮ್ಮ ಪತ್ರಗಳನ್ನು ನಾಗಣ್ಣನವರ ಬಳಿಯೇ ಬಿಟ್ಟು ಹೋಗುತ್ತಿದ್ದರು.

ಸಿಂಹಕ್ಕೆ ಮೃಗರಾಜ ಪಟ್ಟ ಕೊಟ್ಟವರಾರು ? ನಾಗಣ್ಣನವರು ವ್ಯಕ್ತಿತ್ವದಿಂದಲೇ ಗಣ್ಯರಾದರು. ಊರಿನ ಪಂಚಾಯಿತಿಗೆ ಇವರೇ ಪಂಚಪ್ರಾಣವಾಗಿದ್ದರು. ಸುತ್ತ ಮುತ್ತಣ ಹಳ್ಳಿಗಳ ಮೇಲೂ ಇವರ ಪ್ರಭಾವ ಬಿದ್ದಿದ್ದಿತು.

ನಾಗಣ್ಣನವರಿಗೂ ಒಂದು ನಾಗರಹಾವಿಗೂ ಮೊದಲಿಂದ ಸ್ನೇಹ. ಇವರು ತೋಟದಲ್ಲಿ ಆಯಾಸಗೊಂಡು ತೂಗಡಿಸಿದರೆ ಆ ನಾಗರಹಾವು ಬಂದು ಇವರ ತಲೆಯ ಮೇಲೆ ಹೆಡೆ ಬಿಚ್ಚಿ ಆಟವಾಡುತ್ತಿತ್ತು. ಅದಕ್ಕೆ ನಾಗಣ್ಣನವರು ಧರ್ಮ ಬೋಧನೆ ಮಾಡುತ್ತಿದ್ದರು. ಕೊನೆಗೆ ಅದು ಇವರ ಮನೆಯವರಲ್ಲಿ ತಾನೂ ಒಂದಾಗಿ ಬಾಳಿತು. ನಾಗಣ್ಣನವರ ಕಿರಿಯ ಮಗ ಧರಣೇಂದ್ರ ತೊಟ್ಟಿಲ ಮಗುವಾಗಿದ್ದಾಗ ಈ ಹಾವು ಹೆಡೆಬಿಚ್ಚಿ ಮಗುವಿಗೆ ಪ್ರಭಾವಳಿಯಾಗಿ ಎಲ್ಲರನ್ನೂ ಗಾಬರಿಗೊಳಿಸಿತ್ತು. ಪಂಚನಮಸ್ಕಾರಪ್ರಿಯವಾದ ನಾಗರಹಾವಿಗೆ ನಾಗಣ್ಣನವರು ಹಾಲು-ತುಪ್ಪ ಹಾಕುವುದರ ಜೊತೆಗೆ ಜಿನಧರ್ಮದ ಮಹಿಮೆಯನ್ನೂ ತಿಳಿಹೇಳಿ ಬೆಳೆಸಿದರು. 1959ರಲ್ಲಿ ಇವರು ಸ್ವರ್ಗಸ್ಥರಾದರು. ಅಂದಿನಿಂದ ನಾಗರಹಾವೂ ಮಾಯವಾಯಿತು ! ನಾಗಣ್ಣನವರ ಬಳಗವೆಲ್ಲ ಸೋಜಿಗಗೊಂಡಿತು. ಯಾರೇ ಇರಲಿ ಯಾರೇ ಹೋಗಲಿ, ಮಕ್ಕಳಿಗೆಲ್ಲ ಇವರು ಸ್ವಂತ ಕಾಲಲ್ಲಿ ನಿಲ್ಲುವುದನ್ನು ಕಲಿಸಿಕೊಟ್ಟಿದ್ದರು.

ಪಡಿಸಣಗೊಡುತುಂಬರಂತೆ ಲೋಕಕೆ ಸುಖ |
ಗೊಡುತತಿಸುಖವ ಭೋಗಿಸುವ ||
ಕಡುಸುಖಿ ನನ್ನೆದೆಯೊಳು ನಿಂದು ಸುಖವ ಸಂ |
ಗಡಿಸು ಚಿದಂಬರಪುರುಷಾ ||

ಪೊಡವಿ ನರ್ತಿಸೆ ಮುಕ್ತಿಸತಿಯ ಮದುವೆಯಾಗಿ |
ಒಡಗೂಡಿ ಘನಸುಖವೆಂಬ ||
ಕಡಲೊಳೋಲಾಡುವ ಸೊಬಗ ಸತ್ಕಾವ್ಯವ |
ನಡೆಸು ನಿರಂಜನಸಿದ್ಧಾ ||

ಎಸ್. ಸಿ. ಬೊಮ್ಮಣ್ಣಯ್ಯ ಗುಬ್ಬಿ

ಪಂಚಾಣುವ್ರತಗಳೇ ಇವರ ಸರ್ವಸ್ವವಾಗಿವೆ. ದೇವರ ಮುಂದೆ ಗಂಟೆಗಟ್ಟಲೆ ಕುಳಿತು ಆನಂದಾಶ್ರುವನ್ನು ಬೊಮ್ಮಣ್ಣಯ್ಯನವರು ಸುರಿಸುವರು. ಕಣ್ಣುಗಳು ದೇವರ ದರ್ಶನಕ್ಕಾಗಿ ಮೀಸಲು, ಕಿವಿಗಳು ದೇವರನಾಮವನ್ನು ಕೇಳಲು ಮೀಸಲು. ಇವರ ಮನಸ್ಸು ಜಿನೇಂದ್ರನನ್ನು ಸ್ಥಾಪಿಸಿಕೊಂಡಾಗ ಇವರು ಎಲ್ಲಿದ್ದರೂ ಸಮವಸರಣದಲ್ಲೇ ಇರುವಂಥ ಭವ್ಯಪರಿಣಾಮ. ದೇವತಾಕಾರ್ಯಗಳಿಗೆ ಮಾತ್ರ ಇವರು ಉದಾರಿಯಾಗಿ ಹಣ ಖರ್ಚುಮಾಡುವರು. ಏಳೆಂಟು ಬಾರಿ ಸಮ್ಮೇದಗಿರಿಗೆ ಹೋಗಿ ತೀರ್ಥಂಕರರ ಪಾದಮೂಲದಲ್ಲಿ ಕುಳಿತು ಇವರು ರೋಮಾಂಚನಗೊಂಡಿರುವರು. ಸಂಸಾರದಲ್ಲಿದ್ದುಕೊಂಡೇ ಸನ್ಯಾಸಿಯಂತೆ ವ್ರತನಿಯಮಗಳನ್ನು ಪಾಲಿಸಿ ಪಾವನರಾಗಿರುವರು. ಸಂಪಿಗೆಯಲ್ಲಿ ಹಾಳಾಗುತ್ತಿದ್ದ ಜಿನಾಲಯವನ್ನು ಕಂಡು ಇವರು ಅಲ್ಲಿಯ ಜಿನಬಿಂಬಗಳನ್ನು ಗುಬ್ಬಿಗೆ ಸಾಗಿಸಿಕೊಂಡು ಬರಲು ತಮ್ಮ ಅಣ್ಣಂದಿರಾದ ಮಿಡಿಗೇಸಣ್ಣನವರಿಗೆ ಬಲಭುಜವಾಗಿ ದುಡಿದರು. ಗುಬ್ಬಿಯಲ್ಲೇ ಜಿನಾಲಯ ನಿರ್ಮಿಸಿ ಸಂಪಿಗೆಯ ಜಿನಮೂರ್ತಿಯನ್ನು ಇಲ್ಲಿ ಸ್ಥಾಪಿಸಿದರು. 1968ರಲ್ಲಿ ಬಾಹುಬಲಿ ಮೂರ್ತಿಯ ಸ್ಥಾಪನೆಯಾಗಿರುವುದರಿಂದ ಇವರ ಪರಿಶ್ರಮದಿಂದ ಇಂದು ಗುಬ್ಬಿಯು ಒಂದು ಅತಿಶಯಕ್ಷೇತ್ರವಾಗಿದೆ.

ಗುಬ್ಬಿಯಲ್ಲಿ ಮಿಡಿಗೇಸಿ ವಂಶದ ಚಿಕ್ಕಣ್ಣಪ್ಪನವರು ಈ ಶತಮಾನದ ಪ್ರಾರಂಭದಲ್ಲಿದ್ದರು. ಇವರ ಮಡದಿ ಜ್ವಾಲಮ್ಮ. ಈ ದಂಪತಿಗಳಿಗೆ ಮಿಡಿಗೇಸಣ್ಣ, ಬೊಮ್ಮಣ್ಣಯ್ಯ, ನಾಭಿರಾಜಯ್ಯ, ಜ್ವಾಲಣ್ಣ ಎಂಬ ಪುತ್ರರೂ ಜ್ವಾಲಮ್ಮ, ಅನಂತಮ್ಮ, ಅಕ್ಕಯ್ಯಮ್ಮ ಮತ್ತು ರಾಜಮ್ಮ ಎಂಬ ಪುತ್ರಿಯರೂ ಜನಿಸಿದರು. ಈಗ ಬೊಮ್ಮಣ್ಣಯ್ಯನವರಿಗೆ ಎಪ್ಪತ್ತರ ಮೇಲೆ ವಯಸ್ಸಾಗಿದೆ. ಇವರು ಮಾಧ್ಯಮಿಕ ವಿದ್ಯಾಭ್ಯಾಸವನ್ನು ಮಾತ್ರ ಪೂರೈಸಿರುವರು. ಅನಂತರ ವ್ಯಾಪಾರಕ್ಕೆ ಪ್ರಾರಂಭಿಸಿದರು. 1954–55ರಲ್ಲಿ ಇವರು ಗುಬ್ಬಿಯ ನಗರಸಭೆಯ ಅಧ್ಯಕ್ಷರಾಗಿದ್ದರು. ಇವರ ಜನಾನುರಾಗಕ್ಕೆ ಇದು ಸಾಕ್ಷಿಯಾಗಿದೆ.

ಸಾಮಾನ್ಯವಾಗಿ ಇಪ್ಪತ್ತನೆಯ ಶತಮಾನದಲ್ಲಿ ಕಾಣಿಸಿಕೊಂಡ ಎಲ್ಲ ದಿಗಂಬರ ಮುನಿಗಳ ದರ್ಶನವನ್ನೂ ಇವರು ಮಾಡಿರುವರು. ಪೂಜ್ಯ ಸಿದ್ಧಸಾಗರರನ್ನು ತುಮಕೂರಿನಿಂದ ಮೂಡುಬಿದರೆಯ ತನಕ ಕರೆದುಕೊಂಡು ಹೋಗಿ ಸಿದ್ಧಾಂತದರ್ಶನ ಮಾಡಿಸಿರುವರು. ಶ್ರಾವಕನ ಎರಡನೆಯ ನೆಲೆಯಲ್ಲಿರುವ ಬೊಮ್ಮಣ್ಣಯ್ಯನವರು ಸದಾಚಾರಸಂಪನ್ನರಾಗಿ ಶ್ರಾವಕರತ್ನರೆನಿಸಿರುವರು. ಬಾಳಿನುದ್ದಕ್ಕೂ ರಾತ್ರಿ ನೀರನ್ನು ಬಾಯಿಗೆ ಹಾಕದ ವ್ರತ ಧರಿಸಿರುವ ಇವರು ಅಷ್ಟಮಿ, ಚತುರ್ದಶಿ,

ಉಪವಾಸವನ್ನೂ ಮಾಡುತ್ತಿರುವರು. ಮುಂದೆ ಇಂಥ ನಿಷ್ಠಾವಂತರು ಸಿಗುವುದೇ ದುರ್ಲಭವಾಗುವ ಸೂಚನೆಗಳು ಕಾಣುತ್ತವೆ.

ಇವರ ಪತ್ನಿ ಅಕ್ಕಯ್ಯಮ್ಮನವರೂ ಪತಿಯಂತೆ ವ್ರತನಿಯಮಗಳನ್ನು ಪರಿಪಾಲಿಸುತ್ತಿರುವರು. ಇವರಿಬ್ಬರ ದಾಂಪತ್ಯ ಆದರ್ಶಮಯವಾದುದು. ಇಹಪರವೆರಡರಲ್ಲೂ ಭಾಗ್ಯವಂತರಾದ ಇವರಿಗೆ ಜೀವಂಧರಕುಮಾರ್, ವಿಜಯಕುಮಾರ್, ಸುಮತಿಕುಮಾರ್, ವಿಮಲಕುಮಾರ್, ಶ್ರೇಯಾಂಸಕುಮಾರ್, ಸನತ್ಕುಮಾರ್, ಅಜಿತ್‌ಕುಮಾರ್, ವೀರೇಂದ್ರಕುಮಾರ್ ಮತ್ತು ಚಂಪಾವತಿ (ಜ್ವಾಲಮ್ಮ) ಈ ರೀತಿ ನವರತ್ನಗಳು ಜನಿಸಿವೆ.

ಬೊಮ್ಮಣ್ಣಯ್ಯನವರು ಮಿಡಿಗೇಸಿ ಜಿನಾಲಯಕ್ಕೆ 1001/- ರೂ. ದಾನ ಮಾಡಿರುವರು. ನಿಟ್ಟೂರು ಜಿನಾಲಯದ ಜೀರ್ಣೋದ್ಧಾರಕ್ಕೆ ನೇತಾರರಾಗಿ ದುಡಿದಿರುವರು.

ನೆನೆದವರಿಗೆ ನೆನೆದರ್ಥವ ಸಾರ್ಚುವ |
ಅನುಪಮಾನಂದಸ್ವರೂಪಾ ||
ಇನಿಸಗಲದೆ ನನ್ನ ಮನದೊಳಿರಮೃತವ |
ರ್ಥನನೆ ಚಿದಂಬರಪುರುಷಾ ||

ಮನ್ನಣೆಕಾರ ಮನೋಹರರೂಪ ಲೋ |
ಕೋನ್ನತ ಕೋಮಲಚರಿತಾ ||
ಸನ್ನುತ ಮತಿದೋರು ಶರಣಾಗು ಸೌಖ್ಯ ಸಂ |
ಪನ್ನಾ ನಿರಂಜನಸಿದ್ಧಾ ||

ಸಿ. ಆರ್. ಜಯಕುಮಾರ್, ಮಧುಗಿರಿ

ಬಾದಾಮಿ ಪುಟ್ಟಪ್ಪನವರು ಒಂದು ಶತಮಾನದ ಹಿಂದೆ ಇದ್ದವರು. ಮೊದಲು ಇವರು ಜೈನ ಶ್ರಾವಕರಾಗಿದ್ದರು. ಅನಂತರ ವೀರಶೈವ ಧರ್ಮವನ್ನು ಸ್ವೀಕರಿಸಿದರು. ಆದರೂ ಈ ಮನೆತನದವರು ಪಂಚನಮಸ್ಕಾರವನ್ನು ಮಾತ್ರ ಕೈಬಿಡಲಿಲ್ಲ. ಪುಟ್ಟಪ್ಪನವರ ಮಕ್ಕಳು ಚಂದ್ರಯ್ಯನವರು. ಇವರು ಬಾದಾಮಿಯಲ್ಲಿ ಜವಳಿ ವ್ಯಾಪಾರಿಗಳಾಗಿದ್ದರು. ಇವರ ಮಡದಿ ಸುನಂದಮ್ಮನವರು ಲಕ್ಕುಂಡಿಯವರು. ಈ ದಂಪತಿಗಳು ಜೈನ ಹಾಗೂ ಶೈವ ಎರಡೂ ಸಂಪ್ರದಾಯಗಳನ್ನು ಅನುಸರಿಸಿದರು. ಒಂದು ಕಡೆ ಪಂಚನಮಸ್ಕಾರವನ್ನೂ ಜಪಿಸುತ್ತಿದ್ದರು; ಇನ್ನೊಂದು ಕಡೆ ಲಿಂಗ ಪೂಜೆಯನ್ನೂ ಮಾಡುತ್ತಿದ್ದರು. ಶ್ರೀಗಂಧ ಮತ್ತು ವಿಭೂತಿ ಎರಡನ್ನೂ ಸಮಪಾಕ ಗೊಳಿಸಿಕೊಂಡು ಬಾಳಿದ ಈ ದಂಪತಿಗಳಿಗೆ ರತ್ನತ್ರಯ ಮೈದೋರಿದಂತೆ, ಗುರು ಲಿಂಗಜಂಗಮ ಸಾಕ್ಷಾತ್ಕಾರವಾದಂತೆ ಶ್ರೀ ಬ್ರಹ್ಮಣ್ಣ ಉರುಫ್ ತಿಮ್ಮಣ್ಣ, ಶಂಕರಪ್ಪ ಮತ್ತು ಜಯಕುಮಾರ್ ಎಂಬ ಮೂರು ಜನ ಮಕ್ಕಳಾದರು. ಇವರಲ್ಲಿ ಜಯಕುಮಾರರು 15-6-1918ರಲ್ಲಿ ಜನಿಸಿದರು.



ಸಿ. ಆರ್. ಜಯಕುಮಾರ್, ಮಧುಗಿರಿ

ಚಂದ್ರಯ್ಯನವರು ಬಾದಾಮಿಯನ್ನು ತೊರೆದು ಬೆಂಗಳೂರಿಗೆ ವಲಸೆ ಬಂದರು. ಇಲ್ಲಿಯೂ ಜವಳಿ ವ್ಯಾಪಾರ ಮಾಡುತ್ತಿದ್ದರು. ಇವರಿಗೆ ಲಿಂಗಧಾರಣೆಯಾಗಿದ್ದರೂ ಬದುಕಿರುವ ತನಕ ಇವರು ಪಂಚನಮಸ್ಕಾರವನ್ನು ಕೈಬಿಡಲಿಲ್ಲ. ಜೊತೆಗೆ ಹೊಸ ವನ್ನೂ ಕೈಬಿಡಲಿಲ್ಲ. ಶ್ರೀ ಜಯಕುಮಾರರು ಬೆಂಗಳೂರಿನಲ್ಲಿದ್ದು 1934ರಲ್ಲಿ

ಎಸ್.ಎಸ್.ಎಲ್.ಸಿ. ಮಾಡಿದರು. 1942ರಲ್ಲಿ ಹಿಂದೀ ವಿಶಾರದ ಪರೀಕ್ಷೆಯಲ್ಲೂ 1945ರಲ್ಲಿ ಹಿಂದೀ ಪ್ರವೀಣ್ ಪರೀಕ್ಷೆಯಲ್ಲೂ ಉತ್ತೀರ್ಣರಾದರು. ಈ ನಡುವೆ ಹಿಂದೀ ಪ್ರಚಾರಕರಾಗಿ ಸುಮಾರು ಒಂಬತ್ತು ವರ್ಷ ದುಡಿದರು.

ಶ್ರೀ ಜಯಕುಮಾರರಿಗೆ 1943ರಲ್ಲಿ ಸರ್ಕಾರಿಕೆಲಸ ದೊರೆಯಿತು. ಮಾಧ್ಯಮಿಕ ಶಾಲೆ ಉಪಾಧ್ಯಾಯರಾಗಿ ಚಳ್ಳಕೆರೆ ತಾಲ್ಲೂಕು ಚನ್ನಮ್ಮನಾಗತಿ ಹಳ್ಳಿಗೆ ಬಂದರು. 1951ರಲ್ಲಿ ಇವರಿಗೆ ಬಡ್ತಿ ದೊರೆತು ಚನ್ನಪಟ್ಟಣದ ಹೈಸ್ಕೂಲಿನಲ್ಲಿ ಅಧ್ಯಾಪಕರಾದರು. 1960ರಿಂದ ಮಧುಗಿರಿ ಜೂನಿಯರ್ ಕಾಲೇಜಿನಲ್ಲಿ ಅಧ್ಯಾಪಕರಾಗಿದ್ದಾರೆ.

ಜಯಕುಮಾರರೂ ಪಂಚನಮಸ್ಕಾರಪ್ರಿಯರು. ವಿದ್ಯಾರ್ಥಿಯಾಗಿದ್ದಾಗಲೇ ಇವರಿಗೆ ಜೈನಯುವಕರ ಸ್ನೇಹದೊರೆಯಿತು. ಜಯಕೀರ್ತಿಮುನಿ ಸಂಘ ಬೆಂಗಳೂರಿಗೆ ಬಂದಾಗ ಇವರಿಗೆ ಕಾಲಲಬ್ಧಿ ಲಭಿಸಿದಂತಾಯಿತು. ದಿಗಂಬರ ದರ್ಶನವಾಗುತ್ತಿದ್ದಂತೆ ಇವರ ಸಮ್ಯಕ್ತ್ವಸಂಪುಟ ಅರಳಿತು. ಮುನಿಗಳ ಸನ್ನಿಧಿಯಲ್ಲಿ ಇವರು ಮತ್ತೊಮ್ಮೆ ಪಂಚನಮಸ್ಕಾರವನ್ನು ಪಡೆದುಕೊಂಡರು. ಆದರೆ ಅಧಿಕೃತವಾಗಿ ಇವರು ಶ್ರಾವಕ ವ್ರತವನ್ನು ಕುಟುಂಬ ಸಮೇತ ಸ್ವೀಕರಿಸಿದ್ದು 1963ರಲ್ಲಿ. ಹುಂಚ ಕ್ಷೇತ್ರದಲ್ಲಿ ದೇವೇಂದ್ರಕೀರ್ತಿಗಳ ದಿವ್ಯಸನ್ನಿಧಿಯಲ್ಲಿ ಪದ್ಮಾವತೀ ಯಕ್ಷಿಯ ಪಾದಮೂಲದಲ್ಲಿ ಇವರು ಮತ್ತೊಮ್ಮೆ ಜೈನರಾದರು.

ಶ್ರೀ ಜಯಕುಮಾರರು ರಾಣಿಬೆನ್ನೂರು ತಾಲ್ಲೂಕು ನಂದಿಗುಡಿಯ ಪುಟ್ಟಪ್ಪನವರ ಮಗಳು ಶ್ರೀಮತಿ ಶಾಂತಮ್ಮನನ್ನು ಮದುವೆಯಾದರು. ಪತಿಯ ಜೊತೆಯಾಗಿ ಶ್ರೀಮತಿ ಶಾಂತಮ್ಮನವರು ಜೈನ ಶ್ರಾವಕಿಯಾದರು. ಈ ಪುಣ್ಯದಂಪತಿಗಳಿಗೆ ಲೋಕತ್ರಯದಂತೆ ಶ್ರೀಮತಿ ಜಯರತ್ನ, ಶ್ರೀಯುತ ಶ್ರೀಧರ ಮತ್ತು ರಾಜೇಂದ್ರಕುಮಾರ ಎಂಬ ಮಕ್ಕಳಾದರು. ಶ್ರೀಮತಿ ಜಯರತ್ನರವರಿಗೆ ಜೈನ ಸಮಾಜದಲ್ಲಿ ಗಂಡು ದೊರೆಯದೇ ಹೋಯಿತು. ಇವರನ್ನು ಅನಿವಾರ್ಯವಾಗಿ ವೀರಶೈವ ಯುವಕನಿಗೇ ಕೊಡಬೇಕಾಯಿತು. ಆದರೂ ಶ್ರೀಮತಿ ಜಯರತ್ನರವರು ಪಂಚನಮಸ್ಕಾರವನ್ನು ಜಪಿಸುತ್ತ ಲಿಂಗಧಾರಣೆ ಮಾಡಿಸಿಕೊಂಡು ವೀರಶೈವ ಪತಿಯನ್ನು ಹಿಂಬಾಲಿಸಿದರು. ಇವರ ಪತಿ ಶಂಕರಪ್ಪನವರು ಉದಾರಚಿತ್ತರು. ಪತ್ನಿಯ ಪಂಚನಮಸ್ಕಾರಜಪಕ್ಕೆ ಇಂದೂ ಅಡ್ಡಿಪಡಿಸುತ್ತಿಲ್ಲ.

ಶ್ರೀ ಜಯಕುಮಾರರು ಸಾತ್ವಿಕಮೂರ್ತಿಗಳು, ಸದ್ಭಕ್ತರು. ಪಂಚನಮಸ್ಕಾರ ಜಪಿಸುತ್ತ ಪುಲಕಗೊಳ್ಳುವರು. ಪಂಚನಮಸ್ಕಾರವೆಂಬ ಚಿಂತಾಮಣಿ ಹೃದಯದಲ್ಲಿರುವಾಗ ಭಯವೇಕೆ ಎನ್ನುವರು. ಎಲ್ಲಿ ಪಂಚಕಲ್ಯಾಣಗಳಾದರೂ, ಎಲ್ಲಿ ಜಿನೋತ್ಸವಗಳಾದರೂ ಜಯಕುಮಾರರು ತಪ್ಪದೆ ಹೋಗುವರು. ಧಾರ್ಮಿಕೋತ್ಸಾಹದಿಂದ ಹಿಗ್ಗುವರು. ಇವರು ಜೀವಂತ ಧರ್ಮಪ್ರಭಾವನಾಮೂರ್ತಿಯಾಗಿರುವರು; ಸಾಕಾರಗೊಂಡ ಸಮ್ಯಕ್ತ್ವವಾಗಿರುವರು; ಉಸಿರಾಡುವ ಪಂಚನಮಸ್ಕಾರವಾಗಿರುವರು.

ಎಚ್. ಎನ್. ರಾಜೇಂದ್ರಕುಮಾರ್, ಶ್ರವಣಬೆಳಗುಳ

ಶ್ರವಣಬೆಳಗುಳ ಜೈನಧರ್ಮದ ಕೇಂದ್ರ. ನಿತ್ಯವೂ ಇಲ್ಲಿಗೆ ಶ್ರೀಮಂತರೂ, ಧೀಮಂತರೂ, ಮಂತ್ರಿಗಳೂ, ಮಾನ್ಯರೂ ಬರುತ್ತಲೇ ಇರುತ್ತಾರೆ. ಯಾರೇ ಬರಲಿ ಅವರೊಡನೆ ಧೈರ್ಯವಾಗಿ ಮಾತನಾಡುವ ಏಕೈಕ ವ್ಯಕ್ತಿಯೆಂದರೆ ಶ್ರವಣಬೆಳಗುಳದ ಎಚ್. ಎನ್. ರಾಜೇಂದ್ರಕುಮಾರ್‌ರವರೊಬ್ಬರು. ಇವರು ಹೈಸ್ಕೂಲ್ ವಿದ್ಯಾಭ್ಯಾಸವನ್ನೂ ಪೂರೈಸಿಲ್ಲ. ವ್ಯವಹಾರ ಚಟುವಟಿಕೆ ಹಾಗೂ ಜ್ಞಾನದಿಂದ ತಮ್ಮ ವ್ಯಕ್ತಿತ್ವವನ್ನು ಬೆಳೆಸಿಕೊಂಡು ಪುರಸಭೆಯ ಸದಸ್ಯರಾಗಿ ತಮ್ಮ 20ನೆಯ ವಯಸ್ಸಿನಲ್ಲೇ ಎಲ್ಲರ ಗಮನವನ್ನು ಸೆಳೆದುದು ಇವರ ಒಂದು ಸಾಹಸವೇ ಸರಿ. 12 ವರ್ಷ ಎಡಬಿಡದೆ ಮತ್ತೆ ಮತ್ತೆ ಇವರು ಚುನಾಯಿತರಾದರು. 1969ರಲ್ಲಿ ಇವರು ಪುರಸಭಾಧ್ಯಕ್ಷರಾದರು. ಊರ ನೀರಿನ ಬರವನ್ನು ನೀಗಲು ಸಹಪಾಠಿಗಳ ಸಹಕಾರದಿಂದ ಕ್ಷೇತ್ರದ ಪುರಸಭೆಯ ಕಾರ್ಯಚಟುವಟಿಕೆಗೆ ಎಲ್ಲರ ಗಮನ ಸೆಳೆಯುವಂತೆ ಇವರು ಮಾಸ್ಟರ್ ಪ್ಲಾನನ್ನು ಹಾಕಿದರು. ಸರ್ಕಾರದಿಂದ ವಿಶೇಷ ಸಹಾಯಪಡೆದು ಪುರಸಭೆಯ ಆದಾಯವನ್ನು ಹೆಚ್ಚಲು ಶ್ರಮಿಸಿದರು. ಪಾದರಸದಂಥ ಇವರ ಚಟುವಟಿಕೆಯನ್ನು ಕಂಡು ಶ್ರವಣಬೆಳಗುಳದ ಪ್ರತಿಯೊಂದು ಸಮಿತಿಯಲ್ಲೂ ಇವರಿಗೆ ಅನಿವಾರ್ಯವಾಗಿ ಸ್ಥಾನ ಮೀಸಲಾಯಿತು. 1967ರ ಮಸ್ತಕಾಭಿಷೇಕ ಜನರಲ್ ಕಮಿಟಿ, ಶ್ರೀ ದಿಗಂಬರ ಜೈನ ಮುಜರಾಯ್ ಇನ್‌ಸ್ಟಿಟ್ಯೂಟಿನ ಉಪಸಮಿತಿ, ಶ್ರೀ ಗೋಮಟೇಶ್ವರ ಎಜುಕೇಷನ್ ಕಮಿಟಿ—ಇಲ್ಲೆಲ್ಲ ಒಂದಲ್ಲ ಒಂದು ಸ್ಥಾನ ಶ್ರೀ ರಾಜೇಂದ್ರಕುಮಾರರ ಕೊರಳಿಗೆ ಬಿದ್ದಿದೆ. ಈಗಿನ ಶ್ರೀ ಶ್ರೀ ಚಾರುಕೀರ್ತಿ ಪಂಡಿತಾಚಾರ್ಯರು ಪೀಠವೇರಿದಾಗ ಇವರು ತ್ರಿಕರಣಪೂರ್ವಕ ಸೇವೆಯನ್ನೆಸಗಿ ಶ್ರೀಗಳವರಿಂದ ಆಶೀರ್ವಾದಪತ್ರವನ್ನು 1970ರಲ್ಲಿ ಪಡೆದಿರುವರು. ಜೈನರಾದ ಇವರು ಸಾರ್ವಜನಿಕ ದೃಷ್ಟಿಯನ್ನು ತಳೆದು ಶ್ರವಣಬೆಳಗುಳದ ಗಣೇಶೋತ್ಸವಕ್ಕಾಗಿ ಕಲ್ಯಾಣಮಂಟಪವನ್ನು ನಿರ್ಮಿಸಲು ಒಂದು ಯೋಜನೆಯನ್ನು ಹಾಕಿದರು. ಪರಮತಸಹಿಷ್ಣುತೆಗೆ ಇವರು ಅಸ್ತಿವಾರ ಹಾಕಿದರು. ಜೈನೇತರರ ಪ್ರೀತಿವಿಶ್ವಾಸಗಳಿಗೆ ಪಾತ್ರರಾಗಿರುವುದು—ಇವರ ಅದೃಷ್ಟವೇ ಸರಿ.

ಇವರು 1936ರಲ್ಲಿ ಸಾಧಾರಣವಾದ ಕುಟುಂಬದಲ್ಲಿ ಜನಿಸಿದರು. ಇವರ ತಂದೆ ಹೊಸಮನೆ ನಾಗಪ್ಪನವರು. ಇವರ ತಾಯಿ ಚಾಮರಾಜನಗರದ ದಿ|| ಆದಿರಾಜಯ್ಯನವರ ಮಗಳು ನಾಗಮ್ಮ. ನಾಗಪ್ಪನವರಿಗೆ ಪಾರ್ಶ್ವನಾಥ, ರಾಜೇಂದ್ರಕುಮಾರ್, ಸುರೇಂದ್ರರಾಜ್ ಈ ರೀತಿ ಮೂರು ಜನರು ಗಂಡುಮಕ್ಕಳು. ರಾಜೇಂದ್ರಕುಮಾರರ ಮನೆಯವರು ಪ್ರಾರಂಭದಲ್ಲಿ ಹಿತ್ತಾಳೆ ವ್ಯಾಪಾರವನ್ನೂ

ಆನಂತರ ಕಿರಾಣಿ ವ್ಯಾಪಾರವನ್ನು ಕೈಗೊಂಡರು. 1950ರಲ್ಲಿ ಇವರಿಗೆ ಹರಪನಹಳ್ಳಿಯ ಇಜಾರಿ ಮನೆತನದ ವಿಶಾಲಾಕ್ಷಿಯವರೊಡನೆ ವಿವಾಹವಾಯಿತು. ಇವರಿಗೆ ಸ್ವರ್ಣಲತಾ ಎಂಬ ಹೆಣ್ಣುಮಗುವಾಯಿತು. ಕೆಲವು ಕಾಲದನಂತರ ವಿಶಾಲಾಕ್ಷಿ ಕಾಲವಾದರು. ವರ್ಷಾನುಗಟ್ಟಲೆ ಹಾಸಿಗೆಹಿಡಿದು ತಮ್ಮ ಹೆಂಡತಿ ಮಲಗಿದಾಗ ಇವರು ಕಂಗೆಡಲಿಲ್ಲ. ತಾಳ್ಮೆಯಿಂದ ಕಾಲಯಾಪನೆ ಮಾಡಿದರು. 1965ರಲ್ಲಿ ಇವರಿಗೆ ಬೆಂಗಳೂರಿನ ಸಾಹುಕಾರ ಪದ್ಮರಾಜಯ್ಯನವರ ಮಗಳು ಜ್ವಾಲಕುಮರಿಯವರೊಡನೆ ಮತ್ತೆ ಮದುವೆಯಾಯಿತು. ದಾಂಪತ್ಯ ಸುಖಮಯವಾಯಿತು. ಈ ದಂಪತಿಗಳಿಗೆ ಪದ್ಮಶ್ರೀ ಮತ್ತು ವಿಶಾಲಾಕ್ಷಿ ಎಂಬ ಇಬ್ಬರು ಪುತ್ರಿಯರು ಜನಿಸಿ, 1973ರಲ್ಲಿ ಅಪರೂಪವಾಗಿ ಚಿ|| ನಾಗಕುಮಾರಎಂಬ ಒಂದು ಗಂಡುಮಗುವಾಗಿ ಇವರ ಆಶೋತ್ತರ ನೆರವೇರಿದಂತಾಯಿತು. ರಾಜೇಂದ್ರಕುಮಾರರು ಆ ಒಟ್ಟಿನಲ್ಲಿ ನಾಲ್ಕು ಜನ ಮಕ್ಕಳ ತಂದೆಯಾಗಿರುವರು.



ಎಚ್. ಎನ್. ರಾಜೇಂದ್ರಕುಮಾರ್, ಶ್ರವಣಬೆಳಗುಳ

ರಾಜಭವನವೆಂಬ ಉಪಾಹಾರ ಮತ್ತು ಭೋಜನಗೃಹದ ಪಾಲುದಾರರಾಗಿ ದುಡಿಯುತ್ತಿರುವರು. ಈ ಪಾಲುದಾರಿಕೆಯ ವ್ಯವಹಾರ ಮತ್ತೊಬ್ಬರಿಗೆ ಆದರ್ಶವಾಗಿ ಮತ್ತು ಮಾದರಿಯಾಗಿ ನಡೆಸಿಕೊಂಡು ಹೋಗುತ್ತಿರುವರು. ಇವರ ವಿಶಾಲಭಾವನೆ ಮೆಚ್ಚತಕ್ಕದ್ದು. ಇವರು ಶ್ರೀಮಂತರಲ್ಲದಿದ್ದರೂ ಇವರ ಮನಸ್ಸು ಶ್ರೀಮಂತವಾಗಿದೆ. ಊರಿನ ಹಿತಚಿಂತನೆಯೇ ಇವರ ಉಸಿರಾಟವಾಗಿದೆ. ದೊಡ್ಡ ವಿದ್ಯಾವಂತರಲ್ಲದಿದ್ದರೂ ಇವರು ಸುಸಂಸ್ಕೃತರು, ವಿನಯಸಂಪನ್ನರು. ಪವಿತ್ರ ಕ್ಷೇತ್ರದಲ್ಲಿ ಜನಿಸಿದ ಇವರು ಪುಣ್ಯವಂತರು.

ಸಿ. ಇ. ಬ್ರಹ್ಮದೇವಯ್ಯ, ಚಾಮರಾಜನಗರ

ತೆಳ್ಳಗೆ ಬಳುಕುತ್ತ ಎತ್ತರವಾದ ದೇಹ. ಸದಾ ಮುಗುಳ್ನಗೆ ಸೂಸುವ ಮುಖ. ಆಗರ್ಭಶ್ರೀಮಂತರಾದರೂ ಸಿತ್ಯ ಹತ್ತು ಮೈಲಿ ನಡೆದ ಹೊರತು ಸಮಾಧಾನ ವಿಲ್ಲದ ಚೇತನ ಶ್ರೀ ಸಿ. ಇ. ಬ್ರಹ್ಮದೇವಯ್ಯನವರದು. ಪೆಗ್ಗಿಯಿಲ್ಲ, ಪೆಡಸಿಲ್ಲ. ಸರಳವಾದ ಬಾಳ್ವೆ. ಮಕ್ಕಳಿಂದ ಮುದುಕರ ತನಕ ಎಲ್ಲರೊಡನೆ ಮಿಳಿತರಾಗಿ ಸಹಕಾರದ ಸಾಕಾರ ಮೂರ್ತಿಯಾಗಿ ಇವರು ವಿರಾಜಿಸುತ್ತಿರುವರು. ಎಲ್ಲರೂ ಇವರನ್ನು ಸಾಹುಕಾರರೆಂದು ಕರೆದರೂ ಎಲ್ಲೂ ಇವರು ಬಿಗುಮಾನವನ್ನಾಗಲಿ, ಬಿಂಕವನ್ನಾಗಲಿ ತೋರಿಸಿದುದನ್ನು ಕಾಣೆ.



ಸಿ. ಇ. ಬ್ರಹ್ಮದೇವಯ್ಯ ಮತ್ತು ಪ್ರಭಾವತಮ್ಮ

ಚಾಮರಾಜನಗರದ ಇಜ್ಜಪ್ಪನವರು ನುರಿತ ವ್ಯವಸಾಯಗಾರರು. ಮಲಬಾರಿನ ಪದ್ಮಾವತಮ್ಮನವರನ್ನು ಇಜ್ಜಪ್ಪನವರು ಮದುವೆಯಾದರು. ಇವರಿಗೆ ಇಬ್ಬರು ಗಂಡು ಮಕ್ಕಳೂ ನಾಲ್ಕು ಮಂದಿ ಹೆಣ್ಣುಮಕ್ಕಳೂ ಆದರು. 1902ರಲ್ಲಿ ಈ ದಂಪತಿಗಳಿಗೆ ಬ್ರಹ್ಮದೇವಯ್ಯನವರು ಜನಿಸಿದರು. ಇವರು ಲೋಯರ್ ಸೆಕೆಂಡರಿ ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ಜೈನಸಮಾಜದಲ್ಲಿ ವಿದ್ಯಾವಂತರೆನಿಸಿಕೊಂಡರು. 1923ರಲ್ಲಿ ಇಜ್ಜಪ್ಪನವರು ಸ್ವರ್ಗಸ್ಥರಾದರು. ಅನಂತರ ಬ್ರಹ್ಮದೇವಯ್ಯನವರು ಚಾಮರಾಜ ನಗರದ ಪ್ರಭಾವತಮ್ಮನವರನ್ನು ಮದುವೆಯಾದರು.

ಇವರು 1955ರ ತನಕ ವ್ಯಾಪಾರ ಮಾಡುತ್ತಿದ್ದರು. ಅನಂತರ ವ್ಯವಸಾಯ ರಂಗಕ್ಕೆ ಇಳಿದರು. ಇವರಿಗೆ ಮಕ್ಕಳಾಗಲೇ ಇಲ್ಲ. ತಮ್ಮ ಸೋದರಿಯರ ಮಕ್ಕಳನ್ನೆಲ್ಲ ಇವರು ವಿದ್ಯಾವಂತರನ್ನಾಗಿ ಮಾಡಿದರು. ಕೆಲವರನ್ನು ನುರಿತ

ವ್ಯಾಪಾರಗಾರರನ್ನಾಗಿ ಮಾಡಿದರು. ಇವರಿಂದ ಸಹಾಯ ಪಡೆದು ಏಳಿಗೆಗೆ ಬಂದ ಹತ್ತಾರು ಜನ ಇಂದು ಗಣ್ಯರಾಗಿರುವರು.

ಬ್ರಹ್ಮದೇವಯ್ಯನವರು ಪುಣ್ಯವಂತರಾಗಿರುವರು, ಜೊತೆಗೆ ಧರ್ಮಾತ್ಮರೂ ಆಗಿರುವರು. ಇವರು ಚಾಮರಾಜನಗರದ ಹೆರಿಗೆಯ ಆಸ್ಪತ್ರೆಯನ್ನು ವಿಸ್ತರಿಸಲು ಹೇರಳವಾಗಿ ಹಣ ಕೊಟ್ಟರು. 1963ರಲ್ಲಿ ಮಾನ್ಯ ಮುಖ್ಯಮಂತ್ರಿಗಳಾಗಿದ್ದ ನಿಜಲಿಂಗಪ್ಪನವರು ಇದನ್ನು ಉದ್ಘಾಟನೆ ಮಾಡಿದರು. 1949ರಲ್ಲಿ ಬ್ರಹ್ಮದೇವಯ್ಯನವರು ಮೂಡಲಮರದಲ್ಲಿ ಒಂದು ಬಾಲಕರ ಪಾಠಶಾಲೆ ಕಟ್ಟಿಸಿದರು. ಹುಂಚಕ್ಷೇತ್ರದಲ್ಲಿ ಯಾತ್ರಿಕರ ಸೌಕರ್ಯಕ್ಕಾಗಿ ಒಂದು ಕೋಣೆ ಕಟ್ಟಿಸಿರುವರು. ಬಾಹುಬಲಿ ಆಶ್ರಮಕ್ಕೆ ಧಾರಾಳವಾಗಿ ಧನಸಹಾಯ ಮಾಡಿರುವರು. ಸರಗೂರಿನಲ್ಲಿ ಇವರು ಐವತ್ತು ಸಹಸ್ರ ರೂ. ಬಾಳುವ ಕಲ್ಯಾಣಮಂಟಪ ಕಟ್ಟಿಸಿರುವರು. ಹರ್ವೆ, ಕೆಲಸೂರು, ಮಲೆಯೂರು, ಏಚಗಾನಹಳ್ಳಿ, ಈ ಕ್ಷೇತ್ರಗಳಲ್ಲಿರುವ ಜಿನಾಲಯಗಳ ಜೀರ್ಣೋದ್ಧಾರಕ್ಕಾಗಿ ಬ್ರಹ್ಮದೇವಯ್ಯನವರು ಉದಾರವಾಗಿ ಹಣ ಖರ್ಚು ಮಾಡಿರುವರು. ಜಿನಾಲಯಗಳ ಜೀರ್ಣೋದ್ಧಾರಕ್ಕಾಗಿ ಇವರು ಇಪ್ಪತ್ತು ಸಹಸ್ರ ರೂ.ಗಳನ್ನು ಧ್ರುವನಿಧಿಯಾಗಿ ಮೀಸಲಿಟ್ಟಿರುವರು. ತಮ್ಮ ಬಂಧುವರ್ಗದ ಹೆಣ್ಣು ಮಕ್ಕಳನ್ನು ಇವರು ಮನೆಯಲ್ಲಿ ಸಾಕಿ ಕನ್ಯಾದಾನ ಮಾಡಿ ಪುಣ್ಯಭಾಗಿಯಾಗಿರುವರು.

ಬ್ರಹ್ಮದೇವಯ್ಯನವರು ತಮ್ಮ ಮಡದಿಯೊಡನೆ ಜೈನತೀರ್ಥಕ್ಷೇತ್ರಗಳನ್ನೆಲ್ಲ ಸಂದರ್ಶಿಸಿರುವರು. 1922ರಿಂದ ಇವರು ಅನಂತವ್ರತಮಾಡಿಕೊಂಡು ಬಂದಿರುವರು. ಸಮ್ಯಕ್ತ್ವಸಂಪನ್ನರಾದ ಈ ದಂಪತಿಗಳು ವಯೋವೃದ್ಧರೂ, ಜ್ಞಾನವೃದ್ಧರೂ, ಶೀಲವೃದ್ಧರೂ ಆಗಿ ಜೈನಸಮಾಜದ ನಂದಾದೀವಿಗೆಗಳಾಗಿ ವಿರಾಜಿಸುತ್ತಿರುವರು.

1963ರಲ್ಲಿ ಬ್ರಹ್ಮದೇವಯ್ಯನವರು ಭಕ್ತಾಮರ ಸ್ತೋತ್ರವನ್ನು ಪ್ರಕಟಿಸಿ ಶಾಸ್ತ್ರದಾನ ಮಾಡಿರುವರು. ಆಹಾರಾಭಯ ಭೈಷಜ ಶಾಸ್ತ್ರದಾನದಾನವಿನೋದರಾದ ಇವರು ರಾಜಕೀಯದಲ್ಲೂ ಪಳಗಿರುವರು. 1922ರಲ್ಲಿ ನಗರಸಭೆಯ ಸದಸ್ಯರಾಗಿ ಸುಮಾರು ಹತ್ತು ವರ್ಷ ಎಡೆಬಿಡದೆ ಸೇವೆಮಾಡಿರುವರು.

ದುಡಿಮೆಯೇ ದೇವರು, ಪರೋಪಕಾರವೇ ಪುಣ್ಯಕಾರ್ಯ, ಮಿತವ್ಯಯವೇ ಮಾರ್ಗದರ್ಶನವೆಂದು ನಂಬಿರುವ ಶ್ರೀ ಸಿ. ಇ. ಬ್ರಹ್ಮದೇವಯ್ಯನವರು ಮತ್ತು ಇವರ ಸದ್ಗೃಹಿಣಿಯೂ ಅನ್ನಪೂರ್ಣೆಯೂ ಆದ ಪ್ರಭಾವತಮ್ಮನವರು ನಮ್ಮ ಸಮಾಜಕ್ಕೆ ದಾರಿದೀಪಗಳಾಗಿರುವರು.

ಸಿ. ಎಚ್. ನಾಗಣ್ಣ, ಚಾಮರಾಜನಗರ

ಪರೋಪಕಾರವೇ ತಮ್ಮ ಉಸಿರಾಟವಾಗಿ, ಸಹಕಾರವೇ ಬಾಳಿನ ಗುರಿಯಾಗುಳ್ಳ ಭವ್ಯಾತ್ಮರು ಶ್ರೀ ಸಿ. ಎಚ್. ನಾಗಣ್ಣನವರು. ತಮ್ಮ ಬಂಧುಬಳಗದಲ್ಲಿ ಯಾರು ಯಾರು ದೀನದಲಿತರಿರುವರೋ ಅವರನ್ನೆಲ್ಲ ಮೇಲೆತ್ತಲು ಇವರು ಬಾಳಿನುದ್ದಕ್ಕೂ ದುಡಿದಿರುವರು. ಹತ್ತಾರು ಜನಕ್ಕೆ ಮದುವೆಮುಂಜಿ ಮಾಡಿ ಇವರು ಗಳಿಸಿದುದನ್ನೆಲ್ಲ ಈ ರೀತಿ ಬಳಸಿರುವರು. ಜೀವದಯೆ ಜೈನಧರ್ಮ ಎಂಬ ತತ್ವವನ್ನು ಬಾಳಿನುದ್ದಕ್ಕೂ ಇವರು ಆಚರಿಸಿರುವರು. ಸನ್ಮಾರ್ಗದಲ್ಲಿ ದುಡಿಯುತ್ತಿರುವರು. ಅಷ್ಟೇ ಸನ್ಮಾರ್ಗದಲ್ಲಿ ನೆರೆಹೊರೆಯವರಿಗೆ ನೆರವಾಗುತ್ತಿರುವರು. ಇವರು ಜಿನಾಲಯಗಳನ್ನು ಕಟ್ಟಿಸಲಿಲ್ಲ, ಆದರೆ ನೆಲಕ್ಕೆ ಬಿದ್ದ ಜೈನಬಾಂಧವರನ್ನು ಮೇಲೆತ್ತಿದರು. ಇವರು ಪಂಚಕಲ್ಯಾಣಗಳನ್ನು ಮಾಡಿಸಲಿಲ್ಲ, ಆದರೆ ಮೂಲೆಗುಂಪಾಗಿದ್ದ ಪಾಮರರನ್ನು ಅಭಯ ವಚನದಿಂದ ಸಂತೈಸಿ ಸಹಾನುಭೂತಿಯನ್ನು ತೋರಿ ಸಹಕಾರನೀಡಿ ಮಾರ್ಗದರ್ಶನ ಮಾಡಿರುವರು.



ಎಚ್. ಎಸ್. ನಾಗಣ್ಣ ದಂಪತಿಗಳು

ರಾಮಸಮುದ್ರದ ಹುಚ್ಚಪ್ಪನವರು ಮತ್ತು ಚಾಮರಾಜನಗರದ ಪದ್ಮಮ್ಮನವರು ನಾಗಣ್ಣನವರ ತಂದೆತಾಯಿಗಳು. 1923ರಲ್ಲಿ ಇವರು ಜನಿಸಿದರು. ಇವರಿಗೆ ನಾಲ್ಕು ಜನ ಸೋದರಿಯರು. ಮಾಧ್ಯಮಿಕ ಶಾಲೆಯನ್ನು ಪೂರೈಸಿ ಇವರು ಹಾಸನದ ತಮ್ಮ ಭಾವಂದಿರಾದ ದೇವರಾಜಯ್ಯನವರ ಬಳಿ ಪುಸ್ತಕದ ವ್ಯಾಪಾರದ ಶಿಕ್ಷಣಪಡೆದು 1943ರಲ್ಲಿ ಚಾಮರಾಜನಗರದಲ್ಲಿ ಬ್ರಹ್ಮದೇವ ಬುಕ್ ಡಿಪೋ ಪ್ರಾರಂಭಿ

ಸಿದರು. ದಿನೇ ದಿನೇ ಇವರ ವ್ಯಾಪಾರ ವೃದ್ಧಿಯಾಯಿತು. ಚಾಮರಾಜನಗರದಲ್ಲಿ ವಿದ್ಯಾಸಂಸ್ಥೆಗಳು ಹೆಚ್ಚಿದಂತೆ ಇವರ ಗಳಿಕೆಯೂ ಹೆಚ್ಚಿತು.

1948ರಲ್ಲಿ ಇವರು ಸೆಂಕಿಘಟ್ಟದ ಜ್ವಾಲ್ನಮ್ಮನವರನ್ನು ಮದುವೆಯಾದರು. ಈ ದಂಪತಿಗಳಿಗೆ ಪದ್ಮಶ್ರೀ, ನಾಗರತ್ನರಾಜು, ಸರಸ್ವತಿ, ಬ್ರಹ್ಮೇಶ, ರತ್ನಕುಮಾರ ಮತ್ತು ಲತಾಕುಮಾರಿ ಈ ರೀತಿ ಷಡ್‌ದ್ರವ್ಯಗಳಂತೆ ಆರು ಜನ ಮಕ್ಕಳಾದರು.


ಶ್ರೀ ಸಿ. ಎಚ್. ನಾಗಣ್ಣನವರು ಬಾಹುಬಲಿ ಆಶ್ರಮಕ್ಕೆ ಧನಸಹಾಯ ಮಾಡಿರುವರು. ಚಾಮರಾಜನಗರದ ಮಹಾವೀರ ಭವನಕ್ಕೆ 1001/- ರೂ. ಕೊಟ್ಟು ದಲ್ಲದೆ ಆಣಿಕಾರ್ ಬ್ರಹ್ಮಯ್ಯನವರಿಂದ ತಮ್ಮ ವಂಶಕ್ಕೆ ಪ್ರಾಪ್ತಿಯಾಗಿದ್ದ ನಿವೇಶನ ವನ್ನೂ ಇವರು ಮಹಾವೀರ ಭವನಕ್ಕಾಗಿ ದಾನಮಾಡಿರುವರು. ಹುಂಚ, ಸಿಂಹನ ಗದ್ದೆ, ಶ್ರವಣಬೆಳಗುಳ, ಸರಗೂರು ಕ್ಷೇತ್ರಗಳಲ್ಲೂ ಏಚಗಾನಹಳ್ಳಿ ಮತ್ತು ಮಲೆಯೂರು ಜಿನಾಲಯಗಳಿಗೂ ಇವರು ಸಂದರ್ಭೋಚಿತವಾಗಿ ಸಹಾಯ ಮಾಡಿದ್ದಾರೆ. ಬಂಧುವರ್ಗದಲ್ಲಿನ ಬಡವರ ಮದುವೆ ಮುಂಜಿಗಳಿಗಾಗಿ ಇವರು ಖರ್ಚುಮಾಡಿರುವ ಹಣದಲ್ಲಿ ಮೂರುನಾಲ್ಕು ಜಿನಾಲಯಗಳನ್ನು ನಿರ್ಮಿಸ ಬಹುದಾಗಿತ್ತು. ಸಹಾಯ ಕೇಳಿದವರಿಗೆ ಇಲ್ಲವೆಂದು ಇವರಿಗೆ ಅಭ್ಯಾಸವೇ ಇಲ್ಲ. ಆಗ ಬಾ ಈಗ ಬಾ ಎಂದು ಸಹಾಯ ಕೇಳಲು ಬಂದವರನ್ನು ತಾರಾಡಿಸುವುದು ಇವರ ಜಾಯಮಾನಕ್ಕೆ ಒಗ್ಗದ ಮಾತು.

ನಾಗಣ್ಣನವರು ಅನಂತನೋಂಪಿವ್ರತ ಮಾಡಿರುವರು. ಮುನಿಗಳಿಗೆ ಆಹಾರ ದಾನ ಕೊಟ್ಟಿದ್ದಾರೆ. ಸಾಹಿತಿಗಳನ್ನು ಕಂಡು ಕರಗಿದ್ದಾರೆ. ರತ್ನಾಕರನ ಶತಕ ಸಾಹಿತ್ಯ, ಭರತೇಶವೈಭವ, ದಾನಚಿಂತಾಮಣಿ, ಚೇಳಿನಿ, ಚಕ್ರೇಶ್ವರಿ ಮುಂತಾದ ಗ್ರಂಥಗಳನ್ನು ಓದಿರುವರು.

ನಾಗಣ್ಣನವರಿಗೆ ತಮ್ಮ ತಂದೆಯ ಬಗ್ಗೆ ತುಂಬ ಅಭಿಮಾನ. ಹುಚ್ಚಪ್ಪನವರು ಚಾಮರಾಜನಗರದ ಜೈನ ಸಮಾಜದ ಸಂಘದ ನಾಯಕರಾಗಿದ್ದರು. ಇವರು ತಮ್ಮ ಮಕ್ಕಳನ್ನೂ ಮರೆತು ಜೈನಸಂಸ್ಕೃತಿ ವಿಕಾಸಕ್ಕಾಗಿ ಬಾಳಿನುದ್ದಕ್ಕೂ ದುಡಿದರು. ಇವರ ಮಕ್ಕಳಾದ ಶ್ರೀ ನಾಗಣ್ಣನವರು ಪಾರ್ಶ್ವನಾಥ ಜೈನಸಂಘದ ಉಪಾಧ್ಯಕ್ಷ ರಾಗಿರುವರು. ಮಲೆಯೂರು ಜೈನ ಸಂಘದಲ್ಲೂ ಸಕ್ರಿಯ ಸದಸ್ಯರಾಗಿರುವರು. ಕುದೇರು ಮತ್ತು ಕೇಸೂರು ಜಿನಾಲಯಗಳ ಜೀರ್ಣೋದ್ಧಾರಕ್ಕೂ ಇವರು ಶ್ರಮಿಸಿರುವರು. ಇವರು ಶ್ರೀಮಂತರಲ್ಲ, ಆದರೆ ಧೀಮಂತರು. ಹಣ ಬಂದಂತೆ ಸದ್ವಿನಿಯೋಗ ಮಾಡಿ ಲೋಭಕರ್ಮದ ಹೊರೆಯನ್ನು ಸದಾ ಇಳಿಸಿಕೊಳ್ಳುವರು.

ಬಿ. ಅನಂತರಾಜ ಸೆಟ್ಟಿ, ಬಂಟವಾಳ

ದಕ್ಷಿಣ ಕನ್ನಡ ಜಿಲ್ಲೆಯ ಜೈನಸಮಾಜದಲ್ಲಿ ಸರ್ಕಾರಿ ಕೆಲಸವೆಂದರೆ ಯಾರಿಗೂ ಬೇಡವಾಗಿದ್ದ ಕಾಲದಲ್ಲಿ ಶ್ರೀ ಬಿ. ಅನಂತರಾಜ ಸೆಟ್ಟರು ಮೊಟ್ಟಮೊದಲು ಕೆಲಸಕ್ಕೆ ಸೇರಿ ಯುವಕರಿಗೆ ಮಾರ್ಗದರ್ಶನ ಮಾಡಿದರು. ಇವರು 1937ರಲ್ಲಿ ಎಸ್.ಎಸ್.ಎಲ್.ಸಿ. ಉತ್ತೀರ್ಣರಾದರು. ಚೂಟಿಯಾದ ಈ ಚೇತನಕ್ಕೆ ಹೊಸ ಬದುಕಿನ ಅನುಭವ ಪಡೆಯುವ ಆತುರವಾಯಿತು. ಸರ್ಕಾರಿ ಕೆಲಸಕ್ಕೆ ಸೇರಿದರು. ತನ್ನ ಓರಗೆಯ ಯುವಕರೆಲ್ಲ ಮನೆಯಲ್ಲೇ ಕುಳಿತು ಹಾಯಾಗಿದ್ದಾಗ ಇವರು ದುಡಿದು ತಿನ್ನುವ ಗುರಿಯಿಟ್ಟುಕೊಂಡರು. ಅಂದಿಗೆ ಇವರು ಇಟ್ಟ ಹೆಜ್ಜೆ ಕ್ರಾಂತಿಕಾರಿಯೇ ದಿಟ.



ಬಿ. ಅನಂತರಾಜ ಸೆಟ್ಟಿ

ಬಂಟವಾಳದ ಶಾಂತಿರಾಜ ಸೆಟ್ಟರು ವ್ಯಾಪಾರಸ್ಥರು. ಇವರು ನಿಷ್ಠಾವಂತ ಶ್ರಾವಕರು. ಇವರು ಜಿನಾಗಮಗಳನ್ನು ಪಾರಾಯಣಮಾಡಿ ಪರಿಣತರಾಗಿದ್ದರು. ನೂರು ಬಾರಿ ಇವರು ಉತ್ತರ ಭಾರತದ ತೀರ್ಥಕ್ಷೇತ್ರಗಳ ಯಾತ್ರೆ ಮಾಡಿದರು. ಆ ಸಂದರ್ಭದಲ್ಲಿ ದಾರಿಗುಂಟ ಕೈಯಿಂದ ತಾವೇ ಅಡಿಗೆ ಮಾಡಿಕೊಂಡರು, ತಮ್ಮ ಮಡಿವಂತಿಕೆಯನ್ನು ಕಾಪಾಡಿಕೊಂಡರು. ಪಂಚಾಣುವ್ರತಧಾರಿಗಳಾದ ಇವರು ಸಮಾಜ ಮುಖಂಡರು. ಇವರ ಧರ್ಮಪತ್ನಿ ವೇಣೂರಿನ ಪದ್ಮಾವತಿಯವರು. ಇವರು ಅನಕ್ಷರಸ್ಥರಾದರೂ ದೈವಭಕ್ತರು. ಶ್ರಾವಕ ವ್ರತನೋಂಪಿಗಳಲ್ಲಿ ತನ್ಮಯರಾಗಿದ್ದರು.

ಇವರಿಗೆ ಶ್ರೀಯುತರಾದ ಆದಿರಾಜ ಸೆಟ್ಟಿ, ಶ್ರೀಮತಿ ಚಂದ್ರಾವತಿ ಮತ್ತು ಶ್ರೀ ಅನಂತರಾಜ ಸೆಟ್ಟಿ ಈ ರೀತಿ ಸಂತಾನರತ್ನತ್ರಯ ಪ್ರಾಪ್ತಿಯಾಯಿತು.

ಶ್ರೀ ಅನಂತರಾಜ ಸೆಟ್ಟರು ಸ್ವಂತ ಕಾಲ ಮೇಲೆ ನಿಂತು ತಮ್ಮ ಬದುಕನ್ನು ರೂಢಿಸಿಕೊಂಡರು. ಇವರಿಗೆ 1945ರಲ್ಲಿ ಮೂಡುಬಿದರೆ ಪಾಚಪ್ಪಸೆಟ್ಟರು ತಮ್ಮ ಮಗಳು ಶಕುಂತಳಾದೇವಿಯನ್ನು ಲಗ್ನಮಾಡಿಕೊಟ್ಟರು. ಈ ನವದಂಪತಿಗಳಿಗೆ ಕಾಲಾನುಕ್ರಮದಲ್ಲಿ ಕಾಮನಬಿಲ್ಲಿನ ಸಪ್ತವರ್ಣಗಳಂತೆ ಶ್ರೀಯುತ ರವೀಶ್, ಶ್ರೀಮತಿ ಯರಾದ ಸುಖದ, ಪದ್ಮಜ, ಉಷಾಕಿರಣ ಮತ್ತು ಶ್ರೀಯುತರಾದ ಶಾಂತಿಪ್ರಸಾದ್, ಜಯವೀರ ಮತ್ತು ಶುಭವೀರ—ಈ ರೀತಿ ಏಳು ಜನ ಮಕ್ಕಳಾದರು. ಈ ದಂಪತಿಗಳ ಸಂಸಾರ ಸಪ್ತಸ್ವರಗಳ ಮೇಳವಾದಂತಾಯಿತು. ಸಂತಾನಸಂಪದದಿಂದ ಈ ದಂಪತಿಗಳ ಬಾಳ್ವೆ ಶ್ರೀಮಂತವಾಯಿತು.

ಶ್ರೀ ಶೆಟ್ಟರ ಧರ್ಮಪತ್ನಿಯವರು ಪರಮಜಿನಭಕ್ತರು. ಇವರು ಅನಂತನೋಂಪಿಯನ್ನು ಶಾಸ್ತ್ರೋಕ್ತವಾಗಿ ಆಚರಿಸಿ ಅನಂತಸಿರಿಯನ್ನು ಬಾಚಲು ಯೋಜನೆ ಹಾಕಿರುವರು. ಅಲ್ಲದೆ ಶುಕ್ರವಾರದ ನೋಂಪಿಯನ್ನೂ ಆಚರಿಸಿ ಇವರು ಧಾರ್ಮಿಕ ಸೌಭಾಗ್ಯವನ್ನು ವೃದ್ಧಿಮಾಡಿಕೊಂಡಿರುವರು. 1950ರಲ್ಲಿ ಶ್ರೀಮತಿ ಅನಂತರಾಜ ಸೆಟ್ಟರು ಸಿದ್ಧಕ್ಷೇತ್ರಗಳ ಯಾತ್ರೆಯನ್ನು ಮಾಡಿ ಮರುಭವದಲ್ಲಿ ವಿದೇಹಕ್ಷೇತ್ರಕ್ಕೆ ಹೋಗಲು ಮಾರ್ಗ ಸುಗಮ ಮಾಡಿಕೊಂಡಿರುವರು.

ಶ್ರೀ ಅನಂತರಾಜ ಸೆಟ್ಟರು ಸದಾಚಾರಸಂಪನ್ನರು. ಇವರು ವಿಚಾರವಂತರಾದರೂ ಸಂಪ್ರದಾಯವನ್ನು ತೊರೆದಿಲ್ಲ. ದಿನವೂ ಜಿನಪೂಜೆ ಮಾಡಿ ಅನಂತರ ಇವರು ಆಹಾರವನ್ನು ಸ್ವೀಕರಿಸುವರು. ದೈವಭಕ್ತರಾದ ಇವರು 1948ರಲ್ಲಿ ಉತ್ತರ ಭಾರತದ ಯಾತ್ರೆ ಮಾಡಿ, ತೀರ್ಥಕ್ಷೇತ್ರಗಳ ದರ್ಶನಮಾಡಿ ಪುನೀತರಾಗಿರುವರು.

ಸೆಟ್ಟರು ಸೇವಾಧುರೀಣರು. ವಿಶ್ವ ಜೈನ ಮಿಷನ್ನಿನ ಪ್ರಚಾರಕರೂ, ಸಂಘಟನಕಾರರೂ ಆಗಿ ನಿಸ್ವಾರ್ಥತೆಯಿಂದ ದುಡಿದಿದ್ದಾರೆ. 1953ರಲ್ಲಿ ವಿಶ್ವ ಜೈನ ಮಿಷನ್ನಿಗೆ 2000/- ರೂ. ನಿಧಿ ಕೂಡಿಸಿಕೊಟ್ಟರು. ದಿವಂಗತ ಮಾವಹೆಗ್ಗಡೆಯವರ ಹಿತಚಿಂತಕರಾಗಿ ಇವರು ಜಿನದಾನ ಪಂಥಕ್ಕೆ ಊರುಗೋಲಾದರು. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಆಗಾಗ ನಡೆದ ಮಸ್ತಕಾಭಿಷೇಕಗಳಲ್ಲಿ ಇವರು ತ್ರಿಕರಣಪೂರ್ವಕ ಶ್ರಮದಾನವೆಸಗಿ ಸೈಯೆನಿಸಿಕೊಂಡಿರುವರು.

ಶ್ರೀ ಸೆಟ್ಟರು ಈಗ ಶಿವಮೊಗ್ಗ ಜಿಲ್ಲೆಯ ಚನ್ನಗಿರಿಯಲ್ಲಿ ಸಬ್‌ರಿಜಿಸ್ಟ್ರಾರ್ ಆಗಿರುವರು. ಪುಸ್ತಕಪ್ರಿಯರಾದ ಇವರು ಈಗಲೂ ರತ್ನಾಕರನ ಕೃತಿಗಳನ್ನು ಪಾರಾಯಣ ಮಾಡುತ್ತಿರುವರು.

ಶ್ರೀ ಅನಂತರಾಜ ಸೆಟ್ಟರ ಅಣ್ಣಂದಿರು ಆದಿರಾಜ ಸೆಟ್ಟರು. ಲಲಿತಕಲೆಗಳಲ್ಲಿ

ಅಭಿರುಚಿಯನ್ನು ಬೆಳೆಸಿಕೊಂಡಿದ್ದರು. ಇವರು 1946ರಲ್ಲಿ ಸಲ್ಲೇಖನಪೂರ್ವಕ ಸಮಾಧಿಮರಣವನ್ನು ಪಡೆದು ಪುನೀತರಾದರು.

ಶ್ರೀ ಸೆಟ್ಟರ ಅಕ್ಕ ಚಂದ್ರಾವತಿ ಅಮ್ಮನವರು ಆದರ್ಶ ಗೃಹಿಣಿಯಾಗಿ ತೌರು ಮನೆ ಮತ್ತು ಸೇರಿದ ಮನೆಯನ್ನು ಬೆಳಗಿ ಸದ್ಗೃಹಿಣಿಯಾಗಿದ್ದರು. ಇವರು ಮುತ್ತೈದೆಯಾಗಿರುವಾಗಲೇ 1946ರಲ್ಲಿ ಪಂಚನಮಸ್ಕಾರ ಜಪಿಸುತ್ತ ಸಮಾಧಿ ಮರಣ ಪಡೆದು ಸ್ವರ್ಗಸ್ಥರಾದರು.

5-9-1921ರಲ್ಲಿ ಜನಿಸಿದ ಅನಂತರಾಜಸೆಟ್ಟರು ತಮ್ಮ ತಂದೆ, ತಾಯಿ, ಅಣ್ಣ ಮತ್ತು ಅಕ್ಕ ಇವರನ್ನೆಲ್ಲ ಕಳೆದುಕೊಂಡರೂ 'ಈಸಬೇಕು ಇದ್ದು ಜಯಿಸಬೇಕು' ಎಂದು ಧೈರ್ಯ ತಂದುಕೊಂಡಿರುವರು.

ಸರ್ವಜನಾನಂದ ಸರ್ವಕಲಾಧರ |
ಸರ್ವಸೌಭಾಗ್ಯಭೋಗಾಂಗಾ ||
ಸರ್ವದಾ ನನ್ನಂತರಂಗದೊಳಿರು ಸದ್ಗು |
ಣೋರ್ವಿ ಚಿದಂಬರಪುರುಷಾ ||

ನಿತ್ಯಮಂಗಲ ನಿತ್ಯಶೃಂಗಾರ ಗೌರವ |
ನಿತ್ಯಲೀಲಾಂಗತರಂಗಾ ||
ನಿತ್ಯವೈಭವನೆ ಸನ್ಮತಿದೋರು ಸೌಖ್ಯಸಾ |
ಹಿತ್ಯಾ ನಿರಂಜನಸಿದ್ಧಾ ||

ಆವಾಗ ಭಾವಿಸುವರಿಗನುಕೂಲಸೌ |
ಖ್ಯಾವಳಿಯನೆ ಸಮನಿಸುವ ||
ದೇವಾ ನೀನೆನ್ನಂತರಂಗದೊಳಿರು ಶುದ್ಧ |
ಭಾವಾ ಚಿದಂಬರಪುರುಷಾ ||

ರತ್ನಪಾಲ ಅಪ್ಪಾಸಾಹೇಬ ಸೆಟ್ಟಿ, ಬೆಳಗಾಂ

ಬೆಳಗಾಂ ಕಜೂರೆ ಮನೆತನದ ಶ್ರೀ ಅಪ್ಪಾಸಾಹೇಬರ ಪತ್ನಿ ಸದಲಗದ ಶ್ರೀಮತಿ ಶಕುಂತಳಾದೇವಿ. ಈ ದಂಪತಿಗಳಿಗೆ ಷಡ್‌ದ್ರವ್ಯಗಳಂತೆ ಶ್ರೀಯುತರಾದ ರತ್ನಪಾಲ, ತೇಜಪಾಲ, ಶ್ರೀಮತಿಯರಾದ ಇಂದುಮತಿ, ಮಂಗಲ, ಕೇಸರಬಾಯಿ ಮತ್ತು ವಸುಮತಿ ಎಂಬ ಸಂತಾನ ಸಂವೃದ್ಧಿಯಾಯಿತು. ಇವರಲ್ಲಿ ರತ್ನಪಾಲರು 14-10-1949ರಲ್ಲಿ ಜನಿಸಿದರು.

ಶ್ರೀ ರತ್ನಪಾಲರು ಪ್ರಾಥಮಿಕ ವಿದ್ಯಾಭ್ಯಾಸವನ್ನು ಬೆಳಗಾಂ ನಗರದಲ್ಲಿ ಪೂರೈಸಿ ಪ್ರೌಢವಿದ್ಯಾಭ್ಯಾಸಕ್ಕಾಗಿ ಹುಬ್ಬಳ್ಳಿಗೆ ಆಗಮಿಸಿದರು. ಪ್ರತಿಭಾವಂತ ವಿದ್ಯಾರ್ಥಿಯಾದ ಇವರು 1965ರಲ್ಲಿ ಮೆಟ್ರಿಕ್ ಉತ್ತೀರ್ಣರಾದರು. 1969ರಲ್ಲಿ ಬಿ.ಕಾಂ. ಪದವೀಧರರಾದರು. 1974ರಲ್ಲಿ ಬಿ.ಎಲ್. ಪದವಿಯನ್ನು ಗಳಿಸಿದರು.



ಧರ್ಮಸ್ಥಳದ ಧರ್ಮಾಧಿಕಾರಿ ಶ್ರೀ ವಿರೇಂದ್ರ ಹೆಗ್ಗಡೆಯವರ ಜೊತೆಯಲ್ಲಿ
ಶ್ರೀ ರತ್ನಪಾಲ ಅಪ್ಪಾಸಾಹೇಬ ಸೆಟ್ಟಿ

ಧರ್ಮಾನುರಾಗಿದಳಾದ ಇವರು ಹುಬ್ಬಳ್ಳಿ ಜೈನ ವಿದ್ಯಾರ್ಥಿನಿಲಯದಲ್ಲಿ ದಶಲಕ್ಷಣಪರ್ವ, ಮಹಾವೀರ ಜಯಂತಿ, ಬೇಸಿಗೆಯ ಧಾರ್ಮಿಕ ಶಿಬಿರ ಇವುಗಳನ್ನು ವ್ಯವಸ್ಥೆಗೊಳಿಸಿ ಧಾರ್ಮಿಕ ಪ್ರಭಾವನೆ ಮಾಡುತ್ತಿರುವರು.

ಶ್ರೀ ರತ್ನಪಾಲರನ್ನು ಹುಂಚದ ಶ್ರೀಮಠದ ಪೀಠಕ್ಕೆ ಹಿಂದಿನ ಸ್ವಸ್ತಿಶ್ರೀ ದೇವೇಂದ್ರಕೀರ್ತಿ ಸ್ವಾಮಿಜಿಯವರು ಆರಿಸಿದ್ದರು. ಪ್ರಸಾರವೂ ಆಗಿದ್ದಿತು. ಆದರೆ ಇವರ ಮಾತಾಪಿತರು ತಮ್ಮ ಮಗನನ್ನು ಬಿಟ್ಟುಕೊಡಲ ಒಪ್ಪಲಿಲ್ಲ.

ಶಾಲೇಕಾಲೇಜುಗಳಲ್ಲೂ ಶ್ರೀ ರತ್ನಪಾಲರು ಮುಂದಾಳುವಾಗಿದ್ದರು. ನಾಟಕದಲ್ಲಿ ಅಭಿನಯಿಸಿ ಅನೇಕ ಪಾರಿತೋಷಕಗಳನ್ನು ಪಡೆದು ಯುವಕ ಸಮುದಾಯಕ್ಕೆ ಮಾದರಿಯಾಗಿರುವರು.

1972ರಲ್ಲಿ ಹುಬ್ಬಳ್ಳಿಯ ಜೈನವಿದ್ಯಾರ್ಥಿನಿಲಯದಲ್ಲಿ ನಡೆದ ಬೇಸಿಗೆ ಶಿಬಿರ ದಲ್ಲಿ ಇವರು ಹಗಲು ರಾತ್ರಿ ಶ್ರಮಿಸಿ ಶ್ರಮದಾನವೆಸಗಿದರು. ಜೈನಸಮಾಜ ಆಗ ಇವರನ್ನು ಸನ್ಮಾನಿಸಿತು.

ಶ್ರೀ ರತ್ನಪಾಲರು ನಮ್ಮ ಸಮಾಜದ ಒಂದು ಕಿರುತಾರೆಯಾಗಿರುವರು. ಬಾಳಿನುದ್ದಕ್ಕೂ ಸಮಾಜಸೇವೆ ಮಾಡುವ ದೃಢಸಂಕಲ್ಪ ತೊಟ್ಟಿರುವರು. ಧರ್ಮ ಪ್ರಭಾವನಾಧುರಂಧರರಾದ ಇವರು ಮಹಾವೀರರ 2500ನೇ ವರ್ಷದ ನಿರ್ವಾಣ ಮಹೋತ್ಸವ ಸಮಿತಿಯಲ್ಲಿ ಧಾರವಾಡ ಜಿಲ್ಲಾ ವಿಭಾಗಕ್ಕೆ ಸಹಕಾರ್ಯದರ್ಶಿಯಾಗಿರು ವರು.


ಇನ್ನೂ ಬ್ರಹ್ಮಚಾರಿಯಾಗಿರುವ ಶ್ರೀ ರತ್ನಪಾಲರಿಗೆ ಉಜ್ವಲ ಭವಿಷ್ಯವಿದೆ. ಕಾರ್ಯಕರ್ತರ ಅಭಾವವಿರುವ ನಮ್ಮ ಸಮಾಜದಲ್ಲಿ ಇವರು ಜನಿಸಿದ್ದು ಸಮಾಜದ ಸೌಭಾಗ್ಯ. 5–9–73ರಲ್ಲಿ ಧರ್ಮಸ್ಥಳದ ಶ್ರೀ ಶ್ರೀ ವೀರೇಂದ್ರ ಹೆಗ್ಗಡೆಯವರು ಹುಬ್ಬಳ್ಳಿಗೆ ಬಂದಾಗ ಶ್ರೀ ರತ್ನಪಾಲರು ಸದಾ ಅವರ ನೆರಳಾಗಿ ಸೇವೆಯೆಸಗಿ ಅವರ ಪ್ರೀತಿಗೂ ಪಾತ್ರರಾದರು.

ಗರ್ವಗಜಾಸುರಮರ್ದನ ದುಷ್ಕರ್ಮ|
ಪರ್ವತದಂಭೋಳಿರೂಪಾ ||
ನಿರ್ವಿಘ್ನಮತಿದೋರು ನತನರನಾಗಸು |
ಪರ್ವಾ ನಿರಂಜನಸಿದ್ಧಾ ||


ಬಿ.ಟಿ. ಕಂಪನಿ, ದಾವಣಗೆರೆ, ಆಡಳಿತ ವರ್ಗದವರು



ಶ್ರೀ ಟಿ. ನಾಭಿರಾಜಯ್ಯ
ಮ್ಯಾನೇಜಿಂಗ್ ಡೈರೆಕ್ಟರ್



ಶ್ರೀ ಬಿ. ಟಿ. ತವನಪ್ಪ
ಡೈರೆಕ್ಟರ್



ಶ್ರೀ ಟಿ. ಸುಬ್ಬರಾವ್
ಡೈರೆಕ್ಟರ್



ಶ್ರೀ ಟಿ. ಅನಂತರಾಜಯ್ಯ
ಡೈರೆಕ್ಟರ್

॥ ಶ್ರೀ ವೀತರಾಗಾಯ ನಮಃ ॥

13-11-74ರಂದು ನಮ್ಮ ತಾಯಿಯವರಾದ

ಜ್ವಾಲಮ್ಮನವರು

ಸಮಾಧಿಮರಣವನ್ನು ಪಡೆದರು. ಅವರ ಆತ್ಮಕ್ಕೆ ಶಾಂತಿಯನ್ನು ಕೋರಲು

25-11-74 ಸೋಮವಾರ ಪ್ರಾತಃಕಾಲ 9 ಘಂಟೆಯಿಂದ

ಹೋಮ, ಜಿನಪೂಜೆ, ಸಂತರ್ಪಣೆ ಇವನ್ನು

ಪೂಜ್ಯಪಾದರ ಜನ್ಮಭೂಮಿಯಾದ

ಕೊಳ್ಳೇಗಾಲದಲ್ಲಿರುವ ಸ್ವಗೃಹದಲ್ಲಿ ಏರ್ಪಡಿಸಿರುವೆನು.

ತಾವು ದಯಮಾಡಿ ಈ ಉತ್ತರಕ್ರಿಯೆಯಲ್ಲಿ ಪಾಲ್ಗೊಳ್ಳಬೇಕಾಗಿ ವಿನಂತಿ

ಜಿ. ಬ್ರಹ್ಮಪ್ಪ

ರೀಡರ್

ಶ್ರೀ ಮಹದೇಶ್ವರಕಾಲೇಜ್, ಕೊಳ್ಳೇಗಾಲ

ಒಪ್ಪೋಲೆ

ಪುಟ	ಪಂಕ್ತಿ	ತಪ್ಪು	ಒಪ್ಪು
7	31	ಟ್ರಾನ್ಸ್‌ಮೀಟರ್	ಟ್ರಾನ್ಸ್‌ಫಾರ್ಮರ್
9	8	ಮುನಿಗಳಿಗೆ ಪರಿ	ಮುನಿಗಳಿಗೆ ಅಪರಿ
10	9	ಹಣೆಯಾಗಿ	ಗಣೆಯಾಗಿ
11	10	191	1912
14	3	ಕುಂಕಂದ	ಕುಂದಕುಂದ
15	11	ಕೊಮಾರ	ಕುಮಾರ
20	10	ಶೋಭಾಕ	ಶೋಭಾಕರ
30	2	ಸೇವಾರ್ಥಸಿದ್ಧಿ	ಸರ್ವಾರ್ಥಸಿದ್ಧಿ
31	3	1915	1913
34	1	ಮುಡಿಬಿಟ್ಟು	ಮುಳಿಬಿಟ್ಟು
54	24	ಮಕ್ಕಳಿದ್ದರು	ಮಕ್ಕಳಿದ್ದಾರೆ
58	5	ಮುದುಕನ ಹಳ್ಳಿ	ಮುರುಕನ ಹಳ್ಳಿ
98	20	ನಾಮೋಂಕಾರ	ಣಮೋಕಾರ
102	2	ನಾಮೋಕಾರ	ಣಮೋಕಾರ
109	3	ಸಣ್ಣಪ್ಪ	ಪಣ್ಣಪ್ಪ
100	7	ಅಹಿಂಹಾ	ಅಹಿಂಸಾ
142	9	ಪುಣ	ಪುಣ್ಯ
143	20	ಚರುರ್ಗಣ	ಚತುರ್ಗಣ
148	19	ಕರ್ಮದಾಸ್ಯ	ಕರ್ಮದಾಸ್ರವ
166	1	ಎಸ್. ಸಿ.	ಎನ್. ಸಿ.
169	17	ಹೊಸ	ಹೋಸ
181	2	ಪ್ರಸಾರ	ಪ್ರಸಾದ

153ನೆಯ ಪುಟ ಒಂದನೆಯ ಪಂಕ್ತಿಯಲ್ಲಿ ಆರ್. ಜೆ. ನೇಮಿರಾಜಯ್ಯ, ಹಿಂದೂಪುರ ಎಂಬಲ್ಲಿ ಆರ್. ಜೆ. ನೇಮಿರಾಜಯ್ಯ ಎಂದು ಮಾತ್ರ ಓದಿಕೊಳ್ಳಿ.